ಎಲ್ಲವೂ ಪ್ರೀತಿಗಾಗಿ



ಪದ್ಮಾಶ್ರೀಧರ್

ಎಲ್ಲವೂ ಪ್ರೀತಿಗಾಗಿ

(ಸಾಮಾಜಿಕ ಕಾದಂಬರಿ)

ಶ್ರೀಮತಿ ಪದ್ಮಾ ಶ್ರೀಧರ್

ಕೀರ್ತಿ ಪ್ರಕಾಶನ
೨೩೦, ೧೬೭ ಕಟ್ಟಡ, ಕೆ. ಹೆಚ್. ಬಿ. ಶಿರ್ಕೆ ಅಪಾರ್ಟಮೆಂಟ್ಸ್,
ಕೆಂಗೇರಿ ಉಪನಗರ, ಬೆಂಗಳೂರು– ೫೬೦೦೬೦.

ELLAVOO PREETHIGAAGI- A social novel by Smt Padma Sreedhar, 1246, 'chiguru', 7th B Cross, New Town, Yalahanka, Bangalore- 57
and published by Keerthi Prakashana, 230, Bld.167, KHB Sirke Apartments, Kengeri Upanagara, Bangalore 560060

Printed on Maplitho 70 GSM paper.
No.of Pages: 136+4=140, Demi 1/8.
Printed on 70 GSM maplitho paper.

Year of first publication: 2012.

Price: Rs. 100/-

DTP: Smt. Asha Nayak, Mysore.

Printed at: Harshini Offset Printers, Bangalore-4

ಅರಿಕೆ
ಎಲ್ಲವೂ ಪ್ರೀತಿಗಾಗಿ

ಕೌಟುಂಬಿಕ ಪಾತ್ರಗಳನ್ನೊಳಗೊಂಡ ಈ ಸಾಮಾಜಿಕ ಕಾದಂಬರಿಯು 'ರಾಗಸಂಗಮ'ದಲ್ಲಿ ಕಂತುಗಳಲ್ಲಿ ಪ್ರಕಟವಾಯಿತು. ಇದೀಗ ಪುಸ್ತಕ ರೂಪದಲ್ಲಿ ಓದುಗರಿಗಾಗಿ ಮತ್ತೆ ಬರುತ್ತಿದೆ.

ಪ್ರೀತಿಗಾಗಿ ಏನೇನು ನಾಟಕಗಳನ್ನಾಡಬೇಕಾಗುತ್ತದೆ– ಸ್ವಾರ್ಥ, ತ್ಯಾಗ, ಕೃತಕತೆ, ಅನನ್ಯ ಪ್ರೀತಿ ಎಲ್ಲವೂ ಬೇಕಾಗುತ್ತದೆ, ಎನ್ನುವ ಕಥಾವಸ್ತುವನ್ನು ಈ ಕಥೆಯಲ್ಲಿ ಬಳಸಿಕೊಂಡಿದ್ದೇನೆ. ಎಷ್ಟು ಬಗೆಯಲ್ಲಿ ಪ್ರೀತಿಯನ್ನು ವಿಶ್ವಾಸವನ್ನು ವ್ಯಕ್ತಪಡಿಸಬಹುದು ಎನ್ನುವುದನ್ನು ತಿಳಿಸುವ ಪ್ರಯತ್ನ ನನ್ನದು.

ಈಗಾಗಲೇ 'ರಾಗಸಂಗಮ'ದ ಓದುಗರು ಈ ಕಾದಂಬರಿಯನ್ನು ಓದಿ ಮೆಚ್ಚಿದ್ದಾರೆ. ನಲುಮೆಯ ಓದುಗರಿಗೆ ನನ್ನ ನಮಸ್ಕಾರಗಳು. ಈಗ ಪ್ರಕಟಣೆಗೆ ಮುಂದಾಗಿರುವ ಪ್ರಕಾಶಕರಿಗೆ ನನ್ನ ಕೃತಜ್ಞತೆಗಳು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
– ಪದ್ಮಾ ಶ್ರೀಧರ್

ಮುಖಪುಟ: ಇಬ್ಬರು ಯುವಕರು(ಅವಳಿಗಳು) ರೂಪ ಒಂದೇ
ಒಬ್ಬಳು ಯುವತಿ– ಅವಳ ಕೈಯಲ್ಲಿ ಒಂದು ವರಮಾಲೆ

ಎಲ್ಲವೂ ಪ್ರೀತಿಗಾಗಿ

ಎಲ್ಲವೂ ಪ್ರೀತಿಗಾಗಿ

"ಮಧುಸೂದನ್ ಫೋನ್ ಮಾಡಿದ್ರು, ಭಾನುವಾರ ನಮ್ಮ ವಿನುತನ್ನ ನೋಡೋಕೆ ಬರ್ತಾರಂತೆ.... ನಿನ್ನ ಮಗಳಿಗ್ಲೂ ಹೇಳ್ಬಿಡು. ಸ್ವಲ್ಪ ಅಲಂಕಾರಾನ ಚೆನ್ನಾಗಿ ಮಾಡ್ಕೋ ಅಂತ ಹೇಳು. ಈ ಸಲವಾದ್ರೂ ಹುಡ್ಗನಿಗೆ ಒಪ್ಪಿಗೆಯಾದ್ರೆ ಸಾಕು."

ಸದಾನಂದ ಬೇಸರದಿಂದ ನಿಟ್ಟುಸಿರು ಬಿಟ್ಟು ಹೇಳಿದಾಗ, ಸುಜಾತಳಿಗೂ ವ್ಯಥೆಯಾಗಿತ್ತು. ಅವರಿಬ್ಬರ ಸಂಭಾಷಣೆಯನ್ನು ವಿನುತ ಕೇಳಿಸಿಕೊಂಡಿದ್ದಳು.

ಮಗಳು ವಿನುತಳಿಗೆ ಇಪ್ಪತ್ನಾಲ್ಕು ವರ್ಷಗಳಾಗುತ್ತ ಬಂತು. ಇನ್ನೂ ಕಂಕಣಬಲ ಕೂಡಿ ಬಂದಿಲ್ಲ. ಇದುವರೆಗೆ ಮೂರು ನಾಲ್ಕು ವಧು ಪರೀಕ್ಷೆಗಳು ನಡೆದಿವೆ. ಒಂದಲ್ಲ ಒಂದು ಕಾರಣದಿಂದ ಬಂದ ವರ ಮಹಾಶಯರಿಗೆ ವಿನುತ ಒಪ್ಪಿಗೆಯಾಗಿಲ್ಲ. ವಿನುತ ಸಾಧಾರಣ ರೂಪಿನ ಹುಡುಗಿ. ಆಕರ್ಷಕ ಮೈಕಟ್ಟು ಇರಲಿಲ್ಲ. ವಿದ್ಯಾಭ್ಯಾಸವನ್ನು ಪೂರೈಸಿಕೊಂಡಿರಲಿಲ್ಲ. ಕೆಲಸದಲ್ಲಿಲ್ಲ, ಹೀಗೆ ನಾನಾ ಕಾರಣಗಳು. ಆದರೆ ವರನಿಗೆ ತಾನು ಒಪ್ಪಿಗೆಯಾಗಲಿಲ್ಲ ಅಂತ ವಿನುತಳಿಗೆ ತಿಳಿದಾಗ ಬೇಸರವಾಗುತ್ತಿರಲಿಲ್ಲ. ಬದಲಿಗೆ ಖುಷಿಯಾಗುತ್ತಿತ್ತು.

ತನ್ನ ರೂಮಿಗೆ ಹೋಗಿ, ತನ್ನ ಹಾಸಿಗೆಯ ಅಡಿಯಲ್ಲಿಟ್ಟುಕೊಂಡಿದ್ದ ಮುರಳಿಯ ಫೋಟೋವನ್ನು ತೆಗೆದು ನೋಡಿ, ನಗುತ್ತಿದ್ದಳು.... ಹಾಗೇ ಅವನ ಮೇಲೆ ಕೋಪವೂ ಬರುತ್ತಿತ್ತು. 'ಇವನಿಗೆ ನನ್ನ ಮನಸ್ಸು ಯಾಕೆ ಅರ್ಥವಾಗುತ್ತಿಲ್ಲ.... ಇನ್ನು ಎಷ್ಟು ಕಾಲ ತಾನು ಹೀಗೆ ಇವನಿಗಾಗಿ ಕಾಯುತ್ತಾ ಕೂತಿರಬೇಕು? ಆದಷ್ಟು ಬೇಗ ತನ್ನನ್ನು ಮದುವೆಯಾಗಿ, ಈ ಮನೆಯಿಂದ ಕರೆದುಕೊಂಡು ಹೋಗು ಅಂತ ಒತ್ತಾಯ ಹಾಕಿ ಕೇಳಲೇಬೇಕು. ಇಲ್ಲದಿದ್ದರೆ ಸುಮ್ಮನೇ ಇದ್ದು

ಬಿಡ್ತಾನೆ. ಅವನ್ಯಾಕೆ ಮದುವೆ ವಿಷಯವನ್ನು ಮಾತನಾಡುವುದೇ ಇಲ್ಲ. ನನ್ನ ಮೇಲೆ ನಿಜವಾದ ಪ್ರೀತಿ ಇಲ್ಲವೇ? ಅಥವಾ ನಾನು ಅವನಿಗೂ ಒಪ್ಪಿಗೆ ಯಾಗಲಿಲ್ಲವೇ?'

ಹೌದು, ಮುರಳಿ ಅತಿ ಸುಂದರ. ತಾನು ಅವನಿಗೆ ತಕ್ಕವಳಲ್ಲದಿರಬಹುದು. ಹಾಗಂತ ಅವನೆಂದೂ ಹೇಳಿಲ್ಲ, ವರ್ತಿಸಿಲ್ಲ... ಮುರಳಿ ಅಂಥವನಲ್ಲ. ಒಳ್ಳೆಯವನೇ ಎಂದುಕೊಂಡು ಕನ್ನಡಿಯ ಮುಂದೆ ನಿಂತು ತನ್ನ ಮುಖವನ್ನು ನೋಡಿಕೊಂಡಳು. ಮುರಳೀಯ ಫೋಟೋವನ್ನು ತನ್ನ ಮುಖದ ಜೊತೆಯಲ್ಲಿಟ್ಟುಕೊಂಡು ನೋಡಿ ಕೊಂಡಳು. ಮನಸ್ಸಿಗೆ ಪಿಚ್ಚೆನ್ನಿಸಿತು. "ನೀನ್ಯಾಕೆ ಇಷ್ಟು ಚೆನ್ನಾಗಿದೀಯ? ಅದಕ್ಕೇ ನಿಂಗೆ ಜಂಭ....." ಎಂದು ನುಡಿದು ಅವನ ಕೆನ್ನೆಗೆ ಬೆರಳಿನಿಂದ ಏಟು ಕೊಟ್ಟಳು.

"ಥೂ.... ನಾನ್ಯಾಕೆ ಹೀಗೆ ಸುಮಾರಾಗಿದೀನಿ.... ಈ ಅಮ್ಮ, ನನ್ನನ್ನು ಸ್ವಲ್ಪ ಸುಂದರವಾಗಿ ಹುಟ್ಟಿಸಿದ್ದರೆ ಇವಳ ಗಂಟೇನು ಹೋಗ್ತಿತ್ತು?" ಎಂದು ತಾಯಿಯನ್ನು ಬೈದುಕೊಂಡಳು.

"ಪರವಾಗಿಲ್ಲ ಹೋಗ್ಲಿ ಬಿಡು. ನಾನು ಸುಂದರಿಯಲ್ಲದಿದ್ದರೆ ಏನಾಯ್ತು? ನೀನು ಮನ್ಮಥನ ಹಾಗೆ ಇದೀಯ......ನನಗೆ ಹುಟ್ಟುವ ಮಕ್ಕಳು ಸುಂದರವಾಗಿರುತ್ತವೆ." ಅವಳ ಮೈ ಪುಳಕಿತಗೊಂಡಿತು. ಮರುಘಳಿಗೆಯೇ ಮನ ಮುದುಡಿತು.

"ಛೀ.... ತಾನೆಂಥಾ ದಡ್ಡಿ? ಮೊದಲು ಮದುವೆಯಾಗಬೇಕು. ನಂತರ ಹುಟ್ಟುವ ಮಕ್ಕಳ ಬಗ್ಗೆ ಚಿಂತಿಸಬೇಕು.... ಇವನು ನನ್ನನ್ನು ಗಾಢವಾಗಿ ಪ್ರೀತಿಸ್ತಾನೋ ಇಲ್ಲವೋ ಅದನ್ನು ತಿಳ್ಕೋಬೇಕು. ಆದರೆ ನಾನು ಮಾತ್ರ ನಿನ್ನನ್ನು ಮನಸಾರೆ ಪ್ರೀತಿಸ್ತೀನಿ ಮುರಳೀ.... ಮುರಳೀ ಐ ಲವ್ ಯೂ" ಎನ್ನುತ್ತಾ ಅವನ ಫೋಟೋಗೆ ಮುತ್ತಿಟ್ಟಳು. ಬಾಗಿಲ ಬಳಿ ಹೆಜ್ಜೆಯ ಸದ್ದು ಕೇಳಿಸಿತು. ಸರ್ರನೆ ಫೋಟೋವನ್ನು ಕನ್ನಡಿಯ ಹಿಂದೆ ಬಚ್ಚಿಟ್ಟಳು. ತಿರುಗಿದಳು, ತಾಯಿ ರೂಮಿನೊಳಕ್ಕೆ ಬಂದಿದ್ದಳು.

"ಹೊತ್ತಿಲ್ಲ, ಗೊತ್ತಿಲ್ಲ, ಕನ್ನಡಿಯ ಮುಂದೆ ನಿಂತ್ಕೊಂಡು ನೋಡ್ಕೊಳ್ಳೋದು ಒಳ್ಳೆ ಲಕ್ಷಣವಲ್ಲ." ತಾಯಿ ರೇಗಿದಾಗ ಇವಳಿಗೂ ರೇಗಿತು.

"ಒಂದಲ್ಲ ಒಂದು ಸಲವಾದ್ರೂ ನಾನು ಸ್ವಲ್ಪವಾದ್ರೂ ಸುಂದರವಾಗಿ ಕಾಣ್ತೀನೇನೋ ಅಂತ ನನ್ನನ್ನು ನಾನು ನೋಡ್ಕೋತೀನಿ.... ನೀನು ನನಗೆ ವಂಚನೆ ಮಾಡ್ಬಿಟ್ಟೆ."

"ನಾನೇನೇ ಮಾಡ್ದೇ?"

"ಮತ್ತಿನ್ನೇನು? ನಾನು ಸುಂದರಿ ಅಲ್ಲದಿದ್ರೆ ಅದಕ್ಕೆ ನೀನೇ ಕಾರಣ. ಸುಂದರವಾದ ಮಗೂನ ಹೆರ್ಬೇಕು ಅಂತ ನಿಂಗೆ ಅಷ್ಟೂ ತಿಳೀಲಿಲ್ವಾ?"

"ಥೂ.... ಹೀಗೆಲ್ಲಾ ಯಾಕೆ ಮಾತಾಡ್ತೀಯ ವಿನೂ.... ನೀನು ಸುಂದರ ವಾಗಿಲ್ಲ ಅಂತ ಯಾರು ಹೇಳಿದ್ರು?"

"ಮತ್ತಿನ್ನೇನಮ್ಮಾ? ಬಂದ ವರಗಳು ನನ್ನನ್ನು ಒಪ್ಪಿಕೊಂಡಿಲ್ಲ.... ಅದು ನಿಂಗೂ ಗೊತ್ತಲ್ಲ."

"ಅದಕ್ಕೆ ನಿನ್ನನ್ನ ನೀನು ಕಳಪೆ ಅಂತ ಅಂದ್ಕೋಬೇಡ. ಸ್ವಲ್ಪ ಚೆನ್ನಾಗಿ ಅಲಂಕಾರ ಮಾಡ್ಕೋ.... ನೀನು ತುಂಬಾನೇ ಚೆನ್ನಾಗಿ ಕಾಣ್ತೀಯ."

"ಏನೂ ಬೇಕಿಲ್ಲ. ಅಲಂಕಾರ ಮಾಡ್ಕೊಂಡು ಯಾರನ್ನೂ ಮೆಚ್ಚಿಸ್ಬೇಕಾಗಿಲ್ಲ ನಾನು. ನಾನು ಹೇಗಿದೀನೋ ಹಾಗೇ ಇರ್ತೀನಿ.... ಯಾರೂ ನನ್ನನ್ನು ಒಪ್ಪಿ ಕೊಳ್ಳೋದು ಬೇಡ. ಹೀಗೇ ಇದ್ದುಬಿಡ್ತೀನಿ. ಯಾರೂ ನನ್ನನ್ನು ಬಲವಂತ ಮಾಡ್ಬೇಡಿ. ಮತ್ತೆ ಮತ್ತೆ ಗಂಡುಗಳ ಮುಂದೆ ಕೂತ್ಕೋಳ್ಳೋಕೆ ನಂಗಿಷ್ಟವಿಲ್ಲ." ಉರಿಗಣ್ಣನ್ನು ಬಿಟ್ಟಳು.

"ನೀನು ಹೀಗೆ ಆಡೋದ್ರಿಂದ್ಲೇ ನಂಗೆ ಕೋಪ ಬರೋದು.... ಆದಷ್ಟು ಬೇಗ ನಿನ್ನ ಮದುವೆ ಮಾಡ್ಬೇಕು ಅಂತ ನಿಮ್ಮ ಪ್ಪ ಪ್ರಯತ್ನ ಪಡ್ತಾನೇ ಇದಾರೆ. ದೇವರು ಕಣ್ತೆರೆದಿಲ್ಲ ಅಷ್ಟೇ. ಆಮೇಲೆ ನಿನ್ನ ತಂಗಿಗೂ ಮದುವೆ ಮಡ್ಬೇಕು."

"ಅವಳಿಗೇ ಮೊದಲು ಮಾಡಿ. ನಂಗೆ ಬೇಸರ ಏನೂ ಇಲ್ಲ."

"ನೋಡ್ದೋರು ನಗ್ತಾರೆ ವಿನೂ.... ಸಂಶಯಾನೂ ಪಡ್ತಾರೆ."

"ಯಾರು ಏನಾದ್ರೂ ಅಂದ್ಕೊಳ್ಳಲಿ. ನಾನು ಯಾರಿಗೂ ಕೇರ್ ಮಾಡಲ್ಲ."

"ಯಾಕೆ ಹೀಗೆ ಹೊಟ್ಟೆ ಉರಿಸ್ತೀಯೇ. ಸ್ವಲ್ಪ ತಾಳ್ಮೆಯಿಂದ ಯೋಚ್ನೆ ಮಾಡು. ನಾವು ಹೇಳೋದು ನಿನ್ನ ಒಳ್ಳೇದಕ್ಕೇ."

"ನನ್ನ ಒಳ್ಳೇದು ಯಾವ್ದು, ಕೆಟ್ಟದ್ದು ಯಾವ್ದು ಅಂತ ನನಗೂ ಗೊತ್ತಾಗುತ್ತಮ್ಮ. ಅಷ್ಟು ವಯಸ್ಸು ನಂಗೂ ಆಗಿದೆ."

"ವಯಸ್ಸೂ ಆಗಿದೆ, ಬಾಯಿಯೂ ಜಾಸ್ತಿ ಆಗಿದೆ. ಇಷ್ಟಕ್ಕೆಲ್ಲ ಕಾರಣ ಯಾರು ಅಂತ ನಂಗೂ ಗೊತ್ತು.... ಅವರುಗಳು ಇಲ್ಲಿಂದ ದೂರ ಹೋದ್ರೂ, ಆದರೂ ನೀನು ಮಾತ್ರ ಅವರನ್ನು ಮರೆತಿಲ್ಲ ಅಂತ ನಂಗೊತ್ತು."

"ಹೌದಮ್ಮ. ನಾನು ಅವರ್‍ಯಾರನ್ನು ಮರೆತಿಲ್ಲ. ಮರೆಯೋದೂ ಇಲ್ಲ."

"ಮದ್ವೆ ಆದ್ಮೇಲೆ, ಅತ್ತೆ ಮನೇಲಿ ಅವರ ವಿಷಯ ಮಾತಾಡಿದ್ರೆ ಸಂಶಯಪಡ್ತಾರೆ ಅಷ್ಟೇ....."

"ಅಮ್ಮಾ ನಂಗೆ ಈ ಮದ್ವೆ ಬೇಡಮ್ಮ.... ನಂಗೆ ಈ ವಧು ಪರೀಕ್ಷೆ ಎಲ್ಲಾ ಬೇಜಾರಾಗಿ ಹೋಗಿದೆ. ನಾನು ಹೀಗೇ ಇದ್ದು ಬಿಡ್ತೀನಿ."

"ಹುಚ್ಚು ಹುಡುಗೀ.... ಹಾಗಿರೋಕೆ ಸಾಧ್ಯಾನಾ? ಆಮೇಲೆ ನಿನ್ನ ತಂಗೀನೂ

ಇದೇ ರಾಗ ಹಾಡ್ತಾಳೆ. ಅವಳ ಬಾಳೂ ಬೆಳಗ್ಬೇಕು ಅಲ್ವಾ? ನಾನು ಹೇಳಿದ ಹಾಗೆ ಕೇಳು. ಸುಮ್ಮನೇ ತಲೆಹರಟೆ ಮಾತನಾಡ್ಬೇಡ. ನಿಮ್ಮಪ್ಪ ಗುಡುಗ್ತಾರೆ."

"ಸರಿಯಮ್ಮಾ.... ನೀನು ಹೇಳ್ತಿದೀಯ ಅಂತ ಇದೊಂದ್ಸಾರಿ ಅವನ್ಯಾರೋ ಅವನ ಮುಂದೆ ಕೂತ್ಕೋತೀನಿ. ಆದರೆ ಹೀಗೆ ಅಲಂಕಾರ ಮಾಡ್ಕೋ, ಆ ಸೀರೆ ಉಟ್ಕೋ ಅಂತ ನೀನು ಹೇಳ್ಬಾರ್ದು. ನಾನು ಹೇಗಿದೇನೋ ಹಾಗೇ ಅವನು ಒಪ್ಕೋಬೇಕು. ಅವನು ಒಪ್ಪದಿದ್ರೆ, ಇದೇ ಕಡೇ ವಧು ಪರೀಕ್ಷೆ. ಇನ್ನೆಂದೂ ನೀನು ಬಲವಂತ ಮಾಡ್ಬಾರ್ದು, ಹಾಗಂತ ಪ್ರಾಮಿಸ್ ಮಾಡು."

ಸುಜಾತಳಿಗೆ ಮಗಳ ಮೇಲೆ ಕೋಪ ಉಕ್ಕಿತು. ಹಾಗೇ ಹೆಣ್ಣಿಗೆ ಒದಗುವ ಆ ಪೇಚಾಟದ ಸ್ಥಿತಿಯ ಬಗ್ಗೆ ಕರುಣೆಯೂ ಮೂಡಿತು. ಮಗಳು ಸುಂದರಿಯಲ್ಲ ನಿಜ. ಕುರೂಪಿಯೂ ಅಲ್ಲ. ಬ್ರಹ್ಮ ಒಂದು ಹೆಣ್ಣಿಗೆ ಒಂದು ಗಂಡನ್ನು ಸೃಷ್ಟಿಸಿಯೇ ಇರುತ್ತಾನೆ ಅಂತ ತಿಳಿದವರು ಹೇಳ್ತಾರೆ. ಇವಳ ಕೈ ಹಿಡಿಯುವವನು ಎಲ್ಲಿದ್ದಾನೋ .... ಈಗ ಬರುವವನೇ ಯಾಕೆ ಆಗಿರಬಾರದು? ಅವಳ ಮನಸ್ಸು ಹಾರೈಸಿತು.

ವಿನುತಾ ಓರೆಗಣ್ಣಿನಲ್ಲಿ ತಾಯಿಯ ಮುಖವನ್ನು ನೋಡಿದಳು. ತಾಯಿಯ ಹತ್ತಿರ ವಾದಿಸಿದ್ದಾಗಿತ್ತು. ಆದರೆ ಮನದಲ್ಲಿದ್ದುದನ್ನು ಹೇಳಲಾಗಿರಲಿಲ್ಲ. ತಾಯಿಗೆ ಏನು, ಅನುಮಾನ ಬಂದಂತಿಲ್ಲ. ಆದರೆ ತಾನು ಇನ್ನೂ ತಡಮಾಡುವಂತಿರಲಿಲ್ಲ. ಮುರುಳಿಯ ಹತ್ತಿರ ಆದಷ್ಟು ಬೇಗ ಮಾತನಾಡಲೇಬೇಕು. ಅವನ ಬಳಿ ಮೊಬೈಲ್ ಫೋನ್ ಇದೆ. ತನ್ನ ಬಳಿ ಇಲ್ಲ......ಅಲ್ಲದೇ ಎದುರಿಗೇ ಕುಳಿತು ಅವನ ಮನಸ್ನಲ್ಲಿ ಏನಿದೆ ಅಂತ ನೇರವಾಗಿ ಕೇಳಿ ಬಿಡಬೇಕು. ಡಿಟೆಕ್ಟಿವ್ ಕೆಲಸ ಮಾಡ್ತಾನಂತೆ......ನನ್ನ ಮನಸ್ನಲ್ಲಿ ಏನಿದೆ ಅಂತ ತಿಳಿದಿಲ್ವಾ? ಅಥವಾ ತಿಳಿಯದವನ ಥರ ನಾಟಕ ಆಡ್ತಿದಾನಾ?

"ಮುರಳೀ, ನಾನು ನಿನ್ನನ್ನು ಒಳ್ಳೆಯವನು ಅಂತ ತಿಳಿದ್ಕೊಂಡಿದೀನಿ. ಪ್ಲೀಸ್ ನಂಗೆ ಮೋಸ ಮಾಡ್ಬೇಡ." ಮನದಲ್ಲೇ ಹೇಳಿಕೊಂಡಳು.

ಮುರಳಿಗಾಗಿ, ಅರ್ಧ ಮುಕ್ಕಾಲು ಗಂಟೆಗಳಿಂದ ಕಾಯುತ್ತಾ ಕುಳಿತಿದ್ದ ವಿನುತಳ ಅಸಹನೆ ನಿಮಿಷ ನಿಮಿಷಕ್ಕೂ ಹೆಚ್ಚುತ್ತಿತ್ತು. ಯಾವುದೋ ಬೂತ್‌ನಿಂದ ಇವನ ಮೊಬೈಲ್‌ಗೆ ಫೋನ್ ಮಾಡಿದ್ದಳು. ಸ್ವಿಚ್ ಆಫ್ ಆಗಿದೆ ಎಂದೇ ಬರುತ್ತಿತ್ತು. ಇವತ್ತು ಇವನೊಡನೆ ಮಾತನಾಡಿಯೇ ಬಿಡಬೇಕೆಂದುಕೊಂಡು ಇವನ ಆಫೀಸಿಗೇ ಬಂದಿದ್ದಳು. "ಸಾರ್ ಇಲ್ಲ. ಹೊರಗೆಲ್ಲೋ ಹೋಗಿದಾರೆ, ಇನ್ನೇನು ಬರಬಹುದು, ಕೂತ್ಕೊಳ್ಳಿ." ಎಂದು ಅಸಿಸ್ಟೆಂಟ್ ಇವಳನ್ನು ಮುರಳಿಯ ಛೇಂಬರ್‌ನಲ್ಲೇ ಕೂರಿಸಿದ್ದ. ನಿಮಿಷ ನಿಮಿಷಕ್ಕೂ ಕೈಗಡಿಯಾರದ ಕಡೆ ನೋಡಿ ನೋಡಿ ಸಿಟ್ಟು ಉಕ್ಕುತ್ತಿತ್ತು. 'ಥೂ ಇವನೆಂಥವನು? ಫೋನಿನಲ್ಲೂ ಸಿಗುವುದಿಲ್ಲ,

ಇಲ್ಲಿಗೆ ಬಂದರೆ ಇಲ್ಲಿಯೂ ಪತ್ತೆ ಇಲ್ಲ. ಎಲ್ಲಿ ಹೋದನೋ.... ಎಷ್ಟೊಂದು ಮಾತನಾಡುವುದಿದೆ.... ಇವತ್ತು ಇವನು ಸಿಗದಿದ್ದರೆ ಇನ್ನು ಮೇಲೆ ಇವನೊಡನೆ ಮಾತನಾಡುವುದೇ ಇಲ್ಲ' ಎಂದು ತನ್ನಲ್ಲೇ ಶಪಥ ಮಾಡಿ ಕೈ ಕಟ್ಟಿ ಕುಳಿತಳು.

"ಸಾಹೇಬ್ರು ಬಂದ್ರು...." ಹೊರಗೆ ನಿಂತಿದ್ದ ಸೆಕ್ಯೂರಿಟಿಯವನು ಹೇಳಿದ್ದು ಇವಳ ಕಿವಿಗೆ ಬಿದ್ದಿತು. ಮುಖದ ಮೇಲೆ ಗಂಭೀರವನ್ನೂ, ಮುನಿಸನ್ನೂ ತಂದುಕೊಂಡು, ಅಲುಗಾಡದೇ ಕುಳಿತಳು.

"ನಿಮಗೋಸ್ಕರ ಯಾರೋ ಲೇಡೀಸ್ ಕಾಯ್ತಾ ಇದಾರೆ ಸಾರ್" ಎಂದು ಅಸಿಸ್ಟೆಂಟ್ ಹೇಳಿದ್ದು ಕೇಳಿಸಿತು.

"ಯಾರು? ನನ್ನ ಛೇಂಬರ್‌ಗೆ ಕರ್ಕೊಂಡ್ಬನ್ನಿ" ಎಂದು ಮುರಳಿ ಹೇಳಿದ್ದು ಕೇಳಿ ಉಸಿರು ಬಿಗಿ ಹಿಡಿದಳು.

"ಅಲ್ಲೇ ಕೂರಿಸಿದೀನಿ ಸಾರ್...."

"ಯಾರ್‍ಯಾರನ್ನೋ ವಿಚಾರಿಸದೇ, ನನ್ನ ಛೇಂಬರ್‌ನಲ್ಲಿ ಯಾಕೆ ಕೂರಿಸ್ತೀರಿ?" ಎಂದು ಮುರಳಿ ರೇಗಾಡುತ್ತಾ ಒಳ ಬಂದ. ಬಾಗಿಲಿಗೆ ಬೆನ್ನು ಮಾಡಿ ಕುಳಿತಿದ್ದ ವಿನುತಳ ಗುರುತು ತಕ್ಷಣಕ್ಕೆ ಸಿಗಲಿಲ್ಲ. "ಎಸ್.... ಹೇಳಿ ಮೇಡಂ...." ಎನ್ನುತ್ತ ತನ್ನ ಸೀಟಿನಲ್ಲಿ ಕುಳಿತು ಕೊಳ್ಳುವ ಮೊದಲು ಇವಳ ಕಡೆಗೆ ತಿರುಗಿ, ಬೆನ್ನು ಬಾಗಿಸದೆ ನೆಟ್ಟಗೆ ಹಾಗೇ ನಿಂತ.

"ಅರೇ ವಿನುತಾ.... ನೀನು ಇಲ್ಲಿ?" ಗಾಬರಿ, ಆಶ್ಚರ್ಯಗಳಿಂದ ಕೇಳಿದ.

ಅವಳು ಮಾತನಾಡಲಿಲ್ಲ. ದುರುದುರು ಅವನನ್ನೇ ನೋಡಿದಳು. "ಏನಾಯ್ತು ವಿನುತಾ.... ಇಲ್ಲಿಗ್ಯಾಕೆ ಬಂದಿದೀಯ? ಫೋನ್ ಮಾಡಿದ್ರೆ ನಾನೇ ಬರ್ತಿದ್ನಲ್ಲ!" ತಡೆ ತಡೆದು ಹೇಳಿದ.

"ಒಂದು ದೂರು ತಂದಿದೀನಿ. ನಿಂಗೋಸ್ಕರವೇ ಕಾಯ್ತಿದ್ದೆ." ಸಿಡಿದು ನುಡಿದಳು. ಅವಳು ಕೋಪಗೊಂಡಿರುವಳೆಂದು ಅವನಿಗೆ ತಕ್ಷಣವೇ ತಿಳಿಯಿತು. ಮುಖದಲ್ಲಿ ನಗುವನ್ನು ತುಂಬಿಕೊಂಡು ಅವಳೆಡೆಗೆ ಬಾಗಿದ.

"ಯಾರ ಮೇಲೆ ಮೇಡಂ? ಎನಿ ಸೀರಿಯಸ್ ಪ್ರಾಬ್ಲಂ?" ಕೇಳಿದ.

"ಇನ್ನು ಮುಂದೆ ನಾನು ನಿನ್ನ ಹತ್ರ ಮಾತನ್ನಾಡಲ್ಲ. ನಿನ್ನಿಂದ ದೂರ ಹೊರಟು ಹೋಗ್ತಿದೀನಿ." ದನಿ ದಪ್ಪವಾಗಿತ್ತು.

"ಅರೇ.... ಅಷ್ಟೊಂದು ಸಿಟ್ಟಾ ನನ್ನ ಮರಿಗೆ.... ಏನಾಯ್ತಮ್ಮಾ?"

"ಸಾಕು ಈ ಬೂಟಾಟಿಕೆ ಮಾತು. ಏನೂಂತ ನಿಂಗೆ ಗೊತ್ತಿಲ್ವಾ?"

"ಖಂಡಿತಾ ಗೊತ್ತಿಲ್ಲ ಡಿಯರ್...."

"ಗೊತ್ತಾಗೋದೂ ಬೇಡ, ಗುಡ್ ಬೈ, ನಾನು ಹೊರಟೆ." ಎದ್ದವಳ ಕೈ

ಹಿಡಿದು ಮತ್ತೆ ಕೂರಿಸಿದ.

"ನಂಗೋಸ್ಕರ ಕಾಯ್ತಾ ಇದುವರೆಗೂ ಕೂತಿದ್ದೆ. ಈಗೇನು ಅಷ್ಟು ಅರ್ಜೆಂಟು? ಯಾಕೆ ಬಂದಿದೀಯ ಅಂತ ನೀನೇ ಹೇಳಿ ಬಿಡು.... ನಾನು ಸ್ವಲ್ಪ ದಡ್ಡ.... ಕೆಲವು ಸೂಕ್ಷ್ಮಗಳು ನಂಗೆ ಗೊತ್ತಾಗಲ್ಲ." ನಗುವನ್ನು ತುಳುಕಿಸುತ್ತಾ ಹೇಳಿದ.

"ಇನ್ನೂ ಸ್ವಲ್ಪ ಹೊತ್ತು ಇಲ್ಲಿಯೇ ಕೂತಿದ್ದರೆ ನಾನೂ ದಡ್ಡಿಯಾಗಿ ಬಿಡ್ತೀನಿ ಅಷ್ಟೇ." ಎನ್ನುತ್ತಾ ಮತ್ತೆ ಎದ್ದಳು.

"ಓ.... ಕೇ... ಓ... ಕೇ.... ನನ್ಹತ್ರ ಜಗಳ ಆಡಕ್ಕೆ ಬಂದಿದೀಯ ಅಂತ ಅರ್ಥವಾಯ್ತು.... ಆದರೆ ಈ ಸ್ಥಳ ಜಗಳಕ್ಕೂ ಸರಿಯಲ್ಲ, ಸರಸಕ್ಕೂ ಸರಿಯಲ್ಲ.... ನೀನು ಇಲ್ಲಿಗೆ ಬರಬಾರದಾಗಿತ್ತು. ಫೋನ್ ಮಾಡ್ಬಾರ್ದಾಗಿತ್ತಾ?"

"ಡಯಲ್ ಮಾಡೀ ಮಾಡೀ ಬೆರಳು ನೋಯ್ತಿವೆ. ನೀನು ಇಷ್ಟು ಬಿಸಿ ಅಂತ ನಂಗೆ ಗೊತ್ತಿರ್ಲಿಲ್ಲ.... ಇನ್ಮೇಲೆ ನಾನು ಹೀಗೆ ತೊಂದರೆ ಕೊಡಲ್ಲ."

"ಏಯ್.... ವಿನೂ ಇನ್ನೂ ಕೋಪದಲ್ಲೇ ಇದ್ದೀಯಲ್ಲ.... ಸಾರೀ.... ಏನು ವಿಷಯ, ನೇರವಾಗಿ ಹೇಳಿಬಿಡು...."

"ಏನೂ ಇಲ್ಲ ಅಂತ ಅಂದ್ನಲ್ಲ...." ಸ್ವಲ್ಪ ಎತ್ತರದ ಧ್ವನಿಯಲ್ಲಿ ನುಡಿದಾಗ, ಅವನು ಬಾಗಿಲಾಚೆ ನೋಡಿದ.

"ಶ್.... ಮೆಲ್ಲಗೆ ಮಾತಾಡು ಮಾರಾಯ್ತಿ.... ಹೊರಗಿರೋರಿಗೆ ಕೇಳ್ಸುತ್ತೆ. ನನ್ನ ಬಗ್ಗೆ ಅವರಿಗೆ ಗೌರವವಿದೆ. ನಕ್ಕೋತಾರೆ ಅಷ್ಟೇ...."

"ನಗಲಿ ಬಿಡು. ನಿನ್ನನ್ನು ನಂಬಿ ನಾನು ಕೆಟ್ಟೆ.... ನನ್ನನ್ನು ಆಡ್ಕೊಂಡು ನಗ್ತಾರೆ.... ನನ್ನ ಬಗ್ಗೆ ನಿಂಗೆ ಚಿಂತೆ ಇಲ್ದಿದ್ಮೇಲೆ, ನಿನ್ನ ಬಗ್ಗೆ ನಂಗೂ ಚಿಂತೆ ಇಲ್ಲ."

"ದಿಸ್ ಈಸ್ ನಾಟ್ ಫೇರ್.... ಹೋಗಲಿ ವಾದ ವಿವಾದ ಇಲ್ಲಿ ಬೇಡ. ಹೊರಗೆಲ್ಲಾದ್ರೂ ಹೋಗೋಣ.... ನಡೀ.... "

"ಓ.... ಸಾಹೇಬ್ರಿಗೆ ನನ್ಹತ್ರ ಮಾತಾಡಕ್ಕೆ ಟೈಂ ಇದೆಯಾ?" ವ್ಯಂಗ್ಯದಿಂದ ಕೇಳಿದಾಗ ಅವನು ಅವಳನ್ನು ಎಬ್ಬಿಸಿದ.

"ಅತಿಯಾಯ್ತು ವಿನುತಾ.... ನಮ್ಮ ಜಗಳ ಇಲ್ಲಿಯೋರ್ಗೆ ಮನರಂಜನೆ ಆಗಬೇಕಾಗಿಲ್ಲ." ಎನ್ನುತ್ತಾ ಅವಳ ಕೈ ಹಿಡಿದು ಬಾಗಿಲ ಬಳಿಗೆ ಕರೆತಂದು ಕೈ ಬಿಟ್ಟ.

"ನೀನು ಹೋಗಿ ಕಾರ್ನಲ್ಲಿ ಕೂತ್ಕೋ.... ನಾನು ಈಗ ಬಂದೆ." ಎನ್ನುತ್ತಾ ತನ್ನ ಕೈ ಕೆಳಗಿನವರು ಕುಳಿತಿದ್ದ ಟೇಬಲ್ ಕಡೆಗೆ ನಡೆದ. ವಿನುತಾ ದುಡು ದುಡು ಹೊರಗೆ ಬಂದು ನಿಂತಳು. ತಾನು ಹೇಳಬೇಕಾದುದನ್ನು ತನ್ನ ಸಹೋ

ದ್ಯೋಗಿಗಳಿಗೆ ಹೇಳಿ ಮುರಳೀ ಹೊರಕ್ಕೆ ಬಂದ.

"ಕಮಾನ್.... ಕಮಾನ್" ಎನ್ನುತ್ತಾ ಅವಳ ಕೈ ಹಿಡಿದು ತನ್ನ ಕಾರಿನ ಬಳಿಗೆ ಕರೆದೊಯ್ದ. ಡ್ರೈವರ್ ಕಾರಿನ ಬಾಗಿಲನ್ನು ತೆರೆದ.

"ಕೃಷ್ಣಾ ನೀವು ಇಲ್ಲೇ ಇರಿ.... ನಾನು ಮೇಡಂನ ಮನೆಗೆ ಬಿಟ್ಟು ಬರ್ತೀನಿ" ಎಂದು ಹೇಳಿ ತಾನು ಡ್ರೈವಿಂಗ್ ಸೀಟಿನಲ್ಲಿ ಕುಳಿತ. ವಿನುತ ಮುಖವನ್ನು ಊದಿಸಿಕೊಂಡೇ ಕಾರನ್ನೇರಿದಳು.

"ಇನ್ನಾದರೂ ಸ್ಮೈಲ್ ಮಾಡು ವಿನೂ.... ಯಾರಾದ್ರೂ ನೋಡಿದ್ರೆ, ನಿನ್ನನ್ನ ಕಿಡ್ನಾಪ್ ಮಾಡ್ಕೊಂಡು ಹೋಗ್ತಿದೀನಿ ಅಂತ ತಿಳ್ಕೋತಾರೆ' ಅಷ್ಟೇ...." ಅವಳ ಮೇಲೆ ಬಾಗಿಲನ್ನು ಸರಿಯಾಗಿ ಹಾಕಿದ.... ಸಿಗರೇಟಿನ ವಾಸನೆ ಅವಳ ಮೂಗಿಗೆ ಬಡಿಯಿತು. ಹಿಂದಕ್ಕೆ ವಾಲಿದಳು.

"ಸಿಗರೇಟು ಸೇದೋದನ್ನು ನೀನು ಯಾವಾಗ ಬಿಡ್ತೀಯಾ?" ಸಿಡುಕಿ ಕೇಳಿದಳು.

"ನೀನು ನನ್ನವಳಾದ ದಿನ...." ಅವನು ನಗುನಗುತ್ತಾ ನುಡಿದ.

"ಆ ದಿನ ಈ ಜನ್ಮದಲ್ಲಿ ಎಂದಿಗೂ ಬರಲ್ಲ ಅಂತ ನಂಗನ್ಸುತ್ತೆ."

"ನಾನು ಸಿಗರೇಟನ್ನು ಬಿಡ್ಬೇಕು ಅಂತ ನಿಂಗೆ ಬಲವಾಗಿ ಅನ್ನಿಸಿದ್ರೆ, ನೀನು ನನ್ನ ಬಳಿಗೆ ಬರಲೇಬೇಕು. ಕೇವಲ ಒಂದು ಸಿಗರೇಟಿನ ದುರಭ್ಯಾಸಕ್ಕೆ ನನ್ನಿಂದ ದೂರವೇ ಇರೋ ಆಲೋಚನೇನ ಮಾಡ್ತಾ ಇಲ್ಲ ತಾನೇ?"

"ಓ.... ಷಟಪ್ ಮುರಳೀ.... ನಾನಲ್ಲ ದೂರ ಹೋಗ್ತಾ ಇರೋಳು. ನೀನೇ ನನ್ನನ್ನು ದೂರ ಮಾಡ್ತಾ ಇದೀಯ.... ನಿನಗೆ ನನ್ಮೇಲೆ ಪ್ರೀತೀನೇ ಇಲ್ಲ ಅಂತ ನಂಗೆ ಈಚೀಚೆಗೆ ಅನ್ನಿಸ್ತಾ ಇದೆ."

"ನಾನು ಪ್ರೀತಿಸಿದ್ರೇನು? ನೀನು ಪ್ರೀತಿಸಿದ್ರೇನು? ನಮ್ಮಿಬ್ಬರ ಮಧ್ಯೆ ಪ್ರೀತಿ ಅಂತೂ ಇದೆ. ಈಗ ಎಲ್ಲಿಗೆ ಹೋಗೋಣ ಹೇಳು...." ಕಾರಿಗೆ ಚಾಲನೆ ನೀಡಿದ.

"ನನ್ನನ್ನು ನಮ್ಮನೆಗೆ ತಲುಪಿಸ್ಬೇಕು ಅಂತ ತಾನೇ ಹೊರಟಿರೋದು?"

"ಓ.... ಕಮಾನ್. ಏನೋ ಡ್ರೈವರ್‌ಗೆ ಹಾಗೆ ಹೇಳ್ದೆ ಅಷ್ಟೇ.... ಇಲ್ಲೇ ಹತ್ತಿರದಲ್ಲೇ ಒಂದು ಕಾಫಿ ಬಾರ್ ಇದೆ. ಅಲ್ಲಿ ಕೂತು ಮಾತನಾಡೋಣ." ಕಾರನ್ನು ಆ ದಿಕ್ಕಿಗೆ ಓಡಿಸಿದ. ಆಗಾಗ್ಗೆ ಅವಳ ಕಡೆ ಕಳ್ಳ ನೋಟವನ್ನು ಬೀರಿದಳು. ಅವನು ಹಳೆಯ ಸಿನಿಮಾ ಹಾಡೊಂದನ್ನು ಗುನುಗುನಿಸುತ್ತಾ, ಮಧ್ಯೆ ಮಧ್ಯೆ ಸೀಟಿ ಹೊಡೆಯುತ್ತಾ ಇದ್ದ. ಕೆಲವೇ ಕ್ಷಣಗಳಲ್ಲಿ ಅವಳ ಮುನಿಸು ಕಡಿಮೆ ಆಗಿತ್ತು.

ಇವನು ಒಳ್ಳೆಯವನು, ತಾಳ್ಮೆ ಇದೆ... ಸ್ನೇಹ ಇದೆ... ರೂಪ ಇದೆ... ವಿದ್ಯೆ ಇದೆ. ಬಹುಶಃ ನಾನೇ ಇವನಿಗೆ ತಕ್ಕವಳಲ್ಲವೇನೋ ಅಂತಂದುಕೊಂಡಾಗ ಮನಸ್ಸು ಕುಗ್ಗಿತು. ಆದರೂ, ನೀನು ನನ್ನವನು ಮುರಳೀ... ನಿನ್ನನ್ನು ಬಿಟ್ಟು ಬೇರೆ ಯಾರನ್ನೂ ನಾನು ಮದುವೆಯಾಗೋಲ್ಲ.... ಈಗ್ಲಾದ್ರೂ ನೀನು ಬೇಗ ನಿರ್ಧಾರ ಮಾಡಲೇಬೇಕು. ಇಲ್ದಿದ್ರೆ ನಾನು ಸೋತು ಹೋಗ್ತೀನಿ ಅಂತ ತನ್ನಲ್ಲೇ ಅಂದುಕೊಂಡಳು.

ಕಾರನ್ನು 'ಕಾಫಿ ಬಾರ್' ಬಳಿ ನಿಲ್ಲಿಸಿದ. ಇಬ್ಬರೂ ಒಳ ನಡೆದರು. ಸೂಕ್ತ ವಾದ ಸ್ಥಳವನ್ನೂ ಆರಿಸಿದ. ಸ್ಪೆಷಲ್ ಕಾಫಿಗೆ ಆರ್ಡರ್ ಕೊಟ್ಟ. ಇಬ್ಬರೂ ಕುಳಿತರು. ವೇಟರ್ ಕಾಫಿಯನ್ನು ತಂದಿತ್ತ. ಅವನು ಅತ್ತ ಹೋದ ಮೇಲೆ ಮುರಳೀ ಪ್ರಶ್ನಿಸಿದ.

"ಓ... ಕೇ.... ಈಗ್ಹೇಳು.... ನಿನ್ನ ಪ್ರಾಬ್ಲಂ ಏನು?"

"ಅದೇ.... ಪತ್ತೇದಾರಿ ಪ್ರಶ್ನೆ ಕೇಳ್ಬೇಡ.... ಪ್ರಾಬ್ಲಂ ನಂದಲ್ಲ. ನಾನು ಸರಿಯಾಗಿದೀನಿ. ನೀನೇ ಒಂದು ಪ್ರಾಬ್ಲಂ ಅಷ್ಟೇ." ವಿನುತಾ ಕನಲಿದಳು. ಮುರಳಿ ನಕ್ಕ.

"ಗೊತ್ತಾಯ್ತು...: ಸೇಮ್ ಓಲ್ಡ್ ವಿಷಯ.... ವಧು ಪರೀಕ್ಷೆ ಬಂತಾ?"

"ನಿಂಗೆ ತಮಾಷೆ. ನಂಗೆ ಇವೆಲ್ಲಾ ಬೇಕಿಲ್ಲ.... ಈಗ್ಲೂ ನೀನು ಮನಸ್ಸು ಮಾಡ್ದಿದ್ರೆ ನಾನು ಇವನನ್ನೇ ಮದ್ವೆಯಾಗಿ ಸದಾ ಕಾಲಕ್ಕೂ ನಿನ್ನಿಂದ ದೂರ ಹೊರಟು ಹೋಗ್ತೀನಿ."

"ಹಾಗೆ ನೀನು ಮಾಡಲ್ಲ ನಂಗೊತ್ತು...."

"ಇಲ್ಲ ಮುರಳೀ. ನನ್ನ ಪೇಶನ್ಸ್‌ಗೂ ಒಂದು ಮಿತಿ ಇದೆ. ಇವನು ನನ್ನ ಫೋಟೋ ನೋಡಿ ಒಪ್ಪಿಗೆ ಕೊಟ್ಟಿದಾನಂತೆ. ವಧು ಪರೀಕ್ಷೆ ಒಂದು ಫಾರ್ಮಾಲಿಟಿ ಅಷ್ಟೇ."

"ಇಂಪಾಸಿಬಲ್. ಅವನ್ಹೇಗೆ ನಿನ್ನನ್ನು ಒಪ್ತಾನೆ?"

"ಯಾಕೆ? ನಾನು ಚೆನ್ನಾಗಿಲ್ಲ ಅಂತ ಸೂಚ್ಯವಾಗಿ ಹೇಳ್ತಿದೀಯ... ಮತ್ಯಾಕೆ ನನ್ನನ್ನು ಪ್ರೀತಿಸುವ ನಾಟಕ ಆಡ್ದೆ?"

"ಅರೇ.... ಕೋಪ ಯಾಕೆ ಡಿಯರ್.... ಅವನ್ಯಾರೊ ನಿನ್ನನ್ನು ನನ್ನಿಂದ ಹೇಗೆ ದೂರ ಮಾಡ್ತಾನೆ ಅಂತಂದೆ! ನನ್ಮೇಲೆ ನಿಂಗೆ ನಂಬ್ಕೆ ಇಲ್ವಾ?"

"ನಂಬ್ಕೆ ಇರೋ ಹೊತ್ಗೇ ಇಷ್ಟು ದೂರ ನಿನಗೋಸ್ಕರ ಬಂದಿರೋದು. ಆದರೆ ಸಮಯದ ಮೇಲೆ ನಂಗೆ ನಂಬ್ಕೆ ಇಲ್ಲ. ನೀನು ಇವತ್ತೇ ಮದುವೆಯಾಗಿ ನನ್ನನ್ನು ನಿನ್ನ ಮನೆಗೆ ಕರ್ಕೊಂಡು ಹೋಗು."

"ಡೋಂಟ್ ಬಿ ಸಿಲ್ಲಿ ವಿನೂ. ಇವತ್ತು ಹೇಗಾಗುತ್ತೆ?"

"ಯಾಕಾಗಲ್ಲ? ನಿಂಗೆ ಟೈಂ ಕೊಟ್ಟರೆ ನಿಧಾನ ಮಾಡ್ತಾನೇ ಇರ್ತೀಯ...."

"ಓ...ಕೆ.... ಓ... ಕೇ, ಈ ಬಾರಿ ಹೀಗಾಗೊಲ್ಲ. ಏನಾದ್ರೂ ಮಾಡ್ಲೇಬೇಕು. ಏನು ಮಾಡಬಹುದು ಅಂತ ಯೋಚಿಸ್ತೀನಿ.... ನೀನು ಕಾಫಿ ಕುಡಿ" ಎನ್ನುತ್ತಾ ಸಿಗರೇಟಿನ ಪ್ಯಾಕನ್ನು ಹೊರ ತೆಗೆದ. ಅವಳು ಸರ್ರನೆ ಕಿತ್ತುಕೊಂಡಳು.

"ಸಿಗರೇಟು ಸೇದಿ ಸೇದಿ, ನೀನೂ ಹಾಳಾಗ್ತೀಯ. ನನ್ನನ್ನೂ ಹಾಳು ಮಾಡ್ತಿದೀಯ."

"ಒಂದೇ ಒಂದು ವಿನೂ.... ಇಲ್ದಿದ್ರೆ ನನ್ನ ತಲೇನೇ ಓಡೋಲ್ಲ."

"ತಲೇನೂ ಓಡುತ್ತೆ. ಬಾಲಾನೂ ಓಡುತ್ತೆ. ನಾನು ನಿನ್ನ ಜೊತೆ ಇಲ್ದಿದ್ರೆ ನಂಗೆ ಕಾಫಿಯೂ ಬೇಡ, ನೀನೂ ಬೇಡ." ಸಿಟ್ಟಿನಿಂದ ಮೋರೆ ತಿರುವಿದಳು.

"ಏಯ್ ವಿನೂ, ಏನು ಹಾಗಂದ್ರೇ? ನೀನು ಹೀಗೆ ಮಾತಾಡಿದ್ರೆ ನಾನು ಸುಮ್ನೆ ಬಿಟ್ಬಿಡ್ತೀನಿ ಅಂತ ಅಂದ್ಕೊಂಡ್ಯಾ.... ನೀನೂ ಗರಂ ಆಗಿದ್ದೆ. ನನ್ನ ಮೂಡ್ ಸಹ ಕೆಟ್ಟಿತ್ತು. ಸ್ವಲ್ಪ ಲೈಟ್ ಆಗಿರ್ಲಿ ಅಂತ ಹೀಗೆಲ್ಲಾ ಮಾತಾಡ್ತೀನಿ. ಈ ನನ್ನ ಕೆಲಸದಲ್ಲಿ ಬರೀ ಕ್ರೈಂ, ಸುಳ್ಳು, ವಂಚನೆ ಅದೂ ಇದೂ ನೋಡಿ ಕೇಳಿ ಬೇಜಾರಾಗಿ ಹೋಗಿರುತ್ತೆ. ಈ ಕೆಲಸಾನೇ ಬಿಟ್ಬು ಬಿಡೋಣ ಅಂತ ಅಂದ್ಕೊಂಡಿದೀನಿ."

"ಬಿಟ್ಬು ಏನ್ಮಾಡ್ತೀಯಾ?"

"ಅಮ್ನೋರಾ ಗುಲಾಮನಾಗಿ ಮನೇಲೇ ಇರ್ತೀನಿ. ಮನೆ ಕೆಲಸ ಕಾರ್ಯ ಎಲ್ಲಾ ನಂದೇ.... ಹಾಯಾಗಿ ಕುಳಿತಿರು ನೀನು ರಾಣಿಯ ಹಾಗೆ. ಒಟ್ಟಿಗೇ ಕೂತು ಊಟ ಮಾಡೋಣ." ಎನ್ನುತ್ತಾ ಕಾಫಿಯನ್ನು ಕುಡಿದು ಮುಗಿಸಿದ.

"ಈಗ್ಲಾದ್ರೂ ಗಂಭೀರವಾಗಿ ಮಾತಾಡು ಮಾರಾಯ. ನಾನು ಆತಂಕದಿಂದ ಬೆಂದು ಹೋಗ್ತಿದೀನಿ."

ಅಷ್ಟರಲ್ಲಿ ಅವನ ಮೊಬೈಲ್ ರಿಂಗಾಗಿತ್ತು. ನಂಬರನ್ನು ನೋಡಿ ಆಫ್ ಮಾಡಿದ.

"ಓ...ಕೇ.... ವಿನೂ ನೀನು ವರಿ ಮಾಡ್ಕೋಬೇಡ. ನಾನು ಸಾಲ್ವ್ ಮಾಡ್ತೀನಿ."

"ಹೇಗೆ ಮಾಡ್ತೀಯ? ವಿಷಯ ಏನೂಂತ್ಲೇ ಗೊತ್ತಿಲ್ಲವಲ್ಲ?"

"ಹೌದಲ್ವಾ? ಡೀಟೈಲ್ಸ್ ಹೇಳು. ಅವನು ಯಾವಾಗ ಬರ್ತಾನೆ? ಯಾರ್ಯಾರು ಬರ್ತಾರೆ ಅಂತ. ನಾನೂ ಬಂದು ಬಿಡ್ತೀನಿ.... ನಾನೂ ಅವನನ್ನು ನೋಡ್ಬೇಕಲ್ಲ..." ಅವನು ನಕ್ಕಾಗ ಅವಳ ಮೈ ಉರಿದು ಹೋಯಿತು.

"ನೀನೇನೋ ನೋಡ್ಬೇಕಾಗಿಲ್ಲ ಅವನನ್ನ.... ನನ್ನ ಮಂಕುಬುದ್ಧಿಗಿಷ್ಟು...

ಹೋಗೀ ಹೋಗೀ ನಿನ್ನನ್ನು ಲವ್ ಮಾಡಿದ್ನಲ್ಲ. ಹೋಗ್ಲಿ ಈಗ್ಲಾದರೂ ನಿಜ ಹೇಳ್ತೀಯಾ? ನನ್ನನ್ನು ನೀನು ಲವ್ ಮಾಡ್ತಿದೀಯೋ ಇಲ್ವೋ.... ಒಂದ್ವೇಳೆ ಪ್ರೀತಿಸೋದೇ ಆದ್ರೆ ಬೇಗ ಮದುವೆಯಾಗು. ಇಲ್ದಿದ್ರೆ ಆತ್ಮಹತ್ಯೆ ಮಾಡ್ಕೊಳ್ತೀನಿ.... ನನ್ನ ಸಾವಿಗೆ ನೀನೇ ಕಾರಣ ಅಂತ ಬರೆದಿಡ್ತೀನಿ."

"ಅಷ್ಟು ಕೆಟ್ಟೋನಾ ನಾನು? ನನ್ನಮ್ಮ ನನ್ನನ್ನು ಚೆನ್ನಾಗಿ ಸಾಕಿ ಬೆಳೆಸಿದಾಳೆ. ಅಮ್ಮಂಗೆ ನಿನ್ನನ್ನು ಕಂಡ್ರೆ ಇಷ್ಟ. ಹಾಗೆ ನಂಗೂ ಕೂಡಾ.... ಒಂದು ನಿಜವಾದ ಮಾತನ್ನು ಹೇಳ್ತೀನಿ ಕೇಳು ವಿನೂ.... ಇದುವರೆಗೂ ಮದುವೆ ಬಗ್ಗೆ ನಾನೆಂದೂ ಸೀರಿಯಸ್ ಆಗಿ ಯೋಚಿಸಿಯೇ ಇಲ್ಲ. ಆದ್ರೆ ಈಗ ಹಾಗಾಗೊಲ್ಲ.... ನನಗೆ ಹುಡುಗನ ವಿವರಗಳನ್ನು ಕೊಡು. ನಾನು ಅವನ ಹತ್ರ ಮಾತಾಡ್ತೀನಿ."

"ನಿನ್ನ ಪೋಲೀಸ್ ಬುದ್ಧಿ ತೋರಿಸ್ಬೇಡ ಮುರಳಿ... ಅವನ್ಹತ್ರ ನಿನ್ನ ಮಾತು ಏನು? ಅವನನ್ನು ಹೆದರಿಸಿದರೆ, ಅಪ್ಪಂಗೆ ಹೇಳ್ಬಿಟ್ರೆ?"

"ಹಾಗೇನೂ ಮಾಡೋಲ್ಲ. ನಂಗೂ ಗೊತ್ತು ಯಾರ್‍ಯಾರ ಹತ್ರ ಹೇಗೆ ಮಾತಾಡ್ಬೇಕು ಅಂತ. ನೀನೇ ನೋಡ್ತಿರು ಎಂಥಾ ಪ್ಲ್ಯಾನ್ ಮಾಡ್ತೀನಿ ಅಂತ. ನಂಗೆ ಸ್ವಲ್ಪ ಟೈಂ ಕೊಡು.... ನಿನ್ನ ಚಿಂತೇನೆಲ್ಲಾ ನಂಗೆ ಬಿಟ್ಬಿಡು."

"ಎಷ್ಟು ಸುಲಭವಾಗಿ ಹೇಳ್ತೀಯ ಮುರಳೀ.... ಆತಂಕದಿಂದ ರಾತ್ರಿ ಹೊತ್ತು ನಿದ್ದೆ ಬರಲ್ಲ. ಸರಿತಾ ಗೊರಕೆ ಹೊಡೀತಿರ್ತಾಳೆ. ಎಬ್ಬಿಸಿ ಗುದ್ದೋಣ ಅಂತ ಅನ್ಸುತ್ತೆ."

ಮುರಳಿ ಮುಕ್ತವಾಗಿ ನಕ್ಕ.

"ಎಂಥಾ ಕೆಟ್ಟ ಆಲೋಚನೆ ನಿಂದು? ಅವಳಾದ್ರೂ ಸುಖವಾಗಿ ನಿದ್ದೆ ಮಾಡ್ತಾಳಲ್ಲ ಅಂತ ಖುಷಿಪಡು. ಪ್ರೀತಿ ಗೀತಿ ಅಂತ ತಲೆಗೆ ಹಚ್ಕೊಂಡ್ರೆ ಹೀಗೇ."

"ನಿಂಗೆ ನಿದ್ದೆ ಬರುತ್ತಾ ಮುರಳೀ...."

"ನಿದ್ದೆಯೂ ಬರುತ್ತೆ. ಕನಸೂ ಬೀಳುತ್ತೆ. ಕನಸ್ನಲ್ಲೂ ನೀನು ಹೀಗೇ ಏನಾದ್ರೂ ಹೇಳಿ ಎಬ್ಬಿಸಿ ಬಿಡ್ತೀಯ.... ಎಚ್ಚರವಾಗಿ ಬಿಡುತ್ತೆ. ಒಳ್ಳೆ ನಿದ್ದೆ ಮಾಡೋಕೂ ಬಿಡಲ್ಲ ನೀನು...." ಮತ್ತೆ ಹಗುರವಾಗಿ ನಕ್ಕ.

"ನೀನು ನನ್ನನ್ನು ಮದ್ವೆ ಆಗೋವರ್‍ಗೂ ನಿನ್ನನ್ನ ಹೀಗೇ ಗೋಳು ಗುಟ್ಟಿಸ್ತಾನೇ ಇರ್ತೀನಿ.... ನೋಡ್ತಿರು...."

"ಮದ್ವೆ ಮದ್ವೆ... ಅದೊಂದೇ ನಿಂಗೆ ಗೊತ್ತಿರೋದು. ಆಮೇಲೆ ಹೀಗೆ ಜಾಲಿಯಾಗಿ ಇರೋಕೆ ಆಗುತ್ತಾ ವಿನುತಾ...."

"ಪರ್ವಾಗಿಲ್ಲ.... ನಿನ್ನ ಹೆಂಡ್ತಿಯಾಗಿ ನಿನ್ನ ಮನೆಗೆ ಬಂದರೆ ಸಾಕು. ನನಗೆ ನಿರಾತಂಕ...."

"ಅಷ್ಟು ಆತುರಾನಾ ನಿಂಗೆ? ನನ್ನನ್ನು ಬಿಟ್ಟಿರೋಕೆ ಆಗ್ತಾ ಇಲ್ವಾ?" ಕಣ್ಣು ಹೊಡೆದು ಕೇಳಿದ. ಅವಳು ಕೆಂಪಾದಳು.

"ಥೂ.... ಏನೇನೋ ಕೆಟ್ಟ ಅರ್ಥ ಮಾಡ್ಬೇಡ.... ಆದರೆ ಒಂದು ಮಾತಂತೂ ಸತ್ಯ. ನಿನ್ನನ್ನಲ್ಲದೇ ನಾನು ಬೇರೆ ಯಾರ ಬಗ್ಗೆಯೂ ಯೋಚಿಸೋಲ್ಲ. ಭಾನುವಾರ ಬರೋ ವರನ ಮುಖ ನೋಡ್ಬೇಕಲ್ಲಾ ಅಂತ ಬೇಸರ ಆಗ್ತಿದೆ ನಂಗೆ."

"ಅವನು ನಂಗಿಂತ ಸುಂದರನಾಗಿದ್ರೆ?"

"ಇಂಪಾಸಿಬಲ್.... ಅವನು ಹೇಗೇ ಇದ್ರೂ ನನಗೆ ಅವನು ಬೇಡ.... ಅವನ ಬಗ್ಗೆ ಕೇಳಿದ್ಯಲ್ಲಾ.... ಬರ್ಕ್ಕೋ.... ಅವನ ಹೆಸರು ಮಧುಸೂದನ ಅಂತ. ಬ್ಯಾಂಕ್ ಮ್ಯಾನೇಜರ್ ಆಗಿದಾನಂತೆ. ಅಡ್ರೆಸ್ ತಗೋ." ಎನ್ನುತ್ತಾ ಅವನ ವಿವರಗಳನ್ನು ಕೊಟ್ಟಳು...., " ನಾನೂ ನೋಡಿಯೇ ಬಿಡ್ತೀನಿ. ನೀನು ಅದೇನು ಮಾಡ್ತೀಯೋ ಅಂತ. ನೀನೇನಾದ್ರೂ ಕೈ ಕೊಟ್ರ್ಯೋ ಪರಿಣಾಮ ನೆಟ್ಟಗಿರಲ್ಲ." ಕಣ್ಣು ಬಿಟ್ಟು, ಬೆರಳನ್ನು ತೋರಿ ನುಡಿದಳು.

"ನಾನು ಪತ್ತೇದಾರ, ನನ್ನನ್ನೇ ಹೆದರಿಸ್ತೀಯಲ್ಲ ವಿನುತಾ. ನನ್ನ ಆಫೀಸ್‌ಗೆ ನೀನೂ ಸೇರ್ಕ್ಕೋ, ಎಂತೆಂಥ ಸ್ವಾರಸ್ಯವಾದ ಕೇಸುಗಳಿರುತ್ವೆ ಅಂತ ಗೊತ್ತಾಗುತ್ತೆ."

"ಅದೆಲ್ಲಾ ನಿಂಗೇ ಇರಲಿ ಮುರಳಿ. ಈಗ ನಾನು ಹೋಗ್ತೀನಿ. ಅಮ್ಮಂಗೆ ಫ್ರೆಂಡ್ ಮನೆಗೆ ಹೋಗ್ತೀನಿ ಅಂತ ಸುಳ್ಳು ಹೇಳಿ ಬಂದಿದೀನಿ. ಹೊತ್ತಾಯ್ತು." ಎದ್ದಳು.

"ನಾನೂ ನಿನ್ನ ಫ್ರೆಂಡೇ ತಾನೇ.... ನಡೀ ಮನೆಗೆ ಬಿಟ್ಟು ಬಿಡ್ತೀನಿ. ಹಾಗೇ ಆಂಟಿಯ ಹತ್ರ ಮಾತಾಡ್ತೀನಿ." ಅವಳು ಅವನ ಕೈ ಮೇಲೆ ಹೊಡೆದಳು.

"ಏನೂ ಬೇಡ. ಬಸ್ನಲ್ಲಿ ಹೋಗ್ತೀನಿ...." ಎನ್ನುತ್ತಾ ಎದ್ದಳು.

"ನೋಡು.... ನನ್ನನ್ನ ನೋಡೋಕೆ ಅಂತ ಇಷ್ಟು ದೂರ ಬಂದಿದೀಯ. ನಿನ್ನನ್ನು ಕ್ಷೇಮವಾಗಿ ಮನೆ ತಲುಪಿಸುವುದು ನನ್ನ ಧರ್ಮ." ಎನ್ನುತ್ತಾ ಅವಳ ಕೈ ಹಿಡಿದು ಪ್ರೀತಿಯಿಂದ ಒತ್ತಿದ. ಅವಳು ಕೈಯನ್ನು ಹಿಂದಕ್ಕೆ ಎಳೆದುಕೊಂಡಳು.

"ಯಾರಾದ್ರೂ ನೋಡಿದ್ರೆ ಏನಂದ್ಕೋತಾರೆ ಮುರಳೀ?"

"ಯಾರೂ ಏನೂ ಅಂದ್ಕೊಳಲ್ಲ.... ನಿಂಗೆ ಯಾರ ಭಯ? ನಾನು ನಿನ್ನ ಕಡೆಗೆ ಇಲ್ವಾ.... ವರಿ ಬೇಡ. ಎಲ್ಲಾ ಸರಿ ಮಾಡ್ತೀನಿ." ಎನ್ನುತ್ತಾ ಅವನೂ ಎದ್ದು ನಿಂತ.

ಅವಳ ಮನೆಯ ರಸ್ತೆ ತಿರುವಿನಲ್ಲಿ ಕಾರನ್ನು ನಿಲ್ಲಿಸಿದ. ಅವಳು ಇಳಿದು ಥ್ಯಾಂಕ್ಸ್ ಹೇಳಿ, ಕೈಯಾಡಿಸಿ ತನ್ನ ಮನೆಯ ದಿಕ್ಕಿಗೆ ತಿರುಗಿದಳು. ಮುರಳಿ ತನ್ನ ಆಫೀಸಿನ ಕಡೆಗೆ ಕಾರನ್ನು ಓಡಿಸಿದ.

* * *

ಮುರಳಿ–ವಿನುತರ ಸ್ನೇಹ ಈಚೀಚಿನದಲ್ಲ. ಬಾಲ್ಯದ ಗೆಳೆತನ. ಒಟ್ಟಿಗೇ ಒಂದೇ ಸ್ಕೂಲಿನಲ್ಲಿ ಓದುತ್ತಿದ್ದವರು. ಒಂದೇ ವ್ಯಾನಿನಲ್ಲಿ ಸ್ಕೂಲಿಗೆ ಹೋಗಿ ಬರುತ್ತಿದ್ದರು. ಒಮ್ಮೆ ವ್ಯಾನಿನವನು ಬಾರದೇ ಇದ್ದಾಗ, ಮುರಳಿಯನ್ನು ಕರೆದೊಯ್ಯಲು ಅವನ ತಾಯಿ ವತ್ಸಲಾ ತನ್ನ ಕಾರಿನಲ್ಲಿ ಬಂದಿದ್ದಳು. ಸಣ್ಣಗೆ ಮಳೆ ಬೇರೆ ಬರುತ್ತಿತ್ತು. ಅಸಹಾಯಕಳಂತೆ ನಿಂತಿದ್ದ ಬಾಲಕಿಯನ್ನು ಕಂಡು ಆಕೆಗೆ ಕನಿಕರವಾಗಿತ್ತು.

"ನಿಮ್ಮ ಮನೆ ಎಲ್ಲಿದೆ? ಕಾರ್ನಲ್ಲಿ ನಿಮ್ಮ ಮನೆ ತನಕ ಬಿಡ್ತೀನಿ." ಎಂದಳು.

"ನಮ್ಮ ಮನೆಯ ಮುಂದಿನ ಬೀದೀಲೇ ಇವರ ಮನೆ." ಮುರಳಿ ಎಂದ.

ತನ್ನ ಮನೆಯವರು ಯಾರೂ ತನ್ನನ್ನು ಕರೆದೊಯ್ಯಲು ಬರುವುದಿಲ್ಲವೆಂದು ತಿಳಿದಿದ್ದ ವಿನುತಾ ಕಾರನ್ನೇರಿ ಆಕೆಯ ಪಕ್ಕ ಕುಳಿತಳು.

ಆಕೆಗೆ ಹೆಣ್ಣು ಮಕ್ಕಳಿರಲಿಲ್ಲ. ಮುರಳಿ ಒಬ್ಬನೇ ಮಗ. ಹೆಣ್ಣು ಮಗುವನ್ನು ಎತ್ತಿ ಆಡಿಸುವ ಆಸೆಯನ್ನು ತನ್ನಲ್ಲೇ ಅದುಮಿಟ್ಟು ಕೊಂಡಿದ್ದಳು. ಗುಂಡು ಗುಂಡಾಗಿದ್ದ ಮುದ್ದಾಗಿದ್ದ ವಿನುತಳ ಮೇಲೆ ಆಸಕ್ತಿ ಮೂಡಿತು. ತನ್ನ ಮನೆಗೆ ಕರೆದಳು. ವಿನುತಾ ಹೂಂ ಎಂದಿದ್ದಳು. ತನ್ನ ಮನೆಯೊಳಕ್ಕೆ ಕರೆದೊಯ್ದು ತಿಂಡಿಯನ್ನು ಹಣ್ಣನ್ನು ಕೊಟ್ಟಳು. ಕುಡಿಯಲು ಹಾಲನ್ನು ಕೊಟ್ಟಳು. ಎಲ್ಲವೂ ತುಂಬಾ ರುಚಿಯಾಗಿದೆಯೆಂದೆನಿಸಿತ್ತು. ನಂತರ ತಾನೇ ಖುದ್ದಾಗಿ, ತಮ್ಮ ಕಾರಿನಲ್ಲಿ ವಿನುತಾಳನ್ನು ಅವಳ ಮನೆಗೆ ತಲುಪಿಸಿದಳು.

ಮನೆಯ ಮುಂದೆ ಕಾರು ನಿಂತಾಗ ಸುಜಾತ ಕುತೂಹಲದಿಂದ ಇಣುಕಿ ನೋಡಿದ್ದಳು. ಕಾರಿನಿಂದ ಇಳಿದ ಹೆಂಗಸನ್ನು ಕಂಡಳು. ಅವಳ ಜೊತೆಯಲ್ಲಿ ಅವಳ ಕೈ ಹಿಡಿದು ಇಳಿದ ತನ್ನ ಮಗಳು! ಆತಂಕದಿಂದ ಅವಳ ಬಳಿಗೆ ಕರೆತಂದಳು.

"ನಾನು ವತ್ಸಲಾ ಅಂತ.... ಇವತ್ತು ವ್ಯಾನಿನವನು ಬರೋಲ್ಲ ಅಂತ ತಿಳಿಸಿದ್ದ. ನನ್ನ ಮಗನನ್ನು ಕರೆತರೋಕೆ ಅಂತ ಹೋಗಿದ್ದೆ. ಹಾಗೇ ನಿಮ್ಮ ಮಗಳನ್ನೂ ಕರೆದ್ಕೊಂಡು ಬಂದೆ. ತಪ್ಪು ತಿಳ್ಕೋಬೇಡಿ." ಎಂದು ವಿನಯದಿಂದ ಹೇಳಿದಾಗ ಸುಜಾತ ಮುಜುಗರಗೊಂಡಳು.

"ಇಲ್ಲ, ಹಾಗೇನಿಲ್ಲ. ನಿಮಗೆ ಸುಮ್ಮನೆ ತೊಂದರೆಯಾಯ್ತು." ಎಂದಳು.

"ತೊಂದ್ರೆ ಏನ್ಬಂತು? ಮಗು ಒಂದೇ ನಿಂತಿತ್ತು. ಉಳಿದವರೆಲ್ಲ ಹೊರಟು ಹೋಗಿದ್ದರು. ಒಂದೇ ವ್ಯಾನಿನಲ್ಲಿ ಬರುವ ಹುಡುಗಿ ಅಂತ ತಿಳೀತು; ಕರ್ಕೊಂಡ್ಬಂದೆ,

ನಾನಿನ್ನು ಬರ್ತೀನಿ."

"ಬನ್ನಿ ಒಳಗೆ...." ಸಂಕೋಚದಿಂದ ಕರೆದಳು.

"ಇಲ್ಲಮ್ಮಾ, ಮಗ ಒಬ್ಬನೇ ಇದಾನೆ. ಹೋಂ ವರ್ಕ್ ಮಾಡಿಸ್ಬೇಕು."

"ಕುಂಕುಮ ಇಟ್ಕೊಂಡು ಹೋಗೋರಂತೆ ಬನ್ನಿ." ಮತ್ತೆ ಕರೆದಿದ್ದಳು.

ಒಳ ಬಂದ ವತ್ಸಲಾ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಸುತ್ತಲೂ ಕಣ್ಣೋಟವನ್ನು ಹರಿಸಿದ್ದಳು. ಸುಜಾತಳಿಗೆ ಮುಜುಗರವೆನಿಸಿತ್ತು. ಆದರೂ ಮನೆಗೆ ಬಂದ ಮುತ್ತೈದೆಗೆ ಅರಿಶಿನ ಕುಂಕುಮವನ್ನು ಕೊಟ್ಟು ಎಲೆ ಅಡಿಕೆಯೊಂದಿಗೆ ಬಾಳೆಹಣ್ಣನ್ನು ಇಟ್ಟು ಕೊಟ್ಟಳು.

"ನೀವೂ ನಮ್ಮ ಮನೆಗೆ ಒಮ್ಮೆ ಬನ್ನಿ ಸುಜಾತರವರೇ...." ವತ್ಸಲಾ ಆಹ್ವಾನ ನೀಡಿದಾಗ, ಅವಳು ಅಚ್ಚರಿಯಿಂದ ಕಣ್ಣರಳಿಸಿದಳು.

"ನನ್ನ ಹೆಸರು ನಿಮಗೆ ಹೇಗೆ ಗೊತ್ತು?"

"ನಿಮ್ಮ ಮಗಳನ್ನು ಕೇಳಿ ತಿಳಿದ್ಕೊಂಡೆ. ತುಂಬಾ ಮುದ್ದಾಗಿ ಮಾತಾಡ್ತಾಳೆ ನಿಮ್ಮ ಮಗಳು. ದನಿ ಇಂಪಾಗಿದೆ. ಸಂಗೀತ ಕಲಿಸಿ, ಚೆನ್ನಾಗಿ ಹಾಡ್ತಾಳೆ."

"ಇಲ್ಲಿ ಹತ್ತಿರದಲ್ಲಿ ಹೇಳಿಕೊಡುವವರು ಯಾರೂ ಇಲ್ಲ. ಹುಡುಗೀನ ದೂರ ಕಳಿಸೋಕೆ ಇಷ್ಟವಿಲ್ಲ. ಅಲ್ಲದೇ ಈ ಕಾಲದಲ್ಲಿ ಸಂಗೀತ ಕಲಿತು ಏನು ಮಾಡ್ಬೇಕಾಗಿದೆ? ಸ್ಕೂಲಿನ ಪಾಠಗಳನ್ನು ಚೆನ್ನಾಗಿ ಓದಿ ವಿದ್ಯಾವಂತರಾದರೆ ಅಷ್ಟೇ ಸಾಕು."

"ಹಾಗೆನ್ಬೇಡಿ. ಸಂಗೀತವೂ ಒಂದು ವಿದ್ಯೆಯೇ. ಅದರಲ್ಲೇ ಕೀರ್ತಿ ಗಳಿಸಿರುವವರು ಎಷ್ಟೋ ಮಂದಿ ಇದಾರೆ. ಹಬ್ಬ ಹುಣ್ಣಿಮೆ ಎಂದರೆ ಹೆಣ್ಣು ಮಕ್ಕಳಿಗೆ ಸಂಭ್ರಮ ಸಡಗರ ಜಾಸ್ತಿ. ಸಂಗೀತವೂ ಗೊತ್ತಿದ್ದರೆ ಅದರ ಸೊಗಸೇ ಬೇರೆ. ನಮಗೆಲ್ಲಾ ಬಲವಂತವಾಗಿ ಹೇಳಿ ಕೊಡುತ್ತಿದ್ದರು. ಮದುವೆ ಆದ್ಮೇಲೆ ಅದಕ್ಕೆ ಯಾರ ಪ್ರೋತ್ಸಾಹವೂ ಇಲ್ಲವಾಯಿತು ಅಷ್ಟೇ."

"ಅದಕ್ಕೇ ಹೇಳಿದ್ದು. ದೇವರ ಮುಂದೆ ನಿಂತು ಒಂದು ಸ್ತೋತ್ರವನ್ನು ಹೇಳ್ಕೊಳ್ಳೋಕೇ ಸಮಯ ಇರೋಲ್ಲ.... ಸಂಗೀತವನ್ನು ಕಲಿತು ಏನನ್ನು ಸಾಧಿಸಬೇಕಾಗಿದೆ?"

"ನನಗೆ ಹೆಣ್ಣು ಮಕ್ಕಳಿಲ್ಲ. ವಿನುತಳಂಥ ಒಂದು ಹುಡುಗಿ ಇದ್ದಿದ್ದರೆ, ಹಾಡುಗಾರಿಕೆ, ನೃತ್ಯ ಎಲ್ಲವನ್ನು ಕಲಿಸ್ತಿದ್ದೆ."

"ನಿಮಗೆ ಎಷ್ಟು ಜನ ಮಕ್ಕಳು?"

"ನನಗೆ ಒಬ್ಬನೇ ಮಗ... ಇವಳಿಗಿಂತ ಒಂದು ಕ್ಲಾಸು ಮುಂದೆ ಇದಾನೆ.... ನಾನಿನ್ನು ಬರ್ತೀನಿ, ಹೊತ್ತಾಯ್ತು."

"ಸರಿ, ಆಗಾಗ್ಗೆ ನೀವೇ ಬರ್ತಾ ಇರಿ." ಸುಜಾತ ಕರೆ ಇತ್ತಳು. ವತ್ಸಲಾ ತಲೆಯಾಡಿಸಿ ಹೊರನಡೆದಳು. ಅವಳ ಕಾರು ಅತ್ತ ಮರೆಯಾದ ಕೂಡಲೇ ಸುಜಾತ ಮಗಳೊಂದಿಗೆ ಒಳ ಬಂದಳು.

"ಅಮ್ಮಾ.... ಆಂಟಿ ಎಷ್ಟು ಒಳ್ಳೆಯವಳು ಅಲ್ವಾ?"

"ಹೂಂ. ನಿಂಗೆ ಹಾಗೇನೇ.... ಹೊರಗ್ನೋರೆಲ್ಲಾ ಒಳ್ಳೆಯವರೇ.... ಸೀದಾ ಮನೆಗೆ ಬರೋದು ಬಿಟ್ಟು ಅವರ ಇವರ ಮನೆಗ್ಯಾಕೆ ಹೋದೆ. ನಿಮ್ಮಪ್ಪಂಗೆ ಗೊತ್ತಾದ್ರೆ ಬೈತಾರೆ. ನಮಗ್ಯಾಕ್ಬೇಕು ದೊಡ್ಡವರ ಸಹವಾಸ?"

"ಆಗಾಗ ಬರ್ತಾ ಇರಿ ಅಂತ ಮತ್ಯಾಕಮ್ಮ ಕರೆದೆ?"

"ಸುಮ್ಮನೇ ಕರೆದೆ. ಹಾಗಂತ ಅವರು ಬಂದು ಬಿಡ್ತಾರಾ ನಮ್ಮಂಥ ಬಡವರ ಮನೆಗೆ?"

"ನಾವ್ಯಾಕಮ್ಮಾ ಬಡವರು? ನಮ್ಹತ್ರ ಯಾಕೆ ಕಾರು, ಫೋನ್ ಯಾವ್ದೂ ಇಲ್ಲ?"

"ನಿಮ್ಮಪ್ಪನ್ನ ಕೇಳು, ನನ್ನನ್ಯಾಕೆ ಕೇಳ್ತೀಯ? ಹೋಗಿ ಬಟ್ಟೆ ಬದಲಾಯಿಸು, ತಿಂಡಿ ಕಾಫಿ ಕೊಡ್ತೀನಿ."

"ಆಂಟಿ ಮನೇಲೇ ತಿಂಡಿ ತಿಂದೆ. ಸಿಹಿಯಾಗಿರೋ ಹಾಲನ್ನು ಕೊಟ್ರು, ಎಷ್ಟು ರುಚಿಯಾಗಿತ್ತು...." ಅಂತ ಬಾಯಿ ಚಪ್ಪರಿಸಿದಳು.

"ಹೌದೇನೇ ಅಕ್ಕಾ.... ಅಮ್ಮಾ ನಂಗೂ ಅಂಥಾ ಹಾಲು ಬೇಕು...." ಸರಿತಾ ಗೋಗರೆದಳು.

"ಸರಿ ಹೋಯ್ತು, ಯಾಕೇ ಬಾಯ್ಬಿಟ್ಟೆ?"

"ನೀನು ಕೇಳ್ದೆ, ನಾನು ಹೇಳ್ದೆ. ನನ್ನನ್ನು ಬೈಯಬೇಡ ನೀನು...."

"ಒಂದಿನ ಅವರ ಮನೆಗೆ ಹೋದದ್ದಕ್ಕೇ ನಿಂಗೆ ಕೊಬ್ಬು ಬಂದು ಬಿಡ್ತಾ? ಅವರಿಂದ ದೂರ ಇರು.... ಮತ್ತೆ ಹೋದು ಗೀದೀಯಾ?" ತಾಯಿ ಎಚ್ಚರ ಹೇಳಿ ಒಳಗೆ ನಡೆದಿದ್ದಳು. ಸರಿತಾ, ವಿನುತಳ ಬಳಿಗೆ ಬಂದಳು.

"ಅಕ್ಕಾ, ನನ್ನನ್ನು ಅವರ ಮನೆಗೆ ಕರ್ಕೊಂಡು ಹೋಗೇ.... ನಂಗೂ ರುಚಿಯಾದ ಹಾಲನ್ನು ಕೊಡ್ತಾರೆ ಅಲ್ವಾ?"

"ನಾಳೇನೇ ಕರ್ಕೊಂಡ್ಹೋಗ್ತೀನಿ ಸುಮ್ನಿರು." ಮತ್ತೆ ತನಗೂ ಬಾದಾಮಿ ಹಾಲು ಸಿಗುತ್ತದೆಂಬ ಆಸೆ ವಿನುತಳಿಗೆ. "ಆದರೆ ಅಮ್ಮಂಗೆ ಹೇಳ್ಕೂಡ್ದು." ತಂಗಿಗೆ ತಾಕೀತು ಮಾಡಿ ಎಚ್ಚರಿಸಿದಳು.

ತಂಗಿಯನ್ನು ಆಗಾಗ್ಗೆ ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ವತ್ಸಲಾ, ಮಕ್ಕಳಿಬ್ಬರನ್ನೂ ಮುದ್ದಿಸಿ ತಿಂಡಿ, ಬಾದಾಮಿ ಹಾಲು ಇತ್ಯಾದಿಯನ್ನು

ಕೊಟ್ಟು ಸಂತೋಷಿಸುತ್ತಿದ್ದಳು. ಮುರಳಿ ಒಮ್ಮೊಮ್ಮೆ ತಾಯಿಯ ಮೇಲೆ ಸಿಟ್ಟು ಗೊಳ್ಳುತ್ತಿದ್ದ.

"ನಿನಗೆ ನನಗಿಂತ ಇವರಿಬ್ಬರ ಮೇಲೇ ಪ್ರೀತಿ ಜಾಸ್ತಿ.... ನಾನು ಡ್ಯಾಡಿಗೆ ಹೇಳ್ತೀನಿ ನೋಡು." ಎನ್ನುತ್ತಿದ್ದ.

"ಮುರಳಿ, ಇವರಿಬ್ಬರೂ ನಿನಗೆ ಚಿಕ್ಕ ತಂಗಿಯರಿದ್ದ ಹಾಗೆ. ನೀನು ಗಂಡು ಹುಡುಗ. ಹೊರಗೆ ಆಟ ಆಡಕ್ಕೆ ಅಂತ ಹೊರಟು ಹೋಗ್ತೀಯ. ನಿಮ್ಮ ಡ್ಯಾಡಿ ಯಂತೂ, ಮನೆಗೆ ಬರೋದೇ ಲೇಟು, ನನಗೆ ಮನೇಲಿ ಬೇಸರ ಆಗಲ್ವಾ? ನೀನು ಹೀಗೆಲ್ಲಾ ಮಾತಾಡ್ಬಾರ್ದು" ಎನ್ನುತ್ತಾ ಅವನನ್ನು ಮುದ್ದಿಸುತ್ತಿದ್ದಳು.

ಆದರೂ ಈ ವಿಷಯ ಪುರುಷೋತ್ತಮನ ಕಿವಿಗೆ ತಲುಪಿತ್ತು. ಹೆಂಡತಿ ಕೆಲಸ ಕಾರ್ಯ ಮುಗಿಸಿ ರೂಮಿಗೆ ಬರುವುದನ್ನೇ ಕಾದಿದ್ದರು. ಅವಳು ಹಾಸಿಗೆಯ ಬಳಿ ಕೂರಲೆಂದು ಬಂದವಳನ್ನು ತನ್ನ ಕಡೆಗೆ ಎಳೆದುಕೊಂಡಿದ್ದರು.

"ಯಾರು ಆ ಹುಡ್ಗೀರು! ಕರೆದು ತಿಂಡಿ ಕೊಟ್ಟು ಮುದ್ದಿಸ್ತೀಯಂತೆ. ಏನು ಈ ಹೊಸಾ ಬಯಕೆ?" ಚುಡಾಯಿಸಿದರು.

"ಮುರಳಿ ಹೇಳಿದ್ನಾ? ಇಲ್ಲೇ ಹಿಂದಿನ ರಸ್ತೆಯಲ್ಲಿ ಅವರ ಮನೆ ಇದೆ. ಮಕ್ಕಳು ತುಂಬಾ ಮುದ್ದಾಗಿವೆ." ಗಂಡನ ಕಡೆ ತಿರುಗಿ ನುಡಿದಳು.

"ಯಾರೋ ಕಂಡವರ ಮನೆ ಮಕ್ಕಳು ವತ್ಸಲಾ.... ಇದೆಲ್ಲಾ ಸರಿಯಲ್ಲ."

"ಏನಾಗುತ್ತೆ? ನಮ್ಮ ಮನೇಲಿ ಚಿಕ್ಕ ಮಕ್ಕಳಿಲ್ಲ. ಮುರಳಿ ಬೆಳೆದು ದೊಡ್ಡವ ನಾಗ್ತಿದಾನೆ. ಮನೇಲಿ ಗಲಗಲಿ ಅಂತ ಹೆಣ್ಣು ಮಕ್ಕಳಿರ್ಬೇಕು."

"ಹೆಣ್ಣು ಮಕ್ಕಳ ಜವಾಬ್ದಾರಿ ಬಹಳ ಕಷ್ಟ. ಬೇಗ ಬೆಳೆದು ಬಿಡ್ತಾರೆ. ಮದುವೆ ಮಾಡ್ಬೇಕು. ಮನೆಯಿಂದ ಕಳಿಸಿಕೊಡ್ಬೇಕು. ಒಳ್ಳೆ ಮನೆಯ ಹುಡುಗ ಸಿಕ್ಕಿದರೆ ಸರಿ. ಇಲ್ದಿದ್ರೆ ಅಲ್ಲಿ ಮಗಳು ಸುಖವಾಗಿರ್ತಾಳೋ ಇಲ್ವೋ ಅಂತ ಆತಂಕ."

"ಇದು ನಿಮ್ಮ ಪೋಲೀಸರ ಸಂಶಯ.... ಸುಖವಾಗಿರೋಲ್ಲ ಅಂತ ಯಾಕೆ ಯೋಚಿಸ್ಬೇಕು.... ನಮಗೆ ಏನು ಕಡಿಮೆ ಇದೆ... ನಾನೇ ಕೊಟ್ಟು ಬಿಟ್ಟು ಮಾಡಿದ್ರೆ ಅವರೂ ಚೆನ್ನಾಗಿ ನೋಡ್ಕೋತಾರೆ. ನಮಗೂ ಒಂದು ಹೆಣ್ಣು ಮಗು ಇದ್ದಿದ್ರೆ ಚೆನ್ನಾಗಿರ್ತಿತ್ತು." ಅರೆ ನಾಚಿಕೆಯಿಂದ ಹೇಳಿದಳು.

"ಈಗ ಕಾಲ ಮೀರಿ ಹೋಯ್ತು ವತ್ಸಲಾ.... ನಾನು ಮುದುಕನಾಗ್ಬಿಟ್ಟೆ...."

"ಥೂ ಹೋಗೀಪ್ಪಾ.... ನಿಮಗೇನು ಮಹಾ ವಯಸ್ಸಾಗಿರೋದು? ಈಗಲೂ ನಾವು ಮನಸ್ಸು ಮಾಡಿದ್ರೆ" ಅವಳು ಆಸೆಯನ್ನು ಮತ್ತೆ ವ್ಯಕ್ತಪಡಿಸಿದಳು.

"ಬೇಡ ವತ್ಸಲಾ.... ದೊಡ್ಡವನಾಗಿಬಿಟ್ಟ... ಅವನು ತಂಗಿಯನ್ನಾಗಲೀ,

ತಮ್ಮನನ್ನಾಗಲೀ ಪ್ರೀತಿಯಿಂದ ಸ್ವೀಕರಿಸುವುದಿಲ್ಲ. ಅನಾವಶ್ಯಕ ಸಮಸ್ಯೆ ಹುಟ್ಟಿಕೊಳ್ಳುತ್ತೆ. ಅವನನ್ನು ಚೆನ್ನಾಗಿ ಬೆಳೆಸಿ ವಿದ್ಯಾವಂತನನ್ನಾಗಿ ಮಾಡೋಣ... ನನ್ನ ಹಾಗೇ ಅವನು ಪೋಲೀಸ್ ಅಧಿಕಾರಿಯಾಗಲಿ......ಆಮೇಲೆ ಸುಶಿಕ್ಷಿತ ಹೆಣ್ಣನ್ನು ಮನೆ ತುಂಬಿಸಿಕೊಳ್ಳೋಣ.....ಅವನಿಗೆ ಇಷ್ಟವಿದ್ದರೆ, ಎರಡು, ಮೂರು ಮಕ್ಕಳಾಗಲಿ, ಏನಂತೀಯಾ?"

"ನಿಮ್ಮ ಮಾತು ನನಗೆ ಸಮ್ಮತವಿಲ್ಲ. ಮೊದಲ್ನಿಂದ ನಿಮ್ಮ ಮಾತೇ ನಡೆದಿದೆ. ನನ್ನದೇನಿದೆ? ಮುರಳೀ ನಿಮ್ಮ ಮಗ.... ನಿಮ್ಮ ಇಷ್ಟದಂತೆಯೇ ಬೆಳೆಸ್ತೀರಿ.... ಅವನೂ ನಿಮ್ಮಂತೆ ಆಗಿಬಿಟ್ಟರೆ, ಅವನ ಹೆಂಡತಿಯೂ ನನ್ನಂತೆ ಒಂಟಿಯಾಗಿ ಬಿಡ್ತಾಳೆ."

"ಏ ವತ್ಸಲಾ, ನೀನೆಲ್ಲಿ ಒಂಟಿ? ನಾನೀಗ ನಿನ್ನ ಜೊತೇಲಿಲ್ವಾ?" ನಕ್ಕ.

"ಇದನ್ನಾ ಜೊತೆ ಅಂತೀರಾ? ಈ ದೊಡ್ಡ ಮನೇಲಿ ಬೆಳಗ್ನಿಂದ ರಾತ್ರಿಯ ವರೆಗೆ ಮನೇಲಿ ನಾನು ಒಬ್ಬಳೇ.... ನೀವು ಅಪರೂಪಕ್ಕೊಮ್ಮೆ ಮನೆಗೆ ಬೇಗ ಬರ್ತೀರಿ.... ನಿಮಗೆ ಮನಸ್ಸಿದ್ದರೆ ರಸಿಕತನ ತೋರ್ತೀರಿ. ಇಲ್ದಿದ್ರೆ ನಿಮ್ಮ ಪ್ರಪಂಚಾನೇ ಬೇರೆ. ಅಲ್ಲಿ ನನಗೆ ಜಾಗವೇ ಇಲ್ಲ."

"ಹೀಗೆಲ್ಲಾ ಮಾತಾಡ್ಬೇಡ ವತ್ಸಲಾ. ನನ್ನ ಮೂಡ್ ಕೆಟ್ಟು ಹೋಗುತ್ತೆ. ಇವತ್ತು ನಾನು ಬೇಗ ಬಂದಿದೀನಿ. ರಸಿಕನಾಗಿದೀನಿ. ಈ ಸಮಯವನ್ನು ಕೆಡಿಸಬೇಡ...."

"ಇಲ್ಲಾ ರೀ... ನಿಮ್ಮ ಈ ಆಸೆಗೆ ನಾನು ಎಂದು ಅಡ್ಡಿ ಬಂದಿದೀನಿ? ನಿಮಗೆ ಬೇಕಾದಾಗ ನನ್ನನ್ನು ನಾನು, ಯಾವ ತಕರಾರೂ ಇಲ್ಲದೇ ಒಪ್ಪಿಸಿ ಕೊಂಡಿದೀನಿ."

"ಹೌದು ವತ್ಸಲಾ, ಯೂ ಆರ್ ರೈಟ್.... ನಾನೊಂಥರಾ ಸ್ವಾರ್ಥಿ... ಆದರೆ ನೀನು ಎಂದೂ ಇಷ್ಟು ಮಾತನಾಡಿದವಳಲ್ಲ. ಸ್ವಲ್ಪ ಬದಲಾಗಿದೀಯಾ. ನಿನ್ನ ಮನಸ್ನಲ್ಲಿ ಏನಿದೆ ಹೇಳು?"

"ಏನೂ ಇಲ್ಲ ಅಂತ ಹೇಳ್ಲಾರೆ. ಮುರಳಿಗೆ ಒಬ್ಬ ತಮ್ಮನೋ, ತಂಗಿಯೋ ಬರಲಿ ಅನ್ನುವ ಆಸೆ ನಿಮಗಿಲ್ಲ. ಹೋಗ್ಲೀ ಒಂದು ಹೆಣ್ಣೂ ಮಗೂನ ದತ್ತು ತೆಗೆದುಕೊಂಡು ಸಾಕೋಣ ಅಂತ."

"ಬೇಡ.... ಈ ಅವಿವೇಕ ಮಾತ್ರ ಮಾಡೋಲ್ಲ. ಆ ಜವಾಬ್ದಾರಿ ನಂಗೆ ಬೇಡ." ಎನ್ನುತ್ತಾ ಅವಳಿಂದ ದೂರ ಸರಿದರು. ಅವಳ ಮನಸ್ಸೂ ಮುದುಡಿತು. ಗಂಡನಿಗೆ ಬೇಸರವಾಯಿತೆಂದು ಅರಿವಾಯಿತು. "ಸಾರೀ..." ಎಂದಳು ಅವರ ಬಳಿಗೆ ಸರಿದು, ಅವರಿಗೂ ಕಸಿವಿಸಿಯಾಗಿತ್ತು. ಈ ಮಾತನ್ನು ಪ್ರಾರಂಭ ಮಾಡಿ

ದವರು ತಾನೇ. ತನಗೆ ಹೆಂಡತಿ ಸುಖ ಬೇಕೆನ್ನಿಸಿದ ದಿನ, ಯಾವ ಮಾತೂ ಕತೆಗಳಿಗೂ ಆಸ್ಪದ ಕೊಡದೇ, ಅವಳನ್ನು ತಮ್ಮ ಬಳಿಗೆ ಕರೆದುಕೊಳ್ಳುತ್ತಿದ್ದರು. ಕೇವಲ ಅವರ ಸುಖದ ಚಿಂತೆ ಅವರಿಗೆ. ಹೆಂಡತಿಯ ಭಾವನೆಗಳಿಗೆ ಬೆಲೆ ಕೊಡಲು ಅವರಲ್ಲಿ ಸಮಯವೂ ಇರಲಿಲ್ಲ. ಸಹನೆಯೂ ಇರಲಿಲ್ಲ. ಆದರೆ ಈ ದಿನ? ಎಷ್ಟೋ ವರ್ಷಗಳ ನಂತರ ಹೆಂಡತಿ ತನ್ನ ಆಸೆಯನ್ನು ಬಿಚ್ಚಿ ಹೇಳಿದಾಗ, "ಸಾರೀ ವತ್ಸಲಾ......ನನ್ನಿಂದ ಒಂದು ತಪ್ಪು ಜರುಗಿ ಹೋಗಿದೆ" ಎಂದು ಹೇಳಲಾಗದೇ ಕೆಲ ಹೊತ್ತಿ ಮೌನಿಯಾದರು.

"ನನ್ಮೇಲೆ ಕೋಪಾನಾ?" ಅವಳು ಕೇಳಿದಳು.

"ಇಲ್ಲ ವತ್ಸಲಾ...." ಎಂದರೂ ಅವಳನ್ನು ತೋಳುಗಳಲ್ಲಿ ಬಳಸುವ ಆಸೆ ಮೂಡಲಿಲ್ಲ. ಹೆಂಡತಿಗೆ ತನ್ನಿಂದ ಅನ್ಯಾಯವಾಗಿದೆ ಎಂದೆನಿಸಿದರೂ ಅದನ್ನು ಧೈರ್ಯವಾಗಿ ಅವಳಿಗೆ ಹೇಳುವುದಾಗಲಿಲ್ಲ. ಗಂಡನಿಂದ ಯಾವ ಪ್ರತಿಕ್ರಿಯೆಯೂ ಇಲ್ಲವಾದಾಗ ಅವಳು ಸುಮ್ಮನೇ ತನ್ನ ಪಾಡಿಗೆ ತಾನು ಮಲಗಿದಳು.

* * *

"ಇನ್ನು ಸ್ವಲ್ಪ ಹೊತ್ತಿಗೆ ವರನ ಕಡೆಯವರು ಬರ್ತಾರೆ. ಎಲ್ಲಾ ರೆಡೀನಾ?" ಸದಾನಂದ ಹೆಂಡತಿಯನ್ನು ವಿಚಾರಿಸಿದ.

"ಹೂಂ, ಎಲ್ಲಾ ರೆಡಿಯಾಗಿದೆ."

"ವಿನುತಾ ರೆಡಿಯಾದ್ಲಾ? ಸ್ವಲ್ಪ ನೋಡು. ಅವಿವೇಕಿ ಸ್ವಲ್ಪ ಅಲಂಕಾರಾನ ಚೆನ್ನಾಗಿ ಮಾಡ್ಕೋ ಅಂತ ಹೇಳು. ಒಳ್ಳೇ ರೇಷ್ಮೆ ಸೀರೇನ ಉಟ್ಕೋ ಅಂತ ಹೇಳು."

"ಒಳ್ಳೇ ರೇಷ್ಮೇ ಸೀರೆ ಎಲ್ಲಿದೆ? ಎಲ್ಲಾ ಹಳೆಯವೇ... ಬಣ್ಣ ಮಾಸಿದೆ. ಚೂಡಿದಾರ್‌ನೇ ಹಾಕ್ಕೋ ಅಂತ ಹೇಳಿದೀನಿ. ಚಿಕ್ಕ ವಯಸ್ಸಿನ ಹುಡುಗಿ ಥರ ಕಾಣ್ತಾಳೆ. ಈಗಿನ ಕಾಲಕ್ಕೆ ತಕ್ಕ ಹಾಗಿರಲಿ ಬಿಡಿ."

"ಅದೇನೋ ಗೊತ್ತಿಲ್ಲ. ಅದೆಲ್ಲಾ ನಿನ್ನ ಜವಾಬ್ದಾರಿ. ಹೋಗಿ ನೋಡು."

ಸುಜಾತಾ ಅನುಮಾನಿಸುತ್ತಾ ಮಗಳಿದ್ದ ರೂಮಿಗೆ ಬಂದಳು. ವಿನುತ ತಲೆಗೂದಲನ್ನು ಹಾಗೆ ಬಿಚ್ಚಿಕೊಂಡು ಏನನ್ನೋ ಯೋಚಿಸುತ್ತಾ ಕುಳಿತಿದ್ದಳು.

"ವಿನೂ ಇನ್ನೂ ಹಾಗೇ ಕೂತಿದೀಯಲ್ಲ? ಅವರುಗಳು ಬರೊ ಹೊತ್ತಾಯ್ತು. ನಾನು ಜಡೇನ ಹಾಕ್ಲಾ?" ಮಗಳ ಪಕ್ಕ ನಿಂತು ಕೇಳಿದ್ಲು.

"ಏನೂ ಬೇಡ. ನಾನೇ ಹಾಕ್ಕೋತೀನಿ. ನೀನು ಹೋಗು." ಸಿಡುಕಿದಳು.

"ಸರಿ. ನೀನು ಸಿಡುಕ್ತೀಯಾ? ನಿಮ್ಮಪ್ಪನ ಮಾತು ಕೇಳ್ಕೊಂಡು ನಾನು

ಇಲ್ಲಿಗೆ ಬಂದೆ. ಏನಾದ್ರೂ ಮಾಡ್ಕೊಳ್ಳಿ." ಅವಳೂ ರೇಗಿದಳು.

"ನಂಗೆ ಪದೇ ಪದೇ ಸಿಂಗಾರ ಮಾಡ್ಕೊಂಡು ಪರಿಚಯವಿಲ್ಲದೋರ ಎದುರ್ನಲ್ಲಿ ಕುಳಿತ್ಕೊಳ್ಳೋಕೆ ಇಷ್ಟವಿಲ್ಲ. ರೇಗದೇ ಇರುತ್ತಾ?"

"ಹೆಣ್ಣು ಬೆಳೆದ್ಮೇಲೆ ಮದುವೆಗೆ ಮೊದಲು ಈ ದಿನ ಬಂದೇ ಬರುತ್ತೆ. ಏನ್ಮಾಡೋಕಾಗುತ್ತೆ? ಇದು ಪದ್ಧತಿ." ಮಗಳಿಗೆ ಸಮಜಾಯಿಷಿ ಹೇಳಿದಳು.

"ಇದನ್ನು ತಪ್ಪಿಸೋಕೆ ಆಗಲ್ವೇನಮ್ಮ?"

"ಹೇಗಾಗುತ್ತೆ ನೀನೇ ಹೇಳು. ಅವನಿಗೆ ನೀನು ಒಪ್ಪಿಗೆ ಆಗ್ಬೇಕು. ನಿನಗೆ ಅವನು ಒಪ್ಗೆ ಆಗ್ಬೇಕು. ಅದಕ್ಕೇ ಈ ವಧು ಪರೀಕ್ಷೆ ಮಾಡೋದು."

"ಹಾಗಾದ್ರೆ ನಂಗಿಷ್ಟ ಇಲ್ಲ ಅಂತ ನಾನೀಗ್ಲೇ ಹೇಳ್ಬಿಡ್ತೀನಿ. ನಾನು ಹೊರಕ್ಕೇ ಬರೋಲ್ಲ."

"ತಮಾಷೆ ಮಾಡ್ಬೇಡ ವಿನೂ, ಅವರೇನಂದ್ಕೊಳ್ತಾರೆ! ಹಾಗೆಲ್ಲ ಮಾಡಿದ್ರೆ ಅವರ್ಗೆ ಅವಮಾನ ಮಾಡಿದ್ಹಾಗಾಗುತ್ತೆ."

"ನಂಗೆ ಈ ಮದುವೆ ಇಷ್ಟ ಇಲ್ಲಮ್ಮಾ."

"ಯಾಕೆ ಇಷ್ಟವಿಲ್ಲ? ಹುಡುಗ ಹಣವಂತ.....ರೂಪವಂತ. ನಿಂಗೆ ಇನ್ನೇನು ಬೇಕು ಹೇಳು?"

"ಏನೋ ಗೊತ್ತಿಲ್ಲ. ಎದೆ ಡವಡವ ಅನ್ನುತ್ತೆ. ಬಲವಂತವಾಗಿ ಮದುವೆ ಮಾಡಿದರೆ, ನಾನು ಅವನನ್ನು ಬಿಟ್ಟು ಓಡಿ ಬಂದ್ಬಿಡ್ತೀನಿ ಅಷ್ಟೇ."

"ಈ ಮರ್‍ಯಾದೆ ಬೇರೆ ಆಗ್ಬೇಕಾ ನಮ್ಗೆ! ಮೊದಲು ಹುಡುಗನ್ನ ಕಣ್ತುಂಬ್ಕೊಂಡು ನೋಡು.... ಆಮೇಲೆ.... ಏನ್ಬೇಕಾದ್ರೂ ಹೇಳು.... ಈಗ ಬೇಗ ಬೇಗ ರೆಡಿಯಾಗು. ಸೀರೆ ಉಟ್ಕೋತೀಯಾ? ಚೂಡಿದಾರ್ ಹಾಕ್ಕೋತೀಯೋ...."

"ಯಾವುದೋ ಒಂದು...." ಉದಾಸೀನದಿಂದ ಹೇಳಿದಳು.

"ಚೂಡಿದಾರ್‌ನೇ ಹಾಕ್ಕೋ.... ಹೊಸ್ದು ತಗೊಂಡಿದ್ಯಲ್ಲ. ಅದು ನಿನಗೆ ಚೆನ್ನಾಗಿ ಒಪ್ಪುತ್ತೆ. ಚಿಕ್ಕವಳ ಥರ ಕಾಣ್ತೀಯ."

ವಿನುತಾ ಮುಗುಳ್ನಕ್ಕು ಕೇಳಿದಳು. "ಸಾರೀ, ಲಂಗ ಜಂಪರ್‌ನ ಹಾಕ್ಕೊಳ್ಲಾ.... ಪುಟ್ಟ ಹುಡ್ಗಿ ಥರ ಕಾಣ್ತೀನಿ."

"ನಿಂಗೆ ತಮಾಷೆ.... ಅದಕ್ಕೆಲ್ಲ ಈಗ ಸಮಯವಿಲ್ಲ. ಬಿಗಿಯಾಗಿ ಜಡೇನ ಹಾಕ್ಕೋಬೇಡ. ಮುಂಗುರುಳು ಮುಖದ ಮೇಲೆ ಹಾರಾಡುವ ಬಗೆ ಅಳಕವಾಗಿ ಜಡೇನ ಹೆಣ್ಕೋ. ಮಲ್ಲಿಗೆ ಹೂವನ್ನು ತಗೊಂಡಿದೀನಿ. ಉದ್ದಕ್ಕೆ ಇಳಿ ಬಿಟ್ಕೋ."

"ಇದನ್ನೆಲ್ಲ ಯಾರಮ್ಮಾ ಹೇಳಿದ್ರು ನಿಂಗೆ?"

"ಟಿ. ವೀಲಿ ನೋಡಲ್ವಾ? ಧಾರಾವಾಹಿಗಳಲ್ಲಿ ನಟಿಸುವ ನಟಿಯರೆಲ್ಲ ಎಷ್ಟೋ

ಚೆನ್ನಾಗಿ ಮೇಕಪ್ ಮಾಡ್ಕೊಂಡಿರ್ತಾರೆ. ನನ್ನ ವಯಸ್ನೋರೆಲ್ಲಾ ಚಿಕ್ಕ ಹುಡುಗಿಯ ತರಹ ಕಾಣಿಸ್ತಾರೆ."

"ನಿಂಗೂ ಹಾಗೇ ಮೇಕಪ್ ಮಾಡ್ಕೋಬೇಕು ಅಂತ ಆಸೇನಾ?"

"ಸ್ವಲ್ಪ ಚೂರೂ ಪಾರೂ ಆಸೆ ಇತ್ತು. ನಮ್ಮಪ್ಪನ ಮನೇಲಿ ಬಡತನ.... ಪೌಡರು, ಸ್ನೋ ಯಾವುದೂ ಇರ್ಲಿಲ್ಲ. ನಿಮ್ಮಪ್ಪನಿಗೆ ಇದೆಲ್ಲಾ ಬೇಕಿಲ್ಲ. "ಇದಕ್ಕೆಲ್ಲ ಯಾರು ಹಣ ಖರ್ಚು ಮಾಡ್ತಾರೆ? ಹೇಗೂ ನಾನು ನಿನ್ನನ್ನು ಒಪ್ಪಿದ್ದಾಗಿದೆಯಲ್ಲ. ನೀನು ಇನ್ಯಾರನ್ನು ಮೆಚ್ಚಿಸ್ಬೇಕು' ಅನ್ನೋ ತರ್ಕ ಬೇರೆ.... ಈಗ ಆ ಆಸೆಯೂ ಇಲ್ಲ. ಅಡಿಗೆ ಮನೇಲಿ, ಮುಖದ ತುಂಬಾ ಬೆವರು.... ಹೊರಗೆಲ್ಲಾದ್ರೂ ಹೋಗೋವಾಗ ನನ್ನ ಅಲಂಕಾರಕ್ಕೆ ಸಮಯ ಎಲ್ಲಿರುತ್ತೆ? ಯಾವುದೋ ಒಂದು ಸೀರೆಗೆ ತಕ್ಕಂಥ ಒಂದು ರವಿಕೆ ಸಿಕ್ಕರೆ ಅದೇ ನನ್ನ ಪುಣ್ಯ... ನಿನ್ಹತ್ರ ಮಾತಿಗೆ ನಿಂತರೆ ಸಮಯ ನಿಲ್ಲುತ್ತಾ? ಬೇಗ ಬೇಗ ರೆಡಿ ಮಾಡ್ಕೋ" ಎಂದು ಮತ್ತೊಮ್ಮೆ ಹೇಳಿ ರೂಮಿನಿಂದ ಹೊರಕ್ಕೆ ಬಂದಿದ್ದಳು.

ಸದಾನಂದ ಆಗಾಗ್ಗೆ ಗಡಿಯಾರದ ಕಡೆ ನೋಡುತ್ತಿದ್ದ. ಇವರುಗಳ್ಯಾಕೆ ಇನ್ನೂ ಬಂದಿಲ್ಲ. ಅವರಿಂದ ಫೋನೂ ಬಂದಿಲ್ಲವಲ್ಲ. ಆತಂಕದಿಂದ ಚಡಪಡಿಸುತ್ತಿದ್ದ.

* * *

ಮುರಳಿ ಬೈಕನ್ನು ಮಧುಸೂದನನ ಮನೆಯ ಮುಂದೆ ನಿಲ್ಲಿಸಿದ. ಅಡ್ರೆಸ್ ಸರಿಯಾಗಿ ಇದೆಯೋ ಇಲ್ಲವೋ ಅಂತ ಮತ್ತೊಮ್ಮೆ ಖಚಿತಪಡಿಸಿಕೊಂಡ. ಹಾಕಿದ್ದ ಬಾಗಿಲ ಬಳಿ ನಿಂತು ಕರೆಗಂಟೆಯನ್ನು ಒತ್ತಿದ. ಪಕ್ಕದಲ್ಲಿ ತೂಗು ಹಾಕಿದ್ದ ನಾಮಫಲಕದ ಕಡೆ ಅವನ ಗಮನ ಹರಿಯಿತು. 'ಮಧುಸೂದನ ಬಿ.ಕಾಂ. ಬ್ಯಾಂಕ್ ಮ್ಯಾನೇಜರ್' ಎಂದು ಬರೆದಿತ್ತು. ಬ್ಯಾಂಕ್ ಮ್ಯಾನೇಜರ್, ಅಧಿಕಾರವಿದೆ.... ಅಂತಸ್ತು, ಗೌರವ ಇದೆ. ನೋಡಲೂ

ಚೆನ್ನಾಗಿದ್ದರೆ, ವಿನುತಳಿಗೆ ತಕ್ಕ ಜೋಡಿಯಾಗಬಹುದು ಎಂದುಕೊಂಡ. ಅಷ್ಟರಲ್ಲಿ ಬಾಗಿಲು ತೆರೆಯಿತು. ಬಾಗಿಲು ತೆರೆದ ವ್ಯಕ್ತಿ, ಇವನನ್ನು ನೋಡಿ ಅವಾಕ್ಕಾಗಿ ತನ್ನ ಕಣ್ಣುಗಳನ್ನು ತಾನೇ ನಂಬದವನಂತೆ ನಿಂತ. ಇವನ ಸ್ಥಿತಿಯೂ ಅದೇ ಆಗಿತ್ತು. ಈ ಅದ್ಭುತ ಹೇಗೆ ಸಾಧ್ಯ? ಅಥವಾ ತನ್ನ ಕಣ್ಣು ತನಗೆ ಮೋಸ ಮಾಡುತ್ತಿರಬಹುದೇ ಅಥವಾ ತನ್ನ ಮುಂದೆ ಒಂದು ನಿಲುವುಗನ್ನಡಿ ಇದೆಯೇ?

"ಮಧೂ.... ಯಾರೋ?" ಎನ್ನುತ್ತಾ ಹಿಂದೆ ಬಂದು ನಿಂತ ನಡುವಯಸ್ಸಿನ

ಹೆಂಗಸು, ಮುರಳಿಯನ್ನು ನೋಡದೇ ಹಾಗೇ ಹೋಗಿಬಿಟ್ಟಳು. ಮಧುಸೂಧನ ಎಚ್ಚೆತ್ತು, "ಯಾರು ನೀವು?" ಪ್ರಶ್ನಿಸಿದ.

"ನಾನು ಮುರಳೀಧರ ಅಂತ, ನಿಮಗೆ ಫೋನ್ ಮಾಡಿದ್ದೆ...."

"ಎಸ್, ಎಸ್, ಒಳಗೆ ಬನ್ನಿ." ಸೌಜನ್ಯದಿಂದ ಸ್ವಾಗತಿಸಿದ.

"ನಾನು ಈ ಮುಂಚೆ ನಿಮ್ಮನ್ನು ಎಂದೂ ನೋಡಿರ್ಲಿಲ್ಲ. ಆದರೂ ಗಾಢವಾದ ಪರಿಚಯ ಇದೆ ಅಂತ ಅನ್ನಿಸ್ತಿದೆ." ಮನೆಯನ್ನು ಅವಲೋಕಿಸುತ್ತಾ ಕೇಳಿದ. ಇಬ್ಬರೂ ಒಳ ಬಂದರು.

"ನಂಗೂ ಹಾಗೇ ಅನ್ನಿಸ್ತಿದೆ. ಇವರು ನಮ್ಮ ತಾಯಿ ಮಂಜುಳಾ ಅಂತ" ತಾಯಿಯನ್ನು ಪರಿಚಯಿಸಿದ ಮಧು.... ಅವಳು ಯಾವ ಉತ್ಸಾಹವನ್ನೂ ತೋರಲಿಲ್ಲ.

"ನಮಸ್ಥೆ ಆಂಟೀ...." ಮುರಳಿ ವಿನಯದಿಂದ ನುಡಿದು ಕೈ ಮುಗಿದ.

"ನಮಸ್ತೇ" ಎಂದು ಮಂಜುಳಾ ನುಡಿದರೂ, ಅವಳ ಕಣ್ಣುಗಳು ಆತಂಕದಿಂದ ಚದುರಿದುದನ್ನು ಮುರಳಿ ಗಮನಿಸಿದ್ದ. ಈಕೆಗೆ ನಾನು ಬಂದಿರುವುದು ಇಷ್ಟವಾಗಿಲ್ಲ ಅಂತ ಕಾಣುತ್ತೆ ಅಂತಂದುಕೊಂಡು, ಅಲ್ಲಿದ್ದ ಸೋಫಾದ ಮೇಲೆ ಕುಳಿತ.

"ನಾನು ಕಾಫಿ ತರ್ತೀನಿ" ಎಂದು ಹೇಳಿ ಆಕೆ ಒಳಗೆ ಹೋಗಿದ್ದಳು.

"ನನ್ನಿಂದ ನಿಮಗೆ ಏನು ಸಹಾಯ ಬೇಕಾಗಿತ್ತು? ಬ್ಯಾಂಕ್‌ಗೇ ಬರಬಹುದಾಗಿತ್ತು." ಮಧು ಎಂದ.

"ಇಲ್ಲ, ನಾನು ಬ್ಯಾಂಕ್‌ಗೆ ಸಂಬಂಧಿಸಿದ ವಿಷಯ ಮಾತನಾಡಲು ಬಂದಿಲ್ಲ. ಬೇರೆ ವಿಷಯವನ್ನು ಮಾತನಾಡಬೇಕಾಗಿತ್ತು. ಪ್ರತ್ಯೇಕವಾಗಿ ಕುಳಿತು ಮಾತನ್ನಾಡಲು ಬೇರೆ ರೂಮು ಇದೆಯಾ?"

"ಏನಾಡ್ಬೇಕೋ ಅದನ್ನು ಇಲ್ಲಿಯೇ ಆಡಬಹುದು. ಈ ಮನೇಲಿ ಇರೋದು ನಾವು ಇಬ್ಬರೇ.... ನನ್ನ ತಾಯಿಗೆ ನಮ್ಮ ಮಾತಿನಲ್ಲಿ ಆಸಕ್ತಿ ಇರೋಲ್ಲ."

"ಇಲ್ಲ, ಅವರಿಗೆ ಈಗಲೇ ತಿಳಿಯಬಾರದು.... ಕೇಳಿಸಿದರೇ?"

"ಅಂಥಾ ರಹಸ್ಯ ಏನಿದೆ.... ಪರವಾಗಿಲ್ಲ ಹೇಳಿ. ಸ್ವಲ್ಪ ಮಾತನ್ನು ಬೇಗನೇ ಮುಗಿಸಿದರೆ ಒಳ್ಳೇದು. ನಾವು ಹೊರಗೆ ಹೊರಟಿದ್ದೆವು."

"ಸದಾನಂದ ಅವರ ಮನೆಗೆ ಹೋಗ್ತಿದೀರಿ ಅಲ್ವಾ?" ಕೇಳಿದ ಮುರಳಿ.

ಮಧುಸೂಧನ ತಟ್ಟನೆ ಅವನ ಕಡೆ ನೋಡಿದ. "ನಿಮಗೆ ಹೇಗೆ ಗೊತ್ತಾಯ್ತು? ಅದನ್ನು ಕೇಳೋಕೆ ನೀವ್ಯಾರು?" ನಸುಕೋಪದಿಂದ ಕೇಳಿದ.

"ನಾನೊಬ್ಬ ಡಿಟೆಕ್ಟಿವ್.... ಕೇಳುವ ಅಧಿಕಾರ ನನಗಿದೆ" ಎನ್ನುತ್ತಾ ತನ್ನ ಐಡೆಂಟಿಟಿ ಕಾರ್ಡನ್ನು ತೋರಿಸಿದ. ಮಧುಸೂಧನನ ಮುಖ ಗಲಿಬಿಲಿಗೊಂಡರೂ

ಸಮಾಧಾನಕರವಾಗಿಯೇ ಇದ್ದಿತು.

"ಏನು ವಿಷಯವನ್ನು ತಿಳಿದುಕೊಳ್ಳೋಕೆ ಬಂದಿದೀರಿ... ನಿಮ್ಮನ್ನು ಇಲ್ಲಿಗೆ ಯಾರು ಕಳಿಸಿದ್ದಾರೆ? ನಿಜ ಹೇಳಿದರೆ ಒಳ್ಳೇದು."

"ಯಾರೂ ಕಳಿಸಿಲ್ಲ. ನಾನೇ ಬಂದಿದೀನಿ...." ಮೆಲ್ಲಗೆ ನಕ್ಕ.

"ನೋಡಿ, ಹೀಗೆಲ್ಲಾ ಬಂದು, ಅಸಂಬದ್ಧವಾಗಿ ಮಾತಾಡ್ಬೇಡಿ... ನಾವು ಗೌರವಾನ್ವಿತರು.... ನಮ್ಮ ಬಗ್ಗೆ ತನಿಖೆ ಯಾಕೆ ಅಂತ.... ಯಾರಿಗೆ ಬೇಕು ಅಂತ ಹೇಳ್ತೀರಾ?"

"ಯಾರ ತನಿಖೆ ಮಾಡೋಕ್ಕೆ ಬಂದಿಲ್ಲ ನಾನು. ನೀವುಗಳು ಸಂಭಾವಿತರು ಅಂತಲೂ ಗೊತ್ತು.... ಆದರೆ ಒಂದು ಮುಖ್ಯವಾದ ವಿಷಯವನ್ನು ಹೇಳೋದು ಇತ್ತು."

"ಈಗ ನೀವು ನೋಡಲು ಹೋಗುತ್ತಿರುವ ಹುಡುಗಿಯ ಬಗ್ಗೆ ತಿಳಿದುಕೊಳ್ಳುವ ಆಸಕ್ತಿಯೂ ಇಲ್ಲವೇ?" ಅವನು ಥಟ್ಟನೆ ಇವನ ಕಡೆ ನೋಡಿದ.

ಅವನ ಮುಖದ ಬಣ್ಣ ಒಂದು ಘಳಿಗೆ ಬದಲಾಯಿಸಿ, ಮತ್ತೆ ಸರಿ ಹೋಗಿತ್ತು. "ಅದೆಲ್ಲಾ ನಿಮಗ್ಯಾಕೆ?" ಎಂದು ಪಿಸುದನಿಯಲ್ಲಿ ಕೇಳಿ, ಅಡಿಗೆ ಮನೆಯ ಕಡೆ ತಿರುಗಿದ. ತವಕದಿಂದ ಅವನ ಧ್ವನಿ ನಡುಗಿತ್ತು.

"ನಿಮಗೆ ಬೇಡವಾಗಿರಬಹುದು. ಆದರೆ ನಾನು ಹೇಳಲೇಬೇಕಾಗಿದೆ."

"ನೀವ್ಯಾರು? ಎದ್ದು ಹೋಗಿ...." ಪಿಸುದನಿಯಲ್ಲಿ ಗದರಿದ.

"ಬೇಜಾರು ಮಾಡ್ಕೋಬೇಡಿ ಸಾರ್. ನನ್ನ ಮಾತ್ನಿಂದ ನಿಮಗೆ ಯಾವ ತೊಂದರೆಯೂ ಆಗುವುದಿಲ್ಲ."

"ಮತ್ತೆ ನಿಮಗೇನು ಲಾಭ?"

"ಅದನ್ನೆಲ್ಲಾ ಹೇಗೆ ಹೇಳಲಿ? ನೀವು ಹುಡುಗಿಯನ್ನು ನೋಡಲು ಹೋಗಬೇಡಿ ಅಷ್ಟೇ?"

"ಅದನ್ನು ಹೇಳೋಕೆ ನೀವ್ಯಾರು? ನಿಮ್ಮನ್ನು ಇಲ್ಲಿಗೆ ಯಾರು ಕಳಿಸಿದ್ರು? ನನ್ನ ಫೋನ್ ನಂಬರನ್ನು ನಿಮಗೆ ಯಾರು ಕೊಟ್ರು?"

"ಉದ್ವೇಗಕ್ಕೊಳಗಾಗ್ಬೇಡಿ ಸಾರ್. ಕೂಲ್ ಆಗಿ ಮಾತನಾಡೋಣ... ನನ್ನ ಮಾತನ್ನಾ ಪೂರ್ತಿ ಕೇಳಿಸ್ಕೊಂಡ ಮೇಲೆ ನೀವೇ ನಿರ್ಧರಿಸಿ. ನಿಮ್ಮ ತಾಯಿ ಬರ್ತಿದಾರೆ. ಈಗ ಆ ಮಾತು ಬೇಡ."

"ಓ... ಕೇ" ಎಂದು ಹೇಳಿ ಮಧುಸೂದನ ತಾಯಿಯ ಕಡೆ ನೋಡಿದ. ಆಕೆಯ ಮುಖ ಅಸಹನೆಯಿಂದ ಕೂಡಿತ್ತು. ಆಕೆ ಇಬ್ಬರಿಗೂ ಕಾಫಿಯನ್ನು ಇತ್ತಳು. ಮಧುಸೂದನ ಆಗಾಗ ಮುರಳಿಯ ಕಡೆ ನೋಡುತ್ತಾ ಕಾಫಿಯನ್ನು

ಹೀರಿದ. ಕಣ್ಣುಗಳಲ್ಲಿ ಕುತೂಹಲ ತುಂಬಿದ ಸಂಶಯದ ಛಾಯೆ ಕಂಡಿತ್ತು. ಮುರಳಿ ಒಳಗೊಳಗೇ ನಗುತ್ತಾ ಕಾಫೀಯನ್ನು ಸವಿದ. ಕಾಫಿಯನ್ನು ಮುಗಿಸಿ, ಮಧುಸೂದನ ನುಡಿದ.

"ನೋಡಿ ಮುರಳೀಧರ್.... ಈಗ ನಾವು ಸದಾನಂದರಾಯರ ಮನೆಗೆ ಹೊರಟಿದ್ದೇವೆ.... ಈಗ ಹೋಗಲೇಬೇಕು. ಅವರುಗಳು ಕಾಯುತ್ತಿರುತ್ತಾರೆ. ತಾಯಿ ರೆಡಿಯಾಗಿದ್ದಾರೆ. ಈಗ ಕ್ಯಾನ್ಸಲ್ ಮಾಡಲಾಗುವುದಿಲ್ಲ. ಅದು ತಪ್ಪಾಗುತ್ತೆ."

"ಹೌದು ತಪ್ಪಾಗುತ್ತೆ. ಹಾಗಾದ್ರೆ ಒಂದು ಕೆಲ್ಸ ಮಾಡಿ. ಅಲ್ಲಿಂದ ಬಂದ ಮೇಲೆ ನನ್ನ ಆಫೀಸಿಗೆ ಬನ್ನಿ. ಅಲ್ಲಿ ಕೂತು ಮಾತನಾಡೋಣ."

"ನಾನ್ಯಾಕೆ ಬರ್ಬೇಕು?"

"ಈಗ ನಿಮಗೆ ಬಿಡುವಿಲ್ಲ. ಅಲ್ಲದೇ ಪ್ರೈವೆಸಿ ಇಲ್ಲ. ಪರವಾಗಿಲ್ಲ. ನಮ್ಮ ಆಫೀಸ್ನಲ್ಲಿ ಯಾವ ತೊಂದರೆಯೂ ಇಲ್ಲ. ಬರ್ತೀರಿ ತಾನೇ?"

"ನೋಡಿ, ನನಗೆ ಯಾವ ಡಿಟೆಕ್ಟಿವ್ ಏಜೆಂಟ್ ಹತ್ತಿರ ಮಾತನಾಡುವ ಅವಶ್ಯಕತೆ ಇಲ್ಲ. ನಾನು ಯಾವ ಅಪರಾಧವನ್ನೂ ಮಾಡಿಲ್ಲ. ಹಾಗೇ ಸದಾನಂದ ರಾಯರ ಬಗ್ಗೆ ಕದ್ದು ಮುಚ್ಚಿ ತಿಳಿದುಕೊಳ್ಳುವ ಅವಶ್ಯಕತೆ ನನಗಿಲ್ಲ."

"ಸರಿ ನಿಮ್ಮಿಷ್ಟ... ಬಂದಿದ್ದರೆ ಚೆನ್ನಾಗಿತ್ತು."

"ಹೀಗೆ ತೊಂದರೆ ಕೊಡುವುದು ಸರಿಯಲ್ಲ ಮಿಸ್ಟರ್ ಮುರಳೀಧರ್..."

"ಸಾರೀ, ತೊಂದರೆ ಕೊಟ್ಟಿದ್ದಕ್ಕೆ. ನನ್ನನ್ನು ನಿಮ್ಮ ಸ್ನೇಹಿತ ಅಂತ ತಿಳ್ಕೊಳ್ಳಿ. ನನ್ನನ್ನು ಕಂಡು ಮಾತನಾಡುವ ಇಚ್ಛೆ ಇದ್ದರೆ, ಈ ನಂಬರಿಗೆ ಫೋನ್ ಮಾಡಿ. ಇದು ನನ್ನ ವಿಸಿಟಿಂಗ್ ಕಾರ್ಡ್" ಎಂದು ಹೇಳಿ, ತನ್ನ ವಿಳಾಸದ ಕಾರ್ಡನ್ನು ತೆಗೆದುಕೊಟ್ಟು, "ಬರ್ತೀನಿ" ಎಂದು ಹೇಳಿ ಅಲ್ಲಿಂದ ಹೊರಕ್ಕೆ ನಡೆದಿದ್ದ. ಮಧುಸೂದನ, ತಕ್ಷಣವೇ ಕಾರ್ಡನ್ನು ತನ್ನ ಜೇಬಿನೊಳಕ್ಕೆ ಇಳಿ ಬಿಟ್ಟ,

"ಅದ್ಯಾರೋ ಅದು.... ಈ ಹೊತ್ನಲ್ಲಿ ಬಂದು ಮಾತಿಗೆ ಕುಳಿತ... ಟೈಮ್ ಇಲ್ಲ ಅಂತ ಹೇಳ್ಬೇಕಾಗಿತ್ತು. ನಾಳೆ ಬ್ಯಾಂಕಿಗೆ ಬಂದು ನೋಡಿದ್ದಿದ್ರೆ?"

"ಹಾಗೇ ಹೇಳಿ ಕಳಿಸ್ದೆ.... ಹೊರಡೋಣ್ವಾ?" ತಾಯಿಯನ್ನು ಹೊರಡಿಸಿದ.

"ಯಾವನೋ ಒಂಟಿ ಬ್ರಹ್ಮಚಾರಿ.... ಒಳ್ಳೆಯ ಕೆಲಸಕ್ಕೆ ಹೊರಟಿದ್ದಾಗ ಬಂದು ಕೂತ.... ಹೋದ ಕೆಲಸ ಏನಾಗುತ್ತೋ?"

"ಬಿಡಮ್ಮ.... ಎರಡ್ರಲ್ಲಿ ಒಂದು. ಅದಕ್ಕೆ ಟೆನ್ಷನ್ ಯಾಕೆ?"

"ಟೆನ್ಷನ್ ಯಾಕಾಗೊಲ್ಲ? ಇದು ಹನ್ನೊಂದನೇ ಹುಡುಗಿ. ನೀನು ನೋಡ್ತಾ ಇರೋದು.... ಆಗ್ದೇ ಇದ್ದರೆ....?"

"ಆಗ್ದೇ ಇದ್ದರೆ, ಹನ್ನೆರಡನೇ ಹುಡ್ಗೀನ ನೋಡಿದ್ರಾಯ್ತು... ಫೋಟೋನ

ನೋಡಿಯೇ ಒಪ್ಗೆ ಕೊಟ್ಟಿದೀನಲ್ಲ."

"ಅದು ಬಿಡು. ಹುಡ್ಗೀರು ಫೋಟೋದಲ್ಲೇ ಒಂಥರಾ ಕಾಣ್ತಾರೆ. ಎದುರುಗಡೆ ಇನ್ನೊಂಥರಾ ಕಾಣ್ತಾರೆ."

"ಇವಳು ಹೇಗೇ ಇರಲಿ, ಒಪ್ಪಿದ್ಮೇಲೆ ಇನ್ನೇನು ಮಾತು?"

"ಅದು ಹಾಗಲ್ಲ.... ಏನೇನೋ ಮಾತಾಡ್ಬೇಡ.... ನಾನು ಎಲ್ಲವನ್ನೂ ಸರಿಯಾಗಿ ವಿಚಾರಿಸ್ತೀನಿ.... ನಿಧಾನವಾಗಿ ನಮ್ಮಿಷ್ಟ ಏನೂಂತ ತಿಳಿಸಿದ್ರಾಯ್ತು."

"ಸರಿ ನಿನ್ನಿಷ್ಟ...." ಬಾಯಿ ಹಾಗೆ ಹೇಳಿದರೂ, ಮುರಳಿ ಹಾಕಿದ ಸಂಶಯದ ಗೆರೆ ಕಣ್ಣ ಮುಂದೆ ಬಂದು ನಿಂತಿತು. ಯಾರೋ ಏನೋ ಪರಿಚಯವಿಲ್ಲದವನು, ರಹಸ್ಯವಾಗಿ ಮಾತಾಡ್ಬೇಕು ಅಂತಂದ್ರೆ ಏನರ್ಥ? ಇಂಥದ್ದಕ್ಕೆಲ್ಲ ತಾನು ತಲೆ ಕೆಡಿಸಿಕೊಳ್ಳಬಾರದು.... ಯಾರದ್ದೋ ಮಾತಿಗೆ ಬೆಲೆ ಏಕೆ ಕೊಡ್ಬೇಕು?"

"ಏನೋ, ಯಾಕೆ ಹಾಗೇ ನಿಂತ್ಬಿಟ್ಟೆ? ಏನು ಚಿಂತೆ? ಹತ್ತಲ್ಲ, ಇಪ್ಪತ್ತು ಹುಡ್ಗೀರನ್ನ ನೋಡು.... ನಿಂಗೆ ಸರಿ ಹೊಂದುವಂಥ ಹುಡ್ಗೀನೇ ಆಯ್ಕೆ ಮಾಡ್ಕೋ.... ಅವಸರ ಏನೂ ಇಲ್ಲ. ನಡೀ ಹೊತ್ತಾಯ್ತು.... ನಾವುಗಳು ಯಾಕೋ ಬಂದಿಲ್ಲ ಅಂತ ಅವರುಗಳು ದಾರೀನ ನೋಡ್ತಾ ಇರ್ತಾರೆ." ತಾಯಿ ಮಗನನ್ನು ಹೊರಡಿಸಿದಳು.

ಮಧು ಕಾರನ್ನು ಷೆಡ್‌ನಿಂದ ಹೊರತಂದ. ಆಕೆ ಮುಂಬಾಗಿಲಿಗೆ ಬೀಗವನ್ನು ಹಾಕಿ, ಹೂವು ಹಣ್ಣಿನ ಬುಟ್ಟಿಯನ್ನು ಎತ್ತಿಕೊಂಡು ಕಾರಿನ ಬಳಿಗೆ ಬಂದಳು. ಮಗನ ಪಕ್ಕದಲ್ಲಿ ಕುಳಿತಳು. ಮನದಲ್ಲೇ ದೇವರಿಗೆ ವಂದಿಸಿದಳು. ಕಾರು ಚಲಿಸಿತು.

"ಸುಜೀ.... ಅವರುಗಳು ಬಂದ್ರು" ಸದಾನಂದ ಹೆಂಡತಿಗೆ ಹೇಳಿದ. ಸುಜಾತ ಮುಂಬಾಗಿಲಿಗೆ ಬಂದಳು. ಇಬ್ಬರೂ ಅವರನ್ನು ನಗುಮೊಗದಿಂದ ಸ್ವಾಗತಿಸಿದರು.

"ಸ್ವಲ್ಪ ತಡವಾಯ್ತು ಕ್ಷಮಿಸಿ." ಮಧುಸೂದನ ಕ್ಷಮೆಯಾಚಿಸಿದ.

"ಪರವಾಗಿಲ್ಲ. ಸ್ವಲ್ಪ ಆತಂಕವಾಗಿತ್ತು.... ಬನ್ನಿ.... ಕೂತ್ಕೊಳ್ಳಿ...." ಎಂದ. ಅವರಿಬ್ಬರೂ ಕುಳಿತರು. ತಾಯಿ ಹಣ್ಣು, ಹೂಗಳನ್ನು ಟೀಪಾಯ್ ಮೇಲಿಟ್ಟಳು.

"ಈಗಾಗ್ಲೇ ಹೊತ್ತಾಗಿದೆ. ಹುಡ್ಗೀನ ಕರೀರಿ...." ಮಂಜುಳಾ ನುಡಿದಳು.

"ಮೊದಲು ಸ್ವಲ್ಪ ತಿಂಡಿ ತಗೊಳ್ಳಿ." ಸುಜಾತ ಉಪಚರಿಸಿದಳು.

"ತಿಂಡಿ ಬೇಡ. ಸ್ವಲ್ಪ ಕಾಫೀನೋ, ಟೀನೋ ಕೊಡಿ" ಎಂದ ಮಧುಸೂದನ.

"ಹೋಗು ಸುಜೀ, ವಿನುತನ್ನ ಕರ್ಕೊಂಡು ಬಾ...." ಎಂದು ಸದಾನಂದ ನುಡಿದು ಕುಳಿತ. ಸುಜಾತ ಮೊದಲಿಗೆ ವಿನುತಳನ್ನು ಕರೆತರಲು ರೂಮಿಗೆ ನಡೆದಳು. ಸಿದ್ಧಳಾಗಿ ಕುಳಿತಿದ್ದ ವಿನುತ, ತಾಯಿ ಕರೆದೊಡನೇ ಯಾವ ಮುಜುಗರ

ವನ್ನೂ ವ್ಯಕ್ತಪಡಿಸದೇ ಹೊರಟಳು. ಸುಜಾತಳಿಗೆ ಆಶ್ಚರ್ಯವಾಗಿತ್ತು.

"ವಿನೂ, ಹುಡುಗ ತುಂಬಾ ಲಕ್ಷಣವಾಗಿದಾನೆ. ನೀನು ಸೀರೆಯನ್ನು ಉಟ್ಟಿದ್ದರೇ ಚೆನ್ನಾಗಿತ್ತು. ಅವರುಗಳು ಏನಂದ್ಕೊಳ್ತಾರೋ ಏನೋ?"

"ಏನಾದ್ರೂ ಅಂದ್ಕೊಳ್ಳಲಿ.... ಅವನನ್ನು ನಾನೇನು ಮೆಚ್ಚಿಸ್ಬೇಕಾಗಿಲ್ಲ. ನಾನು ಹೇಗಿದೀನೋ ಹಾಗೇ ಒಪ್ಕೊಳ್ಳಲಿ."

"ನೀನು ಕೊಂಕು ಕೊಂಕಾಗಿ ಮಾತಾಡ್ತೀಯ. ಏನಾದ್ರೂ ಮಾಡ್ಕೋ. ನಡೀ...." ತಾಯಿ ಮಗಳು ಇಬ್ಬರೂ ಹೊರಬಂದರು. ಮಂಜುಳಳ ದೃಷ್ಟಿ ವಿನುತಳ ಮೇಲೆ ಹರಿಯಿತು. ಅಲ್ಲಿ ಯಾವ ಭಾವನೆಯೂ ಗೋಚರವಾಗಲಿಲ್ಲ. ಅವಳು ಇನ್ನೂ ಮುಂದೆ ಬಂದಾಗ ಮಧುಸೂದನನ ದೃಷ್ಟಿ ಅವಳ ಮೇಲೆ ನೆಟ್ಟಿತು. ಸಹಜ ಎಂಬಂತೆ ವಿನುತಳೂ ಅವನ ಕಡೆ ನೋಡಿದಳು. ಅಷ್ಟೇ.... ಹಾಗೇ ಕಣ್ಣರಳಿಸಿ ನಿಂತು ಬಿಟ್ಟಳು.

"ವಿನೂ.... ವಿನೂ...." ತಾಯಿ ಎಚ್ಚರಿಸಿದಳು. ಯಾವ ಸಂಕೋಚವನ್ನೂ ವ್ಯಕ್ತಪಡಿಸದೇ ವಿನುತ ಅವನ ಕಡೆ ಮತ್ತೆ ಮತ್ತೆ ನೋಡಿದಳು. ಅವನೇ ಮುಗುಳ್ನಕ್ಕು "ಹಲೋ" ಎಂದ.

"ವಿನುತಾ ಕೂತ್ಕೋಮ್ಮಾ...." ಮಂಜುಳ ನುಡಿದಳು. ಅವಳ ಮುಖ ಗಲಿಬಿಲಿಗೊಂಡಿದ್ದನ್ನು ಗಮನಿಸಿದಳು. ಮಗನ ಕಡೆ ವಿಸ್ಮಯದಿಂದ ನೋಡಿದಳು. ಅವನು ಏನೋ ಲೆಕ್ಕಾಚಾರ ಹಾಕುತ್ತಿರುವಂತೆ ಅನ್ನಿಸಿತು. ವಿನುತ ಕುಳಿತಳು. ಸುಜಾತ ಒಳಗೆ ಹೋಗಿದ್ದಳು.

"ಅಮ್ಮಾ.... ನಾನು ಇವರ ಹತ್ರ ಸ್ವಲ್ಪ ಮಾತಾಡ್ಬೇಕು.... ಹೊರಗೆ ಕರ್ಕೊಂಡು ಹೋಗ್ತೀನಿ. ತಾಯಿಗೆ ಅವನ ಮಾತು ಇಷ್ಟವಾಗಲಿಲ್ಲ. ಮಗ ಒಪ್ಪಿಯೇ ಬಿಟ್ಟನೇ? ಸರ್ರನೆ ನೋಡಿದ ಕೂಡಲೇ ಒಪ್ಪಿಕೊಳ್ಳುವ ಲಕ್ಷಣ ಇವಳಲ್ಲಿ ಯಾವುದೂ ಇಲ್ಲ. ಅವಸರ ಯಾಕೆ ಅಂತಂದುಕೊಂಡು, ಕಣ್ಣು ಸಂಜ್ಞೆ ಮಾಡಿದಳು. ಅಷ್ಟರಲ್ಲಿ ಕಾಫಿಯನ್ನು, ಬಿಸ್ಕತ್ತುಗಳನ್ನು ಟ್ರೇನಲ್ಲಿಟ್ಟುಕೊಂಡು ಸುಜಾತ ತಂದಳು.

ಕಾಫಿಯನ್ನು ಕುಡಿದು ಮುಗಿಸಿ, ಮಧುಸೂದನ ನೇರವಾಗಿ ಸದಾನಂದನನ್ನೇ ಕೇಳಿದ "ನಾನು ವಿನುತಾರ ಹತ್ರ ಸ್ವಲ್ಪ ಮಾತಾಡ್ಬೇಕು. ಹೊರಗೆ ಕರ್ಕೊಂಡು ಹೋಗಿ ಬರ್ತೀನಿ. ನಿಮಗೆ ಅಬ್ಜಕ್ಷನ್ ಏನೂ ಇಲ್ಲ ತಾನೇ?"

ಸದಾನಂದನ ಮುಖ ಮೊರದಗಲವಾಗಿತ್ತು. "ಹೊರಗೆ ಯಾಕೆ ಹೋಗ್ಬೇಕು? ಇಲ್ಲೇ ಮುಂದಿನ ರೂಂನಲ್ಲೇ ಕುಳಿತು ಮಾತಾಡ್ಬಹುದಲ್ಲ" ಎಂದ ಮುಜುಗರದಿಂದ.

"ವಿನುತಾರವರೇ ನನ್ನ ಜೊತೆ ಬರೋಕ್ಕೆ ನಿಮಗೇನಾದ್ರೂ ಅಭ್ಯಂತರನಾ?" ಅವಳನ್ನೇ ಉದ್ದೇಶಿಸಿ ಕೇಳಿದ.

"ಇಲ್ಲ... " ಎಂದಳು.

"ಸರಿ.... ಹಾಗಾದ್ರೆ, ಹದಿನೈದು ಇಪ್ಪತ್ತು ನಿಮಿಷಗಳೊಳಗೆ ಬಂದು ಬಿಡ್ತೀವಿ" ಎಂದು ಹೇಳಿ ಎದ್ದ. ವಿನುತಳೂ ಎದ್ದು ನಿಂತಳು. ಸುಜಾತ ಕಸಿವಿಸಿಗೊಂಡಿದ್ದಳು. ಮುಂಜುಳಾಳ ಮುಖ ಅಸಹನೆಯಿಂದ ಕೂಡಿತ್ತು. ಪ್ಯಾಂಟಿನ ಎರಡೂ ಜೇಬುಗಳೊಳಗೆ ಕೈ ತೂರಿಸಿ, ಮಧುಸೂದನ ಮುಂದೆ ಹೆಜ್ಜೆ ಹಾಕಿದ. ವಿನುತಾ ಅವನ ಹಿಂದೆ ನಡೆದಳು. ಕಾರನ್ನು ಸೀದಾ ತನ್ನ ಮನೆಯ ಕಡೆಗೆ ಓಡಿಸಿದ.

ಮುಂಬಾಗಿಲನ್ನು ತೆರೆದು, ಅವಳ ಕಡೆ ತಿರುಗಿದ. "ಇದು ನಮ್ಮ ಮನೆ. ಮಾತನಾಡುಕ್ಕೆ ಬೇರೆ ಯಾವ ಜಾಗವೂ ಇಷ್ಟವಾಗಲಿಲ್ಲ" ಎಂದ.

ಅವಳ ಮುಖದಲ್ಲಿ ಭಯದ ಗೆರೆಗಳು ಮೂಡಿದವು. ಅವನು ನಸುನಕ್ಕ. "ನಾನೀಗ ನಿಮ್ಮ ಸ್ನೇಹಿತ. ಹಾಗೇ ನಾನು ಸಂಭಾವಿತ ಕೂಡ. ನನ್ನ ಮೇಲೆ ನಂಬಿಕೆ ಇದ್ದರೆ ಒಳಗೆ ಬನ್ನಿ.... ಇಲ್ಲದಿದ್ರೆ ವಾಪಸ್ಸು ಹೋಗೋಣ."

ಅವಳು ಅನುಮಾನಿಸುತ್ತಾ ಒಳಗೆ ಅಡಿ ಇಟ್ಟಳು. ಅವಳಿಗೂ ಕುಳಿತುಕೊಳ್ಳುವಂತೆ ಹೇಳಿ ತಾನೂ ಕುಳಿತ. "ನಿಮಗೆ ಮುರಳೀಧರ ಅನ್ನೋರ ಪರಿಚಯ ಇದೆಯಾ?" ಇದ್ದಕ್ಕಿದ್ದಂತೆ ಅವನು ಕೇಳಿದಾಗ ಅವಳು ಬೆಚ್ಚಿ ನೋಡಿದಳು. "ಪರವಾಗಿಲ್ಲ ಹೇಳಿ...." ಮತ್ತೆ ಕೇಳಿದ.

"ಅವರು ನಿಮಗೆ ಹೇಗೆ ಗೊತ್ತು? ನಿಮ್ಮ ಕಸಿನ್ನಾ?"

ತಲೆಯಾಡಿಸಿ ನಕ್ಕ. "ಅವರು ನನಗೆ ಏನೂ ಆಗಬೇಕಾಗಿಲ್ಲ. ಅವರು ನಿಮಗೆ ಏನಾಗ್ಬೇಕು ಹೇಳಿ..."

"ಅವರು ನನ್ನ ಫ್ರೆಂಡ್...."

"ಬರೀ ಫ್ರೆಂಡ್ ಅಷ್ಟೇನಾ?"

"ಹೀಗ್ಯಾಕೆ ಕೇಳ್ತಿದೀರಾ?"

"ನಿಜ ಏನೂಂತ ತಿಳ್ಕೊಳೋಕೆ ಕೇಳ್ತಿದೀನಿ... ನೀವು ಹೇಳಿದ್ರೆ ಒಳ್ಳೇದು."

"ನಾನೂ ಒಂದು ವಿಷಯಾನಾ ಕೇಳ್ಬೇಕಾಗಿತ್ತು. ನಾನು ನಿಮಗೆ ಒಪ್ಪಿಗೇನಾ?"

"ಒಪ್ಪಿದ್ದೆ. ನಿಮ್ಮ ಫೋಟೋ ನೋಡಿ ಒಪ್ಪಿಗೆಯನ್ನು ಕೊಟ್ಟಿದ್ದೆ. ಆದರೆ ನೀವು ಫೋಟೋದಲ್ಲಿ ಇದ್ದಂತೆ ಇಲ್ಲ."

"ಅಂದರೆ....?"

"ಫೋಟೋದ ಆ ಮುಖದಲ್ಲಿ ಮುಗ್ಧತೆ ಇತ್ತು. ಆದರೆ ಈ ಮುಖದಲ್ಲಿ ಕಪಟ ಇದೆ."

"ನೀವು ನನಗೆ ಅವಮಾನ ಮಾಡ್ತಿದೀರಾ?"

"ಇಲ್ಲ. ನಿಜವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡ್ತಿದೀನಿ.... ನನ್ನ ಬಗ್ಗೆ

ನಿಮ್ಮ ಅಭಿಪ್ರಾಯ ಏನು? ಒಪ್ಪಿಗೇನಾ?"

"ಇಲ್ಲ ನೀವು ನಂಗೆ ಒಪ್ಪಿಗೆ ಆಗಿಲ್ಲ."

"ಗುಡ್... ವೆರಿಗುಡ್... ನಿಜವನ್ನು ಹೇಳಿ ನನಗೆ ಅನುಕೂಲವನ್ನೇ ಮಾಡಿದ್ದೀರಿ.... ಆದರೆ ಈ ನಾಟಕ ಯಾಕೆ ಬೇಕು?"

"ಯಾವ ನಾಟಕ?"

"ನಿಮ್ಮ ಮನಸ್ನಲ್ಲಿ ಇರೋದನ್ನ ನಿಮ್ಮ ಪೇರೆಂಟ್ಸ್‌ಗೆ ಹೇಳಿಲ್ಲ.... ಹೇಳ್ಬಿಡಿ."

"ಅದು ಸುಲಭ ಅಲ್ಲ....."

"ಯಾವುದು ಸುಲಭ? ಸುಮ್ಮನೇ ಬಂದ ವರಗಳನ್ನು ನೋಡಿದ ಶಾಸ್ತ್ರ ಮಾಡಿ, ಒಪ್ಪಿಗೆ ಆಗಿಲ್ಲ ಅಂತ ಹೇಳೋದೂ ಸುಲಭನಾ?"

"ಇದುವರೆಗೆ ಎಂದೂ ಹಾಗೇ ಆಗಿಲ್ಲ. ಇದುವರೆಗೆ ಐದಾರು ಗಂಡುಗಳಿಗೆ ನಾನು ಒಪ್ಪಿಗೆ ಆಗಿಲ್ಲ. ನೀವೇ ಮೊದಲನೆಯವರು, ನನ್ನ ಫೋಟೋ ನೋಡಿ ಒಪ್ಪಿಗೆಯನ್ನು ಕೊಟ್ಟವರ ಪೈಕಿ."

"ಮುಂದಿನ ತಿಂಗಳು ನಾನು ಬೇರೆ ಊರಿಗೆ ಹೋಗಬೇಕು. ಅಷ್ಟರೊಳಗೆ ನನ್ನ ಎಂಗೇಜ್‌ಮೆಂಟಾದ್ರೂ ಆಗಿರ್ಬೇಕು ಅಂತ ಅಮ್ಮನ ಆಸೆ. ಏಳೆಂಟು ಹುಡುಗಿಯರ ಪೈಕಿ ನೀವೇ ನನಗೆ ಹಿಡಿಸಿದವರು... ಆದರೆ..." ಮಾತನ್ನ ನಿಲ್ಲಿಸಿ ಅವಳ ಕಡೆ ನೋಡಿದ. ಅವಳು ತಲೆತಗ್ಗಿಸಿದ್ದಳು. ಅವಳ ಕಣ್ಣುಗಳಿಂದ ಹನಿ ಉದುರಿತ್ತು. "ಛೆ.... ಅಳ್ತಾ ಇದೀರಾ? ಧೈರ್ಯವೇ ಇಲ್ಲದ ಮೇಲೆ, ಪ್ರೀತಿಯೆಲ್ಲಾ ಯಾಕೆ?"

ಅವಳು ಕತ್ತೆತ್ತಿ ಅವನ ಕಡೆ ನೋಡಿದಳು. ಇವನಿಗೆ ಇದೆಲ್ಲಾ ಹೇಗೆ ತಿಳಿಯಿತು ಎಂಬ ಅನುಮಾನ ಇಣುಕಿತು. "ಸಾರೀ... ನನ್ನ ಮಾತ್ನಿಂದ ನಿಮಗೆ ಬೇಸರವಾಗಿದ್ದರೆ.... ನೀವು ನನಗೆ ಒಪ್ಪಿಗೆ ಆಗಲಿಲ್ಲ ಅಂತ ನಿಮ್ಮ ತಂದೆಗೆ ತಿಳಿಸ್ತೀನಿ, ಅಲ್ಲಿಗೆ ಮುಗೀತು."

"ಪ್ಲೀಸ್, ಹಾಗೆ ಮಾಡ್ಬೇಡಿ.... ನೀವು ಒಪ್ಪದಿದ್ದರೆ, ನನ್ನ ತಂದೆ-ತಾಯಿಗೆ ಬೇಸರವಾಗುತ್ತೆ. ಮತ್ತೆ ಮತ್ತೆ ಬರುವ ವರಗಳ ಎದುರಿಗೆ ಕುಳಿತುಕೊಳ್ಳುವುದಕ್ಕೆ ನಂಗೂ ಬೇಸರವಾಗುತ್ತೆ."

"ಹಾಗಾದ್ರೆ ಬಲವಂತವಾಗಿ ನನ್ನನ್ನು ಮದುವೆಯಾಗಲು ಸಿದ್ಧವಾಗಿದ್ದೀರಾ?"

"ಇಲ್ಲ. ಆದರೆ ಇವುಗಳಿಂದ ತಪ್ಪಿಸಿಕೊಳ್ಳಲು ನನಗೆ ಸ್ವಲ್ಪ ಸಮಯ ಬೇಕು."

"ಹಾಗಾದರೆ ಯಾಕೆ ಬೇಕಾಗಿತ್ತು ಈ ಇಂಟರ್ ವ್ಯೂ?"

"ಏನೋ ನಂಗೊತ್ತಿಲ್ಲ. ನಿಮ್ಮನ್ನು ರಿಕ್ವೆಸ್ಟ್ ಮಾಡ್ಕೋಬೇಕು ಅಂತ ನಾನು

ಈ ಮೊದಲೇ ನಿರ್ಧರಿಸಿದ್ದೆ. ದಯವಿಟ್ಟು ನನಗೆ ಈ ಉಪಕಾರವನ್ನು ಮಾಡಿ."

"ಇದಕ್ಕೆ ನನ್ನ ಮನಸ್ಸು ಒಪ್ತಿಲ್ಲ. ನಿಮ್ಮ ಮನಸ್ನಲ್ಲಿರುವ ಹುಡುಗ ಯಾರು ಅಂತ ಹೇಳಿ. ನಾನು ನಿಮ್ಮ ತಂದೆ ಹತ್ರ ಮಾತಾಡ್ತೀನಿ."

"ಬೇಡ, ಬೇಡ." ಸರ್ರನೆ ಹೇಳಿದಳು.

"ಹಾಗಾದ್ರೆ, ಆ ಹುಡುಗನ ಹತ್ರ ಮಾತಾಡೋಣ.... ಇಬ್ಬರೂ ಹೋಗೋಣ."

"ಬೇಡ. ಅವನಿಗೆ ಈ ವಿಷಯ ತಿಳಿಯಕೂಡದು. ಮುರಳಿ ಹೇಗೆ ಪರಿಚಯ ಅಂತ ನೀವು ಹೇಳ್ಲೇ ಇಲ್ಲ." ಮಧು ಸಂಶಯದಿಂದ ಅವಳ ಕಡೆ ನೋಡಿದ.

"ಓ.... ಅದಾ? ನಾನೂ ಅವನೂ ಇಬ್ಬರೂ ಕ್ಲಾಸ್ ಮೇಟ್ಸ್. ಇಬ್ಬರೂ ಒಂದೇ ಥರ ಇದ್ದೆವು. ಎಲ್ಲರೂ ಅವಳೀ ಮಕ್ಕಳು ಅಂತ ತಿಳಿದುಕೊಂಡಿದ್ರು. ಇವತ್ತು ನೀವೂ ಕೂಡ ನನ್ನ ಮುಖವನ್ನು ನೋಡಿ, ಆಶ್ಚರ್ಯವನ್ನು ಪ್ರಕಟಗೊಳಿಸಿದಿರಿ. ಅದಕ್ಕೇ ನಾನು ಗೆಸ್ ಮಾಡಿದೆ. ಅವರ ಮನೆ ಮೊದಲಿಗೆ ನಿಮ್ಮ ಮನೆಯ ಬೀದಿಯಲ್ಲೇ ಇತ್ತು ಅಂತ ನೆನಪು." ಮನಸ್ಸಿಗೆ ತೋಚಿದ್ದನ್ನು ಹೇಳಿದ.

"ಹೌದು.... ನಮ್ಮ ಮನೆಯ ರಸ್ತೆಯಲ್ಲೇ ಇದ್ದರು. ಒಟ್ಟಿಗೇ ಸ್ಕೂಲಿಗೆ ಹೋಗುತ್ತಿದ್ದೆವು. ಒಟ್ಟಿಗೇ ಆಟ ಆಡ್ತಿದ್ದೆವು. ಆಗ ಬರೀ ಫ್ರೆಂಡ್ ಆಗಿದ್ದೆವು. ನಾನೂ ಆ ಸ್ಕೂಲ್ ನಲ್ಲೇ ಓದಿದ್ದೆ. ಆದ್ರೆ ನಾನು ನಿಮ್ಮನ್ನು ನೋಡಿರ್ಲೇ ಇಲ್ಲ."

ಮಧು ಆಮಾತನ್ನು ಗಮನಿಸಿದವನಂತೆ ನುಡಿದ, "ಆ ಫ್ರೆಂಡ್ ಶಿಪ್ ಈಗ ಬಹಳ ಮುಂದುವರೆದಿದೆ. ತಪ್ಪೇನಿಲ್ಲ ಬಿಡಿ.... ನಾನು ಅವನ ಹತ್ರ ಮಾತಾಡ್ತೀನಿ."

"ಬೇಡ, ಈಗಲೇ ಬೇಡ. ನಂಗೆ ಭಯ ಆಗುತ್ತೆ. ಅವನ ತಂದೆ ಎಂಥೋರು ಅಂತ ನಿಮಗೂ ಗೊತ್ತಿರಬಹುದು ಅಲ್ವಾ?"

"ಹೇಗಿದ್ದರೆ ನನಗೇನು? ತುಂಬಾ ದಿನಗಳಾದವು ಮುರಳಿಯನ್ನು ನೋಡಿ... ಅವರ ಮನೆ ಈಗ ಎಲ್ಲಿದೆಯೋ?"

"ಬೇಡ. ನೀವು ಅವರ ಮನೆಗೆ ಹೋಗ್ಬೇಡಿ." ತಟ್ಟನೆ ನುಡಿದಳು.

"ಇದೊಳ್ಳೆ ಚೆನ್ನಾಯ್ತಲ್ಲ. ಹೀಗೇ ಸುಮ್ಮನೆ ಪ್ರೀತಿಯ ಹೆಸರ್ನಲ್ಲಿ ದೂರ ದೂರವೇ ಇರ್ತೀರಾ? ಎಂದಾದ್ರೂ ಮದುವೆಯಾಗ್ಲೇ ಬೇಕಲ್ವಾ?"

"ಅದರ ಬಗ್ಗೆ ಅವನು ಯೋಚಿಸಿ, ನಿರ್ಧಾರಕ್ಕೆ ಬರುವವರೆಗೂ ಹೀಗೆ.... ನಾನೂ ಪ್ರೆಷರ್ ಹಾಕೀ ಹಾಕೀ ಸಾಕಾಯ್ತು. ಅವನ ಮನಸ್ನಲ್ಲಿ ಏನಿದೆಯೋ?" ಹಾಗೆ ಹೇಳಿದವಳು ತಕ್ಷಣವೇ ನಾಲಿಗೆಯನ್ನು ಕಚ್ಚಿಕೊಂಡಳು.

"ಒಂದ್ಕೆಲ್ಸ ಮಾಡಿ. ಇವತ್ತು ನಾಳೇಲಿ ಅವನ ಹತ್ರ ಮಾತಾಡಿ. ಬೇಗ ಡಿಸೈಡ್ ಮಾಡದಿದ್ದರೆ, ನನ್ನನ್ನು ಮದುವೆಯಾಗುವುದಾಗಿ ತಿಳಿಸಿ. ಆಮೇಲೆ

ನೋಡೋಣ."

"ಅವನು ಹೂಂ ಅಂದ್ಬಿಟ್ರೆ ಅಂತ ನಂಗೆ ಭಯ."

"ಹಾಗಾದ್ರೆ ಇದು ಪ್ರೀತಿಯಲ್ಲ. ವಂಚನೆ.... ಅವನನ್ನು ಮರೆತ್ಬಿಡಿ. ನಿಮ್ಮ ತಂದೆ-ತಾಯಿ ನೋಡಿದ ಯೋಗ್ಯ ವರನನ್ನು ಮದುವೆಯಾಗಿ... ಚಿಂತೆ ಯಾಕೆ?"

"ನಂಗೆ ಗೊತ್ತಾಗ್ತಿಲ್ಲ.... ಕನ್‌ಫ್ಯೂಸ್ ಆಗ್ತಿದೆ. ನೀವೇ ಏನಾದ್ರೂ ಉಪಾಯ ಹೇಳಿ...."

"ಮುರಳಿ ಹತ್ರ ಮಾತಾಡೋದು ಬೇಡ ಅಂತೀರಿ.... ಇನ್ಯಾವ ಉಪಾಯ ಇದೆ?"

"ನಂಗೆ ಒಂದ್ನಾಲ್ಕು ದಿನ ಅವಕಾಶ ಕೊಡಿ. ಅಲ್ಲಿಯವರೆಗೆ ನಾನು ಒಪ್ಪಿಗೆ ಇಲ್ಲ ಅಂತ ನನ್ನ ತಂದೆ-ತಾಯಿಗೆ ತಿಳಿಸ್ಬೇಡಿ......ಪ್ಲೀಸ್......" ಕೈ ಮುಗಿದಳು.

"ಓ.... ಕೆ.... ನೀವು ರಿಕ್ವೆಸ್ಟ್ ಮಾಡ್ಕೊಳ್ತಿದೀರಿ ಅಂತ ಹೂಂ ಅಂತಿದೀನಿ. ಹಾಗೇ ನೀವು ಅದೇನು ಮಾಡ್ತೀರೋ ಅದನ್ನು ನಂಗೆ ಬೇಗ ತಿಳಿಸ್ಬೇಕು. ನಾನು ಬೇರೆ ಹುಡುಗಿಯನ್ನು ನೋಡಿ ಮದುವೆಯಾಗ್ಬೇಕು."

"ಒಂದ್ಮಾತು ಕೇಳ್ಲಾ? ನನ್ನ ತಂಗೀನ ಮಾದುವೆಯಾಗ್ತೀರಾ?" ಅನುಮಾನಿಸುತ್ತಾ ಕೇಳಿದಳು.

"ನಿಮಗೆ ತಂಗಿ ಬೇರೆ ಇದಾರಾ? ಅವರು ನಿಮ್ಮ ಥರ ಅಲ್ಲ ತಾನೇ?" ನಕ್ಕ.

"ಇಲ್ಲ. ಅವಳಿನ್ನೂ ಓದ್ತಾ ಇದಾಳೆ."

"ಓದ್ತಾ ಇರೋ ಹುಡ್ಗೀರು ಲವ್ ಮಾಡ್ಬಾರ್ದು ಅಂತೇನಿಲ್ಲವಲ್ಲ." ಚುಡಾಯಿಸುವ ದನಿ ಇತ್ತು.

"ಇಲ್ಲ. ಅವಳು ಅಂಥವಳಲ್ಲ. ಹಾಗೇನಾದ್ರೂ ಇದ್ದಿದ್ದರೆ, ನನಗೆ ಖಂಡಿತಾ ಹೇಳಿರ್ತಿದ್ಲು."

"ಹಾಗಾದ್ರೆ ನಿಮ್ಮ ಲವ್ ಅಫೇರ್‌ನ ನಿಮ್ಮ ತಂಗಿಗೆ ಹೇಳಿದೀರಾ?"

"ಇಲ್ಲ. ಅವಳಿಗೆ ತಿಳಿಸಿಲ್ಲ. ಅವಳು ನನ್ನಂತೆ ಆಗಬಾರದು.... ಅಪ್ಪ-ಅಮ್ಮನಿಗೆ ಅವಳಾದ್ರೂ ಖುಷಿಯನ್ನು ಕೊಡ್ಲಿ."

"ನಿಮ್ಮ ತಂಗಿಗೆ ನಾನು ಒಪ್ಪಿಗೆ ಆಗದಿದ್ರೆ?"

"ಖಂಡಿತಾ ಒಪ್ಪಿಗೆ ಆಗ್ತೀರಿ. ಒಪ್ಪದೇ ಇರುವಂಥ ಯಾವ ವಿಷಯವೂ ಇಲ್ಲ. ನಾನು ನನ್ನ ತಂಗಿಯ ಫೋಟೋ ತೋರಿಸ್ತೀನಿ.... ಹಾಗೇ ಅವಳ ಹತ್ತಾನೂ ಮಾತಾಡ್ತೀನಿ."

"ಅದೇನೇನು ಮಾಡ್ತೀರೋ ಮಾಡಿ. ಆದರೆ ನಾನ್ಯಾಕೆ ಇದ್ದಕ್ಕೆಲ್ಲಾ ತಲೆ

ಆಡಿಸ್ಬೇಕೋ ನಂಗೆ ಅರ್ಥವಾಗ್ತಿಲ್ಲ.... ನಡೀರಿ.... ವಾಪಸ್ಸು ಹೋಗೋಣ. ಅರ್ಧಗಂಟೆ ಮೇಲಾಯ್ತು.... ಮಗಳನ್ನು ಹಾರಿಸ್ಕೊಂಡು ಹೊರಟು ಹೋದ ಅಂತ ನಿಮ್ಮ ತಂದೆ ಗಾಬರಿಯಾಗ್ತಾರೆ ಅಷ್ಟೇ." ಇಬ್ಬರೂ ಎದ್ದರು.

ಸದಾನಂದ ಇಬ್ಬರೂ ವಾಪಸ್ಸು ಬಂದುದನ್ನು ಕಂಡು ನಿರಾಳಗೊಂಡ. ಸ್ವಲ್ಪ ಹೊತ್ತಿನಲ್ಲೇ ತಾಯಿ-ಮಗ ವಾಪಸ್ಸು ಹೊರಟರು. "ಇನ್ನೆರಡು ದಿನಗಳನ್ನು ಬಿಟ್ಟು ನಾವು ನಿರ್ಣಯವನ್ನು ತಿಳಿಸ್ತೀವಿ." ಮಂಜುಳ ಎಂದಳು.

ಆದರೆ, ತಕ್ಷಣವೇ ಮಧುಸೂದನ ನುಡಿದ, "ನನಗೆ ವಿನುತಾ ಒಪ್ಪಿಗೆಯಾಗಿದಾರೆ. ಆದರೆ ಮದುವೆ ಇನ್ನೆರಡು ತಿಂಗಳ ನಂತರ ಆಗಲಿ....."

ಮಂಜುಳಾ ಕಕ್ಕಾಬಿಕ್ಕಿ. ಮಗನ ಮೊಣಕೈಯನ್ನು ತಿವಿದಳು. ಸದಾನಂದ ದಂಪತಿಗಳಿಗೆ ನಿಶ್ಚಿಂತೆ ಆಗಿತ್ತು. ಸುಜಾತ ಮಗಳ ಕಡೆ ನೋಡಿದಳು. ಅಲ್ಲಿ ಸಮಾಧಾನದ ಗೆರೆಗಳನ್ನು ಕಂಡಳು. ನೆಮ್ಮದಿ ಮೂಡಿತು.

"ನಿಮ್ಮ ಇಷ್ಟದಂತೆಯೇ ಆಗಲಿ. ಸಿದ್ಧತೆಗಳಿಗೆ ಸಮಯ ಬೇಕಲ್ಲ."

"ಹೆಚ್ಚು ಖರ್ಚು, ವೆಚ್ಚ ಬೇಡ. ಸರಳವಾಗಿ ಮದುವೆ ಮಾಡ್ಕೊಡಿ."

"ಮಧೂ, ಎಲ್ಲಾ ಮಾತನ್ನೂ ನೀನೇ ಆಡ್ತೀಯಲ್ಲ. ನಂಗೂ ಸ್ವಲ್ಪ ಮಾತನಾಡಲು ಉಳಿಸು." ಅರೆ ಕೋಪದಿಂದ ಎಂದಳು. ಇಬ್ಬರೂ ಹೊರಬಂದರು. ಕಾರನ್ನೇರಿದರು.

"ಮಧೂ ವಿನುತನ್ನ ಹೇಗೆ ಒಪ್ದೆ. ನಂಗೆ ಒಂದ್ಮಾತನ್ನೂ ತಿಳಿಸದೇ?"

"ಮದುವೆ ಆಗೋನು ನಾನು ಅಲ್ವೇನಮ್ಮಾ.... ನಮ್ಮಿಬ್ಬರ ಒಪ್ಪಿಗೆ ಮುಖ್ಯ ತಾನೇ?"

"ಹೌದು ನಿಜ. ಆದ್ರೆ ಇನ್ನೂ ಸ್ವಲ್ಪ ಚೆನ್ನಾಗಿರೋಳನ್ನು ನೋಡೋ ಆಸೆ ಇತ್ತು."

"ಏನಾಗಿದಾಳೆ? ನಂಗೆ ಅವಳು ಎಲ್ಲಾ ರೀತಿಯಿಂದಲೂ ಸರಿಯಾಗಿದಾಳೆ ಅಂತ ಅನ್ನಿಸ್ತು. ನಂಗೆ ಅಷ್ಟೂ ಅಧಿಕಾರ ಇಲ್ವಾ?" ತಾಯಿಯ ಕಡೆ ನೋಡದೇ ಪ್ರಶ್ನಿಸಿದ.

"ಹಾಗೆಲ್ಲಂದೆ ನಾನು? ಆದ್ರೆ ನಂಗೂ ಬೆಲೆ ಇದೆ ಅಲ್ವಾ?"

"ಸರಿ. ಹಾಗಾದ್ರೆ ನಮಗೆ ಹುಡುಗಿ ಒಪ್ಪಿಗೆ ಆಗಲಿಲ್ಲ ಅಂತ ಹೇಳಿ ಬಿಡು."

"ನನ್ನನ್ನು ಕೆಟ್ಟೋಳನ್ನ ಮಾಡ್ಬೇಡ.... ನೋಡೋಣ." ಮನದಲ್ಲೇ ನಕ್ಕೊಂಡು ಗಾಡಿಯನ್ನು ಓಡಿಸಿದ.

* * *

"ಮುರಳೀ, ನಾನು ನಿನ್ಹತ್ರ ಸ್ವಲ್ಪ ಮಾತಾಡ್ಬೇಕು. ಆಫೀಸ್ಗೆ ಬರ್ಲಾ?" ಪಬ್ಲಿಕ್ ಬೂತ್ನಿಂದ ಫೋನ್ ಮಾಡಿದ್ದಳು ವಿನುತಾ.

"ಬೇಡ ಮಾರಾಯಿತಿ. ನಾನು ಸ್ವಲ್ಪ ಬಿಸಿಯಾಗಿದೀನಿ. ಪ್ಲೀಸ್....."

"ಕ್ಲೈಂಟ್ಸ್ ಇದಾರಾ? ನಂಗೋಸ್ಕರಾನೂ ನೀನು ಒಂದು ಪತ್ತೇದಾರಿ ಕೆಲಸ ಮಾಡ್ಬೇಕಾಗುತ್ತೆ. ಆದರೆ ನಾನು ಫೀಸನ್ನು ಕೊಡಲ್ಲ." ಮುದ್ದಿನ ದನಿಯಲ್ಲಿ ಕೇಳಿದಳು.

"ಸರಿ, ಕೆಲಸ ಏನು?" ಉದಾಸೀನದಿಂದಲೇ ಕೇಳಿದ.

"ಯಾಕೋ ಮುರಳಿ ನಿರುತ್ಸಾಹದಿಂದ ಮಾತಾಡ್ತಿದೀಯಾ?"

"ಮತ್ತಿನ್ನೇನು? ಇಂಟರ್‌ವ್ಯೂ ಹೇಗಾಯ್ತು ಅಂತ ನೀನು ಹೇಳ್ಲೇ ಇಲ್ಲ."

"ಅದಾ? ಅದೊಂದು ದೊಡ್ಡ ಕತೆ. ಹುಡುಗ ಒಪ್ಪಿಗೆ ಕೊಟ್ಟು ಬಿಟ್ಟಿದ್ದಾನೆ."

"ನೀನೂ ಒಪ್ಪಿಬಿಟ್ಯಾ!?" ಕಾತರದಿಂದ ಕೇಳಿದ.

"ನೀನು ಹೇಳು.... ನಾನೇನು ಮಾಡ್ಬೇಕು ಅಂತ?"

"ನಿನ್ನಿಷ್ಟ. ನಿನಗೆ ನಾನು ಬೇಡವಾದ್ರೆ ಅವನೇ ಸರಿ...."

"ಅದಕ್ಕೇ ನಾನು ನಿಂಗೆ ಫೋನ್ ಮಾಡಿದ್ದು. ಅವನ ಬಗ್ಗೆ ವಿವರಗಳನ್ನು ತಿಳ್ಕೊಂಡು ನೀನು ನಂಗೆ ತಿಳಿಸ್ಬೇಕು. ಆದಷ್ಟು ಬೇಗ ಈ ಕೆಲಸ ಆಗ್ಬೇಕು."

"ನಾನ್ಸೆನ್ಸ್.... " ಅವಳು ಕಿಲಕಿಲ ನಕ್ಕಿದ್ದು ಕೇಳಿಸಿತ್ತು.

"ಸಾರೀ ಮುರಳೀ. ನಮ್ಮಪ್ಪ ಅಮ್ಮನಿಗೆ ಅರ್ಜೆಂಟ್, ನಾನೇನ್ಮಾಡ್ಲೀ...."

"ಇದೇನಾ ನಿನ್ನ ಪ್ರೀತಿ?"

"ಆ ಮಾತನ್ನು ನಾನು ಕೇಳ್ಬೇಕು.... ಮದುವೆ ಮಂಟಪದಿಂದ ನನ್ನನ್ನು ಕಿಡ್ನಾಪ್ ಮಾಡ್ಕೊಂಡು ಹೋಗೋ ಧೈರ್ಯ ಇದೆಯಾ ನಿಂಗೆ?"

"ಹೀಗೆಲ್ಲಾ ಕೆಣಕ್ಬೇಡಾ.... ಇನ್ನೂ ಕೆಲವು ದಿನಗಳನ್ನು ತಡ್ಕೊಳ್ಳೋಕೆ ಆಗೊಲ್ವಾ ನಿನ್ನ ಕೈಯಲ್ಲಿ?"

"ಆಗುತ್ತೆ. ಜೀವಮಾನವೆಲ್ಲಾ ನಿಂಗೋಸ್ಕರ ಹೀಗೇ ಕಾಯ್ತೀನಿ. ಆದರೆ ನೀನು ಮಾಡ್ತಿರೋದು ನ್ಯಾಯಾನಾ? ಒಂದು ಹೆಣ್ಣು ಹುಡುಗಿಯ ಮನಸ್ಸನ್ನು ನೋಯಿಸ್ತಾ ಇದೀಯ. ನಿಂಗೆ ಒಳ್ಳೇದಾಗೋಲ್ಲ, ನೋಡು."

"ಏಯ್ ವಿನೂ.... ಶಾಪ ಹಾಕ್ಬೇಡ್ವೇ.... ನಾನು ಹಾಳಾಗಿ ಹೋಗ್ತೀನಿ. ನಿನ್ನ ಪ್ರೀತಿಯ ಮುರಳಿ ಸುಖವಾಗಿರ್ಬೇಕೋ ಬೇಡ್ವೋ?"

"ಆ ಆಸೆ ನಂಗೂ ಇದೆ. ಇನ್ನೂ ಒಂದು ವಾರ ಟೈಂ ಕೊಡ್ತೀನಿ. ಅಷ್ಟರಲ್ಲಿ ಇತ್ಯರ್ಥವಾಗ್ಬೇಕು. ಇಲ್ದಿದ್ರೆ ಮುಂದಿನ ತಿಂಗಳೇ ನಮ್ಮಿಬ್ಬರಿಗೆ ಮದುವೆ. ಆಮೇಲೇ ಜೀವನವೆಲ್ಲಾ ಒಂಟಿ ಬದುಕು ನಿಂಗೆ. ಸುಂಟರಗಾಳಿ ಥರ ತಿರುಗ್ತೀಯ

ನೋಡು."

"ಓ.... ಕೇ.... ನಾನು ನಿನಗೆ ಮತ್ತೆ ಫೋನ್ ಮಾಡ್ತೀನಿ...."

"ತಮಾಷೆ ಅಂದ್ಕೋಬೇಡ ಮುರಳಿ, ಸೀರಿಯಸ್ಸಾಗಿ ಹೇಳ್ತಿದೀನಿ." ಅವಳು ಮತ್ತೆ ಎಚ್ಚರಿಸಿ, ಲೈನ್ ಕಟ್ ಮಾಡಿದಳು.

ಮುರಳಿ ತನ್ನ ಎದುರಿಗೆ ಇದ್ದವನನ್ನು ಕಳಿಸಿ ಮೊಬೈಲ್ ಫೋನೆತ್ತಿಕೊಂಡು ಮಧುಸೂದನನ ನಂಬರನ್ನು ಡಯಲ್ ಮಾಡಿದ. ಮಧುಸೂದನ ಎತ್ತಿಕೊಂಡ.

"ವಧು ಪರೀಕ್ಷೆ ಹೇಗಾಯ್ತು?" ವ್ಯಂಗ್ಯದಿಂದ ಕೇಳಿದ

"ಯಾರ್ರೀ ಅದು? ನಿಮಗ್ಯಾಕೆ ನನ್ನ ವಿಷಯ?" ಮಧುಸೂದನ ಖಾರವಾಗಿ ಕೇಳಿದ.

"ಆಗ್ಲೇ ಮರೆತು ಬಿಟ್ರ ನನ್ನನ್ನು? ಇಂಟರ್‌ವ್ಯೂಗೆ ಹೋಗ್ಬೇಡಿ ಅಂತ ನಾನು ಹೇಳಿರ್ಲಿಲ್ವಾ?"

"ಅದು ನನ್ನ ಸ್ವಂತ ವಿಷಯ; ನೀವ್ಯಾರು ಕೇಳೋಕೆ?"

"ಎಸ್, ಇದು ನಿಮ್ಮ ಸ್ವಂತ ವಿಷಯ. ಆದರೆ ವಿನುತಾ ನನ್ನವಳು, ನೆನಪಿರಲಿ...."

"ಅದನ್ನ ನಂಗ್ಯಾಕೆ ಹೇಳ್ತಿದೀರಿ? ವಿನುತಾ ನಿಮ್ಮವಳಾದ್ರೆ ನೀವೇ ಇಟ್ಕೊಳ್ಳಿ.... ನನ್ನನ್ಯಾಕೆ ಪ್ರಶ್ನಿಸ್ತೀರಿ?"

"ನೀವು ಮಾಡಿದ್ದು ಸರಿಯಲ್ಲ ಅಂತ ಹೇಳೋಕೆ....."

"ಇದು ಸರಿಯಾ? ಹೇಡಿ ಥರ ಮರೆಯಲ್ಲಿ ನಿಂತ್ಕೊಂಡು ನನ್ನನ್ನು ಪ್ರಶ್ನಿಸ್ತೀರಲ್ಲ? ಸೀದಾ ಹೋಗಿ ಅವರನ್ನು ಕೇಳ್ಕೊಳ್ಳಿ.... ಹೀಗೆಲ್ಲಾ ನಾಟಕ ಆಡ್ಬೇಡಿ. ಸೀರಿಯಸ್ಸಾಗಿ ಮಾತಾಡಿ."

"ಅದು ಹಾಗಲ್ಲ.... ನೀವೂ ಯಾರನ್ನಾದ್ರೂ ಪ್ರೀತಿಸಿದ್ರೆ, ಈ ಗೊಂದಲ ಅರ್ಥವಾಗ್ತಿತ್ತು. ಸಮಸ್ಯೆ ಏನು ಅಂತ ಗೊತ್ತಾಗ್ತಿತ್ತು."

"ಬೇರೆಯವರ ಸಮಸ್ಯೆಗಳನ್ನು ಪರಿಹರಿಸೋ ಪತ್ತೇದಾರ ಪುರುಷೋತ್ತಮ ನೀವು! ನಿಮ್ಮ ಸಮಸ್ಯೆಗೆ ಒಂದು ಪರಿಹಾರವನ್ನು ಹುಡುಕಿಕೊಳ್ಳೋಕೆ ಸಮಯವಿಲ್ವಾ? ನಿಮ್ಮಂಥೋರ್ಗೆ ಪ್ರೀತಿ ಪ್ರೇಮ ಎಲ್ಲಾ ಯಾಕೆ?" ಛಟ್ಟಿಸಿ ಕೇಳಿದ.

"ಹೀಗೆಲ್ಲಾ ಮಾತಾಡಿ, ನನ್ನನ್ನ ತೆಗಳಿ, ನೀವು ಮಹಾಪುರುಷ ಅಂತ ಅಂದ್ಕೋಬೇಡಿ. ನೀವು ವಿನುತನ್ನ ಮದುವೆಯಾಗ್ಬಾರ್ದು ಅಂತ ಹೇಳ್ತಿದೀನಿ ಅಷ್ಟೇ."

"ಆ ದಿನ ವಿನುತನ ಹೆಸರನ್ನೇ ಎತ್ತಲಿಲ್ಲ ನೀವು.... ಯಾರು ವಿನುತಾ?"

"ಷಟಪ್ ಮಧುಸೂದನ್.... ನೀವು ಅರ್ಥ ಮಾಡ್ಕೋತೀರಿ ಅಂತ ನಾನು

ಅಂದ್ಕೊಂಡಿದ್ದೆ."

"ನಿಮ್ಮ ಹಾಗೆ ಸಿ.ಐ.ಡಿ. ಅಲ್ಲ ನಾನು. ನಿಮ್ಮಂತೆ ಸುತ್ತಿ ಬಳಸಿ ಮಾತನಾಡು ವವರನ್ನು ಕಂಡ್ರೆ ಆಗೊಲ್ಲ ನಂಗೆ. ಮಾತು ಸಾಕು, ಲೈನ್ ಕಟ್ ಮಾಡಿ."

"ಓ... ಕೆ.... ಮ್ಯಾನೇಜರ್ ಸಾಹೇಬ್ರೇ.... ವಿನುತನ್ನ ಒಪ್ಕೋಬೇಡಿ. ಅಷ್ಟು ಮಾಡಿ ಸಾಕು."

"ನಾನು ಏನ್ಮಾಡ್ತೀನಿ ಅಂತ ನಿಮಗ್ಯಾಕೆ ತಿಳೀಬೇಕು?"

"ನೀವೇನಾದ್ರೂ ಒಪ್ಪಿಗೆ ಕೊಟ್ರೋ, ಮದುವೆ ಮಂಟಪದಲ್ಲಿ ಅವಳನ್ನು ಅಪಹರಿಸಿಕೊಂಡು ಹೋಗ್ತೀನಿ. ಈಗ್ಲೇ ಹೇಳ್ಬಿಟ್ಟಿದೀನಿ."

ಮಧುಸೂದನ ಗೊಳ್ಳನೆ ನಕ್ಕ. "ಏನಂದ್ರೀ ಕಿಡ್ನಾಪ್ ಮಾಡ್ತೀರಾ? ಅದು ನಿಮ್ಮ ಘನತೆಗೆ ಹೆಮ್ಮೆ ತರುವಂಥ ಕೆಲಸಾನಾ? ನಿಮಗೇ ಅವಮಾನ...."

"ಇಷ್ಟೆಲ್ಲಾ ಮಾತಾಡ್ತೀರಲ್ಲ.... ನಾನು ಹೇಳಿದ ಮಾತನ್ಯಾಕೆ ಕೇಳ್ಬಾರ್ದು ನೀವು?"

"ನೀವು ಯಾರು ಅಂತ? ನಾನು ನನ್ನ ಅಮ್ಮನ ಮಾತನ್ನೇ ಕೇಳೋಲ್ಲ. ಅಪ್ಪ ಇದ್ದಿದ್ರೆ ಅವರಿಗೂ ಹೆದರ್ತಿರ್ಲಿಲ್ಲ. ನನ್ನ ಪಾಡಿಗೆ ನನ್ನನ್ನ ಬಿಡಿ. ನಿಮ್ಮ ಕೆಲಸವನ್ನು ನೀವು ನೋಡ್ಕೊಳ್ಳಿ." ಎಂದು ಹೇಳಿ ಮಾತನ್ನು ಕಟ್ ಮಾಡಿದ. "ಛೇ ಎಂತೆಂಥ ಮನುಷ್ಯರಿರ್ತಾರೆ.... ಪ್ರೀತಿಸಿದ ಹುಡುಗಿಯ ಕೈ ಹಿಡಿಯುವುದನ್ನು ಬಿಟ್ಟು, ಹೀಗೆ ಸತಾಯಿಸಿಕೊಂಡು.... ಏನು ಸಾಧಿಸ್ತಾರೋ?" ಸ್ವಲ್ಪ ಜೋರಾಗಿಯೇ ಗೊಣಗಿದ.

"ಯಾರನ್ನು ಬೈತಿದೀಯಾ ಮಧು?" ತಾಯಿ ಬಂದು ಕೇಳಿದಳು.

"ಯಾರೋ ವ್ಯಕ್ತಿ, ಸುಮ್ನೆ ತಲೆ ತಿಂತಾನೆ?" ಬ್ಯಾಂಕಿಗೆ ಬಂದು ಮಾತಾಡು ಅಂತ ಬೈದೆ."

"ಅದೇ ಅವತ್ತು ಬಂದಿದ್ನಲ್ಲ ಅವನಾ? ನಿನ್ನಿಂದ ಏನಾಗ್ಬೇಕಂತೆ?" ಮಗನ ಕಡೆ ಓರೆ ನೋಟವನ್ನು ಬೀರಿದಳು.

"ಅವನು ಪ್ರೈವೇಟ್ ಡಿಕೆಕ್ಟಿವ್.... ಯಾವುದೋ ಲೋನ್ ಬೇಕಂತೆ.... ಲೋನ್ ಕೊಡ್ಬೇಕಾದ್ರೆ ಷೂರಿಟಿ ಬೇಕು.... ಅದಿಲ್ಲದೇ ಹೇಗೆ ಲೋನ್ ಕೊಡೋದು? ಅದೇ ವಿಷಯಕ್ಕೆ ಸ್ವಲ್ಪ ಜೋರಾಗಿ ಮಾತಾಡಿದೆ."

"ಆಸ್ತಿ ಏನೂ ಇಲ್ವಾ? ಕೇಳ್ಬೇಕಾಗಿತ್ತು"

"ಏನಿದೆಯೋ ನಂಗೆ ಗೊತ್ತಿಲ್ಲ. ಬ್ಯಾಂಕಿಗೆ ಬಂದಾಗ ಮಾತಾಡ್ತೀನಿ." ತಾಯಿ ಯನ್ನು ಅಲ್ಲಿಂದ ಕಳಿಸಲು ಪ್ರಯತ್ನಿಸಿದ. ಆದ್ರೆ ಮಂಜುಳಾಗೆ ಏನೋ ಅನುಮಾನ ಬಂದಿತ್ತು. ಪ್ರೈವೇಟ್ ಡಿಟೆಕ್ಟಿವ್ ಅಂತಾನೆ. ಮನೆಗೇ ಬಂದಿದ್ದ. ಇವನ ಹತ್ರ

ಅವನಿಗೆ ಏನ್ಮಾತು? ಏನು ರಹಸ್ಯ ಇರಬಹುದು? ಮಗ ಏನಾದ್ರೂ ಸುಳ್ಳು ಗಿಳ್ಳು ಹೇಳಿರಬಹುದೇ, ಅಥವಾ ಯಾವುದಾದ್ರೂ ಜಾಲದಲ್ಲಿ ಸಿಕ್ಕಿ ಬಿದ್ದಿರಬಹುದೇ?ಇವನನ್ನು ವಿಚಾರಿಸಿದರೆ ನಿಜ ತಿಳಿಯುವುದಿಲ್ಲ ಅವನನ್ನೇ ವಿಚಾರಿಸ್ಬೇಕು. ತಾನು ಅವನನ್ನು ಭೇಟಿಯಾಗಲೇಬೇಕು ಅಂತ ನಿರ್ಧರಿಸಿದಳು.

* * *

"ಎಕ್ಸ್‌ಕ್ಯೂಸ್ ಮಿ" ಮಂಜುಳಾ ನುಡಿದಾಗ ಮುರಳಿ ಕತ್ತೆತ್ತಿದ. ಅವಳ ಕೈ ನಡುಗಿತು. ಕಾಲುಗಳು ತತ್ತರಿಸಿದವು. ಮುಖದಲ್ಲಿ ಗೊಂದಲ ಕಾಡಿತು.

"ಎಸ್. ಕಮಿನ್" ಮುರಳಿ ಒಳಕ್ಕೆ ಕರೆದು ಎದುರಿಗಿದ್ದ ಕುರ್ಚಿಯ ಕಡೆ ಕೈ ಮಾಡಿ "ಕೂತ್ಕೊಳ್ಳಿ ಪ್ಲೀಸ್" ಎಂದ. ಅವಳು ಅವನನ್ನೇ ಮತ್ತೆ ಮತ್ತೆ ನೋಡುತ್ತಿದ್ದಳು.

"ಹೆದರ್ಬೇಡಿ ಆಂಟಿ... ನಾನು ಪತ್ತೇದಾರ ಅಷ್ಟೇ, ಕೊಲೆಗಾರ ಅಲ್ಲ." ನಗುತ್ತಾ ನುಡಿದಾಗ, ಅವಳು ಸಾವರಿಸಿಕೊಂಡಳು.

"ಈ ಮುಂಚೆ ನಾನು ನಿಮ್ಮನ್ನು ಎಲ್ಲಿಯಾದ್ರೂ ನೋಡಿರಬಹುದಾ ಅಂತ ಯೋಚಿಸಿದ್ದೆ." ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತು ನುಡಿದಳು. ಆದರೂ ಮುಖದ ಮೇಲಿನ ಗೊಂದಲ ಕಡಿಮೆ ಆಗಿರಲಿಲ್ಲ. ಆ ದಿನ ಇಷ್ಟು ಹತ್ತಿರದಿಂದ ನೋಡಿರಲಿಲ್ಲ. ಆ ದಿನ ಬಂದವನು ಇವನೇನಾ ಎಂಬ ಅನುಮಾನ ಸಹ ಕಾಡಿತ್ತು."

"ಇರಬಹುದು, ಒಬ್ಬರಂತೆ ಇನ್ನೊಬ್ಬರು ಇರುವುದು ಅಪರೂಪವಾದರೂ ಅಸಹಜ ಅಲ್ಲ.... ನನ್ನಂಥವನನ್ನು ಈ ಮುಂಚೆ ನೋಡಿರಬಹುದು...." ಬೇಕಂತ ಹೇಳಿದ.

"ನಾನು ಯಾರು ಅಂತ ತಿಳ್ಕೊಳ್ಳಲ್ವಾ?" ಅದೇ ಧಾಟಿಯಲ್ಲಿ ಕೇಳಿದಳು.

"ನೀವೇ ನಿಮ್ಮ ಪರಿಚಯ ಮಾಡ್ಕೊಳ್ಳಿ ಆಂಟೀ. ಅದೇ ಇಲ್ಲಿಯ ರೀತಿ." ಮುಗುಳ್ನಗು ನಗುತ್ತಾ ನುಡಿದ.

"ನಿಮ್ಮ ತಂದೆಯ ಹೆಸರೇನು?" ಮುರಳಿ ಜೋರಾಗಿ ನಕ್ಕ.

"ಪತ್ತೇದಾರಿಕೆ ಕೆಲಸ ನಿಮ್ಮದೋ, ನನ್ನದೋ ಅಂತ ಅನುಮಾನ ಬರ್ತಿದೆ."

"ಇದು ನಗುವ ವಿಷಯ ಅಲ್ಲ ಮುರಳೀಧರ್, ಹಾಗೇ ಸುಮ್ಮನೆ ಕೇಳಿದೆ."

"ಇಲ್ಲ ಆಂಟೀ.... ಹಾಗೇ ಸುಮ್ಮನೆ ಕೇಳುವ ವಿಷಯ ಅಲ್ಲ. ಏನೋ ವಿಷಯ ಇದೆ.... ನನ್ನ ತಾಯಿಯ ಹೆಸರನ್ನೇಕೆ ಕೇಳಲಿಲ್ಲ ನೀವು? ಅಂದರೆ ನಮ್ಮ ತಂದೆ ನಿಮಗೆ ಪರಿಚಿತರು ಇರಬಹುದು." ಮಂಜುಳಾ ಎಚ್ಚರ ವಹಿಸಿ

ಮಾತನಾಡಿದಳು.

"ಇರಲಾರದು. ಒಮ್ಮೊಮ್ಮೆ ಏನೋ ಆಡೋಕ್ಕೆ ಹೋಗಿ ಏನೇನನ್ನೋ ಆಡಿ ಬಿಡ್ತೀನಿ. ನಾನು ಮಂಜುಳಾ ಅಂತ. ನನಗೊಬ್ಬ ಮಗನಿದ್ದಾನೆ. ಮದುವೆ ಗೊತ್ತಾಗುವುದರಲ್ಲಿದೆ.... ಅವನು ಒಪ್ಪಿಕೊಂಡಿರುವ ಹುಡುಗಿ ನನಗೆ ಒಪ್ಪಿಗೆ ಇಲ್ಲ.... ಆ ಹುಡುಗಿಯ ಬಗ್ಗೆ ಕೆಲವು ವಿಷಯಗಳನ್ನು ಪತ್ತೆ ಹಚ್ಚ ಬೇಕಾಗಿದೆ." ತಡವರಿಸುತ್ತಾ ಹೇಳಿದಳು. ಅವನು ನೇರವಾಗಿ ಆಕೆಯನ್ನು ನೋಡಿದ.

"ನಿಮಗ್ಯಾಕೆ ಹಾಗನ್ನಿಸ್ತು? ನಿಮ್ಮ ಮಗ ಒಪ್ಪಿರುವ ಹುಡುಗಿಯನ್ನು ಯಾವುದಾದರೂ ಅಪವಾದ ಹೊರಿಸಿ, ನಿಮ್ಮ ಮಗ ಮದುವೆಯಾಗದಿರುವಂತೆ ಮಾಡುವ ಉದ್ದೇಶಾನಾ? ಹಾಗೇನಾದ್ರೂ ಇದ್ರೆ ಈಗಲೇ ಹೇಳ್ಬಿಡಿ."

"ಹಾಗಲ್ಲ.... ಅವಳ ಗುಣ, ನಡತೆ, ಅವಳು ಬೇರೆ ಯಾರನ್ನಾದರೂ ಇಷ್ಟ ಪಡ್ತಿದ್ದಾಳಾ ಅಂತ ನಂಗೆ ತಿಳೀಬೇಕು."

ಕಣ್ಣು ಕಿರಿದು ಮಾಡಿ ಅವಳನ್ನೇ ದಿಟ್ಟಿಸಿ ಕೇಳಿದ.

"ಅದೇ.... ಅದ್ಯಾಕೆ ಬೇಕು? ಆ ಹುಡುಗಿ ನಿಮ್ಮ ಮಗನಿಗೆ ಪತ್ನಿಯಾಗಿ, ನಿಮಗೆ ಸೊಸೆಯಾಗಿ ನಿಮ್ಮ ಮನೆಗೆ ಬಂದ್ಮೇಲೆ, ನಿಮ್ಮವಳೇ ಆಗ್ತಾಳೆ.... ಅಂಥೋಳ ಬಗ್ಗೆ ತಿಳಿದುಕೊಳ್ಳೋದು ನ್ಯಾಯ ಅಲ್ಲ.... ಅದೂ ಈ ರೀತಿ. ಹಾಗೇನಾದ್ರೂ ಇರಬಹುದಾ? ಅಂತ.... ನಿಮಗೆ ಏನಾದ್ರೂ ಅನುಮಾನ ಮೂಡಿದೆಯಾ?"

"ಹೌದು, ನನ್ನ ಮಗ ಯಾರೊಡನೆಯೋ ಫೋನಿನಲ್ಲಿ ಮಾತನಾಡುವಾಗ ಅರ್ಥಂಬರ್ಥ ಕೇಳಿಸ್ಕೊಂಡೆ.... ಆ ಹುಡುಗಿ ರೂಪದಲ್ಲಿ ಸುಮಾರು.... ಗುಣದಲ್ಲಾದರೂ ಸಮನಾಗಿರಬೇಡ್ವೇ! ಹಾಗೇನಾದ್ರೂ ಇದ್ದರೆ, ನನ್ನ ಮಗ ಸುಖವಾಗಿರಲು ಹೇಗೆ ಸಾಧ್ಯ? ಅದು ನನಗೆ ಮುಖ್ಯ ಅಂತ ಅನ್ಸುತ್ತೆ."

"ಇದನ್ನು ಯಾವುದಾದ್ರೂ ಜ್ಯೋತಿಷಿ ಹತ್ರ ಕೇಳಿ. ನಿಮ್ಮ ಮಗನ ಭವಿಷ್ಯ ಹೇಗಿದೆ ಅಂತ ಹೇಳ್ತಾರೆ." ತಮಾಷೆಯ ಧ್ವನಿಯಲ್ಲಿ ಹೇಳಿದ.

"ಆ ಕೆಲಸವನ್ನೂ ಮಾಡ್ತೀನಿ. ಅನೇಕ ವಿಷಯಗಳನ್ನು ನಾನು ತಿಳಿದುಕೊಳ್ಳಬೇಕಾಗಿದೆ. ನಿಮ್ಮ ಫೀಸು ಎಷ್ಟು ಅಂತ ಹೇಳಿದ್ರೆ ಒಳ್ಳೇದು."

"ಮೊದಲು ವಿವರಗಳನ್ನು ಕೊಡಿ. ಫೋಟೋ, ಅಡ್ರೆಸ್, ಫೋನ್ ನಂಬರ್ ಇತ್ಯಾದಿ ಇತ್ಯಾದಿ. ಆಮೇಲೆ ಎಷ್ಟು ಫೀಸು ಅಂತ ಹೇಳ್ತೀನಿ."

"ಸರಿ. ಇದ್ರಲ್ಲಿ ಹುಡುಗಿಯ ಫೋಟೋ, ಅವಳು ಇರುವ ಮನೆಯ ಅಡ್ರೆಸ್. ಓದಿದ ಕಾಲೇಜಿನ ಹೆಸರು ಎಲ್ಲಾ ಇದೆ." ಎನ್ನುತ್ತಾ ಒಂದು ಕವರನ್ನು ಅವನ ಮುಂದೆ ಇಟ್ಟಳು. ಅವನು ಕವರನ್ನೆತ್ತಿಕೊಂಡ. ಅಷ್ಟರಲ್ಲಿ ಅವನ ಟೇಬಲ್ಲಿನ ಮೇಲಿದ್ದ ಫೋನ್ ರಿಂಗಾಗಿತ್ತು.

"ಎಕ್ಸ್‌ಕ್ಯೂಸ್ ಮೀ" ಎಂದು ಹೇಳಿ ಫೋನನ್ನೆತ್ತಿಕೊಂಡ. ಅವನ ಮುಖ ಗಂಭೀರವಾಗಿತ್ತು. ಮಾತನ್ನು ಮುಗಿಸಿ ಈ ಕಡೆ ತಿರುಗಿದ. "ಈ ಕವರ್ ಇಲ್ಲಿರಲಿ. ನೋಡ್ಬಿಟ್ಟು, ಫೀಸ್ ಎಷ್ಟಾಗುತ್ತೆ ಅಂತ ಫೋನ್ ಮಾಡಿ ತಿಳಿಸ್ತೀನಿ. ಈಗ ಒಂದು ಅರ್ಜೆಂಟ್ ಕಾಲ್ ಬಂದಿದೆ. ಹೋಗಬೇಕಾಗಿದೆ." ಎಂದ ವಿನಮ್ರತೆಯಿಂದ.

"ಓ... ಕೇ.. ಹಾಗೇ ಮಾಡಿ... ನಿಮ್ಮ ತಂದೆಯ ಹೆಸರನ್ನು ಹೇಳಲೇ ಇಲ್ಲ ನೀವು..." ನೆನಪಿಸಿಕೊಂಡವಳಂತೆ ಕೇಳಿದಳು ಅವನನ್ನೇ ನೋಡುತ್ತಾ.

"ನನ್ನ ತಂದೆಯ ಹೆಸರನ್ನು ತಿಳ್ಕೊಂಡು ಏನ್ಮಾಡ್ತೀರಿ ಆಂಟಿ? ನಾನು ಸ್ವತಂತ್ರವಾಗಿ ಕೆಲಸ ಮಾಡೋನು, ನಮ್ಮ ತಂದೆಯ ಪ್ರಭಾವವಾಗಲೀ, ಶಿಫಾರಸ್ಸಾಗಲೀ ನನಗೆ ಬೇಕಿಲ್ಲ...." ಅವನು ಸ್ವಲ್ಪ ಒರಟಾಗಿ ಹೇಳಿದಾಗ ಅವಳು ಮೆತ್ತಗಾದಳು. ಅವಳು ಅತ್ತ ಹೋದ ಕೂಡಲೇ ಅಂದಿನ ಕೆಲಸದ ಕಡೆ ಗಮನ ಕೊಟ್ಟ. ಆದರೂ ಮಧ್ಯೆ ಮಧ್ಯೆ ಆಕೆ ಆಡಿದ ಮಾತುಗಳು ನೆನಪಿಗೆ ಬರುತ್ತಿದ್ದವು. ಅಷ್ಟರಲ್ಲಿ ತಾಯಿಯಿಂದ ಫೋನ್ ಬಂದಿತ್ತು.

"ಎಷ್ಟು ಹೊತ್ತಾಯ್ತಲ್ಲೋ, ಊಟಕ್ಕೆ ಬರ್ಲೇ ಇಲ್ಲ. ಡ್ರೈವರ್ ಕೈಲಿ ಅಲ್ಲಿಗೆ ಕಳಿಸ್ಲಾ? ನಿನ್ನ ಇಷ್ಟದ ಕಡುಬು ಚಟ್ನಿ ಮಾಡಿದೀನಿ." ಎಂದಿದ್ದಳು. ತಾಯಿಯ ಕಕ್ಕುಲತೆಗೆ ಹೃದಯ ಮೆತ್ತಗಾಗಿತ್ತು.

"ಮನೆಗೇ ಬರ್ತೀನಿ ಬಿಡಮ್ಮಾ. ಡ್ಯಾಡೀದು ಊಟ ಆಯ್ತಾ?" ಕೇಳಿದ.

"ಇಲ್ಲ. ಇವತ್ತು ಅವರು ಸೈಟ್ ಮೇಲೆ ಹೋಗಿದಾರಂತೆ. ಬರೋಕ್ಕಾಗಲ್ಲ ಅಂತ ಫೋನು ಮಾಡಿದ್ರು....ನೀನಾದ್ರೂ ಬಂದ್ರೆ, ಒಟ್ಟಿಗೇ ಕೂತು ಊಟ ಮಾಡೋಣ ಅಂತ. ಒಬ್ಬಳಿಗೇ ಬೇಜಾರಾಗ್ತಿದೆ."

"ಸರಿಯಮ್ಮ, ಈಗ್ಲೇ ಹೊರಟೆ." ಎನ್ನುತ್ತಾ ಟೇಬಲ್ ಮೇಲಿದ್ದ ಕೆಲವು ಪೇಪರ್ಸ್‌ಗಳನ್ನು ಕವರ್‌ಗಳನ್ನು ತನ್ನ ಬ್ರೀಫ್‌ಕೇಸ್‌ಗೆ ಹಾಕಿಕೊಂಡ. "ನಾನು ಊಟಕ್ಕೆ ಹೋಗ್ತಾ ಇದೀನಿ. ಯಾವುದಾದ್ರೂ ಅರ್ಜೆಂಟ್ ಫೋನ್ ಇದ್ದರೆ ನನಗೆ ಮನೆಗೆ ಫೋನ್ ಮಾಡಿ ತಿಳಿಸಿ." ಎಂದು ಹೇಳಿ ಆಫೀಸಿನಿಂದ ಹೊರ ಬಿದ್ದ. ಕಾರಿನ ಬಳಿಗೆ ಬಂದಾಗ ವಿನುತಳ ನೆನಪಾಗಿತ್ತು. ಅವಳಿಗೆ ಫೋನ್ ಮಾಡಿದ. ಆದರೆ ಯಾರೂ ಎತ್ತಲಿಲ್ಲ.

ಮನೆಯ ಮುಂಬಾಗಿಲು ತೆಗೆದೇ ಇತ್ತು. ಸೀದಾ ಒಳಗೆ ಬಂದ. ತಾಯಿ ಯೊಡನೆ ಯಾರೋ ಮಾತನಾಡುತ್ತಿರುವಂತೆನ್ನಿಸಿತ್ತು. ಸದ್ದು ಮಾಡದೇ ವರಾಂಡದ ಬಾಗಿಲಿನಲ್ಲಿ ನಿಂತು ಸಂಭಾಷಣೆಯನ್ನು ಆಲಿಸಿದ. ಬಂದಿರುವವರು ಯಾರೆಂದು ತಿಳಿಯಲಿಲ್ಲ. ಅಲ್ಲಿಯೇ ನಿಂತು "ಅಮ್ಮಾ...." ಎಂದ.

"ಮುರಳಿ ಬಂದ ಅಂತ ಕಾಣುತ್ತೆ...." ತಾಯಿ ಹೊರಬಂದಳು.

"ಯಾರೋ ಬಂದಿರುವಂತಿದೆ." ಪಿಸುದನಿಯಲ್ಲಿ ಬೇಸರದಿಂದ ಕೇಳಿದ.

"ಹೂಂ, ನನ್ನ ಹಳೇ ಸ್ನೇಹಿತೆ ಬಂದಿದಾಳೆ." ನಗುತ್ತಾ ಹೇಳಿದಳು.

"ಫೋನ್ ಮಾಡಿ' ಹೇಳಿದ್ದಿದ್ರೆ, ನಿಧಾನವಾಗಿ ಬರ್ತೀದ್ದೆ."

"ಪರವಾಗಿಲ್ಲ ಬಿಡು. ಇಬ್ಬರೂ ಒಟ್ಟಿಗೇ ಕೂತು ಊಟ ಮಾಡೋರಂತೆ."

"ಇಲ್ಲಮ್ಮ. ನಾನು ಯಾರ್‍ಯಾರ ಜತೆಯೋ ಕೂತು ಊಟ ಮಾಡೋಲ್ಲ.... ಅವರು ಹೋಗ್ಲಿ. ಆಮೇಲೆ ಬರ್ತೀನಿ." ಹಿಂತಿರುಗಿ ಹೊರಬಿದ್ದವನನ್ನು ಹಿಡಿದು ನಿಲ್ಲಿಸಿದಳು.

"ಮುರಳಿ, ಇದು ಸರಿಯಲ್ಲ. ಶೂಸ್ ಬಿಚ್ಚಿ ಊಟದ ಮನೇಲಿ ಕೂತ್ಕೋ, ನಾನೇ ಬಡಿಸ್ತೀನಿ." ಎಂದಳು. ಮುರಳಿ ಅಸಹನೆಯಿಂದ ಷೂಗಳನ್ನು ಬಿಚ್ಚಿ, ಕೈಕಾಲು ತೊಳೆದು ಬರಲು ಬಚ್ಚಲು ಮನೆಯ ಕಡೆಗೆ ನಡೆದ. ಕೈಗಳನ್ನು ಒರೆಸಿಕೊಂಡು ಊಟದ ಟೇಬಲ್ ಬಳಿ ಬಂದು, ತಟ್ಟೆಯನ್ನು ತನ್ನ ಕಡೆಗೆ ಎಳೆದುಕೊಂಡು ಕೂತ.

"ಅಮ್ಮ.... ಬೇಗ ಬಡಿಸು.... ಹೊತ್ತಾಗುತ್ತೆ." ಕೂಗಿದ. ಪಾತ್ರೆಯನ್ನು ಹಿಡಿದು ಬಡಿಸಲು ಬಂದ ಹೆಂಗಸಿನ ಕೈ ಅಮ್ಮನದಲ್ಲ ಎಂದು ತಿಳಿಯಲು ತಡವಾಗಲಿಲ್ಲ. ಹುಬ್ಬುಗಂಟಿಕ್ಕಿ ಕತ್ತೆತ್ತಿದ. ವಿನುತ ಮುಗುಳ್ನಕ್ಕಳು. ದೃಷ್ಟಿ ಅಲ್ಲೇ ನಿಂತಿತು.

"ನೀನಾ? ಏನ್ಮಾಡ್ತಿದೀಯ ನೀನಿಲ್ಲಿ?" ಅಚ್ಚರಿಯಿಂದ ಕೇಳಿದ.

"ನಿಂಗೆ ಬಡಿಸ್ತಿದೀನಿ...." ಕಿಲಕಿಲ ನಕ್ಕಳು.

"ಅದು ಗೊತ್ತಾಯ್ತು. ನೀನ್ಯಾವಾಗ ಬಂದೆ? ಯಾಕ್ಬಂದೆ?"

"ನಾನೇ ವಿನುತನ್ನ ಕರೆದೆ ಮುರಳಿ. ಅವಳಿಗೆ ಕಡುಬು ಅಂದ್ರೆ ತುಂಬಾ ಇಷ್ಟ ಅಂತ ಹೇಳಿದ್ಲು." ತಾಯಿ ಹೇಳಿದಳು.

ವಿನುತಾ ಬಿಸಿಬಿಸಿ ಕಡುಬುಗಳನ್ನು ಹಾಕಿ, ಕರಗಿಸಿದ ತುಪ್ಪವನ್ನು ಮೇಲೆ ಹಾಕಿ ಚಟ್ನಿಯನ್ನು ಬಡಿಸಿದಳು. "ನೀನು ತಿಂದಾಯ್ತಾ?" ಅವಳನ್ನು ಕೇಳಿ ತಾಯಿಯ ಕಡೆ ನೋಡಿದ.

"ನಂದೂ, ಅವಳದ್ದೂ ಇಬ್ರದ್ದೂ ಆಯ್ತು. ನಿನ್ನ ಡ್ಯಾಡೀನು ಬರೋಲ್ಲ ಅಂತಂದ್ರಲ್ಲ.... ನಿಂಗೆ ಫೋನು ಮಾಡ್ದೆ.... ನೀನು ತಡ ಮಾಡ್ದೆ."

"ವಿನುತಾ ಬಂದಿದಾಳೆ ,ಅಂತ ಹೇಳ್ಬಾರ್ದಾಗಿತ್ತಾ? ನಾನು ಯಾರೋ ಸ್ನೇಹಿತೆ ಅಂತ ಅಂದ್ಕೊಂಡಿದ್ದೆ." ಎನ್ನುತ್ತಾ ಕಡುಬನ್ನು ಮುರಿದು ಚಟ್ನಿಯೊಂದಿಗೆ ನಿಧಾನವಾಗಿ ಸವಿದ.

"ನೋಡೋಣ ನೀನು ಗುರುತು ಹಿಡಿತೀಯೇನೋ ಅಂತ ಅಂದ್ಕೊಂಡೆ.... ನೀನು ಅತ್ತ ತಿರುಗ್ಲೇ ಇಲ್ಲ." ತಾಯಿ ರೇಗಿಸಿದಳು.

"ನೀನಾದ್ರೂ ಹೇಳ್ಬಾರ್ದಾಗಿತ್ತಾ? ಗುಟ್ಟೇನು?" ವಿನುತಳ ಮೇಲೆ ರೇಗಿದ.

"ಅವಳನ್ಯಾಕೆ ಬೈತೀಯಾ? ನಾನೇ ಹೇಳ್ಬೇಡ ಅಂತಂದೆ."

"ಅವಳ ಪರ ಯಾಕೆ ವಹಿಸ್ಕೊಂಡು ಮಾತಾಡ್ತೀಯ?"

"ಅವಳು ನನಗೆ ಇಷ್ಟವಾದವಳು. ಅದಕ್ಕೇ... ಚಿಕ್ಕವಳಾಗಿದ್ದಾಗ ಆಗ ಈಗ ತಂಗಿಯನ್ನು ಕರೆದ್ಕೊಂಡು ಬರ್ತಿದ್ಲು. ಈಗ ಬರೋದೇ ಅಪರೂಪವಾಗಿದೆ."

"ಸದ್ಯದಲ್ಲೇ ಮದುವೆ ಮಾಡ್ಕೊಂಡು ಗಂಡನ ಮನೆಗೆ ಹೊರಟು ಹೋಗ್ತಾಳೆ. ಆಮೇಲೆ ಎಲ್ಲಿ ಬರ್ತಾಳೆ? ಇನ್ನೂ ನಾಲ್ಕು ಕಡುಬನ್ನು ತಿನ್ನಿಸು..." ವಿನುತ ಆಕೆಗೆ ಕಾಣದಂತೆ ಮುರಳಿಯ ಬೆನ್ನ ಮೇಲೆ ಸಣ್ಣಗೆ ಏಟು ಹಾಕಿದಳು.

"ಹೂಂ, ಹೇಳಿದ್ಲು...." ತಾಯಿ ಉತ್ತರ ಎಂಬಂತೆ ಹೇಳಿದಾಗ, ಮುರಳಿ ಅಚ್ಚರಿಯಿಂದ ಅವಳ ಕಡೆ ನೋಡಿದ. ಅವಳು ನಸುನಕ್ಕಳು. ಅಷ್ಟರಲ್ಲಿ ತಾಯಿ ಗಸಗಸೆಯ ಪಾಯಸವನ್ನು ಬಿಸಿ ಮಾಡಿ ತಂದಿತ್ತಳು.

"ಇವತ್ತೇನಾದ್ರೂ ಹಬ್ಬಾನಾ? ಪಾಯಸ ಮಾಡಿದ್ದೀಯಲ್ಲ."

"ವಿನುತಾನೂ ಬಂದ್ಲಲ್ಲ. ಮಾಡೋಣ ಅಂತ ಅನ್ನಿಸ್ತು."

"ವಿನುತಾಗೆ ಇಷ್ಟ ಅಂತ ಕಡುಬು, ಪಾಯಸ ಎಲ್ಲಾ ಮಾಡಿದೀಯಲ್ಲ. ನನಗೋಸ್ಕರ ಏನನ್ನೂ ಮಾಡಿಲ್ಲ. ನಿನಗೆ ನನ್ಮೇಲೆ ಪ್ರೀತಿ ಕಡಿಮೆ ಆಗಿದೆ." ತಾಯಿಯನ್ನು ಹಗುರವಾಗಿ ರೇಗಿಸಿದ.

"ನಿಂಗೇನು ಬೇಕು ಹೇಳು.... ನಾನು ಈಗ್ಲೇ ಮಾಡ್ತೀನಿ."

"ಈಗೇನೂ ಬೇಡ ಬಿಡು. ಇನ್ನೆಂದಾದ್ರೂ ಹೇಳ್ತೀನಿ." ಎನ್ನುತ್ತಾ ಬೇಗ ಬೇಗ ಊಟವನ್ನು ಮುಗಿಸಿ, ಹಾಲಿನಲ್ಲಿ ಕುಳಿತ. ಫೋನು ರಿಂಗಾಗಿತ್ತು. ಮಧುಸೂದನ ಫೋನ್ ಮಾಡಿದ್ದ.

"ನಾನು ನಿಮ್ಮನ್ನು ಅರ್ಜೆಂಟಾಗಿ ನೋಡ್ಬೇಕಾಗಿತ್ತು. ನಿಮ್ಮ ಆಫೀಸಿಗೆ ಬರ್ತೀನಿ." ಎಂದ, ಇವನು ತನ್ನಲ್ಲೇ ನಕ್ಕೊಂಡ.

"ಬೇಡ, ನಾನು ಆಫೀಸ್ನಲ್ಲಿಲ್ಲ. ಮನೇಲಿದೀನಿ, ಇಲ್ಲಿಗೇ ಬನ್ನಿ." ಎಂದು ತನ್ನ ಮನೆಯ ವಿಳಾಸವನ್ನು ತಿಳಿಸಿದ. ಹಾಗೇ ಜ್ಞಾಪಿಸಿಕೊಂಡವನಂತೆ, ಬ್ರೀಫ್‌ಕೇಸನ್ನು ತೆರೆದು ಆಕೆ ಕೊಟ್ಟ ಕವರನ್ನು ತೆರೆದ. ಅದರಲ್ಲಿದ್ದ ಫೋಟೋ ಎತ್ತಿ ನೋಡಿದ. ಬೆಚ್ಚಿ ಬೀಳುವಂತಾಗಿತ್ತು. ವಿನುತಳ ಫೋಟೋ.... ಆಕೆ ವಿನುತಳ ಬಗ್ಗೆ ಸಂಶಯವನ್ನು ಹೊರಗೆಡಹಿದ್ದಾಳೆ. ವಿನುತ ಈ ವಿಷಯವನ್ನು ತನಗೆ ಹೇಳಿಲ್ಲ.... ಹಾಗಾದ್ರೆ ಇನ್ನೂ ಒಂದು ಇಂಟರ್‌ವ್ಯೂ ನಡೆಯಲಿದೆ. ಯಾವಾಗ ನಡೆಯಬಹುದು? ವಿನುತನ್ನ ವಿಚಾರಿಸಿದರೆ ತಿಳಿಯುತ್ತೆ. ಆದರೆ ಇಲ್ಲಿ ಅಮ್ಮನ ಎದುರಿಗೆ ವಿಚಾರಿಸುವುದು ಹೇಗೆ? ಎಂದು ಬೇಸರದಿಂದ ಎಲ್ಲವನ್ನೂ ಕವರ್‌ನ

ಒಳಗಡೆ ಹಾಕಿ ಅಲ್ಲಿದ್ದ ಟೀಪಾಯ್ ಮೇಲೆ ಇಟ್ಟು, ಕಣ್ಣುಗಳನ್ನು ಮುಚ್ಚಿ ಕುಳಿತ.

ವಿನುತಾ, ನಗುನಗುತ್ತಾ ನನಗೆ ಬಡಿಸಿದಳು. ಅವಳು ಸದಾಕಾಲವೂ ಇಲ್ಲಿಯೇ ನಮ್ಮ ಮನೆಯಲ್ಲಿಯೇ ಇರುವಂತೆ ಹೇಗೆ ಮಾಡುವುದು? ನಾನು ಅವಳನ್ನು ಪ್ರೀತಿಸುತ್ತಿರುವ ವಿಷಯವನ್ನು ತಾಯಿಗೆ ತಿಳಿಸಿಲ್ಲ.... ತಿಳಿದರೆ ಪ್ರತಿಕ್ರಿಯೆ ಏನು? ಹಾಗೇ ತೂಕಡಿಕೆ ಪ್ರಾರಂಭವಾಗಿ ಸಣ್ಣಗೆ ನಿದ್ದೆ ಹತ್ತಿತು.

"ಮುರಳಿ.... ಮುರಳೀ.... ಮಧುಸೂದನ್ ಬಂದಿದಾರೆ." ವಿನುತಾ ಬಳಿಯಲ್ಲಿ ನಿಂತು ಎಬ್ಬಿಸಿದಳು.... ಮುರಳಿ ಎಚ್ಚರಗೊಂಡು ಕಣ್ಣುಗಳನ್ನು ಬಿಟ್ಟ. ಅತಿ ಸಮೀಪದಲ್ಲಿ ನಿಂತು ವಿನುತಾ, ಪಿಸುದನಿಯಲ್ಲಿ ಮತ್ತೆ ನುಡಿದಳು.

"ಹೌದಾ....? "

ಕಣ್ಣುಗಳನ್ನು ಹೊಸಕಿಕೊಂಡ, "ಅಮ್ಮಾ, ಎಲ್ಲಿ?"

"ಅವರು ಅವರ ಹತ್ರ ಮಾತಾಡ್ತಿದಾರೆ...." ಮುರಳಿ ತಟ್ಟನೆ ಎದ್ದು ಕುಳಿತ.

"ಮುರಳಿ ಗಾಬರಿ ಯಾಕೆ? ಅವರ‍್ಯಾಕೆ ಇಲ್ಲಿಗೆ ಬಂದಿದಾರೆ?"

"ನಿನ್ಹತ್ರ ಮಾತಾಡಕ್ಕೆ ಬಂದಿರಬಹುದು..." ನಿದ್ದೆಗಣ್ಣಲ್ಲೂ ತಮಾಷೆ ಮಾಡಿದ.

"ನನ್ಹತ್ರ ಏನಿದೆ ಮಾತು? ಎಲ್ಲಾ ಮುಗಿದಿದೆಯಲ್ಲ. ಆಂಟಿ ಏನು ಹೇಳಿ ಬಿಡ್ತಾರೋ? ಸ್ವಲ್ಪ ಎದ್ದು ನೋಡ್ತೀಯಾ?"

"ಅಮ್ಮಂಗೆ ಅವನ್ಯಾರು ಅಂತ ಗೊತ್ತಾ? ಹೇಳಿದ್ನಾ? ನಿನ್ನನ್ನ ಕಂಡ್ನಾ?"

"ಇಲ್ಲ ಮುರಳೀ.... ನಾನು ಇಲ್ಲೇ ಒಳಗೇ ಇದೀನಿ. ಪ್ಲೀಸ್ ಬೇಗ ಹೋಗು."

"ಈಗ ಏನು ಅಂಥಾ ಆತಂಕ? ಅವನನ್ನೇ ಮದುವೆಯಾಗಿ ಹೋಗೋ ಆಸೆ ಇಲ್ವಾ?" ಚುಡಾಯಿಸಿದ.

"ಈಗ ಆ ಮಾತೆಲ್ಲಾ ಯಾಕೆ? ಆಂಟಿ ಏನಂದ್ಕೊಳ್ತಾರೆ? ಅವನನ್ನು ಬೇಗ ಮಾತನಾಡಿಸಿ ಕಳಿಸು.... ನಾನೂ ಮನೆಗೆ ಹೋಗ್ತೀನಿ."

"ಸರಿ...." ಎಂದು, ಬಚ್ಚಲು ಮನೆಗೆ ಹೋಗಿ ತಣ್ಣೀರಿನಲ್ಲಿ ಮುಖ ತೊಳೆದು ಬಂದ. ಕನ್ನಡಿಯ ಮುಂದೆ ನಿಂತು ತಲೆಗೂದಲನ್ನು ಬಾಚಿಕೊಂಡು, ಅವಳ ಕಡೆ ತಿರುಗಿದ. ಅವಳು ಅವನನ್ನೇ ಮೆಚ್ಚುಗೆಯಿಂದ ನೋಡುತ್ತಿದ್ದಳು.

"ಈ ರಾಜಕುಮಾರ ಬೇಕೋ? ಆ ಮಂತ್ರಿಕುಮಾರ ಬೇಕೋ? ನಿರ್ಧರಿಸು."

• "ನನ್ನ ನಿರ್ಧಾರ ಏನು ಅಂತ ನಿಂಗೆ ಗೊತ್ತಿದೆ."

"ಹಾಗಾದ್ರೆ ನೀನೂ ಬಾ...." ಅವಳ ಕೈ ಹಿಡಿದು ಎಳೆದ. ಅವಳು ಕೊಸರಿಕೊಂಡಳು.

"ಈಗ್ಯಾಕೆ ನಾಚಿಕೆ? ಇಂಟರ್‌ವ್ಯೂ ಮುಗಿದಿದೆಯಲ್ಲ."

"ಆದ್ರೂ ನಾನು ಬರೊಲ್ಲಪ್ಪಾ...."

"ಅವನನ್ನು ಸರಿಯಾಗಿ ಇನ್ನೊಮ್ಮೆ ನೋಡುವಿಯಂತೆ ಬಾ...."

"ನೋಡಿದೀನಿ.... ಒಂದು ಆಶ್ಚರ್ಯ ಗೊತ್ತಾ? ನೀನೂ ನೋಡಿದೀಯಲ್ಲ. ನಿನಗೆ ಅವನನ್ನು ನೋಡಿ ಏನನ್ನಿಸ್ತು?"

"ನಂಗೆ ಅನ್ನೋದು ಮುಖ್ಯವಲ್ಲ. ನಿಂಗೇನನ್ನಿಸ್ತು? ಅದನ್ನು ಹೇಳು?"

"ಅವನೂ.... ಅವನೂ...." ಹೇಳಲಾಗದೇ ತಡವರಿಸಿದಳು.

"ಅವನು ನನ್ನಾಗೇ ಇದಾನೆ ಅಲ್ವಾ? ನಾನೂ ಅವನೂ ಟ್ವಿನ್ಸ್..." ನಗುತ್ತಾ ಹೇಳಿದ.

"ನಿಜವಾಗ್ಲೂ....?" ಕಣ್ಣರಳಿಸಿದಳು.

"ಹಿಂದಿನ ಜನ್ಮದಲ್ಲಿ...." ಎಂದು ಬಾಯಿಬಿಟ್ಟು ನಕ್ಕು, ಅವಳ ಕೆನ್ನೆಗೆ ಸಣ್ಣಗೆ ಒಂದೇಟನ್ನು ಹೊಡೆದು ಹೊರನಡೆದ. ಅವನು ಹೋದ ಕೆಲವೇ ನಿಮಿಷಗಳಲ್ಲಿ ವತ್ಸಲಾ ಒಳಕ್ಕೆ ಬಂದಿದ್ದಳು. ಅವಳ ಕಣ್ಣುಗಳಲ್ಲಿ ಆಶ್ಚರ್ಯದ ಹೊನಲು ತುಳುಕಿತ್ತು. ವಿನುತಳ ಬಳಿ ಬಂದು ಪಿಸುದನಿಯಲ್ಲಿ ನುಡಿದಳು.

"ವಿನುತಾ.... ನೀನು ಮಧುಸೂದನನ್ನ ನೋಡಿದ್ರೆ ದಂಗಾಗಿ ಬಿಡ್ತೀಯಾ... ಮುರಳಿ ನಂಗೆ ಹೇಳಿರ್ಲೇ ಇಲ್ಲ. ನಿಂಗೊತ್ತಾ... ಅವನು ಥೇಟ್ ನಮ್ಮ ಮುರಳಿ ಇದ್ದಾಗೇ ಇದಾನೆ."

ವಿನುತಾ ಉತ್ತರಿಸಲಿಲ್ಲ. ಸುಮ್ಮನೇ ಅವಳನ್ನೇ ನೋಡಿದಳು. "ಯಾರಾದ್ರೂ ಗೊತ್ತಿಲ್ದೋರು ನೋಡಿದ್ರೆ ಅವಳಿ ಮಕ್ಕಳು ಅಂತ್ಲೇ ಅಂದ್ಕೋತಾರೆ." ಅಷ್ಟರಲ್ಲಿ ಮುರಳಿ ಒಳಗೆ ಬಂದ.

"ನಾನು ಈಗ್ಲೇ ಅವನ ಜೊತೇಲಿ ಹೊರಗೆ ಹೋಗ್ಬೇಕು." ಎಂದ.

"ಮುರಳಿ... ನಿನ್ನ ಸ್ನೇಹಿತನ ಬಗ್ಗೆ ನಂಗೆ ಹೇಳೇ ಇರ್ಲಿಲ್ಲ ನೀನು.....ಕಾಫೀ ತಿಂಡೀನ ಕೊಡ್ತೀನಿ... ಸ್ವಲ್ಪ ತಡೀ..."

"ಏನೂ ಬೇಡ. ಅವನು ನನ್ನ ಕ್ಲೈಂಟ್. ಹೊರಗೆ ಎಲ್ಲಾದ್ರೂ ಅವನೇ ನಂಗೆ ತಿಂಡಿ ಕಾಫೀನ ಕೊಡಿಸ್ತಾನೆ ಬಿಡು."

"ಆದ್ರೂ ಅವನನ್ನು ನೋಡಿದ್ರೆ ಹೊಸಬ ಅಂತ ಅನ್ಸಲ್ಲ. ಹಳೇ ಸಂಬಂಧ ಇದೆ ಅಂತ ಅನ್ಸುತ್ತೆ. ನಿಂಗೆ ಹಾಗೆ ಅನ್ನಿಸೋಲ್ವಾ?"

"ಅವನು ನನ್ನಾಗೇ ಇದಾನೆ ಅಂತ ನೀನ್ಯಾಕೆ ಹೀಗೆ ಎಕ್ಸೈಟ್ ಆಗ್ತೀಯ? ಯಾರೋ ಏನೋ.... ಎಷ್ಟೋ ಜನ ಹೀಗೇ ಒಬ್ಬರನ್ನೊಬ್ಬರು ಹೋಲುತ್ತಾರೆ" ಎನ್ನುತ್ತಾ ತನ್ನ ಬ್ರೀಫ್‌ಕೇಸನ್ನೆತ್ತಿಕೊಂಡು ಹೊರನಡೆದ. ಅವನು ಹೊರಕ್ಕೆ ತೆಗೆದಿಟ್ಟಿದ್ದ, ಮಂಜುಳಾ ಕೊಟ್ಟ ಕವರ್ ಅಲ್ಲೇ ಉಳಿಯಿತು.

"ಅಂಟೀ ನಾನೂ ಮನೆಗೆ ಹೋಗ್ತೀನಿ...."

"ಯಾಕೇ ವಿನುತಾ? ಮುರಳಿ ಹೊರಟು ಬಿಟ್ರೇ ನೀನೂ ಹೋಗಿ ಬಿಡ್ಬೇಕಾ?"

"ಹಾಗಲ್ಲ ಆಂಟೀ, ನಾನು ಬಂದು ಎಷ್ಟೊತ್ತಾಯ್ತಲ್ಲ. ಸರಿತಾ ಬರೋ ಹೊತ್ತಾಯ್ತು. ಅಮ್ಮನೂ ವಾಪಸ್ಸು ಬಂದಿದಾಳೋ ಇಲ್ವೋ ಅಂತ... ಬೀಗ ಹಾಕಿದೆಯಲ್ಲಾ."

"ಸರಿ ಹೋಗೂವಂತೆ, ಸರಿತಾಗೆ ಅಂತ ಒಂದಿಷ್ಟು ಕಡುಬುಗಳನ್ನು ಡಬ್ಬಿಗೆ ಹಾಕಿ ಕೊಡ್ತೀನಿ." ಎನ್ನುತ್ತಾ ವತ್ಸಲಾ ಅಡಿಗೆಮನೆಗೆ ಹೋದಳು. ಡಬ್ಬಿಯನ್ನು ಹಿಡಿದು, ಹಾಗೇ ಕಾಫಿಯ ಲೋಟಗಳನ್ನು ತಂದಿತ್ತಳು.

"ಆಂಟೀ, ಕಾಫೀನೂ ಮಾಡಿದ್ರಾ?"

"ಹೂಂ, ನೀನೂ ಹೊರಟು ಹೋದ್ಮೇಲೆ, ನಾನೊಬ್ಬೇ ಕಾಫೀನ ಕುಡಿಯೋಕೆ ಬೇಜಾರಾಗುತ್ತೆ. ಹೂಂ ತಗೋ." ಇಬ್ಬರೂ ಕಾಫಿಯನ್ನು ಕುಡಿದರು. ಮನೇಲಿ ನಾನೊಬ್ಬಳೇ ಇರುವಾಗ ತುಂಬಾ ಬೇಜಾರಾಗುತ್ತೆ. ಅದಕ್ಕೇ, ಆದಷ್ಟು ಬೇಗ ಮುರಳಿಗೆ ಮದುವೆ ಮಾಡೋಣ ಅಂತ ಅಂದ್ಕೊಂಡಿದೀನಿ." ವಿನುತಾಳ ಕೈ ನಡುಗಿ ಕಾಫಿ ತುಳುಕಿತು. ವತ್ಸಲಾ ಓರೆಗಣ್ಣಿನಿಂದ ಅವಳ ಕಡೆ ನೋಡಿದಳು. ವಿನುತಾ ತಲೆ ತಗ್ಗಿಸಿದಳು.

"ಮಾರಾಯ ಮದುವೆ ಮಾತೆತ್ತಿದರೆ ಮೌನವಾಗಿಬಿಡ್ತಾನೆ... ಅವನು ಯಾರನ್ನಾದ್ರೂ ಪ್ರೀತಿಸಿದ್ರೆ ಅವಳನ್ನೇ ಮದುವೆಯಾಗಲಿ. ನನಗೆ ಯಾವ ಬೇಸರವೂ ಇಲ್ಲ." ವಿನುತಳ ಮುಖ ಅರಳಿತು. ಅವಳು ತನ್ನನ್ನೇ ಗಮನಿಸುತ್ತಿರುವಳೆಂದು ಅರಿವಾಗಿತ್ತು. ಮುಖ ಕೆಂದಾವರೆಯಾಯಿತು. "ವಿನುತಾ, ನೀನು ಒಂದು ಕೆಲಸ ಮಾಡ್ತೀಯಾ? ಅವನ ಮನಸ್ನಲ್ಲಿ ಏನಿದೆ? ಅವನ ಹೃದಯದಲ್ಲಿ ಯಾರಿದಾರೆ ಅಂತ ತಿಳ್ಕೊಂಡು ನಂಗೆ ಹೇಳ್ತೀಯಾ?"

"ನಾನಾ?" ತಬ್ಬಿಬ್ಬುಗೊಂಡಳು.

"ನಾನ್ಹೇಗೆ ಕೇಳ್ಲೀ ಆಂಟಿ? ನಂಗೆ ಹೇಳ್ತಾನೋ ಇಲ್ವೋ... ಇದು ಅವನ ಪರ್ಸನಲ್ ವಿಷಯ."

"ನೀವಿಬ್ರೂ ಒಳ್ಳೆಯ ಸ್ನೇಹಿತರು ಅಂತ ನಂಗೊತ್ತು... ನಿನ್ನ ಹತ್ತಿರ ಸಲುಗೆ ಇದೆ. ನಾನು ಎಷ್ಟಾಗಲೀ ತಾಯಿ, ನಂಗೆ ಹೇಳೋಕೆ ಸಂಕೋಚವಾಗಬಹುದು."

"ನೋಡೋಣ, ಪ್ರಯತ್ನ ಪಡ್ತೀನಿ." ವಿನುತಾ ಎದ್ದು ಕಾಫಿಯ ಲೋಟಗಳನ್ನು ತೊಳೆದು ಜೋಡಿಸಿಟ್ಟು ಬಂದಳು. ತಿಂಡಿಯ ಡಬ್ಬಿಗಳನ್ನು ಎತ್ತಿಕೊಂಡು ಹೊರಟಳು. ಅವಳನ್ನು ಕಳಿಸಿ ಒಳ ಬಂದ ವತ್ಸಲಾ, ಟೀಪಾಯ್ ಮೇಲಿದ್ದ ಪೇಪರನ್ನು ಸರಿಮಾಡುವಾಗ, ಮುರಳಿ ಬಿಟ್ಟು ಹೋಗಿದ್ದ ಕವರ್ ಕಣ್ಣಿಗೆ ಬಿತ್ತು. ತೆರೆದು ನೋಡಿದಳು. ಅದರಲ್ಲಿ ವಿನುತಾಳ ಫೋಟೋ ಕಂಡಿತು. ಮನದಲ್ಲಿ

ಕಿರುನಗೆ ಮೂಡಿತು. 'ನನ್ನ ಅನಿಸಿಕೆ ನಿಜವಾಗಿದೆ. ಮುರಳಿ ವಿನುತಾನ್ನ ಪ್ರೀತಿಸ್ತಿದಾನೆ' ಅದಕ್ಕೆ ಅವಳ ಫೋಟೋ ತನ್ನ ಬಳಿ ಇಟ್ಟುಕೊಂಡಿದಾನೆ. ಎಂದುಕೊಂಡು ಅದನ್ನು ಮಾತ್ರ ತೆಗೆದಿಟ್ಟುಕೊಂಡು, ಉಳಿದ ಪತ್ರಗಳ ಕಡೆ ಗಮನ ಕೊಡದೆ ಹಾಗೇ ಫೋನಿನ ಬಳಿ ಇಟ್ಟು ತನ್ನ ರೂಮಿಗೆ ಹೊರಟು ಹೋದಳು. ತನ್ನ ಕಬೋರ್ಡಿನಲ್ಲಿನ ಡ್ರಾಯರ್ ಒಳಗೆ ಫೋಟೋವನ್ನಿಟ್ಟು ಹಾಸಿಗೆಯ ಮೇಲೆ ಉರುಳಿ ಕೊಂಡಳು. ಮನ ವಿನುತಳ ಸುತ್ತ ತಿರುಗಿತು.

'ವಿನುತಾ ಸುಂದರಿಯಲ್ಲ. ಆದರೆ ನನಗೂ ಹಿಡಿಸಿದ್ದಾಳೆ. ತಾನು ಅವಳನ್ನು ಚಿಕ್ಕ ವಯಸ್ಸಿನಿಂದ ಬಲ್ಲೆ. ನನ್ನ ಬಗ್ಗೆ ಅವಳಿಗೆ ಗೌರವವಿದೆ. ಪ್ರೀತಿ ಇದೆ. ಮುರಳಿಯ ಬಗ್ಗೆ ಒಲವು ಇದೆ, ಸ್ನೇಹವಿದೆ. ರೂಪವತಿ ಅಲ್ಲದಿದ್ದರೇನಾಯ್ತು? ಗುಣ ಚೆನ್ನಾಗಿದ್ದರೆ ಸಾಕು. ನನ್ನ ಗಂಡನೊಡನೆ ಮಾತನಾಡಬೇಕು. ಆದಷ್ಟು ಬೇಗ ವಿನುತಾ ಈ ಮನೆಗೆ ಸೊಸೆಯಾಗಿ ಬಂದರೆ ನನ್ನ ಒಂಟಿತನ ಕಡಿಮೆ ಆಗುತ್ತೆ. ಆದರೆ ಗಂಡನ ಮನಸ್ಸಿನಲ್ಲಿ ಏನಿದೆಯೋ? ಹಾಗೇ ವಿನುತಾಳ ಮನಸ್ಸಿನಲ್ಲಿ ಏನಿದೆಯೋ ಯಾರು ಬಲ್ಲರು. ಎಂದೂ ತನ್ನ ಮನದ ಆಸೆಯನ್ನು ವ್ಯಕ್ತಪಡಿಸಿಲ್ಲ. ಮುರುಳಿಯ ಪತ್ತೇದಾರಿಕೆ... ಕೆಟ್ಟವರ ಕುತಂತ್ರಗಳ ರಹಸ್ಯವನ್ನು ಕಂಡು ಹಿಡಿಯುವುದು... ಇವನ ಒಡನಾಟ ಅಂಥವರೊಂದಿಗೇ ಇರಬಹುದು... ಇಂಥವನನ್ನು ಇವಳು ಮೆಚ್ಚುತ್ತಾಳೆಯೇ? ಎಲ್ಲಾ ತಿಳಿದ ಇವಳೇ ಮೆಚ್ಚದಿದ್ದರೇ, ಬೇರೆ ಯಾವ ಹುಡುಗಿಯಾದರೂ ಹೇಗೆ ಸಿಕ್ಕಾಳು? ಮೊದಲು ಈ ಕೆಲಸವನ್ನು ಬಿಟ್ಟು ಬಿಡು, ಒಂದು ಒಳ್ಳೆಯ ಕೆಲಸವನ್ನು ಹುಡುಕಿಕೋ ಅಂತ ಹೇಳಬೇಕು. ನನ್ನ ಮಾತನ್ನು ಕೇಳ್ತಾನೋ... ಇಲ್ಲವೋ? ತಂದೆಗೆ ಮಗನ ಈ ವೃತ್ತಿಯ ಬಗ್ಗೆ ಯಾವ ತಕರಾರೂ ಇಲ್ಲ. ವಿನುತಂಗೆ ಹೇಳ್ಬೇಕು. ಅವಳ ಮಾತನ್ನು ಕೇಳಿದರೂ ಕೇಳಬಹುದು.' ಎಂದು ಯೋಚಿಸುತ್ತಿದ್ದವಳಿಗೆ ಹಾಗೇ ನಿದ್ದೆ ಹತ್ತಿತು. ಮನೆಯ ಮುಂದೆ ಜೀಪು ಬಂದು ನಿಂತ ಸದ್ದಿಗೆ ಎಚ್ಚರಗೊಂಡಳು.

ಟೀಪಾಯ್ ಮೇಲಿದ್ದ ಕಾಗದಗಳ ಕಡೆ ಗಮನ ಹರಿಸಿದ ಪುರುಷೋತ್ತಮ ಮೇಲಿದ್ದ ಕವರನ್ನು ಕೈಗೆತ್ತಿಕೊಂಡ. ಒಳಗಿದ್ದ ಹಾಳೆಯನ್ನು ಹೊರತೆಗೆದ. ವಿವರಗಳನ್ನು ಓದಿಕೊಂಡ. ಪೋಲೀಸ್‌ನ ಮೆದುಳು ಚುರುಕಾಯಿತು. ಮತ್ತೊಮ್ಮೆ ಓದಿಕೊಂಡ. ಗಲಿಬಿಲಿಗೊಂಡು, ಆ ಕವರನ್ನು ತನ್ನ ಕೈಯಲ್ಲಿ ಮಡಿಸಿ ಹಿಡಿದು ಕೊಂಡು ತನ್ನ ರೂಮಿಗೆ ಬಂದ. ಮಲಗಿದ್ದ ವತ್ಸಲಾ ಎದ್ದು ಕುಳಿತಳು.

"ಲೇಟಾಗುತ್ತೆ ಅಂತ ಅಂದ್ರೀ.... ಬೇಗನೇ ಬಂದಿದೀರಿ."

"ಹೂಂ, ಬೇಗ್ಬಂದೆ. ಬರಬಾರ್ದಾಗಿತ್ತಾ?" ಗಡುಸಾಗಿ ಕೇಳಿದ.

"ಛೇ... ಹಾಗೆನ್ನಲಿಲ್ಲ ನಾನು... ಮುರಳಿ ಈಗ ತಾನೇ ವಾಪಸ್ಸು ಹೋದ.

ಅದ್ಯಾರೋ ಮಧುಸೂದನ ಅಂತ ಬಂದಿದ್ದ. ಅವನ ಜತೇಲಿ ಹೋದ."

"ಯಾರು ಆ ಮಧುಸೂದನ?" ಕುತೂಹಲದಿಂದ ಪ್ರಶ್ನಿಸಿದ.

"ಯಾರೋ ಗೊತ್ತಿಲ್ಲ, ಆದರೆ ಒಂದು ಆಶ್ಚರ್ಯದ ವಿಷಯ... ಏನಂತ ಅಂದ್ರೆ.... ಆ ಹುಡುಗ ಥೇಟ್ ನಮ್ಮ ಮುರಳಿ ಇದ್ದ ಹಾಗೇ ಇದ್ದ. ಅದೇ ಎತ್ತರ, ಅದೇ ಬಣ್ಣ, ಎಲ್ಲಾ ಇವನೇ." ಅವಳು ಉತ್ಸಾಹದಿಂದ ಹೇಳಿದಳು.

ಪುರುಷೋತ್ತಮ ಮೌನವಾಗಿ ಗೋಡೆಯ ಬಳಿಗೆ ಬಂದು ಕಿಟಕಿಯ ಪರದೆಯನ್ನು ಸರಿಸಿ ಆಚೆ ಕಡೆ ನೋಡಿದ. "ನಾನು ತಮಾಷೆ ಮಾಡ್ತಿಲ್ಲ. ನಿಜಾನೇ ಹೇಳ್ತಿದೀನಿ. ಅವಳಿ ಮಕ್ಕಳ ಥರ.... ನೀವು ನೋಡಿದ್ದಿದ್ರೆ ನಿಮಗೂ ಆಶ್ಚರ್ಯ ವಾಗ್ತಿತ್ತು." ಅವನು ಅವಳ ಕಡೆ ತಿರುಗದೇ ನುಡಿದ.

"ಕಾಫಿ ತಿಂಡಿ ಏನನ್ನಾದ್ರೂ ಕೊಡ್ತೀಯೋ? ಅಥವಾ ಇಲ್ವೋ?"

"ಯಾಕೆ ಹೀಗೆ ಮಾತಾಡ್ತೀರ? ಮತ್ತೆ ಹೊರಗೆ ಹೋಗ್ಬೇಕಾ? ನನ್ನ ಜೊತೆ ಕುಳಿತು ನಾಲ್ಕು ಮಾತನ್ನಾಡೋಕೂ ನಿಮಗೆ ಸಮಯವಿಲ್ಲ ಅಲ್ವಾ?" ಎನ್ನುತ್ತಾ ಎದ್ದಳು.

"ನೋಡು, ನನ್ಹತ್ರ ವಾದ ಮಾಡ್ಬೇಡ. ಹೊರಗೆ ತಿರುಗಾಡೋ ಗಂಡ್ಸು ನಾನು. ಆ ಜವಾಬ್ದಾರಿ, ಆ ಟೆನ್ಷನ್ನು ಮನೇಲಿ ಕೂತಿರೋ ನಿನಗೆ ಹೇಗೆ ಅರ್ಥ ವಾಗುತ್ತೆ? ಬೇಗ ಕಾಫೀನ ಮಾಡ್ಕೊಂಡು ಬಾ... ನಾನು ಒಂದು ಘಳಿಗೆ ರೆಸ್ಟ್ ತಗೋತೀನಿ." ಎನ್ನುತ್ತಾ ಅಲ್ಲಿದ್ದ ಈಸೀಛೇರ್ ಮೇಲೆ ಕುಳಿತ. ಅವಳು ತಲೆ ಗೂದಲನ್ನು ಗಂಟು ಹಾಕಿಕೊಳ್ಳುತ್ತಾ ಹೊರ ನಡೆದಳು. ಇವನು ತನ್ನ ಕೈಯಲ್ಲಿದ್ದ ಕವರನ್ನು ಮತ್ತೆ ಹೊರ ತೆಗೆದ. ಅದರಲ್ಲಿದ್ದ ವಿಳಾಸವನ್ನು ಓದಿಕೊಂಡ. ಬೆನ್ನು ನೆಟ್ಟಗಾಯಿತು. ಮೆದುಳು ಲೆಕ್ಕಾಚಾರ ಹಾಕಿತು.... ಯಾರು ಈ ಮಂಜುಳಾ? ಇವಳೇಕೆ ಮುರಳಿಗೆ ತನ್ನ ವಿಳಾಸವನ್ನು ಕೊಟ್ಟಿದ್ದಾಳೆ? ಈ ವಿನುತಾ ಯಾರು? ಮುರಳಿಯ ಹತ್ತಿರ ಏನು ಮಾತನ್ನಾಡಿರಬಹುದು? ಮಧುಸೂದನ ಯಾರು? ಅವನು ಈ ವಿವರಗಳನ್ನು ಕೊಟ್ಟಿರಬಹುದೇ? ಯಾಕೆ? ಏನು? ತಾನು ಈ ಬಗ್ಗೆ ಮುರಳಿಯನ್ನು ಏನೂ ಕೇಳಬಾರದು? ಅವನಿಗೆ ತಿಳಿಯದಂತೆ ಈ ಮಂಜುಳಾನ್ನು ಭೇಟಿಯಾಗಬೇಕು..." ಎಂದುಕೊಂಡ.

ಹೆಜ್ಜೆಯ ಸದ್ದು ಕೇಳಿದೊಡನೆ ಕವರನ್ನು, ಕಾಗದವನ್ನು ತನ್ನ ಜೇಬಿನೊಳಗೆ ಇಟ್ಟುಕೊಂಡ. ವತ್ಸಲಾ ಕಾಫಿಯ ಜೊತೆಗೆ ತಿಂಡಿ ತಟ್ಟೆಗೆ ಎರಡು ಕಡುಬುಗಳನ್ನು ಹಾಕಿ ತಂದುತ್ತಳು.

"ನಿಮಗೆ ಕಡುಬು ಇಷ್ಟ ಅಂತ ಮಾಡಿದ್ದೆ, ತಗೊಳ್ಳಿ....."

"ರಾತ್ರಿಯ ಊಟಕ್ಕೆ ಹಾಕ್ಕೋತೀನಿ. ಈಗ ಬರೀ ಕಾಫಿ ಸಾಕು." ಎನ್ನುತ್ತಾ

ಬರೀ ಕಾಫಿಯನ್ನು ಕುಡಿದು ಎದ್ದ.

"ನಾನು ಸ್ವಲ್ಪ ಹೊರಗೆ ಹೋಗಿ ಬರ್ತೀನಿ. ಎಷ್ಟು ಹೊತ್ತಿಗೆ ಬರ್ತೀನೋ ಗೊತ್ತಿಲ್ಲ. ನನಗೋಸ್ಕರ ಕಾಯ್ಬೇಡ. ನೀನು ಊಟ ಮಾಡಿ ಮಲಕ್ಕೋ."

"ಬರೀ ಇದಿಷ್ಟೇ.... ಊಟ ಮಾಡು.... ಮಲಕ್ಕೋ... ಮನೇನ ಕಾಯಿ. ನಾನು ಜೀವ ಇರೋಳು.... ನಂಗೆ ಭಾವನೆಗಳಿಲ್ವಾ? ಬೇಸರವಾಗೋಲ್ವಾ?"

"ಅದಕ್ಕೆ ನಾನೇನು ಮಾಡ್ಲೀ? ನಮ್ಮಿಬ್ಬರ ಮದುವೆ ಸಮಯದಲ್ಲೇ ನಿಂಗೆ ಗೊತ್ತಿತ್ತು ಅಲ್ವಾ ನಾನು ಪೋಲೀಸ್ ಇಲಾಖೇಲಿ ಇದೀನಿ ಅಂತ. ಈಗ ನಿನ್ನ ಬೇಜಾರಿಗೆ ನಾನು ಏನೂ ಮಾಡೋಕ್ಕೆ ಆಗೋಲ್ಲ, ತಿಳೀತಾ?" ಒರಟಾಗಿ ನುಡಿದ.

"ಮುರಳಿಗೆ ಮದುವೆ ಮಾಡೋಣ... ಸೊಸೆ ಮನೆಗೆ ಬಂದರೆ ನನ್ನ ಒಂಟಿತನ ಕಳೆಯುತ್ತೆ."

"ಮಾಡು... ಆದರೆ ಮೊದಲು ಅವನನ್ನು ಕೇಳು... ಅವನು ಮದುವೆಯಾಗಲು ಸಿದ್ಧನಾಗಿದಾನಾ ಅಂತ..." ಎನ್ನುತ್ತಾ ರೂಮಿನಿಂದ ಆಚೆ ನಡೆದ.

"ಮದುವೆಗೆ ಬಂದಿರೋ ಹುಡಗನ್ನ ಕೇಳೋದೇನು? ಹೆಣ್ಣುಗಳನ್ನು ತೋರ್ಸಿದ್ರೆ ನೋಡಿ ಹೇಳ್ತಾನೆ"

"ನೋಡು ವತ್ಸಲಾ, ಈ ವಿಷಯಗಳಲ್ಲಿ ನನ್ನನ್ನು ಎಳೆಯಬೇಡ. ಈಗ ನಂಗೆ ಬಿಡುವಿಲ್ಲ. ಮುರಳಿ ಹತ್ರ ಮಾತಾಡು." ಎನ್ನುತ್ತಾ ಹಾಲಿನಿಂದ ಹೊರ ಬಂದ. ವತ್ಸಲಾ ಅವನ ಹಿಂದೆ ಹಿಂದೆಯೇ ಬಂದಳು. ಅವನು ಹಿಂತಿರುಗಿ ನೋಡಿರಲಿಲ್ಲ. ಮುಂಬಾಗಿಲನ್ನು ತೆರೆದು ಮನೆಯಿಂದಾಚೆ ಹೊರ ಬಂದು ಜೀಪನ್ನು ಸಮೀಪಿಸಿದ. ಜೀಪು ಮರೆಯಾಗುವವರೆಗೂ ಬಾಗಿಲ ಬಳಿ ನಿಂತಿದ್ದ ವತ್ಸಲಾ, ಬೇಸರದಿಂದ ಹೊಸ್ತಿಲ ಬಳಿಯ ಮೆಟ್ಟಿಲ ಮೇಲೆ ಕುಳಿತಳು. ಬೀದಿಯಲ್ಲಿ ಓಡಾಡುವ ವಾಹನಗಳ ಸದ್ದು, ಎಬ್ಬಿಸುವ ಧೂಳು ಅಸಹನೀಯವೆನಿಸಿತು. ಎದ್ದು ಒಳ ಬಂದಳು. ಫೋನ್ ರಿಂಗಾಗಿತ್ತು.

ಅತ್ತಲಿಂದ ಯಾರೋ ಹೆಂಗಸೊಬ್ಬಳು ಮಾತಾಡಿದ್ದಳು. "ಸಾರ್ ಇದಾರಾ?" ಅಂತ ಕೇಳಿದ್ದಳು.

"ನೀವ್ಯಾರು? ಅವರು ಈಗ್ತಾನೇ ಹೊರಗೆ ಹೋದ್ರು, ಏನು ವಿಷಯ?"

"ಅವರ ಹತ್ರಾನೇ ಮಾತಾಡ್ಬೇಕಾಗಿತ್ತು. ನಾನು ಮತ್ತೆ ಮಾತಾಡ್ತೀನಿ." ಎಂದು ಹೇಳಿ ಮುಗಿಸಿದ್ದಳು. ಇವಳ ಕುತೂಹಲ ಕೆರಳಿತ್ತು. ಆದರೆ ಯಾರನ್ನೂ ಕೇಳುವಂತಿರಲಿಲ್ಲ.

* * *

ಕಾಲಿಂಗ್ ಬೆಲ್ ಸದ್ದು ಆದದ್ದನ್ನು ಕೇಳಿ ಕೆಲಸದವಳು ಬಂದು ಬಾಗಿಲನ್ನು ತೆರೆದಳು.

"ಮೇಡಂ ಇದಾರಾ?" ಇವನು ಕೇಳಿದ.

"ಹೂಂ, ಇದಾರೆ, ಕರೀತೀನಿ ಕೂತ್ಕೊಳ್ಳಿ...." ಎಂದು ಹೇಳಿ ಕೆಲಸದವಳು ಒಳಗೆ ಹೋಗಿದ್ದಳು. ಕೆಲವೇ ನಿಮಿಷಗಳೊಳಗೆ ಮಂಜುಳಾ ಹೊರಕ್ಕೆ ಬಂಧಿದ್ದಳು. ಇವನು ತಿರುಗಿದ. ಅವಳಿಗೆ ತಕ್ಷಣವೇ ಗುರುತು ಸಿಗಲಿಲ್ಲವಾದರೂ ಒಂದೆರಡು ಸೆಕೆಂಡ್‌ಗಳಲ್ಲಿ ಗುರುತು ಹಿಡಿದಳು. ಆದರೆ ಅದನ್ನು ಭಾವನೆಯಲ್ಲಿ ತೋರ್ಪಡಿಸಿ ಕೊಳ್ಳಲಿಲ್ಲ.

ಇವನು ಮುಗುಳ್ನಕ್ಕ. "ಯಾರು ನೀವು?" ಒರಟಾಗಿ ಕೇಳಿದಳು.

"ನಾನು ಮಂಜೂ... ಯಾಕೆ ನನ್ನ ಗುರುತು ಸಿಗಲಿಲ್ವಾ?" ಸಲುಗೆ ವಹಿಸಿದ.

"ನಾನು ಅಂದ್ರೇ? ಗೊತ್ತಾಗ್ಲಿಲ್ಲ."

"ತಮಾಷೆ ಮಾಡ್ಬೇಡ ಮಂಜು... ನಾನು ಪುರುಷೋತ್ತಮ. ನಿನ್ನ ಪುರುಷೋತ್ತಮ." ಸಲುಗೆಯಿಂದ ಹೇಳಿ ಅವಳನ್ನು ಸಮೀಪಿಸಿದ. ಅವಳು ಹಿಂದಕ್ಕೆ ಸರಿದಳು.

"ಪುರುಷೋತ್ತಮ ಅನ್ನೋರ ಪರಿಚಯ ನಂಗಿಲ್ಲ. ಬಂದ ವಿಷಯ ಏನೂಂತ ಹೇಳಿ?"

"ನಿನ್ನ ಕಣ್ಣುಗಳೇ ಹೇಳ್ತಿವೆ. ನಿನಗೆ ನನ್ನ ಗುರುತು ಸಿಕ್ಕಿದೆ ಅಂತ. ತಮಾಷೆ ಸಾಕು... ನಾನು ಬಂದದ್ದು ಇಷ್ಟವಾಗ್ಲಿಲ್ವಾ? ನನ್ನನ್ನು ಕಂಡು ಖುಷಿ ಆಗ್ಲಿಲ್ವಾ?"

"ಪ್ಲೀಸ್ ಸುಮ್ನಿರಿ. ನೀವ್ಯಾರೋ ಗೊತ್ತಾಗ್ಲಿಲ್ಲ. ನೀವಿನ್ನು ಹೋಗಬಹುದು." ಎಂದು ಹೇಳಿ ಕೆಲಸದವಳನ್ನು ಕರೆದಳು. "ಮಾರ್ಕೆಟ್ಟಿಗೆ ಹೋಗಿ ತರಕಾರಿಯನ್ನು ತಂದ್ಬಿಡು. ಮಧು ಅವನ ಫ್ರೆಂಡ್‌ನ್ನೂ ಕರ್ಕೊಂಡು ಬರ್ತಾನಂತೆ. ಬೇಗ ಅಡಿಗೆ ಮಾಡ್ಬೇಕು."

ಕೆಲಸದವಳು, ಇವಳು ಕೊಟ್ಟ ಹಣವನ್ನು ತೆಗೆದುಕೊಂಡು ಹೊರನಡೆದಳು. ಇವನು ಅವಳ ಚಲನ ವಲನವನ್ನೇ ನೋಡುತ್ತಿದ್ದ. "ಕೆಲಸದವಳು ಹೋದ್ಲಲ್ಲ... ಇನ್ನಾದ್ರೂ ಸರಿಯಾಗಿ ಮಾತಾಡು ಮಂಜು.....ನನ್ನನ್ನು ಮರೆತುಬಿಟ್ಯಾ?"

"ಜ್ಞಾಪಕ ಇಟ್ಕೊಂಡು ಏನ್ಮಾಡ್ಬೇಕಾಗಿದೆ? ಅದು ಮುಗಿದ ಕತೆ."

"ಅದ್ಹೇಗೆ ಮುಗಿಯುತ್ತೇ? ನೆನಪಿನ ಕಾಣಿಕೆಯನ್ನು ಕೊಟ್ಟಿದೀನಲ್ಲ... ಮಗ ಹೇಗಿದಾನೆ? ಬೆಳೆದು ದೊಡ್ಡವನಾಗಿರಬಹುದು ಅಲ್ವಾ? ಎಲ್ಲಿ ಕೆಲಸದಲ್ಲಿದಾನೆ? ಏನು ಓದಿದಾನೆ?"

"ಅದನ್ನೆಲ್ಲ ತಿಳಿದ್ಕೊಂಡು ಏನ್ಮಾಡ್ತೀರಿ? ಈಗೇನು ಆಸಕ್ತಿ?"

"ಆಸಕ್ತಿ ಇಲ್ಲದೇ ಇರುತ್ತಾ? ಈ ಊರಿಗೆ ಯಾವಾಗ ಬಂದೆ? ನಿಂಗೆ ರಿಟೈರ್ ಆಯ್ತಾ? ನನ್ನ ಮಗನಿಗೆ ಇಲ್ಲೇ ಕೆಲಸಾನಾ?" ಪ್ರಶ್ನೆಗಳನ್ನು ಹಾಕಿದ.

"ಇದನ್ನೆಲ್ಲಾ ತಿಳಿದುಕೊಳ್ಳಲು ಈಗ ಪುರುಸೊತ್ತು ಸಿಕ್ತಾ? ಇಷ್ಟು ವರ್ಷಗಳಲ್ಲಿ ಒಂದು ದಿನವಾದರೂ ನನಗೆ ಫೋನ್ ಮಾಡಿರಲಿಲ್ಲ. ಈಗ ನಾನು ಇಲ್ಲಿದೀನಿ ಅಂತ ಹೇಗೆ ತಿಳಿಯಿತು? ಯಾರು ಹೇಳಿದ್ರು?"

"ಯಾರೂ ಹೇಳ್ಲಿಲ್ಲ. ನಾನೇ ಕಂಡು ಹಿಡಿದೆ."

"ಓ ಪೋಲೀಸ್ ಬುದ್ಧಿ! ಆದರೆ, ಈಗ ಆ ಹಳೆಯ ಸಂಬಂಧವನ್ನು ಮತ್ತೆ ಮುಂದುವರೆಸುವ ಇಚ್ಛೆ ನನಗಿಲ್ಲ. ಮತ್ತೆಂದೂ ಬರ್ಬೇಡಿ. ಹೊರಟು ಹೋಗಿ..."

"ಯಾಕೆ? ಸ್ನೇಹಿತನಂತೆ ಬರ್ತೀನಿ. ಬೇಡ ಅನ್ಬೇಡ."

"ನನ್ಮಗ ಅಪಾರ್ಥ ಮಾಡ್ಕೋತಾನೆ. ದೊಡ್ಡವನಾಗಿದಾನೆ."

"ಅವನು ನನ್ಮಗ ಕೂಡಾ... ನಿಜವನ್ನು ತಿಳಿಸಿದ್ರಾಯ್ತು..."

"ಆ ಇಷ್ಟ ನಂಗಿಲ್ಲ. ಅವನು ನನ್ನ ಮಗನಾಗಿಯೇ ಇರಲಿ. ತಂದೆ ಇಲ್ಲದವನಾಗಿ, ಅವನು ಬೆಳೆದಿದಾನೆ..." ಕಟುವಾಗಿ ನುಡಿದಳು.

"ಇದು ಸರಿಯಲ್ಲ."

"ಯಾವುದು ಸರಿಯಲ್ಲ? ನೀವು ಮಾಡಿದ್ದು ಸರಿಯಾ?"

"ಪರಿಸ್ಥಿತಿ ಹಾಗಿತ್ತು. ಅದಕ್ಕೆ ಬೆಲೆ ಕೊಟ್ಟಿದೀನಲ್ಲಾ."

"ಅಲ್ಲಿಗೆ ಮುಗಿಯಿತಲ್ಲ..."

"ಇಲ್ಲ. ಈಗ ಮತ್ತೆ ಪ್ರಾರಂಭವಾಗಿದೆ. ನಾನು ನನ್ನ ಮಗನನ್ನು ನೋಡ್ಬೇಕು. ಅವನ್ಹತ್ರ ಮಾತಾಡ್ಬೇಕು."

"ನಿಮ್ಮ ಧರ್ಮಪತ್ನಿಗೆ ಈ ವಿಷಯ ತಿಳಿದರೆ?" ಅವನು ತಟಸ್ಥನಾದ. ಮತ್ತೆ ಚೇತರಿಸಿಕೊಂಡ.

"ನೀನು ನಿನ್ನ ಮಗನಿಂದ ದೂರವಾಗಬೇಕಾಗುತ್ತದೆ ಅಷ್ಟೇ."

"ಬ್ಲ್ಯಾಕ್ ಮೇಲ್ ಮಾಡ್ತಿದೀರಾ?"

"ಅಷ್ಟು ನೀಚ ನಾನಲ್ಲ..."

"ನೀವು ನಂಬಿಕಸ್ಥರೂ ಅಲ್ಲ."

"ಹಾಗನ್ಬೇಡ. ಒಂದು ಕಾಲದಲ್ಲಿ ನನ್ನನ್ನು ನಂಬಿದ್ದೆ ಅಲ್ಲವೇ? ನಾನು ನಿಂಗೆ ಯಾವುದಕ್ಕೂ ಕಡಿಮೆ ಮಾಡಿರಲಿಲ್ಲ..."

"ಆದರೂ ಯಾಕೆ ಹಾಗಾಯ್ತು? ನನ್ನ ಮಾತಿಗೆ ನೀವು ಒಪ್ಪಲಿಲ್ಲ."

"ಅದೊಂದು ಸಾಧ್ಯವಿರಲಿಲ್ಲ ಮಂಜು...ಆ ಪರಿತಾಪ ಈಗಲೂ ಇದೆ."

"ಏನು ಪ್ರಯೋಜನ? ನಾನು ಒಂಟಿಯಾಗಿಬಿಟ್ಟೆ... ನೀವು ನಂಗೆ ಮೋಸ

ಮಾಡಿಬಿಟ್ಟರಿ...."

"ಇಲ್ಲ, ಮಂಜು.... ನಾನು ನಿಂಗೆ ಮೋಸ ಮಾಡ್ಲಿಲ್ಲ. ನಿನಗ್ಕೆ ನನ್ನ ಸಹವಾಸ ಬೇಕಾಗಿತ್ತು. ನನಗೆ ನಿನ್ನ ಅವಶ್ಯಕತೆ ಇತ್ತು. ಆದರೂ... ನಾನು ನಿನ್ನನ್ನು ತಾತ್ಸಾರವಾಗಿ ಎಂದೂ ಕಾಣಲಿಲ್ಲ. ಅದು ನಿಜ ತಾನೇ? ಈಗ್ಯಾಕೆ ಈ ಸಿಟ್ಟು? ಈಗ ನೀನೂ ಇದೇ ಊರಿನಲ್ಲಿದೀಯ, ಮೊದಲಿನಂತೆಯೇ ಇರೋಣ."

"ನಿಮ್ಮ ಪತ್ನಿಗೆ ತಿಳಿದರೆ?" ವ್ಯಂಗ್ಯವಿತ್ತು ದನಿಯಲ್ಲಿ.

"ತಿಳಿಯದಂತೆ ಎಚ್ಚರವಹಿಸೋಣ."

"ಬೇಕಾಗಿಲ್ಲ.... ಈಗ ಆ ಮುಚ್ಚುಮರೆಯ ಸಂಬಂಧದ ಅಗತ್ಯ ನನಗಿಲ್ಲ. ಗೌರವಾನ್ವಿತ ಜೀವನ ನಡೆಸುತ್ತಿದ್ದೀನಿ.... ಮಗನಿಗೆ ಸಂಶಯವೇ ಇಲ್ಲ."

"ಹಾಗಾದ್ರೆ ಅವನಿಗೆ ನಿಜ ಏನೂಂತ ಗೊತ್ತಿಲ್ವಾ?"

"ಇಲ್ಲ, ಗೊತ್ತಿಲ್ಲ. ಇನ್ನು ನೀವು ಹೊರಡಿ. ಕೆಲಸದವಳು ಬಂದಾಳು..."

"ಇಲ್ಲ, ನಾನು ಹೋಗಲ್ಲ. ಈಗ ಹೆದರಬೇಕಾದ ಅಗತ್ಯ ನಂಗಿಲ್ಲ. ನನ್ನ ಮಗನನ್ನು ನೋಡಿಕೊಂಡೇ ಹೋಗ್ತೀನಿ."

"ಇವತ್ತು ಬೇಡ.... ಮತ್ತೆಂದಾದ್ರೂ.... " ಅವಳು ಕೈ ಮುಗಿದಳು.

"ಸರಿ. ಈಗ ನಿನ್ನ ಮಾತಿಗೆ ಒಪ್ಪಿ ಹೋಗ್ತಿದೀನಿ. ಆದರೆ ಮತ್ತೆ ಬರ್ತೀನಿ. ಇದು ನನ್ನ ಮೊಬೈಲ್ ನಂಬರ್.... ತಗೋ." ಎಂದು ಹೇಳಿ ತನ್ನ ವಿಸಿಟಿಂಗ್ ಕಾರ್ಡ್‌ನ್ನು ನೀಡಿದ. ಅವಳು ಕೈಗೆ ತೆಗೆದುಕೊಳ್ಳಲಿಲ್ಲ. ಅವನು ಟೀಪಾಯ್ ಮೇಲೆ ಇಟ್ಟು ಮತ್ತೊಮ್ಮೆ "ಬರ್ತೀನಿ" ಎಂದು ಹೇಳಿ ಹೊರ ನಡೆದ. ಜೀಪು ಹೊರಟ ಸದ್ದು ಕೇಳುವವರೆಗೂ ಹಾಗೇ ನಿಂತಿದ್ದಳು. ನಂತರ ಮುಂಬಾಗಿಲನ್ನು ಮರೆ ಮಾಡಿ ಒಳಗೆ ಬಂದು ಸೋಫಾದ ಮೇಲೆ ಕುಳಿತಳು.

* * *

"ಅಮ್ಮಾ ಯಾಕಮ್ಮ ಹೀಗೆ ಕೂತಿದೀಯ? ಏನಾಯ್ತು?" ಮಧುಸೂದನ ಹತ್ತಿರ ನಿಂತು ಕೇಳಿದಾಗ ಮಂಜುಳ ಎಚ್ಚೆತ್ತಳು. "ಯಾಕೆ ಹೀಗೆ ಬಿಳಿಚಿ ಹೋಗಿದೀಯಾ.... ಅಂಥಾದ್ದೇನಾಯ್ತು?" ಮತ್ತೆ ಕೇಳಿದ.

"ಬೇರೆ ಮನೆ ಮಾಡ್ಕೊಂಡು ಹೋಗೋಣ ಮಧು... ಯಾಕೋ ಈ ಮನೆ ಸರಿ ಹೋಗ್ತಿಲ್ಲ."

"ಸರಿ ಹೋಗ್ದೇ ಇರೋಕೆ ಏನಾಗಿದೆ? ಎಲ್ಲಾ ರೀತಿಯಿಂದಲೂ ಚೆನ್ನಾಗಿದೆ ಅಂತ ನೀನೇ ಹೇಳ್ದೇ."

"ಆಗ ಹಾಗೆ ಹೇಳಿದ್ದೆ. ಈಗ ಹೀಗೆ ಹೇಳ್ತಿದೀನಿ... ಬೇಗ ಒಂದು ಬೇರೆ

ಮನೇನ ನೋಡು.... ನಂಗೆ ಇಲ್ಲಿ ಇರೋಕೆ ಆಗೋಲ್ಲ. ಯಾಕೋ ಸರಿ ಹೋಗ್ತಿಲ್ಲ."

"ಅದೇ ಯಾಕೆ ಅಂತ... ಏನಾದ್ರೂ ಕಾರಣ ಬೇಕು ತಾನೇ? ಅಂಥಾದ್ದು ಏನಾಯ್ತು ಹೇಳು. ಯಾದಾದ್ರೂ ಏನಾದ್ರೂ ಅಂದ್ರಾ? ಏನಾದ್ರೂ ಭಯಗಿಯ...." ಹಗುರವಾಗಿ ಕೇಳಿದ.

"ಹೌದು, ನಂಗೆ ಈ ಮನೇಲಿ ಏನೋ ಭಯ ಆಗುತ್ತೆ... ಒಬ್ಬಳೇ ಇರೋಕ್ಕೆ ಆಗೊಲ್ಲ. ಈ ಮನೇನ ಬಿಟ್ಟು ಬಿಡೋಣ."

"ಬೇರೆ ಇಂಥಾ ಒಳ್ಳೇ ಮನೆ ತಕ್ಷಣಕ್ಕೆ ಎಲ್ಲಿ ಸಿಗುತ್ತಮ್ಮಾ? ಅಲ್ಲದೇ ಇದು ಬ್ಯಾಂಕ್‌ನವರು ಲೀಸ್‌ಗೆ ತಗೊಂಡಿರುವ ಮನೆ. ಅವರಿಗೆ ತಿಳಿಸದೇ ಹಾಗೆಲ್ಲಾ ಬಿಟ್ಟು ಬಿಡೋಕ್ಕೆ ಆಗೋಲ್ಲ. ಅಲ್ಲದೇ ನಿನಗೆ ಸೊಸೆ ಬಂದರೇ, ನಿನಗೆ ಒಬ್ಬಳು ಜೊತೆ ಆಗ್ತಾಳೆ.... ಮದುವೆಗೆ ದಿನವನ್ನೂ ಗೊತ್ತು ಮಾಡು." ತಾಯಿಯ ಮನವನ್ನು ಒಲಿಸಲು ನೋಡಿದ. ಅವಳು ಮತ್ತೂ ಪೆಚ್ಚಾದಳು.

"ಅಂದ್ರೇ... ಆ ಹುಡ್ಗೀನ ನಿಜವಾಗಿಯೂ ಒಪ್ಪಿಕೊಂಡಿದೀಯಾ ಹಾಗಾದ್ರೆ..."

"ಹೂಂ... ಅವತ್ತೇ ಹೇಳಿದ್ನಲ್ಲಾ...."

"ಬೇಡ ಮಧೂ.... ಅವಳು ನಮಗೆ ಯಾವ ರೀತಿಯಲ್ಲೂ ತಕ್ಕವಳಲ್ಲ."

"ಏನಮ್ಮಾ ಹಾಗಂದ್ರೆ? ನನಗೆ ಅವಳು ಇಷ್ಟವಾಗಿದಾಳೆ... ಆದಷ್ಟು ಬೇಗ ಮುಹೂರ್ತವನ್ನು ಗೊತ್ತು ಮಾಡು... ಅವಳು ಈ ಮನೆಗೆ ಬಂದರೆ ನಿನಗೆ ಬೇಸರವಾಗಲೀ ಭಯವಾಗಲೀ ಆಗುವುದಿಲ್ಲ."

"ನನಗೆ ಇಷ್ಟವಿಲ್ಲದವಳನ್ನು ನೀನು ಮದುವೆಯಾದರೆ, ನನ್ನ ಬೇಸರ ಇನ್ನೂ ಹೆಚ್ಚಾಗುತ್ತೆ ಅಷ್ಟೇ.... ಏನಾದ್ರೂ ಮಾಡ್ಕೋ" ಎಂದು ಹೇಳಿ ಎದ್ದು ಅಡಿಗೆ ಮನೆಯ ಕಡೆಗೆ ನಡೆದಳು. ಮಧುಸೂದನ ಅಲ್ಲೇ ಸೋಫಾದ ಮೇಲೆ ಕುಳಿತ. ಅವನ ನೋಟ, ಟೀಪಾಯ್ ಮೇಲಿದ್ದ ವಿಸಿಟಿಂಗ್ ಕಾರ್ಡ್ ಮೇಲೆ ಬಿದ್ದಿತು. ಎತ್ತಿಕೊಂಡು ಕಣ್ಣಾಡಿಸಿದ.

'ಯಾರು ಈ ಮನುಷ್ಯ? ಈ ವಿಸಿಟಿಂಗ್ ಕಾರ್ಡ್ ಯಾಕೆ ಇಲ್ಲಿದೆ? ಯಾರು ಕೊಟ್ಟರು? ಈ ಪೋಲೀಸ್ ಅಧಿಕಾರಿ ಅಮ್ಮನನ್ನು ಏನಾದರೂ ಹೆದರಿಸಿರ ಬಹುದೇ? ಅಮ್ಮನ್ನ ಕೇಳಿದರೇ? ಮೊದಲೇ ಅಪ್ಸೆಟ್ ಆಗಿರುವಂತಿದೆ. ಕೇಳಿ ಮತ್ತಷ್ಟು ಚಿಂತೆಯನ್ನು ಹೆಚ್ಚಿಸುವುದು ಬೇಡ' ಎಂದುಕೊಂಡು, ಆ ವಿಸಿಟಿಂಗ್ ಕಾರ್ಡನ್ನು ತನ್ನ ಜೇಬಿಗೆ ಇಳಿಬಿಟ್ಟ, ತಾಯಿ ಕಾಫಿಯನ್ನು, ತಿಂಡಿಯನ್ನು ತಂದಿತ್ತಳು.

"ಯಾರೋ ಫ್ರೆಂಡ್ ಬರ್ತಾರೆ ಅಂತ ಹೇಳಿದ್ಯಲ್ಲ ಮಧು, ಬರ್ಲಿಲ್ವಾ?"

"ಇಲ್ಲಮ್ಮ, ಆ ಮನುಷ್ಯ ಬಿಸಿ. ಬೇರೆಲ್ಲೋ ಹೋಗ್ಬೇಕಾಗಿತ್ತು ಅಂತಂದ. ಮನೆಗೆ ಯಾರಾದ್ರೂ ಬಂದಿದ್ರಾ?" ಅವನ ಮಾತಿಗೆ ಅವಳು ಬೆಚ್ಚಿದಂತೆನ್ನಿಸಿತು.

ಗಲಿಬಿಲಿಗೊಂಡಳು.

"ಇಲ್ವಲ್ಲಾ.... ನಮ್ಮ ಮನೆಗೆ ಯಾರಾದ್ರೂ ಬಂದಿದ್ರೆ ನಿಂಗೆ ಹೇಳ್ದೇ ಇರ್ತೀನಾ? ಯಾಕೆ ಹಾಗೆ ಕೇಳ್ದೆ?"

"ಬಾಗಿಲು ತೆರೆದೇ ಇತ್ತಲ್ಲ. ಅಲ್ಲದೇ ನೀನೂ ಅಪ್ಸೆಟ್ ಆಗಿದ್ದೆ..."

"ಅದಾ? ಕೆಲಸದವಳು ಗೊಣಗುತ್ತಿದ್ದಳು. ಫೋನ್ನಲ್ಲಿ ಮಾತಾಡ್ತಿದ್ದೆ. ಅವಳು ಹಾಗೇ ಬಾಗಿಲು ಎಳೆದುಕೊಂಡು ಹೋದಳು. ನಾನು ಹಾಗೇ ಕುಳಿತ್ಬಿಟ್ಟೆ?"

"ಅದೇನೋ ನೀನು? ಒಳ್ಳೇ ಪೋಲೀಸ್ ಎನ್ಕ್ವೈಯರಿ ಥರ ಮೇಲೆ ಮೇಲೆ ಪ್ರಶ್ನೇನ ಕೇಳ್ತಿದೀಯಾ?" ಬಲವಂತವಾಗಿ ನಕ್ಕು ಪ್ರಶ್ನಿಸಿದಳು.

"ನಂಗೆ ಪೋಲೀಸ್ ಅಧಿಕಾರಿ ಆಗ್ಬೇಕು ಅಂತ ಆಸೆ ಇತ್ತು... ಆದರೆ... ನಿಂಗೆ ಇಷ್ಟವಿರ್ಲಿಲ್ಲ." ಅವನು ನಕ್ಕು ಹೇಳಿದ.

"ಅದೂ ಒಂದು ಪ್ರೊಫೆಷನ್ನಾ? ಪೋಲೀಸರನ್ನ ನಂಬದಿರೋರೇ ಜಾಸ್ತಿ."

ಅವನು ಸಂಶಯದಿಂದ ತಾಯಿಯ ಕಡೆ ನೋಡಿದ. ಪೋಲೀಸ್ ಅಧಿಕಾರಿಗಳ ಬಗ್ಗೆ ಇವಳಿಗೆ ವಿಶ್ವಾಸವಿಲ್ಲ. ಯಾರೋ ನಂಬಿಕೆ ದ್ರೋಹ ಮಾಡಿರಬಹುದು. ಹಾಗಿದ್ದರೆ, ಈ ಪೋಲೀಸ್ ಅಧಿಕಾರಿಯ ವಿಸಿಟಿಂಗ್ ಕಾರ್ಡ್ ಇಲ್ಲಿ ಹೇಗೆ ಬಂತು? ತಾಯಿಯನ್ನು ಕೇಳಿದರೆ ಸರಿಯಾಗಿ ಉತ್ತರ ಹೇಳಲಾರಳು ಎಂದುಕೊಂಡು ಸುಮ್ಮನಾದ. ಕಾಫೀ, ಕುಡಿದು, ತಿಂಡಿಯನ್ನು ಮುಗಿಸಿ ಎದ್ದ. ತನ್ನ ರೂಮಿಗೆ ಬಂದು ಮಂಚದ ಮೇಲೆ ಕಾಲು ಚಾಚಿ ಮಲಗಿದ. ಆ ವಿಸಿಟಿಂಗ್ ಕಾರ್ಡ್ ಮೆದುಳನ್ನು ಕೊರೆಯುತ್ತಲೇ ಇತ್ತು. ಸ್ವಲ್ಪ ಹೊತ್ತು ಆಲೋಚನೆ ಮಾಡಿ, ಮುರಳೀಧರನ ಸೆಲ್‌ಫೋನ್‌ಗೆ ಎಸ್.ಎಂ.ಎಸ್. ಮಾಡಿದ. ಮುರಳಿಯಿಂದ ತಕ್ಷಣಕ್ಕೆ ತನಗೆ ಫೋನ್ ಕಾಲ್ ಬರಬಹುದೆಂದು ನಿರೀಕ್ಷಿಸಿದ. ಆದರೆ ಮುರಳಿ ಉತ್ತರಿಸಲಿಲ್ಲ.

* * *

ರಾತ್ರಿಯ ಊಟ ಮುಗಿದಿತ್ತು. ಪುರುಷೋತ್ತಮ ಸ್ಟಡೀ ರೂಂನಲ್ಲಿರುವುದನ್ನು ಗಮನಿಸಿ, ಮುರಳಿ ಬಾಗಿಲ ಬಳಿ ನಿಂತು, "ಒಳಗೆ ಬರಲಾ ಡ್ಯಾಡೀ?" ಅಂತ ಕೇಳಿದ. ತಂದೆ ಕತ್ತೆತ್ತಿ ನೋಡಿದ.

"ಓ... ಷೂರ್, ಏನು ವಿಷಯ?" ಎಂದು ಕೇಳಿ ಮಗನಿಗೆ ಕುಳಿತುಕೊಳ್ಳುವಂತೆ ಹೇಳಿದ. ಮುರಳಿ ಮೊದಲಿಗೆ ಅನುಮಾನಿಸಿದರೂ ನೇರವಾಗಿ ಕೇಳಿದ.

"ಡ್ಯಾಡೀ, ನನಗೆ ಒಂದು ಮೆಸೇಜ್ ಬಂದಿದೆ. ಮೆಸೇಜ್ ಮಾಡಿದವರು ನಿಮ್ಮ ಬಗ್ಗೆ ವಿವರ ಕೇಳಿದಾರೆ... ಕೊಡ್ಲೋ ಹೇಗೆ ಅಂತ, ಏನ್ಮಾಡ್ಲೀ?"

"ಕೊಡು, ಅದರಲ್ಲೇನು? ಅದು ನಿನ್ನ ಪ್ರೊಫೆಷನ್ ತಾನೇ?"

"ಹಾಗಲ್ಲ ಡ್ಯಾಡ್... ನಿಮ್ಮ ಬಗ್ಗೆ ಪಬ್ಲಿಕ್‌ಗೆಲ್ಲಾ ಗೊತ್ತೇ ಇರುತ್ತಲ್ಲ. ಆದರೆ ಇದು ಪರ್ಸನಲ್ ಅಂತ ಅನ್ಸುತ್ತೆ.... ಅವರು ನಿಮ್ಮ ಪರಿಚಯದವರು ಇರಬಹುದು."

"ಯಾರವರು?"

"ನಿಮಗೆ ಮಂಜುಳಾ ಅನ್ನೋರ ಪರಿಚಯ ಇದೆಯಾ?"

"ಮಂಜುಳಾನಾ?" ಅವನು ಕಣ್ಣುಗಳನ್ನು ಕಿರಿದು ಮಾಡಿದ. ಆದರೂ ಮುಖದಲ್ಲಿ ಸಹಜತೆ ಕಡಿಮೆ ಆಗಿತ್ತು.

"ಮಂಜುಳಾ ಅನ್ನೋರ ಮನೆಗೆ ನೀವು ಹೋಗಿದ್ರಾ?"

ತಂದೆ ಬೆಚ್ಚಿದಂತೆನಿಸಿತು. ಬಾಗಿಲ ಕಡೆ ನೋಡಿದ. ಅಲ್ಲಿ ಹೆಂಡತಿ ಇಲ್ಲದಿರುವುದನ್ನು ಗಮನಿಸಿ ನುಡಿದ. "ಮಂಜುಳಾ ನಿನಗೆ ಮೆಸೇಜ್ ಕಳಿಸಿದಾಳಾ? ನನ್ನ ಬಗ್ಗೆ ಏನು ಬೇಕಂತೆ?"

"ಅವರ ಮಗ ಮೆಸೇಜ್ ಮಾಡಿರೋದು! ಅವರ ಮನೆಗೆ ಯಾಕೆ ಹೋಗಿದ್ರಿ? ಯಾವುದಾದ್ರೂ ಕೇಸ್ ಬಗ್ಗೆ ಏನಾದ್ರೂ ಮಾತಾಡೋದು ಇತ್ತಾ?"

"ನೀನು ಏನು ಮೆಸೇಜ್ ಮಾಡ್ತೀಯಾ?"

"ನಂಗೆ ಏನು ಹೇಳ್ಬೇಕು ಅಂತ ಗೊತ್ತಾಗ್ತಿಲ್ಲ. ನಿಮ್ಮ ಹೆಸರು ಇದ್ದದ್ದನ್ನು ಕಂಡು, ನಿಮ್ಮನ್ನ ಒಂದ್ಮಾತು ಕೇಳೋಣ ಅಂತ ಅನ್ನಿಸ್ತು... ಏನಾದ್ರೂ ಪ್ರಾಬ್ಲಂ ಇದ್ದರೆ ನಂಗೆ ಹೇಳಿ ಡ್ಯಾಡ್. ನಾನು ಹೆಲ್ಪ್ ಮಾಡ್ತೀನಿ."

"ಏನೂ ಇಲ್ಲ. ಅಂಥಾದ್ದೇನೂ ಇಲ್ಲ. ಆದರೆ ನಿಮ್ಮ ಮಮ್ಮೀಗೆ ಈ ವಿಷಯ ತಿಳಿಸ್ಬೇಡ."

"ಯಾಕೆ?"

"ಸುಮ್ಮನೇ ಯಾಕೋ ಏನೋ ಅಂತ ಆತಂಕ ಪಟ್ಕೋತಾಳೆ... ಮೊದಲೇ ಆತಂಕಗೊಂಡಿದಾಳೆ." ಹಾಗೆ ಹೇಳಿದರೂ, ಮುಖದಲ್ಲಿ ಗೊಂದಲವಿತ್ತು. ಅದನ್ನು ಮುರಳಿ ಕಂಡ. ಏನೋ ವಿಷಯವಿದೆ. ಅದನ್ನು ಅಪ್ಪಾ ಮುಚ್ಚಿಡ್ತಾ ಇದಾರೆ ಅಂತ ಊಹಿಸಿದ.

"ನಿಮ್ಮಮ್ಮನ್ನ ಒಂದಿಷ್ಟು ದಿನ ಯಾವುದಾದ್ರೂ ಊರಿಗೆ ಕರ್ಕೊಂಡು ಹೋಗಿ ಸುತ್ತಾಡಿಸ್ಕೊಂಡು ಬಾ... ಅವಳ ಬೇಸರ ಕಳೆಯುತ್ತೆ." ಎಂದ ಇವನು ನಕ್ಕ.

"ನನಗೆ ಬಿಡುವೇ ಇಲ್ಲ ಡ್ಯಾಡ್... ನೀನೇ ಯಾಕೆ ಹೋಗ್ಬಾರ್ದು?"

"ನನಗೆ ರಜಾ ಎಲ್ಲಿದೆ? ನೀನಾದರೆ ನಿನ್ನದೇ ಸಾಮ್ರಾಜ್ಯ... ನಿನ್ನ ಅಸಿಸ್ಟೆಂಟ್‌ಗಳಿಗೆ ಕೆಲಸ ವಹಿಸಿ ಹೋಗ್ಬಾ... ಏರ್‌ಫೇರ್ ನಾನು ಕೊಡ್ತೀನಿ."

"ಇಲ್ಲ ಡ್ಯಾಡ್. ನಾಲ್ಕೈದು ಕೇಸ್‌ಗಳಿವೆ... ನಾನು ಎಲ್ಲಿಗೂ ಹೋಗೋಕ್ಕಾಗಲ್ಲ."

"ಹಾಗಾದ್ರೆ, ಆದಷ್ಟು ಬೇಗ ಮದುವೆಯಾಗು. ನಿನ್ನ ತಾಯಿಗೆ ಒಬ್ಬಳು ಕಂಪಾನಿಯನ್ ಸಿಗ್ತಾಳೆ." ಆತ ಮೀಸೆಯಡಿಯಲ್ಲೇ ನಕ್ಕ. ಇವನು ಗಂಭೀರನಾದ.

"ನಾನು ಈಗ್ಲೇ ಮದುವೆಯಾಗೋಲ್ಲ... ನಾನೀಗ ಹಾಯಾಗಿದೀನಿ."

"ಅದು ಒಳ್ಳೆಯದೇ.. ನಿಂಗೆ ಯಾರೂ ಗರ್ಲ್‌ಫ್ರೆಂಡ್ ಇಲ್ವಾ?" ಮುರಳಿ ತಂದೆಯನ್ನು ಅಚ್ಚರಿಯಿಂದ ನೋಡಿದ.

"ಸುಮ್ಮನೇ ಕೇಳಿದೆ. ನಿನ್ನ ಆಫೀಸ್ನಲ್ಲಿ ಯಾರೂ ಲೇಡಿ ಅಸಿಸ್ಟೆಂಟ್‌ಗಳಿಲ್ವಾ?"

"ಇದಾರೆ. ಆದರೆ ನನಗೆ ಫ್ರೆಂಡ್‌ಶಿಪ್ ಬೇಕಿಲ್ಲ. ನಾನು ಅಂಥೋನಲ್ಲ."

"ನೀನು ಗುಡ್ ಬಾಯ್.... ನಿಂಗೆ ಅವನು ಯಾರೋ ಮೆಸೇಜ್ ಕಳ್ಸಿದಾನಲ್ಲ, ಅವನ ಹೆಸರೇನು? ಅವನಿಗೆ ನನ್ನನ್ನು ಬಂದು ನೋಡುವಂತೆ ಹೇಳು."

"ಅವನ ಹೆಸರು ಮಧುಸೂದನ ಅಂತ... ಅವನನ್ನು ಮೀಟ್ ಮಾಡುವ ಕುತೂಹಲ ನಿಮಗೆ ಯಾಕೆ?"

"ಕುತೂಹಲ ಅಂತ ಅಲ್ಲ... ಅವನಿಗೆ ನನ್ನಿಂದ ಏನಾಗಬೇಕು ಅಂತ ತಿಳ್ಕೋಬೇಕು... ನಾನು, ... ಸುಮ್ಸುಮ್ನೆ ಈ ಪೋಲೀಸ್ ಅಧಿಕಾರಿಯ ಮಾಹಿತಿ ಯಾಕೆ ಅವನಿಗೆ?"

"ಸರಿ. ನಾಳೇನೇ ಅವನನ್ನು ನನ್ನ ಆಫೀಸಿಗೆ ಬರುವಂತೆ ಹೇಳ್ತೀನಿ. ಆ ಸಮಯಕ್ಕೆ ನೀವೂ ಬಂದ್ಬಿಡಿ."

"ನೋ... ನಿನ್ನ ಆಫೀಸಿಗೆ ನಾನು ಬರೋದು ಸರಿಯಲ್ಲ... ಅವನು ನಮ್ಮ ಮನೆಗೂ ಬರೋದು ಬೇಡ... ನಮ್ಮ ಗೆಸ್ಟ್ ಹೌಸ್ ಇದೆಯಲ್ಲ. ಅಲ್ಲಿಗೆ ಬರುವಂತೆ ಹೇಳು... ಅವನು ಒಬ್ಬನೇ ಬರಲಿ. ಬೇರೆ ಯಾರೂ ಬರೋದು ಬೇಡ." ಸೂಚ್ಯವಾಗಿ 'ನೀನೂ ಬರೋದು ಬೇಡ' ಅಂತ ತಿಳಿಸಿದಾನೆ ಅಂತೆನ್ನಿಸಿ, ಸ್ವಲ್ಪ ಪಿಚ್ಚೆನ್ನಿಸಿತು. ಆದರೆ ತಂದೆಯಿಂದ ಈ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಲಿಲ್ಲ. ಉದ್ದೇಶ ಏನಿರಬಹುದು? ತಿಳಿಯಬೇಕೆನ್ನಿಸಿತು.

ಮುರಳಿ, ಮಧುಗೆ ಫೋನ್ ಮಾಡಿ, ಗೆಸ್ಟ್ ಹೌಸ್‌ನಲ್ಲಿ ಪುರುಷೋತ್ತಮರನ್ನು ಭೇಟಿಯಾಗಬೇಕೆಂದು ತಿಳಿಸಿದ.

"ಅವರು ಯಾರು, ನಮ್ಮ ಮನೆಗ್ಗೆ ಯಾಕೆ ಬಂದಿದ್ರು ಅಂತ ತಿಳ್ಕೊಂಡು ಹೇಳಿ ಅಂತ ಹೇಳಿದ್ನಲ್ಲ ಮಿಸ್ಟರ್ ಮುರಳೀಧರ್... ಈಗ ಯಾಕೆ ಈ ಭೇಟಿ?"

"ಅವರು ನಿಮ್ಜೊತ್ರ ಮಾತಾಡ್ಬೇಕು ಅಂತ ಹೇಳಿದ್ರು... ಮಾತಾಡಿ..."

"ಅವರು ಪೋಲೀಸ್ ಇಲಾಖೆಯವರು, ನೇರವಾಗಿ ಭೇಟಿಯಾಗಿ ಮಾತಾಡೊಕ್ಕೆ ಏನಿರುತ್ತೆ. ಅವರ ಉದ್ದೇಶ ಏನೂಂತ ತಿಳ್ಕೊಂಡಿದ್ರೆ ಸಾಕಾಗಿತ್ತು."

"ಅದನ್ನು ಅವರೇ ಹೇಳಬಹುದು... ಮಾತಾಡಿ ಗೊತ್ತಾಗುತ್ತೆ."

"ಅವರ ಸ್ವಭಾವ ಹೇಗೆ? ನೋಡೋಕೆ ಹೇಗಿದಾರೆ?"

"ನೀವೇ ನೋಡ್ತೀರಲ್ಲ. ಗೊತ್ತಾಗುತ್ತೆ... ಸಾಯಂಕಾಲ ಏಳು ಗಂಟೆಯ ಹೊತ್ತಿಗೆ ಅವರು ನಿಮ್ಮನ್ನು ಭೇಟಿಯಾಗ್ತಾರೆ... ಲೇಟ್ ಮಾಡ್ಬೇಡಿ."

"ನೀವೂ ಬರ್ತೀರಾ ಮುರಳೀಧರ್... ನಂಗೆ ಒಬ್ಬನಿಗೇ ಏನು ಮಾತಿರುತ್ತೆ? ಸ್ವಲ್ಪ ಭಯವೂ ಆಗುತ್ತೆ." ಮುರಳಿ ನಕ್ಕ.

"ಭಯ ಪಡೋಕ್ಕೆ ಏನೂ ಕಾರಣ ಇಲ್ಲ. ಬೇಕಾದ್ರೆ ನಿಮ್ಮ ತಾಯೀನೂ ಜೊತೇಲಿ ಕರ್ಕೊಂಡು ಹೋಗಿ..." ಸಲಹೆಯನ್ನು ನೀಡಿದ.

"ಬೇಡ... ಬೇಡ... ಅಮ್ಮಂಗೆ ಈ ವಿಷಯ ಗೊತ್ತಾಗ್ಬಾರ್ದು... ಅವರು ನನ್ನನ್ನು ಯಾವುದಾದ್ರೂ ವಿಷಯಕ್ಕೆ ಹೆದರಿಸಿದ್ರೆ ಏನ್ಮಾಡೋದು?"

"ಅಂಥಾದ್ದೇನಾದ್ರೂ ವಿಷಯ ಇದ್ದರೆ ನನಗೆ ತಕ್ಷಣವೇ ಫೋನ್ ಮಾಡಿ. ನಾನು ಅವರನ್ನು ವಿಚಾರಿಸ್ತೀನಿ... ನಿಮಗೆ ಚಿಂತೆ ಬೇಡ."

"ನಾನು ವಿನುತ ಅನ್ನೋ ಹುಡ್ಗೀನ ಒಪ್ಕೊಂಡಿದೀನಲ್ಲ... ಅದರ ಬಗ್ಗೆ ಏನಾದ್ರೂ ಮಾತು ಇರಬಹುದಾ ಅಂತ ಅನುಮಾನ..."

"ಅದನ್ನು ನಾನ್ಹೇಗೆ ಹೇಳ್ಲಿ? ಒಂದ್ಕೆಲ್ಸ ಮಾಡಿ. ಅವರ ಹತ್ರ ಮಾತಾಡಿದ್ಮೇಲೆ ನನ್ನನ್ನ ಭೇಟಿ ಮಾಡಿ. ಏನು ಮಾತುಕತೆ ನಡೀತು ಅಂತ ನಂಗೆ ಹೇಳಿ." ಎಂದು ಹೇಳಿ ಲೈನ್ ಕಟ್ ಮಾಡಿದ. ಮನದಲ್ಲೇ ನಕ್ಕೊಂಡ. 'ಈಗ ನನ್ನ ಸಹಾಯವೇ ಬೇಕಾಯ್ತು ಅಲ್ವಾ ನಿಂಗೆ? ಆವತ್ತು ಬೇಡಾಂತ ಅಂದ್ರೂ ವಿನುತನ್ನ ನೋಡೋಕೆ ಹೋಗಿದ್ದೆ... ನೀನೇನೋ ಒಪ್ಪಿದೀನಿ ಅಂತ ಹೇಳ್ತಿದೀಯ... ಆದರೆ ನಿಮ್ಮ ಮಹಾತಾಯಿ! ಅವರಿಗೆ ವಿನುತಾ ಒಪ್ಪಿಗೆ ಆಗಿಲ್ಲ... ಅದಕ್ಕೇ ಏನಾದ್ರೂ ಅಪವಾದವನ್ನು ವಿನುತಳ ತಲೆಗೆ ಕಟ್ಟಿ, ನಿನ್ನಿಂದ ದೂರವಿಡುವ ಪ್ಲ್ಯಾನ್ ಅವರಿಗೆ... ವಿನುತ ನನ್ನನ್ನ ಪ್ರೀತಿಸ್ತಿದಾಳೆ ಅಂತ ಆಕೆಗೆ ಗೊತ್ತಾದ ಕೂಡ್ಲೇ ನಿನಗೆ ತಾಕೀತು... ಆದರೆ ಈ ವಿಷಯ ನಿಂಗೆ ಮೊದಲೇ ಗೊತ್ತಲ್ವಾ? ಮತ್ಯಾಕೆ ಈ ನಾಟಕ? ಈ ಮಧ್ಯೆ ನಮ್ಮಪ್ಪನ ಕಿತಾಪತಿ ಏನು? ಅವರಿಗೆ ವಿನುತ ನನ್ನನ್ನು ಪ್ರೀತಿಸುತ್ತಿರುವ ವಿಷಯ ತಿಳಿದು, ನಮ್ಮಿಬ್ಬರನ್ನು ದೂರ ಮಾಡುವ ಆಲೋಚನೆಯಿಂದ ಅವರ ಮನೆಗೆ ಹೋಗಿ ಏನಾದರೂ ಹೇಳಿರಬಹುದೇ? ಆಕೆ ಅದನ್ನು ಮಗನಿಗೆ ಹೇಳಿಲ್ಲದೇ ಇರಬಹುದು. ಎಂಥಾ ತಮಾಷೆ ಅಲ್ವಾ? ವಿನುತಾ ತನ್ನ ಪ್ರೇಯಸಿ. ಮಧು ಅವಳನ್ನು ಒಪ್ಪಿಕೊಂಡಿದ್ದಾನೆ. ಅವನ ತಾಯಿಗೆ ಈ ಮದುವೆ ಇಷ್ಟವಿಲ್ಲ. ಅದಕ್ಕೇ ಅವಳ ಮೇಲೆ ಪಿತೂರಿ.... ಅದಕ್ಕೆ ನನ್ನ ಡ್ಯಾಡಿ ಏನೋ ಹೆಲ್ಪ್ ಮಾಡ್ತಿದಾರೆ... ಅದಕ್ಕೆ ಈ ವಿಷಯ ಅಮ್ಮಂಗೆ ಗೊತ್ತಾಗಬಾರದು ಅಂತ ಹೇಳಿದ್ರೇನೋ... ಏನಾದರಾಗಲೀ ಮಧುಸೂದನನಿಂದ ವಿಷಯ ಏನು ಅಂತ ತಿಳಿದೇ ತಿಳಿಯುತ್ತೆ.'

ಎಂದು ಹೇಳಿಕೊಂಡು ತನ್ನ ಕೆಲಸದ ಕಡೆ ಗಮನ ಕೊಟ್ಟ.

ಅಷ್ಟರಲ್ಲಿ ಅವನ ಆಫೀಸಿಗೆ ಮಧ್ಯ ವಯಸ್ಸಿನ ಹೆಂಗಸೊಬ್ಬಳು ಬಂದು ತನ್ನ ಪರಿಚಯವನ್ನು ಹೇಳಿಕೊಂಡಳು.

"ನನ್ನ ಹೆಸರು ವಸುಧಾ ಅಂತ. ನನಗೆ ಇಬ್ಬರು ಹೆಣ್ಣು ಮಕ್ಕಳು. ಅವಳಿ ಮಕ್ಕಳು. ಇಬ್ಬರೂ ಹೈಸ್ಕೂಲಿನಲ್ಲಿ ಓದುತ್ತಿದ್ದಾರೆ. ಈಗ ಹದಿನೈದು ದಿನಗಳ ಕೆಳಗೆ, ಇಬ್ಬರ ಹೆಸರಿಗೆ ಒಂದು ಲೆಟರ್ ಬಂದಿತು. ಒಡೆದು ಓದಿದೆ.... ಯಾವನೋ ಲೋಫರ್ ಲವ್ ಲೆಟರ್ ಬರೆದಿದಾನೆ.... ನನ್ನ ಮಕ್ಕಳು ಇನ್ನೂ ಚಿಕ್ಕವರು... ಭಯ ಆಗುತ್ತೆ. ಅವರ ಭವಿಷ್ಯದ ಬಗ್ಗೆ ಚಿಂತೆ ಕಾಡುತ್ತೆ... ಏನ್ಮಾಡ್ಬೇಕು ಅಂತ ತಿಳೀತಿಲ್ಲ."

"ಭಯ ಪಡ್ಬೇಡಿ ಮೇಡಂ... ಈಗ ನನ್ನಿಂದ ಏನು ಸಹಾಯ ಆಗ್ಬೇಕು ಅಂತ ಹೇಳಿ."

"ಒಂದು ವಾರದ ನಂತರ ಮತ್ತೆ ಎರಡು ಲೆಟರ್‌ಗಳು ಬಂದಿವೆ. ಅಶ್ಲೀಲವಾಗಿ ಏನೇನೋ ಬರೆದಿದಾನೆ. ಈ ಲೆಟರ್ ನನ್ನ ಮಕ್ಕಳ ಕೈಗೆ ಸಿಕ್ಕಿ ಓದಿದರೆ, ಅಸಹ್ಯ ವಾಗುವಂತಿದೆ. ಇದಕ್ಕೆ ಏನು ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ."

"ಆ ಲೆಟರ್‌ಗಳನ್ನು ತಂದಿದೀರಾ?"

"ಹೂಂ, ತಂದಿದೀನಿ. ಆದರೆ ಅದನ್ನು ಮರ್ಯಾದಸ್ಥರು ಓದುವಂಥದ್ದಲ್ಲ." ಆಕೆ ಸಂಕೋಚದಿಂದ ನುಡಿದಳು.

"ಪರವಾಗಿಲ್ಲ ಕೊಡಿ. ಅದರಲ್ಲಿ ಏನು ಬರೆದಿದೆ ಅನ್ನುವುದು ನನಗೆ ಮುಖ್ಯವಲ್ಲ. ಯಾರು ಬರೆದಿರೋದು ಅಂತ ತಿಳಿದ್ಕೊಳ್ಳಬೇಕಾಗಿದೆ. ನಾನು ಪತ್ತೆ ಮಾಡಿಸ್ತೀನಿ. ನಿಮಗೆ ಯಾರ ಮೇಲಾದ್ರೂ ಅನುಮಾನ ಇದೆಯಾ?"

"ಯಾರು ಅಂತ ಹೇಳ್ಲಿ? ನಮ್ಮ ಮನೆಯ ಅಕ್ಕಪಕ್ಕ ಮನೆಗಳಿವೆ. ಎದುರು ಸಾಲಿನಲ್ಲಿ ಮನೆಗಳಿವೆ. ಎಷ್ಟೋ ಮನೆಗಳಲ್ಲಿ ಯಾರು ವಾಸವಾಗಿದಾರೆ ಅಂತ ಸಹ ತಿಳಿಯದು."

"ಸ್ಕೂಲಿನಲ್ಲಿ? ಬಾಯ್ಫ್ರೆಂಡ್ಸ್! ಟೀಚರ್ಸ್ ಯಾರಾದ್ರೂ ಆಗಿರಬಹುದಾ?"

"ನನ್ನ ಮಕ್ಕಳು ಓದುತ್ತಿರುವುದು ಗರ್ಲ್ಸ್ ಹೈಸ್ಕೂಲ್. ಅಲ್ಲಿಯವರೆಲ್ಲಾ ಲೇಡಿ ಟೀಚರ್ಸ್... ಸ್ಕೂಲಿಗೆ ನಡೆದ್ಕೊಂಡೇ ಹೋಗಿ ಬರುತ್ತಾರೆ."

"ಒಂದ್ನಾಲ್ಕು ದಿನ ಅವರ ಹಿಂದೆ ಸ್ವಲ್ಪ ದೂರದಲ್ಲಿ ನೀವು ಅವರ ಸ್ಕೂಲಿನ ತನಕ ಹೋಗಿ ಬನ್ನಿ... ನಿಮ್ಮ ಪರಿಚಯದ ಮುಖ ಕಾಣುತ್ತಾ ಅಂತ ನೋಡಿ..."

"ನಾನು-ನನ್ನ ಗಂಡ ಇಬ್ಬರೂ ಕೆಲಸಕ್ಕೆ ಹೊರಟು ಹೋಗ್ತೀವಿ."

"ಒಂದ್ನಾಲ್ಕು ದಿನ ರಜಾ ಹಾಕಿ ಮೇಡಂ. ನಿಮ್ಮ ಮಕ್ಕಳಿಗೋಸ್ಕರ ಇಷ್ಟು

ಮಾಡಕ್ಕೆ ಆಗೋಲ್ವಾ? ನಿಮ್ಮ ಹಸ್ಬೆಂಡ್ ಏನು ಮಾಡ್ತಾರೆ?"

"ಅವರು ಒಂದು ಪ್ರೈವೇಟ್ ಕಂಪೆನೀಲಿ ಜನರಲ್ ಮ್ಯಾನೇಜರ್ ಆಗಿದಾರೆ. ಆದರೆ, ಅವರಿಗೆ ಈ ವಿಷಯ ತಿಳಿಯಬಾರದು. ತಿಳಿದರೆ, ವಿನಾಕಾರಣ ಮಕ್ಕಳ ಮೇಲೆ ಅನುಮಾನ ಪಡ್ತಾರೆ... ನನ್ನ ಮಕ್ಕಳು ಮುಗ್ಧರು... ನನಗೂ ಕೆಲಸ ಬಿಡುವಂತೆ ಒತ್ತಾಯ ಮಾಡ್ತಾರೆ... ಕೆಲಸಕ್ಕೆ ಹೋಗದಿದ್ರೆ ಮನೇಲಿ ಪ್ರಾಬ್ಲಂ ಆಗುತ್ತೆ ಸಾರ್."

"ನಿಮ್ಮ ಹತ್ತಿರದ ಸಂಬಂಧಿಗಳು ಯಾರಾದ್ರೂ ಬಂದು ಇರಬಹುದಲ್ಲ."

"ಅಂಥೋರು ಯಾರೂ ಇಲ್ಲ. ಅಲ್ಲದೇ ಯಾರಿಗೂ ತಿಳಿಸುವಂತಿಲ್ಲ. ಅದೆಲ್ಲಾ ಪಬ್ಲಿಕ್ ಆಗಿಬಿಡುತ್ತೆ. ಅಕ್ಕಪಕ್ಕದವರಿಗೆ ಸಹ ತಿಳಿಸುವಂತಿಲ್ಲ."

"ಅಕ್ಕಪಕ್ಕದಲ್ಲಿ ಫ್ಯಾಮಿಲಿಗಳಿವೆಯಾ?"

"ಸರಿಯಾಗಿ ಗೊತ್ತಿಲ್ಲ. ತಿಳಿದುಕೊಳ್ಳಕ್ಕೆ ಸಮಯವೂ ಇಲ್ಲ. ಆಸಕ್ತಿಯೂ ಇಲ್ಲ."

"ಬೇಡ ಬಿಡಿ.... ನಿಮ್ಮ ಮನೆಯ ವಿಳಾಸ ಹಾಗೂ ಫೋನ್ ನಂಬರ್ ಕೊಟ್ಟು, ಹಾಗೇ ಆ ಪತ್ರಗಳನ್ನು ನನಗೆ ಕೊಡಿ. ಮುಂದಿನ ಕೆಲಸವನ್ನು ನನಗೆ ಬಿಡಿ."

"ದಯವಿಟ್ಟು ಆ ಲೆಟರ್‌ಗಳನ್ನು ಓದಬೇಡಿ..." ಎಂದು ಹೇಳಿ, ಆಕೆ ವಿವರಗಳನ್ನು, ಕವರ್ ಅನ್ನು ಕೊಟ್ಟು, ಥ್ಯಾಂಕ್ಸ್ ಹೇಳಿ, ಎದ್ದು ಹೋಗಿದ್ದಳು. ಇವನು ಗಲ್ಲಕ್ಕೆ ಕೈ ಊರಿ ಆಲೋಚನೆ ಮಾಡುತ್ತಾ ಕುಳಿತ. ಅಷ್ಟರಲ್ಲಿ ವಿನುತಾ ಫೋನ್ ಮಾಡಿದ್ದಳು. ರಿಸೀವರನ್ನೆತ್ತಿಕೊಂಡ. ವಿನುತಾ ಸಿಡುಕಿದಳು.

"ಮೊಬೈಲ್ ಫೋನ್‌ಗೆ ಮಾಡಿದ್ರೆ ಎತ್ತುತಾನೇ ಇಲ್ವಲ್ಲಾ ಮುರಳೀ... ಯಾಕೆ ನನ್ಮೇಲೆ ಕೋಪಾನಾ? ಮಾತಾಡಕ್ಕೆ ಇಷ್ಟವಿಲ್ವಾ?"

"ಓ... ನೀನಾ... ಏನೋ ಯೋಚಿಸ್ತಿದ್ದೆ... ಒಂದು ಕೇಸ್ ಬಂದಿತ್ತು. ಅಷ್ಟೇ."

"ಕೇಸ್ ಬಂದುಬಿಟ್ಟರೆ, ನನ್ನನ್ನ ಮರೆತೇ ಬಿಡೋದಾ?"

"ಇದೂ ಮುಖ್ಯ ಅಲ್ವಾ ವಿನೂ.... ಇದು ನನ್ನ ವೃತ್ತಿ."

"ಹಾಗಾದ್ರೆ ವೃತ್ತಿಗೇ ಅಂಟಿಕೊಂಡಿರು, ನಾನ್ಯಾಕೆ?"

"ವೃತ್ತಿಯೂ ಬೇಕು, ನೀನೂ ಬೇಕು. ವೃತ್ತಿ ಹೊಟ್ಟೆ ತುಂಬಿಸುತ್ತೆ... ನೀನು ಹೃದಯವನ್ನು ತುಂಬಿಸ್ತೀಯ."

"ಸಾಕು ನಿನ್ನ ವಾದ... ನಿನಗೆ ಹೃದಯ ಇದೆ ಅಂತ ಗೊತ್ತಿರ್ಲಿಲ್ಲ."

"ಓ... ಕೇ... ಹನುಮಂತನ ಥರ ಬಗೆದು ತೋರಿಸ್ಲಾ? ಅಲ್ಲಿ ನೀನೇ ನೀನು."

"ಅಲ್ಲೆಲ್ಲೋ ನಾನು ಇದ್ದರೆ ಏನು ಪ್ರಯೋಜನ? ಇಲ್ಲಿ ನನ್ನನ್ನು ಇನ್ಯಾರೋ ಮದುವೆಯಾಗಿ ಕರ್ಕೊಂಡು ಹೋಗ್ತಾರೆ ಅಷ್ಟೇ... ಇನ್ನೂ ನಿನಗೆ ಅರ್ಥವಾಗೋಲ್ಲ ಅಲ್ವಾ?"

"ಈಗೇನು ಮಾಡ್ಬೇಕು ಹೇಳು..."

"ನನ್ನನ್ನೇ ಕೇಳ್ತೀಯಲ್ಲ. ನಾನು ನಿಮ್ಮ ಮನೆಗೆ ಬಂದು ಬಿಡ್ತೀನಿ. ಹೇಗೂ ಆಂಟಿ ನನ್ನನ್ನು ನೋಡಿಕೊಳ್ತಾರೆ. ಅಷ್ಟೇ..."

"ತಮಾಷೆ ಮಾಡ್ತಿದೀಯಾ? ಈ ಕೆಲಸಾನ ಎಂದು ಬೇಕಾದ್ರೂ ಮಾಡಬಹುದು. ಆ ವರಮಹಾಶಯಂದು ಏನಂತೆ ಕತೆ?"

"ಅವತ್ತೇ ಹೇಳಿದ್ನಲ್ಲ ಮುರಳೀ... ಒಪ್ಪಿಗೆ ಕೊಟ್ಟು ಬಿಟ್ಟಿದಾನೆ. ಆದಷ್ಟು ಬೇಗ ಲಗ್ನಪತ್ರಿಕೆಯೂ ಆಗಿ ಬಿಡುತ್ತೆ... ಆಗೇನು ಮಾಡಲಿ?"

"ಯಾಕೆ ಹಾಗೆ ಎಕ್ಸೈಟ್ ಆಗ್ತೀಯ? ಅದು ಅಷ್ಟು ಸುಲಭ ಅಲ್ಲ. ನಾನು ಅವನ ಹತ್ರ ಮಾತಾಡ್ಲಾ?"

"ಏನಂತ? ಅವನು ನಿನ್ನ ಮಾತನ್ನ ಕೇಳಿಬಿಡ್ತಾನಾ?"

"ಸಮಯ ಬಂದರೆ ಎಲ್ಲರೂ ನನ್ನ ಮಾತನ್ನು ಕೇಳ್ಬೇಕಾಗುತ್ತೆ ವಿನೂ... ನಮ್ಮಿಬ್ಬರ ಪ್ರೀತಿಯ ವಿಷಯ ಗೊತ್ತಾದ್ರೆ, ಅವನು ನಿನ್ನ ಕಡೆ ಕಣ್ಣೆತ್ತಿ ಸಹ ನೋಡೋಲ್ಲ."

"ಅವನು ಅಪ್ಪಂಗೆ ಹೇಳ್ತಾನೆ... ಅಪ್ಪ ರಂಪ ಮಾಡ್ತಾರೆ."

"ಹಾಗೆಲ್ಲಾ ಏನೂ ಆಗೋಲ್ಲ... ಇನ್ನೊಂದೆರಡು ದಿನ ಸುಮ್ನಿರು... ಎಲ್ಲಾ ಡಿಸೈಡ್ ಆಗುತ್ತೆ... ವರೀ ಮಾಡ್ಕೋಬೇಡ... ನಂಗೆ ಒಂದು ಫೇವರ್ ಮಾಡೊಕ್ಕೆ ಆಗುತ್ತಾ?"

"ಇಲ್ಲ. ನಿನ್ನ ಮಾತನ್ನು ಕೇಳುವ ಮೂಡ್‌ನಲ್ಲಿ ನಾನಿಲ್ಲ."

"ನೀನು ಮೊಂಡು. ನಿನಗೆ ಮೊಂಡೀತಾ ಎಂದು ಹೆಸರನ್ನಿಡಬೇಕಾಗಿತ್ತು. ನಾಳೆ ನಾನು ನಿನ್ನ ತಂದೆಯ ಹತ್ರ ಮಾತಾಡ್ತೀನಿ... ಎಲ್ಲಾ ಸರಿ ಹೋಗುತ್ತೆ."

"ಬೇಡ, ಬೇಡ... ಅಪ್ಪನ ಹತ್ರ ಮಾತಾಡ್ಬೇಡ. ಮೊದಲು ನಿನ್ನ ಡ್ಯಾಡಿಯ ಹತ್ರ ಮಾತಾಡು. ಅವರು ಒಪ್ಕೊಂಡ್ರೆ ಎಲ್ಲಾ ಸುಲಭ ಆಗುತ್ತೆ."

"ಒಪ್ಕೊಳ್ಳಲೇ ಬೇಕು. ಹಾಗೆ ಏನಾದ್ರೂ ಉಪಾಯ ಹುಡುಕ್ತೀನಿ... ಡ್ಯಾಡಿ ಅಮ್ಮನಷ್ಟು ಸಿಂಪಲ್ ಅಲ್ಲ... ಒಂದೆರಡು ಕುತೂಹಲಕರವಾದ ವಿಷಯಗಳಿವೆ. ನಾನು ನಿನಗೆ ಹೇಳಬೇಕು. ನಂಗೆ ಎಲ್ಲಿ ಸಿಗ್ತೀಯ ಹೇಳು."

"ನನ್ನನ್ನು ಮೀಟ್ ಮಾಡೋಕ್ಕೆ ನಿಂಗೆ ಟೈಂ ಇದೆಯಾ?" ಹಂಗಿಸಿದಳು.

"ಟೈಂ ಮಾಡ್ಕೋತೀನಿ... ಎಲ್ಲಿಗೆ ಬರ್ಲಿ ಹೇಳು... ನಾಳೆ ನನ್ನ ಮೊದಲ

ಕೆಲಸ ಅದು. ಪ್ರಾಮಿಸ್..."

"ಖಂಡಿತಾನಾ? ಓ... ಕೇ... ನನ್ನ ಫ್ರೆಂಡ್ ಮನೆಗೆ ಬರ್ತೀನಿ. ಶ್ರೀರಾಮ ದೇವರ ದೇವಸ್ಥಾನದ ಹತ್ತಿರ ಇದೆ. ಅಲ್ಲಿಗೆ ಬಾ... ಹನ್ನೊಂದು ಗಂಟೆಗೆ... ತಡ ಮಾಡಿದ್ರೆ ನಾನು ಮತ್ತೆಂದೂ ನಿನ್ಹತ್ರ ಮಾತಾಡೋಲ್ಲ."

"ಇಲ್ಲ ವಿನೂ, ನಾಳೆ ಖಂಡಿತಾ ಮೀಟ್ ಮಾಡೋಣ... ಈಗ್ಲಾದ್ರೂ ಹೇಳು ನಂಗೊಂದು ಫೇವರ್ ಮಾಡ್ತೀಯಾ?"

"ಹೂಂ, ಹೇಳು, ಆದರೆ ಮಾಡ್ತೀನಿ."

"ನನಗೆ ಬೇಕಾದವರೊಬ್ಬರ ಮೇಲೆ ನಂಗೆ ಏನೋ ಸಂಶಯ ಬಂದಿದೆ. ಅದು ಕ್ಲಿಯರ್ ಆಗ್ಬೇಕು. ಈ ವಿಷಯದಲ್ಲಿ ನೀನು ನಂಗೆ ಸಹಾಯ ಮಾಡ್ಬೇಕು."

"ನಿಂಗೆ ಬೇಕಾದವರಾ? ಯಾರವರು?"

"ತುಂಬಾ ಹತ್ತಿರದವರು. ಈಗ ಫೋನ್‌ನಲ್ಲಿ ಹೇಳಕ್ಕಾಗೊಲ್ಲ. ನಾಳೆ ಸಿಕ್ಕಾಗ ಹೇಳ್ತೀನಿ."

"ಓ... ಕೇ. ನಂಗೆ ಎಷ್ಟು ಫೀಸು ಕೊಡ್ತೀಯಾ?"

"ನೀನು ಕೇಳಿದಷ್ಟು."

"ಸರಿ. ರಾತ್ರಿಯೆಲ್ಲಾ ಯೋಚಿಸಿ, ಎಷ್ಟು ಕೇಳಬಹುದು ಅಂತ ಲೆಕ್ಕ ಹಾಕ್ತೀನಿ. ಈಗ ಏನ್ಮಾಡ್ತಿದೀಯ?"

"ನಿನ್ಹತ್ರ ಮಾತಾಡ್ತಾ ಇದೀನಿ..."

"ಏಯ್ ಅದಲ್ಲ.... ಹೋಗ್ಲಿ ಬಿಡು. ನಾನು ನಾಳೆ ಯಾವ ಸೀರೆ ಉಟ್ಕೊಂಡು ಬರಲಿ? ಅಥವಾ ಯಾವ ಡ್ರೆಸ್ಸು ಹಾಕ್ಕೊಂಡು ಬರ್ಲಿ?"

"ನಿನ್ನಿಷ್ಟ ಏನೂ... ಅದೆಲ್ಲಾ ನಂಗೆ ಗೊತ್ತಾಗೊಲ್ಲ."

"ಡಿಟೆಕ್ಟಿವ್ ಅಂತ ಹೇಳ್ಕೊತೀಯ... ಸಣ್ಣ ಸಣ್ಣ ವಿಷಯ ಕೂಡಾ ಗೊತ್ತಾಗಬೇಕು. ಇಲ್ದಿದ್ರೆ ಏನು ಉಪಯೋಗ? ಓ.ಕೆ... ಈಗ ಮಾತು ಸಾಕು. ನಾಳೆ ನಾನು ನಿಂಗೆ ಒಂದು ಟೆಸ್ಟ್ ಕೊಡ್ತೀನಿ.....ಅದರಲ್ಲಿ ನೀನು ಪಾಸಾಗ್ಲೇಬೇಕು."

"ಓ... ಕೇ... ಪಾಸಾಗ್ದೇ ಇರೋವಷ್ಟು ದಡ್ಡ ನಾನಲ್ಲ... ಬೈ... ಬೈ..." ನಕ್ಕ.

"ಬೈ ಮುರಳಿ..." ಅವಳು ಮಾತನ್ನು ಮುಗಿಸಿದಳು. ಮುರಳಿ ಮೈ ಮುರಿದು, ಕುರ್ಚಿಯ ಬೆನ್ನಿಗೆ ಒರಗಿದ. ಮೈಂಡ್ ಹಗುರವಾಗಿದೆ ಎನಿಸಿತ್ತು. 'ವಿನುತಳ ಹತ್ರ ತಮಾಷೆಯಾಗಿ ಮಾತಾಡಿದ್ರೆ ಮನಸ್ಸು ಸ್ವಲ್ಪ ಹಗುರವಾಗುತ್ತೆ. ಆದರೆ ಯಾವಾಗ ಮಾತನ್ನಾಡಿದ್ರೂ ಜೋರು ಮಾಡ್ತಾಳೆ. ಮದುವೆ ಬಗ್ಗೆ ಕೇಳ್ತಾಳೆ.. ಹೀಗೇ ಇಬ್ಬರೂ ಸ್ನೇಹಿತರಂತೆ ಇರಕ್ಕೆ ಆಗೊಲ್ವಾ? ಈ ವಿಷಯದಲ್ಲಿ ನಂಗೆ ಅಪ್ಪಂದೇ ಅನುಮಾನ.... ಅವರು ಒಪ್ತಾರೆ ಅಂತ ನಂಗೆ ಅನ್ನಿಸುವುದಿಲ್ಲ....

ಪೋಲೀಸ್ ಇಲಾಖೆಯವರು ಅಂತ ವಿನುತಳ ತಂದೆಯೂ ಒಪ್ಪಲಾರರು.... ಆದರೆ ಇವಳೋ ಮದುವೆ ಮದುವೆ ಅಂತ ಒತ್ತಾಯ ಮಾಡ್ತಾಳೆ... ನಾನು ಇವಳನ್ನು ಪ್ರೀತಿಸ್ತಿದೀನಿ ಅಂತ ತಿಳಿದಿರೋದ್ರಿಂದ ಮಧು ಖಂಡಿತಾ ಇವಳನ್ನು ಒಪ್ಪಲಾರ.... ಅಲ್ಲದೇ ಅವನ ತಾಯಿಗೆ ವಿನುತ ಒಪ್ಪಿಗೆಯಿಲ್ಲ. ಅಲ್ಲಿಗೆ ಸದ್ಯಕ್ಕೆ ವಿನುತಳ ಮದುವೆ ನೆರವೇರುವುದು ಸಾಧ್ಯವಿಲ್ಲ. ನಾಳೆ ವಿನುತನ್ನ ಭೇಟಿಯಾದಾಗ ಈ ವಿಷಯವನ್ನು ತಿಳಿಸಲೇಬೇಕು.... ಆತಂಕ ಪಡಬೇಡ ಅಂತ ತಿಳಿಸಬೇಕು' ಅಂತ ತನ್ನಲ್ಲೇ ಅಂದುಕೊಂಡ.

*　　*　　*

ನಿಮ್ಮ ಡ್ಯಾಡಿಗೆ ಆಕ್ಸಿಡೆಂಟ್ ಆಗಿದೆಯಂತೆ... ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದಾರಂತೆ." ಅವನ ಅಸಿಸ್ಟೆಂಟ್ ಹೇಳಿದಾಗ, ಮುರಳಿ ದೊಪ್ಪನೆ ಕುರ್ಚಿಯ ಮೇಲೆ ಕುಳಿತ.

"ನಿಮಗ್ಯಾರು ಹೇಳಿದ್ದು!" ತಡವರಿಸುತ್ತಾ ಕೇಳಿದ.

"ನಿಮ್ಮ ಫೋನ್‌ಗೆ ಟ್ರೈ ಮಾಡಿದ್ರಂತೆ, ನಿಮ್ಮ ಡ್ಯಾಡಿಯ ಆಫೀಸಿನವರೇ... ಮೊದಲು ನಿಮಗೆ ತಿಳಿಸಿ ಅಂತ ಹೇಳಿದಾರೆ... ನೀವು ಲೈನ್‌ನಲ್ಲಿ ಬಿಸಿಯಾಗಿದ್ರಲ್ಲ ಸಾರ್.... ನಿಮ್ಮ ತಾಯಿಗೆ ಇನ್ನೂ ವಿಷಯ ತಿಳಿಸಿಲ್ಲವಂತೆ."

"ಯಾವ ನರ್ಸಿಂಗ್ ಹೋಂ ಅಂತ ಗೊತ್ತಾಯ್ತಾ? ಅವರ ನಂಬರ್ ಅನ್ನು ತೆಗೆದುಕೊಂಡಿದೀರಾ?"

'ಹೂಂ' ಎನ್ನುತ್ತಾ ಅವನು ಕೊಟ್ಟ ನಂಬರ್ ಅನ್ನು ಬರೆದಿಟ್ಟುಕೊಂಡು, ತಕ್ಷಣವೇ ಆ ನಂಬರ್ರಿಗೆ ಕಾಲ್ ಮಾಡಿದ. ಆದರೆ ಅದು ಎಂಗೇಜ್ ಆಗಿತ್ತು. ತಕ್ಷಣವೇ ಮನೆಗೆ ಹೊರಟ. "ನಾನು ಮನೆಗೆ ಹೋಗ್ತಾ ಇದೀನಿ. ಯಾರೇ ಕಾಲ್ ಮಾಡಿದ್ರೂ, ನಾನು ಸಿಗುವುದಿಲ್ಲ ಅಂತ ಹೇಳಿ... ಯಾವುದಾದರೂ ಅರ್ಜೆಂಟ್ ವಿಷಯ ಇದ್ದರೆ ಮಾತ್ರ ನನಗೆ ಫೋನ್ ಮಾಡಿ." ಅಂತ ಹೇಳಿ, ಕಾರನ್ನು ಪಾರ್ಕ್ ಮಾಡಿದ್ದ ಕಡೆಗೆ ನಡೆದ.

ಬಾಗಿಲನ್ನು ತೆರೆದ ತಾಯಿಯನ್ನು ಆತಂಕದಿಂದ ನೋಡಿದ. ಆ ಹೊತ್ತಿಗೆ ಅವಳಿಗೂ ವಿಷಯ ತಿಳಿದಿತ್ತು. "ನಿಮ್ಮ ಡ್ಯಾಡೀನ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದಾರಂತೆ. ಈಗ್ಲೇ ಹೋಗೋಣ...." ಆಕೆ ಅವಸರಿಸಿದಳು.

"ನಿಂಗೆ ಯಾರು ಹೇಳಿದ್ರು? ಈಗ ಹೇಗಿದಾರಂತೆ?"

"ಇನ್ನೂ ಜ್ಞಾನ ಬಂದಿಲ್ವಂತೆ ಮುರಳೀ... ತಲೆಗೆ ಪೆಟ್ಟು ಬಿದ್ದಿದೆಯಂತೆ. ತಕ್ಷಣವೇ ಆದರ್ಶ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡಿದಾರೆ. ಗಾಡೀನ

ವೇಗವಾಗಿ ಓಡಿಸೋದೇ ಇಲ್ಲ. ಸ್ವಲ್ಪ ಹೈ ಬಿ.ಪಿ. ಇದೆ... ಅದೇ ಕಾರಣ ಇರಬಹುದಾ?"

"ಏನು ಕಾರಣ ಅಂತ ಅಲ್ಲಿಗೆ ಹೋದ್ಮೇಲೇ ತಿಳಿಯುತ್ತೆ. ನೀನು ಕಾರಿನಲ್ಲಿ ಕೂತ್ಕೋ. ನಾನು ಈಗಲೇ ಬಂದೆ." ಎಂದು ಆಕೆಯನ್ನು ಮುಂದೆ ಕಳಿಸಿ, ಮತ್ತೆ ತನಗೆ ದೊರೆತಿದ್ದ ನಂಬರ್ರಿಗೆ ಫೋನ್ ಮಾಡಿದ.

ರಿಸೀವ್ ಮಾಡಿದವನು, ಪುರುಷೋತ್ತಮನ ಜೀಪಿನ ಡ್ರೈವರ್ರು. "ಗೆಸ್ಟ್ ಹೌಸ್ ಕಡೆ ಹೋಗಿ ಬರ್ತೀನಿ ಅಂತ ಹೇಳಿ ತಾವೇ ಜೀಪನ್ನು ಡ್ರೈವ್ ಮಾಡ್ಕೊಂಡು ಹೋದ್ರು ಸಾರ್. ಆಮೇಲೆ ಆಕ್ಸಿಡೆಂಟ್ ಆಗಿದೆ. ಜೀಪ್‌ನಲ್ಲಿ ನನ್ನ ಲೈಸೆನ್ಸ್ ಇತ್ತು. ಅದನ್ನು ನೋಡಿ, ನನಗೆ ಫೋನ್ ಮಾಡಿ ವಿಷಯವನ್ನು ತಿಳಿಸಿದರು ಸಾರ್..." ಡ್ರೈವರ್ ನಡುಗುವ ಧ್ವನಿಯಲ್ಲಿ ಹೇಳಿದ.

"ಈಗ ನೀವು ಎಲ್ಲಿದೀರಿ ರಘುರಾಮ್?"

"ನಾನು ನರ್ಸಿಂಗ್ ಹೋಂನಲ್ಲೇ ಇದೀನಿ... ಸಾಹೇಬ್ರಿಗೆ ಇನ್ನೂ ಜ್ಞಾನ ಬಂದಿಲ್ಲ. ಮೇಡಂಗೂ ಫೋನ್ ಮಾಡಿ ಹೇಳಿದೀನಿ. ಅವರನ್ನು ಕರ್ಕೊಂಡು ಬೇಗ ಬನ್ನಿ ಸಾರ್...." ಅವನು ಅಳುವ ಧ್ವನಿಯಲ್ಲಿ ಹೇಳಿದ.

"ಸರಿ ನೀವು ಅಲ್ಲೇ ಇರಿ. ನಾವು ಬರ್ತಾ ಇದೀವಿ" ಎಂದು ಹೇಳಿ ಮುಂಬಾಗಿಲಿಗೆ ಬೀಗ ಹಾಕಿ ಕಾರಿನ ಬಳಿಗೆ ಬಂದ... ವತ್ಸಲಾ ಕಾರನ್ನು ಏರದೇ ಏನನ್ನೋ ಯೋಚಿಸುತ್ತಾ ನಿಂತಿದ್ದಳು.

"ಮಮ್ಮೀ... ಕಾರ್ನಲ್ಲಿ ಕೂತ್ಕೋ ಅಂತ ಹೇಳಿದ್ನಲ್ಲ... ಕೂತ್ಕೋ..." ವತ್ಸಲಾ ಮಗನ ಕಡೆ ನೋಡಿ ನುಡಿದಳು.

"ಒಂದ್ನಿಮಿಷ ಮುರಳೀ, ದೇವರ ಮುಂದೆ ತುಪ್ಪದ ದೀಪಗಳನ್ನು ಹಚ್ಚಿ ಬರ್ತೀನಿ. ಈ ಆತಂಕದಲ್ಲಿ ಹಾಗೇ ಹೊರಟು ಬಿಟ್ಟೆ..."

"ಸರಿ. ಬೇಗ ಬಾ. ನಾನು ಇಲ್ಲೇ ಕಾಯ್ತಾ ಕೂತಿರ್ತೀನಿ." ಎಂದು ಹೇಳಿ ಕಾರನ್ನೇರಿದ. ವತ್ಸಲಾ ಬೀಗದ ಕೈಯನ್ನು ತೆಗೆದುಕೊಂಡು ಮನೆಯ ಕಡೆ ನಡೆದಳು. ಇವನ ಮೊಬೈಲ್ ಹಾಡು ಹಾಡಿತು. "ಹಲೋ" ಎಂದ. ಮಧುಸೂದನ ಕಾಲ್ ಮಾಡಿದ್ದ.

"ಕಮೀಷನರ್ ಪುರುಷೋತ್ತಮರವರಿಗೋಸ್ಕರ ಕಾದೂ ಕಾದೂ ಸಾಕಾಯ್ತು. ಅವರು ಬರ್ಲೇ ಇಲ್ಲ... ನ್ಯಾಮ್ಡ್ಲೀ?" ಮಧುಸೂದನ ಕೇಳಿದ್ದ. ದನಿ ಗಡುಸಾಗಿತ್ತು.

"ನೋಡಿ, ಮಧುಸೂದನ್, ಈಗ ನಾನು ಏನೂ ಹೇಳ್ಲಾರೆ. ನಾನು ಈಗ ಬಿಸಿಯಾಗಿದೀನಿ.... ಮತ್ತೆ ಮಾತಾಡೋಣ." ಕೇಳಿಕೊಂಡ.

"ಅಲ್ಲ ಮುರಳೀಧರ್.... ಮತ್ತೆ ಎಂದು ಸಿಗ್ತಾರೆ? ಬಿರುಸಾಗಿ ಕೇಳಿದ...."

"ನಾನೇನು ಹೇಳ್ಲೀ? ನಮ್ಮ ತಂದೆಗೆ ಆಕ್ಸಿಡೆಂಟ್ ಆಗಿದೆ. ನರ್ಸಿಂಗ್ ಹೋಂನಲ್ಲಿದ್ದಾರೆ. ಅಲ್ಲಿಗೆ ಹೋಗ್ತಾ ಇದೀನಿ."

"ಸಾರೀ.... ಈಗ ಹೇಗಿದಾರೆ ಅವರು? ಆಕ್ಸಿಡೆಂಟ್ ಹೇಗಾಯ್ತು?"

"ನಂಗೂ ಏನೂ ಗೊತ್ತಿಲ್ಲ. ಅಲ್ಲಿಗೆ ಹೋದ್ಮೇಲೇ ತಿಳಿಯೋದು.... ಪ್ಲೀಸ್ ಆಮೇಲೆ ಮಾತನಾಡೋಣ."

"ಓ... ಕೇ... ಅವರು ಬೇಗ ಗುಣಮುಖರಾಗಲಿ. ಆಲ್ ದಿ ಬೆಸ್ಟ್."

"ಥ್ಯಾಂಕ್ಸ್." ಮುರಳಿ, ಮುಧುಸೂದನ್‌ಗೆ ಥ್ಯಾಂಕ್ಸ್ ಹೇಳುವಷ್ಟರಲ್ಲಿ ವತ್ಸಲಾ ಹಿಂತಿರುಗಿದ್ದಳು. ಮುರಳಿ ಬಟನ್ ಒತ್ತಿ ಮೊಬೈಲ್ ಆಫ್ ಮಾಡಿ, ಕಾರನ್ನು ಸ್ಟಾರ್ಟ್ ಮಾಡಿ ಕಾರಿನ ಬಾಗಿಲನ್ನು ತೆರೆದ.

"ಯಾರ ಹತ್ರ ಮಾತಾಡ್ತಿದ್ದೆ? ನರ್ಸಿಂಗ್ ಹೋಂಗಾ?"

"ಇಲ್ಲಮ್ಮ.....ಯಾರೋ ನನ್ನ ಕ್ಲೈಂಟ್.... ಇವತ್ತು ಅವನು ಡ್ಯಾಡೀನ ನೋಡಿ ಮಾತಾಡ್ಬೇಕು ಅಂತ ಟೈಂ ಗೊತ್ತು ಮಾಡಿಕೊಟ್ಟಿದ್ದೆ." ಎನ್ನುತ್ತಾ ಕಾರಿಗೆ ಚಾಲನೆ ನೀಡಿದ.

"ಯಾರ್‍ಯಾರಿಗೋ ಡ್ಯಾಡೀನ ಮೀಟ್ ಮಾಡೋಕ್ಕೆ ಅಪಾಯಿಂಟ್‌ಮೆಂಟ್ ಎಲ್ಲಾ ಕೊಡ್ಬೇಡ ಮುರಳೀ. ಮೊದಲೇ ಅವರಿಗೆ ಟೆನ್ಷನ್, ಬಿ.ಪಿ. ಬೇರೆ."

"ಅವರೇ ಹೇಳಿದ್ರು ಅಂತ ಅಪಾಯಿಂಟ್‌ಮೆಂಟ್ ಫಿಕ್ಸ್ ಮಾಡಿದ್ದೆ. ಪೋಲೀಸ್ ಡಿಪಾರ್ಟ್‌ಮೆಂಟ್‌ನವರ ಗೆಸ್ಟ್ ಹೌಸ್‌ನಲ್ಲಿ ಮೀಟ್ ಮಾಡ್ತೀನಿ ಅಂತ ಅಂದಿದ್ರು. ಅಲ್ಲಿಗೆ ಹೋಗೇ ಇಲ್ಲ. ಅಷ್ಟರಲ್ಲಿ ಆಕ್ಸಿಡೆಂಟ್ ಆಗಿದೆ."

"ಸದ್ಯ ಹೆಚ್ಚು ಪೆಟ್ಟಾಗಿಲ್ಲದೇ ಇದ್ರೆ ಸಾಕು......ಆ ಡ್ರೈವರ್ರೇ ಡ್ರೈವ್ ಮಾಡಿದ್ರೆ ಹೀಗಾಗ್ತಿರ್ಲಿಲ್ಲ... ಅವನು ಬಹಳ ಹುಷಾರಾಗಿ ಗಾಡೀನ ಓಡಿಸ್ತಾನೆ."

"ಹೌದಮ್ಮ, ಇನ್ಮೇಲೆ ಜೀಪ್‌ನ ಓಡಿಸ್ಬೇಡಿ, ಕಾರ್‍ನಲ್ಲೇ ಓಡಾಡಿ ಅಂತ ಹೇಳ್ಬಿಡು."

"ನನ್ನ ಮಾತನ್ನೆಲ್ಲಿ ಕೇಳ್ತಾರೆ?" ಆಕೆಯ ದನಿಯಲ್ಲಿ ವ್ಯಥೆಯಿತ್ತು. ಇದ್ದಕ್ಕಿದ್ದಂತೆ ಅವನಿಗೆ ಮಂಜುಳ ನೆನಪಿಗೆ ಬಂದಳು. ಕಾರನ್ನೂ ಗಕ್ಕನೆ ನಿಲ್ಲಿಸಿ, ತಾಯಿಯ ಕಡೆ ತಿರುಗಿದ. "ಏನಾಯ್ತೋ... ಯಾಕೆ ಬ್ರೇಕ್ ಹಾಕಿದೆ?" ಕೇಳಿದಳು.

"ಏನಿಲ್ಲಮ್ಮ. ಏನೋ ನೆನಪಿಗೆ ಬಂತು." ಎಂದು ನುಡಿದು ಮತ್ತೆ ಸ್ಟೇರಿಂಗ್ ತಿರುಗಿಸಿದ.

"ಅಪ್ಪ ಮಗ ಎಲ್ಲಾ ಒಂದೇ ಜಾತಿ. ಇಬ್ರಿಗೂ ಏನೋ ಟೆನ್ಷನ್." ಗೊಣಗಿದಳು.

ಕಾರನ್ನು ನರ್ಸಿಂಗ್ ಹೋಂನ ಮುಂಭಾಗದಲ್ಲಿ ನಿಲ್ಲಿಸಿದ. ಅವನನ್ನು ಕಂಡೊಡನೆ ಡ್ರೈವರ್ ಅವನಲ್ಲಿಗೆ ಬಂದು ಸೆಲ್ಯೂಟ್ ಹೊಡೆದ. ಕಾರನ್ನು

ಪಾರ್ಕಿಂಗ್‌ನಲ್ಲಿ ನಿಲ್ಲಿಸುವಂತೆ ಹೇಳಿ, ತಾಯಿಯೊಡನೆ ಎಮರ್ಜನ್ಸಿ ವಾರ್ಡ್‌ಗೆ ಬಂದ. ಒಳಗೆ ಹೋಗಲು ಅನುಮತಿ ಇರಲಿಲ್ಲ. ತಾಯಿಯನ್ನು ಅಲ್ಲೇ ಇರುವಂತೆ ಹೇಳಿ, ಡಾಕ್ಟರೊಡನೆ ಮಾತನ್ನಾಡಲೆಂದು ಅವರ ರೂಮಿಗೆ ಬಂದ. ತನ್ನ ಪರಿಚಯವನ್ನು ಹೇಳಿಕೊಂಡ.

"ಇನ್ನೂ ಜ್ಞಾನ ಬಂದಿಲ್ಲ. ಬಂದ ಮೇಲೆ ಏನಾಯ್ತು, ಹೇಗಾಯ್ತು ಅಂತ ತಿಳಿಯುತ್ತೆ. ಅಲ್ಲಿಯವರೆಗೂ ನೀವೂ ತಾಳ್ಮೆಯಿಂದ ಇರಬೇಕಾಗುತ್ತದೆ."

"ಹೌದು ಡಾಕ್ಟರ್, ಆದರೆ ಗಾಬರಿಯೂ ಆಗುತ್ತೆ. ಕಂಡೀಷನ್ ಹೇಗಿದೆ?"

"ಗಾಬರಿ ಪಡುವಂಥದ್ದೇನಿಲ್ಲ ಅಂತ ಅನ್ಸುತ್ತೆ. ಎಲ್ಲಾ ಟೆಸ್ಟ್‌ಗಳನ್ನು ಮಾಡಿಸಲು ಹೇಳಿದೀನಿ. ಡೋಂಟ್ ವರಿ. ಹೀ ವಿಲ್ ಬಿ ಆಲ್‌ರೈಟ್. ನಾವುಗಳು ಅಬ್ಸರ್ವ್ ಮಾಡ್ತಾನೇ ಇದೀವಿ."

"ನಮ್ಮ ತಾಯಿ ಬಂದಿದಾರೆ.... ಅವರನ್ನು ನೋಡ್ಬೇಕು ಅಂತ...."

"ಒಳಗೆ ಯಾರನ್ನೂ ಬಿಡುವ ಹಾಗಿಲ್ಲ ಮುರಳೀಧರ್... ಅವರಿಗೆ ಹಾಗಂತ ಹೇಳಿ. ಅವರಿಗೆ ಅರ್ಥವಾಗುತ್ತೆ." ಮುರಳಿ ಪೆಚ್ಚು ಮೋರೆ ಮಾಡಿ ಎದ್ದು ಬಂದ. ಆತಂಕದಿಂದ ನಿಂತಿದ್ದ ತಾಯಿಯನ್ನು ಕಂಡು ಮನಸ್ಸಿಗೆ ಖೇದವೆನಿಸಿತು. ಹತ್ತಿರ ಬಂದು ತಾಯಿಯ ಭುಜವನ್ನು ಬಳಸಿದ.

"ಏನೋ ಮುರಳೀ... ಏನಂದ್ರೋ ಡಾಕ್ಟರ್ರು, ನಾನು ಹೋಗಿ ನೋಡ ಬಹುದಾ?"

"ಏನೂ ವರಿ ಇಲ್ಲ ಅಂತ ಹೇಳಿದ್ರಮ್ಮ. ಟ್ರೀಟ್‌ಮೆಂಟ್ ನಡೀತಿದೆ. ಒಳಗೆ ಯಾರನ್ನೂ ಬಿಡಲ್ಲ ಅಂತಂದ್ರು. ಅಲ್ಲಿ ವೈಯಿಟಿಂಗ್ ಹಾಲ್‌ನಲ್ಲಿ ಕೂತ್ಕೊಳ್ಳೋಣ ನಡೀ... ತಾಯಿಯನ್ನು ಕರೆದುಕೊಂಡು ನಡೆದ. ತಾಯಿಯನ್ನು ಕುಳಿತುಕೊಳ್ಳುವಂತೆ ಹೇಳಿ, ತಾನು ಆಚೆಗೆ ಬಂದ. ಅವನನ್ನು ಕಂಡೊಡನೆ ಡ್ರೈವರ್ ಅವನನ್ನು ಸಮೀಪಿಸಿದ. "ಅಮ್ಮ ಅಲ್ಲಿ ಕೂತಿದ್ದಾರೆ. ನೀನು ಅವರ ಬಳಿಯೇ ಇರು. ನಾನು ಒಂದೆರಡು ಅರ್ಜೆಂಟ್ ಕಾಲ್ ಮಾಡಬೇಕಾಗಿದೆ." ಎಂದು ಹೇಳಿ ಅವನನ್ನು ಕಳಿಸಿ, ಮೊಬೈಲ್ ಸ್ವಿಚ್ ಒತ್ತಿದ.

* * *

ಟಿವಿ ನೋಡುತ್ತಾ ಕುಳಿತಿದ್ದ ಮಂಜುಳಾ, ನ್ಯೂಸ್ ಚಾನೆಲ್‌ನ ಬಟನ್ ಒತ್ತಿದಳು. ಎ.ಸಿ.ಪಿ. ಪುರುಷೋತ್ತಮರವರು ಆಕ್ಸಿಡೆಂಟ್‌ನಲ್ಲಿ ಗಾಯಗೊಂಡು ಪ್ರೈವೇಟ್ ನರ್ಸಿಂಗ್ ಹೋಂಗೆ ಅಡ್ಮಿಟ್ ಆಗಿದಾರೆ... ಎಂದು ಫ್ಲಾಷ್‌ನಲ್ಲಿ ಬರುತ್ತಿದ್ದುದನ್ನು ಓದಿಕೊಂಡಳು. ಎದೆ ಬಡಿತ ನಿಂತಂತಾಯಿತು. "ಮಧೂ..." ಎಂದು ಜೋರಾಗಿ ಕಿರುಚಿಕೊಂಡಳು. ಕಂಪ್ಯೂಟರ್ ಮುಂದೆ ಕುಳಿತಿದ್ದ

ಮಧುಸೂದನ್ ಧಾವಿಸಿ ಬಂದ. ಆತಂಕ, ಭಯದಿಂದ ಕೆಟ್ಟು ಹೋಗಿದ್ದ ಅವಳ ಮುಖವನ್ನು ಕಂಡ... ಟಿ.ವಿ.ಯ ಕಡೆಗೆ ನೋಡಿದ. ತಕ್ಷಣಕ್ಕೆ ಏನೆಂದು ಅರ್ಥವಾಗಲಿಲ್ಲ.

"ಏನಾಯ್ತಮ್ಮ? ಹಾಗ್ಯಾಕೆ ಕೂಗಿಕೊಂಡೆ?"

"ನ್ಯೂಸ್ ಓದಿದ್ಯಾ... ಫ್ಲಾಷ್ ನ್ಯೂಸ್‌ನ ಓದು..." ಮಧುಸೂದನ್ ನಿಧಾನ ವಾಗಿ ವಾರ್ತೆಯನ್ನು ಓದಿಕೊಂಡು, ತಾಯಿಯತ್ತ ತಿರುಗಿದ.

"ಪುರುಷೋತ್ತಮ್‌ಗೆ ಪೆಟ್ಟಾಗಿ, ನರ್ಸಿಂಗ್ ಹೋಂಗೆ ಸೇರಿಸಿದ್ದಾರಂತೆ." ಹೇಳಿದ ಕೂಡಲೇ, ತಕ್ಷಣ ನಾಲಿಗೆಯನ್ನು ಕಚ್ಚಿಕೊಂಡಳು.

"ಎ.ಸಿ.ಪಿ. ಪುರುಷೋತ್ತಮ್... ನಿಂಗೆ ಗೊತ್ತಾ?" ಕುತೂಹಲದಿಂದ ಕೇಳಿದ.

"ಅವರು ಯಾರಿಗೆ ಗೊತ್ತಿಲ್ಲ." ತಾಯಿ ಹಾಗೆ ಹೇಳಿದರೂ ಅವನ ಕುತೂಹಲ ಕಡಿಮೆ ಆಗಿರಲಿಲ್ಲ. ಇವರನ್ನೇ ಭೇಟಿಯಾಗಲು ತಾನು ಹೋದದ್ದು. ಆತನಿಗೆ ಆಕ್ಸಿಡೆಂಟ್ ಆಗಿ ಆಸ್ಪತ್ರೆಯಲ್ಲಿದ್ದಾರೆ. ತನಗೆ ಆಗಲೇ ಆ ವಿಷಯ ತಿಳಿಯಲಿಲ್ಲ. ಮುರಳೀ ಕೂಡಾ ತಿಳಿಸಲಿಲ್ಲ. ಅವನೇನಂದ? ಅವನ ತಂದೆಗೆ ಆಕ್ಸಿಡೆಂಟ್ ಆಗಿ, ನರ್ಸಿಂಗ್ ಹೋಂನಲ್ಲಿದಾರೆ ಅಂತ ಅಂದನಲ್ಲವೇ? ಅವರಿಗೂ, ಇವರಿಗೂ ಒಂದೇ ಸಮಯದಲ್ಲಿ ಆಕ್ಸಿಡೆಂಟ್ ಆಗಿರಲು ಸಾಧ್ಯವೇ? ಯಾಕೆ ಸಾಧ್ಯವಿಲ್ಲ. ಆದರೂ ಎಂಥಾ ಕಾಕತಾಳೀಯ? ಒಂದು ವೇಳೆ ಅವರೇ ಇವರಾಗಿದ್ದರೇ? ತಾನು ಹೆಸರನ್ನು ಕೇಳಲಿಲ್ಲ. ಅವನೂ ಹೇಳಲಿಲ್ಲ. ಈಗ ಕೇಳಿದರೆ? ಮನಸ್ಸು ಡೋಲಾಯಮಾನ ಹಾಡಿತು. ತಾನು ಮತ್ತೆ ಮತ್ತೆ ಫೋನ್ ಮಾಡಿದರೆ, ಅವನು ಏನಂದುಕೊಳ್ಳಬಹುದು?

"ಏನು ಯೋಚಿಸ್ತಿದೀಯಾ?" ಮಂಜುಳಾ ಕೇಳಿದ್ದಳು.

"ನನ್ನ ಪರಿಚಯದವರೊಬ್ಬರ ತಂದೆಗೂ ಆಕ್ಸಿಡೆಂಟ್ ಆಗಿದೆಯಂತೆ.... ಅದನ್ನೇ ಯೋಚಿಸ್ತಿದ್ದೆ."

"ಇರಬಹುದು... ಹೇಗಿದಾರಂತೆ ಈಗ? ಸುಮ್ಮನೆ ಎಂಬಂತೆ ಕೇಳಿದಳು.

"ಏನೋ ಗೊತ್ತಿಲ್ಲ... ನರ್ಸಿಂಗ್ ಹೋಂಗೆ ಸೇರಿಸಿದಾರಂತೆ."

"ಅಷ್ಟು ಆತಂಕ ಇದ್ದರೆ, ವಿಚಾರಿಸಿ ತಿಳ್ಕೋ." ಅನುಮಾನಿಸುತ್ತಾ ಮೊಬೈಲ್ ಫೋನನ್ನು ಹಿಡಿದು ತನ್ನ ರೂಮಿಗೆ ಬಂದ. ಮುರಳಿಗೆ ಮಾಡುವುದು ಬೇಡ ಅಂತ ಅನ್ನಿಸಿತು. ವಿನುತಾಳ ಮನೆಯ ನಂಬರನ್ನು ಒತ್ತಿದ. ಸದಾನಂದ ಎತ್ತಿ ಕೊಂಡು 'ಹಲೋ' ಎಂದ.

"ನಾನು ಮಧುಸೂದನ... ವಿನುತಾ ಹತ್ರ ಮಾತಾಡ್ಬೇಕಾಗಿತ್ತು. ಕರೀತೀರಾ?"

"ಇಷ್ಟೊತ್ನಲ್ಲಿ... ಏನು ವಿಷಯ? ನಂಗೇ ಹೇಳಿ....."

"ಯಾಕೆ? ಅವರು ಮನೇಲಿಲ್ವಾ?"

"ಛೇ... ಛೇ... ಇದಾಳೆ... ಮಲಗಿರಬಹುದು... ಅಂತ..."

"ಎಚ್ಚರವಾಗಿದ್ರೆ ಮಾತಾಡ್ತೀನಿ. ಸ್ವಲ್ಪ ನೋಡ್ತೀರಾ?"

ಇಲ್ಲ ಎನ್ನಲಾಗದೇ ಸದಾನಂದ ಮಗಳು ಇದ್ದ ರೂಮಿಗೆ ಬಂದ.

"ವಿನುತಾ... ನಿನಗೆ ಫೋನು... ಮಧುಸೂದನ ಮಾಡಿದಾನೆ... " ಮಗಳನ್ನೇ ವಿಚಿತ್ರವಾಗಿ ನೋಡುತ್ತಾ ಹೇಳಿದ.

"ಏನಂತಪ್ಪಾ... ನೀವು ಕೇಳಲಿಲ್ವಾ?"

"ಕೇಳ್ದೆ ಹೇಳಲಿಲ್ಲ... ಏನೂಂತ ನೋಡು..." ಅಸಮಾಧಾನದಿಂದ ಹೇಳಿದ.

"ನಾನು ಮಾತಾಡೊಲ್ಲಪ್ಪ. ಮಲಗಿದೀನಿ ಅಂತ ಹೇಳ್ಬಿಡಿ."

"ಅವರು ನಿನ್ನನ್ನು ಮದುವೆಯಾಗೋರು... ಸುಳ್ಳು ಹೇಳಿದ್ರೆ ಅವರಿಗೆ ತಿಳಿಯೋಲ್ವಾ? ಸುಮ್ಮನೇ ಹೋಗಿ ಮಾತಾಡು." ಮಗಳ ಮೇಲೆ ಗದರಿದ.

"ಎಲ್ಲದಕ್ಕೂ ಬಲವಂತ ಮಾಡ್ತೀರಿ. ಬೆಳಿಗ್ಗೆ ಮಾತಾಡ್ತೀನಿ ಅಂತ ಹೇಳಿ."

"ಸುಮ್ಮನೇ ಎದ್ದು ಬಾರೇ. ಏನೂ... ಹಾಗೆಲ್ಲಾ ತಾತ್ಸಾರ ಮಾಡ್ಬಾರ್ದು... ಏನೋ ಅರ್ಜೆಂಟು ವಿಷಯ ಇರಬಹುದು." ಸುಜಾತಳೂ ದನಿಗೂಡಿಸಿದಳು.

"ಇಬ್ಬರೂ ಸರಿಯಾಗಿದೀರಿ... ನನಗೆ ಇಷ್ಟವಿಲ್ಲದ್ದನ್ನು ನನ್ನ ಕೈಲಿ ಮಾಡಿಸ್ತೀರಿ." ಎಂದು ಸಿಡುಕುತ್ತಾ ಎದ್ದು ಬಂದು ರಿಸೀವರ್ ಎತ್ತಿಕೊಂಡಳು.

"ಸಾರೀ ವಿನುತಾ... ಇಷ್ಟು ಹೊತ್ನಲ್ಲಿ ತೊಂದರೆ ಕೊಟ್ಟಿದ್ದಕ್ಕೆ... ನಾನು ಹೇಳೋದನ್ನು ಸುಮ್ಮನೆ ಕೇಳಿಸ್ಕೊಳ್ಳಿ... ಹೂಂ ಅಂತ ಮಾತ್ರ ಹೇಳಿ ಸಾಕು... ಮುರಳೀಧರನ ತಂದೆಯ ಹೆಸರು ಪುರುಷೋತ್ತಮ ಅಂತ ತಾನೇ... ಅವರು ಎ.ಸಿ.ಪಿ ಅಲ್ವಾ?"

"ಹೌದು... " ಅಲ್ಲೇ ನಿಂತಿದ್ದ ತಾಯಿಯ ಕಡೆ ನೋಡಿದಳು.

"ಅವರಿಗೆ ಆಕ್ಸಿಡೆಂಟ್ ಆಗಿದೆ... ಟಿ.ವಿ. ನ್ಯೂಸ್‌ನಲ್ಲಿ ಬರ್ತಾ ಇದೆ. ನೀವು ಮುರಳಿಗೆ ಫೋನ್ ಮಾಡಿ ಅಂತ ನಾನು ಹೇಳುವುದಿಲ್ಲ. ಅವರು ನರ್ಸಿಂಗ್ ಹೋಂನಲ್ಲಿದ್ದಾರಂತೆ. ನಿಮಗೆ ತಿಳಿಸೋಣ ಅಂತ ಫೋನ್ ಮಾಡ್ದೆ. ಅವರೇನಾ? ಯಾರನ್ನೂ ಕೇಳೋದೇನೂ ಬೇಡ."

"ಮತ್ತೆ? ನಂಗೆ ತಿಳಿಯೋದು ಹೇಗೆ ಈಗ ಹೇಗಿದಾರಂತೆ?" ಕೆಳದನಿಯಲ್ಲಿ ಕೇಳಿದಳು.

"ನಾನು ನಾಳೆ ಮತ್ತೆ ಫೋನ್ ಮಾಡ್ತೀನಿ. ಈಗ ಮಲಕ್ಕೊಳ್ಳಿ, ಗುಡ್ ನೈಟ್." ಎಂದ

ಇವಳ ಕೆನ್ನೆಗಳು ಕೆಂಪಾಗಿ ಬಿಸಿಯಾದವು. ತಾನೂ 'ಗುಡ್‌ನೈಟ್' ಎಂದು

ಹೇಳಿ ತಾಯಿಯ ಕಡೆ ನೋಡಿದಳು. ಅವಳು ಗಂಡನ ಕಡೆ ನೋಡಿದಳು. ರಿಸೀವರನ್ನಿಟ್ಟು ಇತ್ತ ತಿರುಗಿದ ಕೂಡಲೇ ಅವಳು ಪ್ರಶ್ನಿಸಿದಳು.

"ಏನಂತೆ? ಯಾರಿಗೆ ಹುಷಾರಿಲ್ವಂತೆ?"

"ಊರ್ನಲ್ಲಿರೋ ತಾತಂಗೆ ಹುಷಾರಿಲ್ವಂತೆ. ನಾಳೆ ಊರಿಗೆ ಹೋಗ್ತಿದಾರಂತೆ." ತನಗೆ ತೋಚಿದ್ದನ್ನು ಹೇಳಿದಳು.

"ಅದಷ್ಟನ್ನು ನನಗೇ ಹೇಳಬಹುದಾಗಿತ್ತಲ್ಲ..."

"ನಿಮಗೆ ಒಂದು ಚೂರೂ ಸುಳಿವು ಸೂಕ್ಷ್ಮ ಇಲ್ಲ... ಇವಳ ಹತ್ರ ಮಾತನಾಡೋಕ್ಕೆ ಒಂದು ಕಾರಣ ಬೇಕಾಗಿತ್ತು. ಇನ್ನೇನು ಹೇಳಿದ್ರು?" ತಾಯಿ ಎಂದಳು.

"ಇನ್ನೇನು ಹೇಳ್ತಾರೆ... ನೀವಿಬ್ರೂ ಇಲ್ಲೇ ನಿಂತಿದ್ರಲ್ಲ..." ಒರಟಾಗಿ ನುಡಿದಳು.

"ನಾವು ಇಲ್ಲಿ ನಿಂತಿರೋದೇನು ಅವರಿಗೆ ಕಾಣಿಸುತ್ತಾ?"

"ಕಾಣಿಸ್ದೇ ಇದ್ರೇನು? ಅರ್ಥ ಆಗುಲ್ವೇನಮ್ಮಾ....." ಸಿಡುಕಿದಳು.

"ಹೌದು. ಅದೂ ನಿಜ...ಈ ಕಾಲ್ದಲ್ಲಿ. ಎಲ್ರ ಹತ್ರಾನೂ ಸೆಲ್ ಫೋನ್ ಇರುತ್ತೆ. ರೂಂನಲ್ಲಿ ಕುಳಿತು ಗಂಟೆಗಟ್ಟಲೆ ಮಾತಾಡ್ತಾರೆ...ಇವಳಿಗೂ ಒಂದನ್ನು ತೆಗೆಸಿಕೊಡಿ."

"ನಾನ್ಯಾಕೆ ತೆಗೆಸ್ಕೊಡ್ಲಿ? ಅವನೇ ಬೇಕಾದ್ರೆ ಭಾವೀ ಹೆಂಡ್ತಿಗೆ ತೆಗೆಸ್ಕೊಡ್ಲಿ. ಇವಳಿಗೆ ತೆಗೆದುಕೊಟ್ರೆ ಸರಿತಾ ಸುಮ್ನೆ ಬಿಡ್ತಾಳಾ? ನಾನೆಲ್ಲಿಂದ ದುಡ್ಡನ್ನು ತರ್ಲಿ?"

"ಬಿಡಮ್ಮ. ಯಾರೂ ತೆಗೆಸಿಕೊಡೋದು ಬೇಡ. ಮಧುಗೆ ಹೇಳಿದ್ರೆ ಇಬ್ಬರಿಗೂ ತೆಗೆಸಿಕೊಡ್ತಾರೆ." ಮಗಳ ಮಾತಿಗೆ ಗಂಡ-ಹೆಂಡತಿ ಪರಸ್ಪರ ಮುಖ ಮುಖ ನೋಡಿಕೊಂಡರು.

"ಹೂಂ, ಕೇಳು... ನಮಗೆ ಒಳ್ಳೇ ಗೌರವ ಸಿಗುತ್ತೆ." ತಾಯಿ ಎಂದಳು.

"ಮತ್ತಿನ್ನೇನಮ್ಮಾ.... ಅನುಕೂಲಸ್ಥ ಅಂತ ಅವನಿಗೆ ಕೊಟ್ಟು ಮದುವೆ ಮಾಡಿ ಕಳಿಸಕ್ಕೆ ನೋಡ್ತಿದೀರಿ.... ಅವನ ಶ್ರೀಮಂತಿಕೆಯಿಂದ ನಾವುಗಳೂ ಮೆರೀಬೇಕು ಅಂತ ನಿನ್ನಾಸೆ. ಹಾಗೇ ಆಗ್ಲೀ ಬಿಡು."

"ನೋಡ್ರೀ ಎಷ್ಟು ಅಹಂಕಾರವಾಗಿ ಮಾತಾಡ್ತಾಳೆ? ಮಗಳು ಸುಖವಾಗಿರಲಿ ಅಂತ ಬಯಸೋದು ತಪ್ಪೇ? ಏನೋ ಒಬ್ಬನೇ ಮಗ, ತಾಯಿ ಮಗ ಇಬ್ಬರೇ, ಚೆನ್ನಾಗಿರಲಿ ಅಂತ ಅಂದುಕೊಳ್ಳೋದು ತಪ್ಪೇ ಹಾಗಾದ್ರೆ...?"

"ನೀನು ಸುಮ್ನಿರು ಸುಜೀ... ಮಾತನ್ನು ಮುಂದುವರೆಸ್ಬೇಡ... ಮದುವೆಯಾಗಿ ಹೋದ್ಮೇಲೆ ಅವರ ಮನೆಯವಳಾಗಿ ಬಿಡ್ತಾಳೆ. ಇದನ್ನೆಲ್ಲ ಮರೆತು ಬಿಡ್ತಾಳೆ."

ತಂದೆಯ ಕಡೆ ಕ್ರೂರವಾಗಿ ನೋಡಿ ವಿನುತಾ ತನ್ನ ರೂಮಿಗೆ ಹೊರಟು

ಹೋದಳು. ತಂಗಿಯ ಪಕ್ಕದಲ್ಲಿ ಮಲಗಿಕೊಂಡಳು. ತನ್ನ ಹತ್ತಿರ ಒಂದು ಮೊಬೈಲ್ ಫೋನ್ ಇದ್ದಿದ್ದರೇ... ಮುರಳಿಯೊಡನೆ ಮಾತನಾಡಬಹುದಾಗಿತ್ತು... ಅವರ ಅಪ್ಪನಿಗೆ ಏನಾಯ್ತೋ... ಹೇಗಿದಾರೋ...? ಚಡಪಡಿಸಿದಳು.

"ಯಾಕೇ ಅಕ್ಕಾ ಅಮ್ಮನ ಹತ್ರ ಜಗಳ ಆಡ್ತಿದ್ದೆ?" ತಂಗಿ ಕೇಳಿದಳು.

"ನಂಗೆ ಬೇರೆ ಕೆಲ್ಸ ಏನೂ ಇಲ್ಲ ಅದಕ್ಕೇ... ನೀನು ಸುಮ್ನೆ ಬಿದ್ಕೋ..."

"ಅಮ್ಮ ಹೇಳಿದ್ದು ನಿಜ, ನಿಂಗೆ ಈಗ್ಲೇ ಜಂಭ ಬಂದು ಬಿಟ್ಟಿದೆ."

"ಜಂಭವೂ ಇಲ್ಲ. ಅಹಂಕಾರವೂ ಇಲ್ಲ. ನಂಗೆ ಮಧೂನ ಮದುವೆ ಯಾಗೋಕ್ಕೆ ಇಷ್ಟವಿಲ್ಲ. ನೀನು ಮದುವೆಯಾಗ್ತೀಯಾ? ನಾನು ಸೆಟ್ಲ್ ಮಾಡಿಸ್ತೀನಿ."

"ನಾನಾ! ನಂದಿನ್ನೂ ಓದು ಮುಗಿದಿಲ್ಲವಲ್ಲೇ..." ಮಧುರವಾಗಿ ಕೇಳಿದಳು.

"ಓದೂ ಬೇಡ, ಕೆಲ್ಸವೂ ಬೇಡ. ಅವನೇ ಶ್ರೀಮಂತ. ಅಥವಾ ನಿಂಗೆ ಬೇಕು ಅಂತಂದ್ರೆ ಓದಿಸ್ತಾನೆ. ನಾನು ಅವನ ಹತ್ರ ಮಾತಾಡ್ತೀನಿ."

"ಹೋಗೇ... ನಂಗೀಗ್ಲೇ ಮದುವೆ ಬೇಡ."

"ಈಗ ಹಾಗಂತೀಯ... ನಾನು ಮದುವೆಯಾಗಿ ಹೊರಟು ಹೋದ್ಮೇಲೆ... ನೀನು ಒಂಟಿಯಾಗಿ ಬಿಡ್ತೀಯ ಅಷ್ಟೇ.....ಆಗ ನಿಂಗೂ ಆಸೆ ಬರುತ್ತೆ."

"ನೀನು ಬೇರೆ ಯಾರನ್ನಾದ್ರೂ ಲವ್ ಮಾಡ್ತಿದೀಯಾ? ಅಮ್ಮಂಗೆ ಹೇಳ್ಲಾ?"

"ಲವ್ವೂ ಇಲ್ಲ, ಗಿವ್ವೂ ಇಲ್ಲ.... ನಂಗ್ಯಾಕೋ ಅವನು ಇಷ್ಟ ಆಗ್ಲಿಲ್ಲ ಅಷ್ಟೇ"

"ನಿಂಗೆ ಇಷ್ಟವಾಗಿಲ್ದೇ ಇರೋನನ್ನ ನಾನು ಮದ್ವೆಯಾಗ್ಬೇಕಾ? ಅಷ್ಟಕ್ಕೂ ನಾನು ಅವನನ್ನು ನೋಡೇ ಇಲ್ಲವಲ್ಲೇ?"

"ನಾಳೆ ಬೆಳಿಗ್ಗೆ ನಮ್ಮ ಮನೆಗೆ ಬರ್ತಾರೆ. ಆಗ ನೋಡೂವಂತೆ."

"ಮತ್ತೆ ಕಾಲೇಜು?"

"ಕಾಲೇಜು ಎಲ್ಲಿಗೂ ಓಡಿ ಹೋಗೋಲ್ಲ. ಅಲ್ಲೇ ನಿಂತಿರುತ್ತೆ... ನಾನು ಹೇಳಿದ ಹಾಗೆ ಕೇಳು... ಬೆಳಿಗ್ಗೆ ಸಿದ್ಧವಾಗಿರು. ನಮ್ಮ ಜತೇಲಿ ನೀನೂ ಬರೂವಂತೆ."

"ಭಾವನ ಜತೇಲಿ ಎಲ್ಲಿಗೆ ಹೋಗ್ತಿದೀಯ?"

"ಭಾವನೂ ಅಲ್ಲ; ಮಾವನೂ ಅಲ್ಲ... ಇನ್ನೂ ಲಗ್ನಪತ್ರಿಕೆಯೇ ಆಗಿಲ್ಲ. ಅವನು ನನ್ನನ್ನು ಒಪ್ಪಿರಬಹುದು. ನಾನು ಅವನನ್ನು ಒಪ್ಪಿಲ್ಲವಲ್ಲ."

"ನಿಂಗೆ ಅವನ್ಯಾಕೆ ಒಪ್ಪಿಗೆ ಇಲ್ಲ ಅಂತ ಮೊದಲು ಹೇಳು."

"ಇನ್ನೆಂದಾದ್ರೂ ಹೇಳ್ತೀನಿ. ಈಗ ಮಲಕ್ಕೋ ಹೊತ್ತಾಗಿದೆ." ಎಂದು ಹೇಳಿ ತಂಗಿಯ ಕೆನ್ನೆಯನ್ನು ಚಿವುಟಿ "ಗುಡ್‌ನೈಟ್" ಹೇಳಿದಳು.

* * *

"ಅಮ್ಮಾ ನಮಸ್ಕಾರ." ಬಾಗಿಲನ್ನು ತೆರೆದ ಸುಜಾತಳಿಗೆ ಕೈ ಮುಗಿದ

ಮಧುಸೂದನ.

"ನಮಸ್ಕಾರ ಬನ್ನಿ..." ಒಳಕ್ಕೆ ಆಹ್ವಾನಿಸಿದಳು.

"ವಿನುತಾ ರೆಡೀನಾ...? ಸ್ವಲ್ಪ ಮಾತಾಡ್ಬೇಕಾಗಿತ್ತು."

"ಎಲ್ಲಾದರೂ ಹೊರಟಿದೀರಾ? ಅವಳು ಹೇಳಲಿಲ್ಲವಲ್ಲ... ರಾತ್ರಿ ಫೋನು ಮಾಡಿದ್ರಿ.... ಈಗ ನಿಮ್ಮ ತಾತ ಹೇಗಿದಾರೆ... ಯಾವ ಊರಲ್ಲಿದ್ದಾರೆ?"

ಮಧುಸೂದನ ತಕ್ಷಣ ಎಚ್ಚೆತ್ತುಕೊಂಡ. "ಅವರನ್ನು ಇಲ್ಲಿಯ ಆಸ್ಪತ್ರೆಗೇ ಕರೆತಂದು ಸೇರಿಸಿದಾರೆ. ನೋಡೋಕೆ ಹೋಗ್ತಿದೀನಿ. ಹಾಗೇ ವಿನುತಳನ್ನೂ ಕರ್ಕೊಂಡು ಹೋಗೋಣ ಅಂತ."

"ಅವರು ತಪ್ಪು ತಿಳ್ಕೊಳ್ಳಲ್ಲ ತಾನೇ?"

"ಇಲ್ಲ. ತಾತಾ ಅಂಥೋರಲ್ಲ." ಅಷ್ಟರಲ್ಲಿ ವಿನುತಾ ಬಂದಳು. ಅವಳೊಂದಿಗೆ ಅವಳ ತಂಗಿ ಸರಿತಾಳೂ ಇದ್ದಳು. ವಿನುತಾ ಅವನಿಗೆ ತನ್ನ ತಂಗಿಯನ್ನು ಪರಿಚಯಿಸಿದಳು.

"ಇವಳು ಸರಿತಾ... ನೀವು ನೋಡಿರಲೇ ಇಲ್ಲ ಅಲ್ವಾ?"

"ಹಲೋ... ಸರಿತಾ...." ಎಂದ ಮಧು. ಸರಿತಾ ಅಕ್ಕನ ಮೊಣಕೈ ಚಿವುಟಿದಳು. ಮಧುಸೂದನ ಅದನ್ನು ಗಮನಿಸಿ ಮುಗುಳ್ನಕ್ಕ.

"ಹಾಗೇ ಇವಳನ್ನು ಕಾಲೇಜಿನ ಹತ್ರ ಡ್ರಾಪ್ ಮಾಡೋಣ, ಪರ್ವಾಗಿಲ್ವಾ?"

"ಅಯ್ಯೋ ಅದಕ್ಕೇನಂತೆ? ಯಾವ ಕಾಲೇಜು?"

"ಸರಿತಾ ಈಗ ನೀನ್ಯಾಕೆ ಹೋಗ್ಬೇಕು?" ತಾಯಿ ಪಿಸುದನಿಯಲ್ಲಿ ಕೇಳಿದಳು.

"ಅಕ್ಕಾನೇ ಕರೆದ್ಲು. ಅವಳಿಗೆ ಒಬ್ಬಳಿಗೇ ಹೋಗೋಕೆ ನಾಚಿಕೆ ಅಂತೆ." ಮಧುಸೂದನ ಸ್ವಲ್ಪ ಜೋರಾಗಿಯೇ ನಕ್ಕ. ವಿನುತಾ ತಂಗಿಯ ಮೇಲೆ ರೇಗಿದಳು.

"ಸುಮ್ಮನೇ ಹೊರಡು. ಪಾರಾಯಣ ಎಲ್ಲಾ ಬೇಡ."

"ಸ್ವಲ್ಪ ಕಾಫಿ ಕೊಡ್ತೀನಿ."

"ಏನೂ ಬೇಡಿ ಅಮ್ಮಾ... ಈಗ್ತಾನೇ ಎಲ್ಲಾ ಆಯ್ತು."

"ಮಂಜುಳಾ ಹೇಗಿದಾರೆ? ಲಗ್ನಪತ್ರಿಕೆ ಯಾವಾಗ ಇಟ್ಟುಕೊಳ್ಳೋಣ?"

"ಅಮ್ಮಂಗೆ ಫೋನ್ ಮಾಡುಕ್ಕೆ ಹೇಳ್ತೀನಿ" ಎಂದು ಹೇಳಿ ಎದ್ದು ಹೊರನಡೆದ. ಸರಿತಾಳನ್ನು ಕಾಲೇಜಿನ ಬಳಿ ಇಳಿಸಿ, ಕಾರನ್ನು ನರ್ಸಿಂಗ್ ಹೋಂ ಕಡೆಗೆ ಓಡಿಸಿದ. ಪುರುಷೋತ್ತಮನನ್ನು ಸ್ಪೆಷಲ್ ವಾರ್ಡ್‌ಗೆ ಷಿಫ್ಟ್ ಮಾಡಿದ್ದರು. ವಾರ್ಡಿನಲ್ಲಿ ಕುಳಿತಿದ್ದ ವತ್ಸಲಾ ವಿನುತಾಳನ್ನು ಕಂಡು ಅಚ್ಚರಿಗೊಂಡಳು.

"ವಿನುತಾ... ನೀನಾ? ಮುರಳೀ ಫೋನ್ ಮಾಡಿದ್ನಾ?" ಪಿಸುದನಿಯಲ್ಲಿ ಕೇಳಿದಳು.

"ಇಲ್ಲ ಆಂಟೀ..." ಎಂದು ಹೇಳಿ ತನ್ನ ಹಿಂದೆ ಬಂದು ನಿಂತಿದ್ದ ಮಧು ಸೂದನನ ಕಡೆ ನೋಡಿದಳು. ಮಧುಸೂದನ, "ನಮಸ್ಕಾರ ಆಂಟಿ" ಎಂದು ಕೈ ಮುಗಿದ. ಅವಳು ಮುದಗೊಂಡು ಮುಗುಳ್ನಕ್ಕು "ನಮಸ್ಕಾರ" ಎಂದಳು.

"ನೀವು ಮಧುಸೂದನ ಅಲ್ವಾ? ಅವತ್ತು ನಮ್ಮ ಮನೆಗೆ ಬಂದಿದ್ರಿ... ನಿಮಗೆ ಈ ವಿಷಯ ಹೇಗೆ ತಿಳಿಯಿತು? ಮುರಳಿ ಫೋನ್ ಮಾಡಿದ್ನಾ? ವಿನುತಾ ಎಲ್ಲಿ ಸಿಕ್ಕಿದ್ಲು?" ಒಟ್ಟಿಗೇ ಪ್ರಶ್ನೆಗಳನ್ನು ಹಾಕಿದಳು.

"ಈಗ ಅಂಕಲ್ ಹೇಗಿದಾರೆ?" ವಿಚಾರಿಸಿದ.

"ಏನೂ ಅಪಾಯವಿಲ್ಲ ಅಂತ ಡಾಕ್ಟರ್ಸ್ ಹೇಳಿದಾರೆ. ಭುಜದ ಮೂಳೆ ಫ್ರಾಕ್ಚರ್ ಆಗಿದೆ. ಕತ್ತು, ಬೆನ್ನು ಸ್ವಲ್ಪ ಜಖಂ ಆಗಿದೆ... ಟ್ರೀಟ್‌ಮೆಂಟ್ ನಡೀತಿದೆ..."

"ಮುರಳಿ ಇಲ್ವಾ?"

"ಇಲ್ಲ. ಅವನು ಮನೆಗೆ ಹೋಗಿದಾನೆ. ಅವನು ಬಂದ್ಮೇಲೆ ನಾನು ಹೋಗ್ತೀನಿ."

"ನನ್ನಿಂದೇನಾದ್ರೂ ಸಹಾಯ ಬೇಕಾಗಿದ್ರೆ ಹೇಳಿ ಆಂಟೀ, ಸಂಕೋಚ ಪಟ್ಕೋಬೇಡಿ."

"ಆಂಟಿ, ನಾನು ಅಂಕಲ್ ಜೊತೇಲಿ ಇರ್ತೀನಿ. ನೀವು ಮನೆಗೆ ಹೋಗಿ ರೆಸ್ಟ್ ತಗೊಳ್ಳಿ," ವಿನುತಾ ಹೇಳಿದಳು.

"ಬೇಡಮ್ಮಾ ವಿನುತಾ... ಡಾಕ್ಟರ್‌ಗಳು ಬಂದು ಆಗಾಗ್ಗೆ ನೋಡ್ಕೊಂಡು ಹೋಗ್ತಿದ್ದಾರೆ. ನಾನೋ ಮುರಳಿಯೋ ಇದ್ದರೆ ಒಳ್ಳೇದು... ನೀನು ಮನೆಗೆ ಹೋಗು... ಅಮ್ಮ-ಅಪ್ಪ ಎಲ್ಲಾ ಹೇಗಿದಾರೆ? ಸರಿತಾ ಹೇಗಿದಾಳೆ? ಅವಳನ್ನು ನೋಡಿ ತುಂಬಾ ದಿನಗಳಾದವು."

"ಚೆನ್ನಾಗಿದಾಳೆ ಆಂಟಿ. ನೀವು ಕೊಡುತ್ತಿದ್ದ ತಿಂಡಿಗಳನ್ನು ಜ್ಞಾಪಿಸಿಕೊಳ್ತಾ ಇರ್ತಾಳೆ..." ಅವರುಗಳು ಮಾತನಾಡುತ್ತಾ ಇದ್ದಾಗ, ಪುರುಷೋತ್ತಮ ಅರೆನಿದ್ದೆ ಯಲ್ಲಿದ್ದರು. ಅದೇ ಸಮಯಕ್ಕೆ ಮುರಳೀ ಹಿಂತಿರುಗಿದ್ದ. ಮಧುಸೂದನ ಹಾಗೂ ವಿನುತಾಳನ್ನು ಕಂಡು ಅವನ ಹುಬ್ಬುಗಳು ಸಂಕುಚಿತಗೊಂಡವು.

"ಹಾಯ್ ಮುರಳೀಧರ್...." ಮಧು ಕೈ ಕುಲುಕಿದ. ಮುರಳಿ ಪ್ರಶ್ನಾರ್ಥಕವಾಗಿ ಇಬ್ಬರನ್ನೂ ನೋಡಿದ. ವಿನುತಾ ತಲೆತಗ್ಗಿಸಿದ್ದಳು.

"ನೆನ್ನೆ ರಾತ್ರಿ ನ್ಯೂಸ್ ಚಾನೆಲ್‌ನಲ್ಲಿ ಆಕ್ಸಿಡೆಂಟ್ ವಿಷಯಾನಾ ತಿಳಿಸಿದ್ರು... ನೋಡೋಣ ಅಂತ ಬಂದೆ."

"ಥ್ಯಾಂಕ್ಸ್ ಮಧುಸೂದನ್..." ತಾಯಿಚಿು ಕಡೆ ತಿರುಗಿದ, " ಮಮ್ಮೀ... ಡ್ರೈವರ್ ಇದಾನೆ. ನಿನ್ನನ್ನು ಮನೆಗೆ ಬಿಡ್ತಾನೆ. ನಾನು ಇಲ್ಲಿರ್ತೀನಿ."

"ನಾನು ಮನೆಗೆ ಹೋಗ್ತಾ ಇದೀನಿ. ಹಾಗೇ ನಿಮ್ಮ ತಾಯಿಗೆ ಡ್ರಾಪ್

ಕೊಡ್ತೀನಿ. ಹೇಗೂ ವಿನುತಾಳನ್ನು ಮನೆಗೆ ಬಿಡ್ಬೇಕು." ಮಧು ಎಂದ.

"ಬೇಡ, ನಾನು ಮತ್ತೆ ವಾಪಸ್ಸು ಬರ್ಬೇಕಲ್ಲ. ನಮ್ಮ ಕಾರ್ನಲ್ಲೇ ಹೋಗ್ತೀನಿ. ವಿನುತಾ ಬೇಕಾದ್ರೆ ನೀನು ಅವರ ಜತೇಲಿ ಹೋಗು" ಎಂದು ಹೇಳಿ, ವತ್ಸಲಾ ಮನೆಗೆ ಹೊರಟಳು.

"ಮಧುಸೂದನ್, ನೀವು ಬ್ಯಾಂಕಿಗೆ ಹೋಗಿ. ನಾನು ಇಲ್ಲಿ ಮುರಳಿಯ ಜತೇಲಿ ಸ್ವಲ್ಪ ಹೊತ್ತು ಇರ್ತೀನಿ." ಎಂದು ವಿನುತಾ ನುಡಿದಾಗ, ಮುರಳಿ ಸಿಡಿದ.

"ಏನೂ ಬೇಡ. ನಾನೊಬ್ನೇ ಇರ್ತೀನಿ. ನೀನು ಹೋಗು."

ಮಧುಸೂದನ್ ಅವನ ಭುಜವನ್ನು ತಟ್ಟಿದ. "ರಿಲಾಕ್ಸ್ ಮುರಳೀಧರ್... ಟೆನ್ಷನ್ ಯಾಕೆ? ವಿನುತಂಗೆ ನಿಮ್ಮ ಜತೆ ಮಾತನಾಡ್ಬೇಕು ಅಂತ ಅನ್ನಿಸ್ತಿರಬಹುದು.

"ಏನಿದೆ ಇಲ್ಲಿ ಮಾತು?"

"ಅದು ನಿಮ್ಮಿಬ್ಬರಿಗೇ ಗೊತ್ತು... " ಮಂದಹಾಸ ಬೀರಿದ. "ನಾನು ಮತ್ತೆ ಫೋನ್ ಮಾಡ್ತೀನಿ. ನಿಮ್ಮ ತಂದೆ ಬೇಗ ಗುಣಮುಖರಾಗಲಿ ಅಂತ ಹಾರೈಸ್ತೀನಿ." ಎಂದು ಹೇಳಿ ವಿನುತಳಿಗೆ ಕಣ್ಸನ್ನೆಯಲ್ಲೇ 'ಬರ್ತೀನಿ' ಎಂದು ಹೇಳಿ ವಾರ್ಡಿನಿಂದ ಹೊರನಡೆದ.

ಅವನು ಅತ್ತ ಮರೆಯಾದ ಕೂಡಲೇ ಮುರಳಿ ಪಿಸುದನಿಯಲ್ಲಿ ಅವಳ ಮೇಲೆ ರೇಗಿದ.

"ನೀನ್ಯಾಕೆ ಇಲ್ಲಿಗೆ ಬರೋಕೆ ಹೋದೆ? ಅದೂ ಇವನ ಜೊತೆ... ಇವನೇ ಹೇಳಿದ್ನಾ ನಿಂಗೆ?"

"ನೀನೇ ಹೇಳಬಹುದಾಗಿತ್ತು ಅಲ್ವಾ ಮುರಳಿ?" ಅವಳೂ ಸುಮ್ಮನಿರಲಿಲ್ಲ.

"ಸುಮ್ನೇ ಎಲ್ರಿಗೂ ತೊಂದರೆ ಆಗುತ್ತೆ ಅಂತ ಹೇಳಲಿಲ್ಲ. ಡ್ಯಾಡಿಗೆ ಇದೆಲ್ಲಾ ಇಷ್ಟವಾಗೋಲ್ಲ."

"ಆದರೆ ಇದೆಲ್ಲಾ ನಮ್ಮ ಡ್ಯೂಟಿ ಅಲ್ವಾ?"

"ಡ್ಯೂಟಿ ಅನ್ನುತ್ತಲೇ ನೆನಪಿಗೆ ಬಂತು ವಿನುತಾ......ನೆನ್ನೆ ಒಬ್ಬರು ಕ್ಲೈಂಟ್ ಬಂದಿದ್ರು... ಅವರದ್ದು ಏನೋ ಪ್ರಾಬ್ಲಂ. ನರ್ಸಿಂಗ್ ಹೋಂನ ಓಡಾಟ ಈಗ ಮುಖ್ಯ. ಈಗ ಆ ಕೇಸನ್ನು ಸಾಲ್ವ್ ಮಾಡೋಕ್ಕೆ ಆಗೋಲ್ಲ. ಅದೇ ಚಿಂತೆ ಆಗ್ತಿದೆ."

"ನನ್ನಿಂದ ಒಂದು ಸಹಾಯ ಆಗ್ಬೇಕಾಗಿದೆ ಅಂತ ಹೇಳಿದ್ಯಲ್ಲ... ಅದೇನಾ?"

"ಅದಲ್ಲ. ಅದು ಬೇರೆ... ಆಕೆಗೆ ಸಹಾಯ ಮಾಡ್ಬೇಕು ಅಂತ ಅನ್ನಿಸ್ತಿದೆ. ಆದರೆ ಯಾಕೋ ಏನೋ ಬೇಸರವೂ ಆಗ್ತಿದೆ."

"ಬೇಸರಾನಾ ಯಾಕೆ?"

"ಆಕೆಗೆ ಇಬ್ಬರು ಅವಳಿ ಹೆಣ್ಣು ಮಕ್ಕಳು. ಇಬ್ಬರೂ ಹದಿಹರೆಯದ ಹುಡುಗಿಯರು. ಅವರಿಗೆ ಯಾರೋ ಅಶ್ಲೀಲವಾದ ಪತ್ರಗಳನ್ನು ಬರೆದು ತೊಂದರೆ ಕೊಡ್ತಿದಾರಂತೆ. ಆ ಬಗ್ಗೆ ಹುಡುಗಿಯರಿಗೂ ಗೊತ್ತಿಲ್ಲ.....ಅಪ್ಪನಿಗೂ ತಿಳಿಯದು. ಆಕೆ ಒಬ್ಬರೇ ನೋವನ್ನು ಅನುಭವಿಸ್ತಾ ಇದಾರೆ. ಎಂಥಾ ಕಷ್ಟ ಅಲ್ವಾ ಹೆಂಗಸರಿಗೆ? ಅದರಲ್ಲೂ ತಾಯಿಯಾದೋಳಿಗೆ... ನಿಮ್ಮ ತಾಯಿಗೆ ನೀನು ನನ್ನನ್ನು ಪ್ರೀತಿಸುತ್ತಿರುವ ವಿಷಯ ತಿಳಿದ್ರೆ ಅವರಿಗೂ ಹೀಗೇ ಅನ್ನಿಸಬಹುದು ಅಲ್ವಾ..? ಆಗ ಅವರಿಗೆ ನನ್ನ ಬಗ್ಗೆ ಯಾವ ಭಾವನೆ ಬರಬಹುದು..."

"ನಾನು ಹದಿಹರೆಯದ ಹುಡುಗಿಯೂ ಅಲ್ಲ. ನನಗೆ ನೀನು ಯಾವ ಪತ್ರವನ್ನೂ ಬರೆದಿಲ್ಲ. ಆ ಹುಡುಗನಿಗೆ ಇರುವ ಧೈರ್ಯ ಕೂಡಾ ನಿನಗಿಲ್ಲ."

"ನಾನು ಹಾಗೆಲ್ಲಾ ಚೀಪ್ ಆಗಿ ಆಡ್ಲಿ ಅಂತ ನಿಂಗೆ ಅನ್ಸುತ್ತಾ?"

"ಆದ್ರೆ ಧೈರ್ಯವಾಗಿ ಪ್ರೀತಿಸ್ತೀನಿ ಅಂತ ಹೇಳೋದೂ ಇಲ್ವಲ್ಲಾ... ಹೀಗೇ ಎಷ್ಟು ವರ್ಷ ತಳ್ಬೇಕು ಅಂತ ನಿಂಗಾಸೆ?" ತೀಕ್ಷ್ಣವಾಗಿ ನೋಡಿದಳು.

"ಹೀಗೆಲ್ಲಾ ಹಂಗಿಸ್ಬೇಡ ವಿನುತಾ... ನಿಂಗೇ ಗೊತ್ತಲ್ಲ. ಒಂದಲ್ಲ ಒಂದು ಸಮಸ್ಯೆ... ಅಪ್ಪ ರಿಕವರ್ ಆಗೋವರ್ಗೂ ನಾನು ಮಾತಾಡೋಕ್ಕೆ ಆಗೊಲ್ಲ..."

"ನಿಂಗೊಂದು ವಿಷಯ ಗೊತ್ತಾ? ಮಧುಸೂದನ್‌ಗಾಗ್ಲೀ ಅವನ ತಾಯಿಗಾಗ್ಲೀ ನೀನು ಒಪ್ಪಿಗೆ ಆಗಿಲ್ಲ." ಅವಳ ಮುಖ ಕಪ್ಪಿಟ್ಟಿತು. ತಲೆ ತಗ್ಗಿಸಿದಳು. ಅವನು ನಸುನಕ್ಕ.

"ಅಲ್ಲೀವರ್ಗೂ ಮಧು ಅಥವಾ ಅವನ ತಾಯಿ ಸುಮ್ಮನೆ ಇರೋಲ್ಲ."

"ನಂಗೊತ್ತು ನೀನೇ ಏನೋ ಕಿತಾಪತಿ ಮಾಡಿರಬಹುದು."

"ಕಿತಾಪತಿ ಯಾರು ಮಾಡಿದಾರೆ ಅಂತ ನಂಗೊತ್ತು. ಆದರೆ ನಾನು ನಿಜವನ್ನು ಪತ್ತೆ ಹಚ್ಚಿದೀನಿ. ನಿಂಗೆ ಯಾವ ಭಯವೂ ಬೇಡ."

"ಹೀಗೇ ಸುಳ್ಳು ಪಳ್ಳು ಹೇಳ್ಕೊಂಡು ಕಾಲ ಕಳೀಬೇಡ ಮುರಳೀ... ಈಗ ನಿಮ್ಮ ತಂದೆ ಹುಷಾರಾಗಿ ಮನೆಗೆ ಬರೋವರ್ಗೂ ಸುಮ್ಮನಿರ್ತೀನಿ. ಆಮೇಲೆ ನಾನೇ ನಿಮ್ಮ ತಂದೆ ಹತ್ರ ಮಾತಾಡ್ತೀನಿ. ಆಗ ಅವರು ಏನಾದರೊಂದು ಆಕ್ಷನ್ ತಗೊಳ್ಳಲೇಬೇಕಾಗುತ್ತೆ."

"ನನ್ಮೇಲೆ ಕಂಪ್ಲೇಂಟ್ ಮಾಡ್ತೀಯಾ?"

"ಹೂಂ. ಹಾಗೇ ಅಂದ್ಕೋ... " ಮುಗುಳ್ನಕ್ಕಳು.

"ನಿಮ್ಮ ತಂದೆ ಕರೀತಿದಾರೆ." ವಾರ್ಡಿನಲ್ಲಿದ್ದ ನರ್ಸ್ ಹೊರಗೆ ಬಂದು ಕರೆದಳು... ಮುರಳಿಯೊಡನೆ ವಿನುತಾಳೂ ಒಳ ಬಂದಳು. ಆತ ಅವಳನ್ನು

ತಕ್ಷಣಕ್ಕೆ ಗುರುತಿಸಲಿಲ್ಲ....

"ಮುರಳೀ, ವತ್ಸಲಾ ಎಲ್ಲಿ? ಈ ಹುಡುಗಿ ಯಾರು?"

"ಅಮ್ಮ ಮನೆಗೆ ಹೋಗಿದಾಳೆ. ಇವಳು ವಿನುತಾ... ನನ್ನ ಹಳೇ ಫ್ರೆಂಡ್."

"ಓ... ಆ ಹುಡುಗೀನಾ?" ಎಂದಷ್ಟೇ ಹೇಳಿ ಕಣ್ಣು ಮುಚ್ಚಿಕೊಂಡ. ಅಷ್ಟರಲ್ಲಿ ಮುರಳಿಯ ಫೋನ್ ರಾಗ ಹಾಡಿತು. ಅವನು ಹೊರಗೆ ಹೋಗಿ ಮಾತನಾಡಿ, ಒಳಗೆ ಬಂದ.

"ಯಾರದ್ದು ಫೋನ್?" ತಂದೆ ಕೇಳಿದರು.

"ಯಾರೋ ಕ್ಲೈಂಟ್‌ದು ಡ್ಯಾಡೀ... ಏನೋ ಪ್ರಾಬ್ಲಂ... ಬರೋಕ್ಕಾಗಲ್ಲ ಅಂತಂದೆ."

"ಹಾಗ್ಯಾಕೆ ಹೇಳಿದೆ ಮುರಳೀ...ಅವರಿಗೆ ಹೆಲ್ಪ್ ಮಾಡಬೇಕಾದದ್ದು ನಿನ್ನ ಕರ್ತವ್ಯ.... ನಾನೀಗ ಹುಷಾರಾಗಿದೀನಲ್ಲ... ಹೋಗಿ ಮಾತಾಡ್ಕೊಂಡು ಬಾ..."

"ಅಮ್ಮ ಬರ್ಲಿ. ಆಮೇಲೆ ಹೋಗ್ತೀನಿ."

"ನೀನು ಹೋಗು. ಅವಳು ಬರೋದು ಲೇಟಾಗುತ್ತೋ ಏನೋ... ಹಾಗೇ ಯಾರನ್ನೂ ಕಾಯಿಸಬಾರದು. ಇಲ್ಲಿ ನರ್ಸ್‌ಗಳು ಇದಾರೆ. ನೀನು ಈ ಹುಡ್ಗೀನೂ ಕರ್ಕೊಂಡು ಹೋಗು. ನಾನೇ ಹೇಳ್ತಿದೀನಲ್ಲ."

"ಮುರಳಿ, ನೀನು ಹೋಗು. ಆಂಟೀ ಬರೋವರ್ಗೂ ನಾನಿಲ್ಲಿ ಇರ್ತೀನಿ."

"ಏನೂ ಬೇಕಾಗಿಲ್ಲ... ಬಂದು ನೋಡಿದ್ದಾಯ್ತಲ್ಲ. ಹೊರಡ್ತಿರು." ಆತ ಒರಟಾಗಿ ನುಡಿದಾಗ ಅವಳಿಗೆ ಸರಿ ಎನಿಸಲಿಲ್ಲ. ಅವನ ಕಡೆ ನೋಡಿದಳು.

ಅವನು ನರ್ಸ್‌ಗೆ ಹೇಳಬೇಕಾದುದನ್ನು ಹೇಳಿ, ವಿನುತಾಳೊಡನೆ ಹೊರಕ್ಕೆ ಬಂದ. ಕಾರಿಡಾರಿನಲ್ಲಿ ಮಂಜುಳಳನ್ನು ಕಂಡ. ಅವನ ಹುಬ್ಬುಗಳು ಮೇಲೇರಿದವು. ಅವಳು ಇಬ್ಬರನ್ನೂ ಸಮೀಪಿಸಿದಳು. ಅವಳ ಕೈಲಿ ಹೂವಿನ ಬೊಕೆ ಇತ್ತು. ಆಶ್ಚರ್ಯದಿಂದ ವಿನುತಾಳ ಕಡೆ ನೋಡಿದಳು.

"ಹೇಗಿದೀರಿ ಆಂಟಿ?" ವಿನುತಾ ಕಷ್ಟಪಟ್ಟು ಕೇಳಿದಳು.

"ಅದೇನು ನೀನಿಲ್ಲಿ?" ಮುರುಳಿಯ ಕಡೆ ಸಂಶಯದಿಂದ ನೋಡಿದಳು.

"ಇವರ ತಂದೇನ ನೋಡಿ ಹೋಗ್ತೋಣ ಅಂತ ಬಂದೆ."

"ಓ ಹೌದಾ? ಇವರುಗಳ ಪರಿಚಯ ನಿನಗಿದೆ ಅಂತ ಗೊತ್ತಿರಲಿಲ್ಲ."

"ಮೊದಲ್ನಿಂದ ಪರಿಚಯ... ಮೊದಲು ಇವರ ಮನೆಯ ಹತ್ತಿರವೇ ಇದ್ದೆವು." ಮುರಳಿ ಎಂದ.

"ಅದ್ಸರಿ... ನೀನು ಪುರುಷೋತ್ತಮನ ಮಗ ಅಂತ ಹೇಳಿರ್ಲೇ ಇಲ್ಲ."

"ನೀವು ಕೇಳಲಿಲ್ಲ; ನಾನು ಹೇಳಲಿಲ್ಲ ಅಷ್ಟೇ... ವೆರಿ ಸಿಂಪಲ್."

"ವೆರಿ ಸ್ಮಾರ್ಟ್... ಈಗ ಪುರುಷೋತ್ತಮ ಹೇಗಿದಾರೆ?"

"ಪರವಾಗಿಲ್ಲ... ಆರಾಮವಾಗಿದಾರೆ. ವಿನುತಾ ನೀನು ಇವರ ಜತೇಲಿ ಇರು. ನಾನು ಬೇಗ ವಾಪಸ್ಸು ಬಂದು ಬಿಡ್ತೀನಿ. ಬರ್‍ತಾ ಅಮ್ಮನ್ನೂ ಕರ್‍ಕೊಂಡು ಬರ್ತೀನಿ." ಎಂದು ಇಬ್ಬರಿಗೂ ಹೇಳಿ, ತಾನು ಕಾರು ಪಾರ್ಕ್ ಮಾಡಿದ್ದ ಕಡೆಗೆ ನಡೆದ. ಮಂಜುಳಾ ವಾರ್ಡಿನೊಳಗೆ ನಡೆದಳು. ವಿನುತಾ ಹೊರಗೆ ಕಾರಿಡಾರಿನಲ್ಲೇ ನಿಂತಳು. ಏನನ್ನೋ ನೆನಪಿಸಿಕೊಂಡವನಂತೆ ಮತ್ತೆ ಮುರಳಿ ಅವಳು ನಿಂತ ಕಡೆಗೆ ಬಂದು ಕೈ ಸನ್ನೆ ಮಾಡಿ ಹತ್ತಿರಕ್ಕೆ ಕರೆದ.

"ಈಗ ನನ್ನನ್ನು ಏನೂ ಕೇಳ್ಬೇಡ... ಈಕೆ ಅಪ್ಪನ ಜೊತೆ ಏನು ಮಾತಾಡ್ತಾಳೆ ಅಂತ ಕೇಳಿಸ್ಕೊಂಡು ನಂಗೆ ಹೇಳು... "

"ಅದ್ಹೇಗಾಗುತ್ತೆ? ನಿಮ್ಮಪ್ಪ ಏನಂದ್ಕೊಳ್ತಾರೆ?"

"ಇಲ್ಲಿ ಕಿಟಕಿಯ ಬಳಿ ನಿಂತು ಕೇಳಿಸ್ಕೋ. ವೆರಿ ಇಂಪಾರ್ಟೆಂಟ್... ಆಮೇಲೆ ನಿಧಾನವಾಗಿ ಏನೂಂತ ಹೇಳ್ತೀನಿ... ನಂಗೆ ಅರ್ಜೆಂಟ್ ಕೆಲಸವಿದೆ. ನಾನು ಬರ್ತೀನಿ." ಎಂದು ಹೇಳಿ ಓಡಿ ಹೋದ. ಇವಳು ಕಿಟಕಿಯ ಮರೆಯಲ್ಲಿ ನಿಂತಳು.

* * *

ಹೆಜ್ಜೆಯ ಸಪ್ಪಳ ಕೇಳಿಸಿತು. ಮೈಗೆ ಹಚ್ಚಿದ ಪೌಡರಿನ ವಾಸನೆ ಮೂಗಿಗೆ ಬಡಿಯಿತು. ಪುರುಷೋತ್ತಮ ಇತ್ತ ತಿರುಗಿದ. ಮಂಜುಳ ಮುಗುಳ್ನಕ್ಕಳು. ತನ್ನ ಕೈಯಲ್ಲಿದ್ದ ಹೂವಿನ ಬೊಕೆಯನ್ನು ಪಕ್ಕದ ಟೇಬಲ್ ಮೇಲಿಟ್ಟಳು. " ಹೇಗಿದೀರಿ? " ಕೇಳಿದಳು.

"ನೀನ್ಯಾಕೆ ಇಲ್ಲಿಗೆ ಬಂದೆ? ನಿಂಗೆ ಹೇಗೆ ಗೊತ್ತಾಯ್ತು?" ಬಾಗಿಲ ಕಡೆ ಕಣ್ಣಾಡಿಸಿ ಗಾಬರಿಯಿಂದ ಕೇಳಿದ.

"ಟಿ.ವಿ. ನ್ಯೂಸ್‌ನಲ್ಲಿ ನೋಡಿದೆ. ಮನಸ್ಸು ತಡೀಲಿಲ್ಲ, ಬಂದೆ."

"ಅದೇನು ಈಗ ಇದ್ದಕ್ಕಿದ್ದ ಹಾಗೆ ಮನಸ್ಸು ಓೀಗ್ಮಾಡ್ತು?" ವ್ಯಂಗ್ಯದ ದನಿಯಿತ್ತು.

"ಮೊದಲೂ ಹಾಗೇ ಇತ್ತು ಪುರುಷೋತ್ತಮ್. ನಿಮಗೆ ಅರ್ಥವಾಗಲಿಲ್ಲ ಅಷ್ಟೇ... ನಾನೇನ್ಮಾಡ್ಲೀ?"

"ಮೊನ್ನೆ ಬಂದಾಗ ಒರಟಾಗಿ ಮಾತಾಡ್ದೇ... ಈಗ ಮೃದುವಾಯ್ತಾ?" ಹಂಗಿಸಿ ಕೇಳಿದ.

"ಆಗ ನಿಮ್ಮ ಮೇಲೆ ಕೋಪ ಇತ್ತು... ಈಗ ಆತಂಕ ಆಗ್ತಿದೆ."

"ಆತಂಕ ಯಾಕೆ, ನನ್ನ ಗೊಡವೆಯೇ ಬೇಡದವಳಿಗೆ? ಇದುವರೆಗೆ ನನ್ನ

ಬಗ್ಗೆ ಯೋಚನೆಯೇ ಇರಲಿಲ್ಲ ನಿನಗೆ?"

"ಆತಂಕ, ಯೋಚನೆ ಇಲ್ಲದಿದ್ರೆ, ನಿಮ್ಮನ್ನ ನೋಡೋಕೆ ಬರ್ತಿದ್ನಾ? ಇದೆಲ್ಲಾ ಹೇಗಾಯ್ತು? ಡಾಕ್ಟ್ರು ಏನಂತಾರೆ?"

"ಅದನ್ನೆಲ್ಲಾ ವಿಚಾರಿಸಿಕೊಳ್ಳೋಕೆ ನನ್ನ ಹೆಂಡತಿ, ಮಗ ಇಬ್ಬರೂ ಇದ್ದಾರೆ... ನಿನಗೆ ಈ ವಿಷಯ ಹೇಗೆ ತಿಳೀತು?"

"ಟಿ.ವಿ. ನ್ಯೂಸ್‌ನಲ್ಲಿ ನೋಡ್ದೆ ಅಚಿತ ಹೇಳದ್ನಲ್ಲ.... ನಾನೂ ನಿಮ್ಮವಳೇ... ಮಧು ಕೂಡಾ ನಿಮ್ಮ ಮಗನೇ..."

"ಷ್! ಮೆಲ್ಲಗೆ ಮಾತಾಡು ಯಾರಿಗಾದ್ರೂ ಕೇಳಿಸೀತು. ಅವನೂ ಬಂದಿದಾನೇನು?" ಕುತೂಹಲದ ದೃಷ್ಟಿ ಅವಳ ಬೆನ್ನ ಹಿಂದೆ ಹರಿಯಿತು.

"ಅವನೇ ಈ ನರ್ಸಿಂಗ್ ಹೋಂನಲ್ಲಿರುವ ವಿಷಯಾನ ತಿಳಿಸಿದ್ದು. ಅವನೂ ಬಂದಿದ್ದನಂತೆ.... ನಿಮಗೆ ಎಚ್ಚರವಿರಲಿಲ್ಲವಂತೆ." ಮಂದಹಾಸವನ್ನು ಬೀರಿದಳು.

"ಹೌದಾ? ಆಗ ಇಲ್ಲಿ ಯಾರಿದ್ರಂತೆ?"

"ಮುರಳಿ ಹಾಗೂ ವಿನುತಾ ಇದ್ದರಂತೆ... ವತ್ಸಲಾ, ಅದೇ ತಾನೇ ಹೋಗಿದ್ರಂತೆ."

"ಹಾಗಾದ್ರೆ... ನಿನಗೆ ನಮ್ಮ ಮನೆಯವರ ಹೆಸರು ಕುಲ ಎಲ್ಲಾ ಗೊತ್ತು ಅನ್ನು." ಆತಂಕದ ದನಿಗೂಡಿಸಿದ.

"ನಾನು ಎಲ್ಲ ವಿಷಯವನ್ನೂ ತಿಳಿದುಕೊಳ್ಳುತ್ತಿದ್ದೆ. ಆ ಆಸಕ್ತಿ ನಿಮಗೆ ಇರಲಿಲ್ಲ ಅಷ್ಟೇ. ನನ್ನನ್ನ, ನಿಮ್ಮ ಮಗನನ್ನು ಮರೆತೇ ಬಿಟ್ಟಿದ್ರಿ..." ಆಕ್ಷೇಪಿಸಿದಳು.

"ನೋಡು ಮಂಜುಳಾ, ನನ್ನ ಮೇಲೆ ಆರೋಪವನ್ನು ಹೊರಿಸ್ಬೇಡ... ಬರಲೇ ಬೇಡಿ ಅಂತ ಖಡಾಖಂಡಿತವಾಗಿ ಹೇಳಿದ್ದೋಳು ನೀನು... ಆದರೆ ಮಧು ಬಗ್ಗೆ ನನ್ನ ಹೆಂಡತಿ ಹೇಳಿದ್ಮೇಲೇ..." ಅವಳ ಮುಖ ಬಿಳುಪೇರಿತು.

"ಅಂದ್ರೆ... ನಿಜ ಏನೂಂತ ವತ್ಸಲಂಗೆ ಗೊತ್ತಾಗಿ ಹೋಯ್ತಾ? ಮುಂದೇನು?"

"ಇಲ್ಲ ಮಂಜುಳಾ... ಗೊತ್ತಾಗಿಲ್ಲ... ಆದರೆ ನೀನು ಬಂದು ಹೋಗಿ ಮಾಡ್ತಾ ಇದ್ರೆ ಗೊತ್ತಾಗೇ ಆಗುತ್ತೆ. ಆದರೆ ಆ ಭಯ ನನಗಿಲ್ಲ. ಮಧು, ಮುರಳಿಯ ಥರಾನೇ ಇದಾನಂತೆ... ಎಷ್ಟಾದರೂ ಅವಳಿ ಮಕ್ಕಳಲ್ವಾ?"

ವಿನುತಾ.... ಕಿಟಕಿಯಿಂದ ಹಿಂದೆ ಸರಿದು, ಗೋಡೆಗೆ ಒರಗಿದಳು. ಅವರಿಬ್ಬರ ಮಾತುಕತೆಗಳು ಅಸ್ಪಷ್ಟವಾಗಿರಲಿಲ್ಲ. ಮಧು, ಮುರಳಿ, ಅವಳಿ ಮಕ್ಕಳು ಎನ್ನುವುದು ತಿಳಿದು ಹೋಯಿತು... ಉದ್ವೇಗವೋ, ಅಸಹಾಯಕತೆಯೋ, ಆಕ್ರೋಶವೋ, ಭಾವನೆಗಳ ತಿಕ್ಕಾಟವೋ ಅವಳ ಉಸಿರಾಟದ ವೇಗ ಹೆಚ್ಚಾಗಿತ್ತು. ತಾನು ಕೇಳಿಸಿ ಕೊಂಡಿದ್ದು ಸುಳ್ಳೋ ನಿಜವೋ ಎಂದು ನಂಬುವುದೇ ಕಷ್ಟವಾಗಿತ್ತು. ಏನಿದೆಲ್ಲಾ

ಕತೆ ಎಂದುಕೊಂಡು ಮತ್ತೆ ಕಿಟಕಿಯಲ್ಲಿ ಕಣ್ಣು ತೂರಿಸಿದಳು. ಮಂಜುಳಾ ಆತನ ಕೈಯನ್ನು ಹಿಡಿದುಕೊಂಡು ಪಕ್ಕದಲ್ಲಿ ಕುಳಿತಿದ್ದಳು. ಇವಳಿಗೆ ಹೇಗೆ ಹೇಗೋ ಆಯಿತು. ಮತ್ತೆ ಅಲ್ಲಿಯೇ ನಿಲ್ಲಲು ಮನಸ್ಸಾಗದೇ ನರ್ಸಿಂಗ್ ಹೋಂನ ಮುಂಭಾಗಕ್ಕೆ ಬಂದು ನಿಂತಳು... ಸ್ವಲ್ಪ ಹೊತ್ತು ಆಲೋಚಿಸಿದಳು.

ಮುರಳಿಗೆ ಫೋನ್ ಮಾಡಿದಳು. "ಮುರಳೀ, ನೀನು ಈಗ್ಲೇ ಬಾ... ನಂಗೆ ಇಲ್ಲಿ ಒಬ್ಬಳಿಗೇ ಇರೋಕ್ಕೆ ಆಗ್ತಿಲ್ಲ... ನಿನಗೆ ಒಂದು ಮುಖ್ಯವಾದ ವಿಷಯವನ್ನು ತಿಳಿಸ್ಬೇಕು."

"ಬರ್ತಾ ಇದೀನಿ. ಅಮ್ಮನನ್ನು ಕರ್ಕೊಂಡು ಬರ್ಬೇಕು. ಇನ್ನೂ ಅರ್ಧಗಂಟೆ ಆಗುತ್ತೆ. ನೀನು ಬೇಕಾದ್ರೆ ಮನೆಗೆ ಹೋಗು... ಸಿಸ್ಟರ್‌ಗೆ ಹೇಳ್ಬಿಟ್ಟು ಹೋಗು. ನಾನು ಆಮೇಲೆ ನಿನ್ಹತ್ರ ಮಾತಾಡ್ತೀನಿ."

"ಬೇಡ. ನಾನೇ ನಿಂಗೆ ಫೋನ್ ಮಾಡ್ತೀನಿ. ನಮ್ಮ ಅಪ್ಪ ತಗೊಂಡ್ರೇ!"

"ಮಧುಸೂದನ ಅಂತ ಹೇಳ್ಬಿಡು; ಅವರಿಗೆ ಹೇಗೆ ಗೊತ್ತಾಗುತ್ತೆ?"

"ಹೌದು, ಯಾರಿಗೂ ಗೊತ್ತಾಗೋಲ್ಲ. ಆದರೆ ನಿಜ ಏನು ಅಂತ ನಂಗೆ ಗೊತ್ತು."

"ವ್ಹಾಟ್ ಡೂ ಯೂ ಮೀನ್!"

"ಏನಿಲ್ಲ, ಸದ್ಯಕ್ಕೆ ಫೋನ್ ಇಡ್ತೀನಿ" ಎಂದು ಹೇಳಿ ರಿಸೀವರನ್ನು ಇಟ್ಟಳು. ತಾನು ಕೇಳಿಸಿಕೊಂಡ ವಿಷಯಕ್ಕೆ ಉಂಟಾಗಿದ್ದ ಗೊಂದಲದಿಂದ ಅವಳಿನ್ನೂ ಹೊರಬಂದಿರಲಿಲ್ಲ. ಈ ವಿಷಯ ಮುರಳಿಗೆ ತಿಳಿದರೆ ಅವನಿಗೆ ಏನನ್ನಿಸಬಹುದು? ಮಧುಗೆ ಈ ವಿಷಯ ಗೊತ್ತಿರಬಹುದೇ? ಅದನ್ನು ಪತ್ತೆ ಹಚ್ಚಬೇಕೆಂದುಕೊಂಡಳು. ತಕ್ಷಣವೇ ಮಧುಸೂದನನಿಗೆ ಫೋನ್ ಮಾಡಿದಳು. "ನಾನು ಮುಖ್ಯವಾದ ವಿಷಯವೊಂದನ್ನು ನಿಮಗೆ ತಿಳಿಸಬೇಕು. ಸಂಜೆ ನಮ್ಮ ಮನೆಗೆ ಬರ್ತೀರಾ? ಹೊರಗೆ ಎಲ್ಲಾದ್ರೂ ಹೋಗಿ ಮಾತನಾಡೋಣ." ಎಂದಳು

"ಏನು ವಿಷಯ? ಮುರಳಿ ಹತ್ರ ಮಾತಾಡಿದ್ರಾ? ತಂದೆ ಹೇಗಿದಾರೆ?"

"ಆ ವಿಷಯ ಅಲ್ಲ. ಬೇರೆ ವಿಷಯ. ಫೋನಿನಲ್ಲಿ ಹೇಳಕ್ಕಾಗೋಲ್ಲ. ಬೈ." ಎಂದು ಹೇಳಿ ಮಾತನ್ನು ಮುಗಿಸಿದಳು.

ಮುರಳಿ ಹಾಗೂ ವತ್ಸಲಾ ನರ್ಸಿಂಗ್ ಹೋಂಗೆ ಬರುವ ವೇಳೆಗೆ ಸ್ಪೆಷಲ್ ವಾರ್ಡಿನಲ್ಲಿದ್ದ ಪುರುಷೋತ್ತಮ ನಿದ್ದೆ ಹೋಗಿದ್ದರು. ಮುರಳಿ ಬಾಗಿಲ ಬಳಿ ನಿಂತಿದ್ದ ಸಿಸ್ಟರ್ ಜೊತೆಯಲ್ಲಿ ಮಾತನಾಡಿದ. "ವಿನುತಾ ಅನ್ನೋರು ಯಾವಾಗ ಹೋದ್ರು?" ಕೇಳಿದ. "ಅವರು ಏನ್ಹೇಳಿದ್ರು?" ಆತಂಕದಿಂದ ಕೇಳಿದ.

"ಅವರು ಹೋಗಿ ತುಂಬಾ ಹೊತ್ತಾಯ್ತು. ಆಮೇಲೆ ಮಂಜುಳಾ ಅನ್ನೋರು

ಬಂದಿದ್ರು... ತುಂಬಾ ಹೊತ್ತು ಮಾತನಾಡ್ತಾ ಇಲ್ಲೇ ಕೂತಿದ್ರು." ಮುರಳಿಯ ಹುಬ್ಬುಗಳು ಮೇಲೇರಿದವು. ತಂದೆಯ ಪಕ್ಕ ಕುಳಿತಿದ್ದ ತಾಯಿಯ ಕಡೆ ನೋಡಿದ. 'ಮಂಜುಳಾ! ಮಧುಸೂದನನ ತಾಯಿ! ಇಲ್ಲಿಗ್ಯಾಕೆ ಬಂದಿದ್ದಳು? ಅಪ್ಪನಿಗೂ ಅವಳಿಗೂ ಏನು ಸ್ನೇಹ? ಮಧು ಆ ವಿಷಯವನ್ನು ಪತ್ತೆ ಹಚ್ಚಲು ನನ್ನ ಬಳಿಗೆ ಬಂದಿದ್ದ. ಪುರುಷೋತ್ತಮ ಯಾರು ಅಂತ ವಿಚಾರಿಸಿದ್ದ. ಈಗ ಈ ವಿಚಾರ ಪುರುಷೋತ್ತಮನಿಗೆ ತಿಳಿಯದು. ಭೇಟಿ ಮಾಡಲು ಆಗಿರಲೇ ಇಲ್ಲ. ಆದರೆ ಮಧುವಿನ ತಾಯಿ ಮಂಜುಳಾ ನನ್ನ ತಂದೆಯನ್ನು ನೋಡಲು ಬಂದಳೆಂದರೆ? ಸ್ನೇಹ ಬಹಳ ಗಟ್ಟಿ ಇರಲೇಬೇಕು... ಈ ಕೆಲಸವನ್ನು ವಿನುತಳಿಗೆ ವಹಿಸಿದ್ದಾಗತ್ತು. ಮಧುಗೆ ನಿಜವಾದ ವಿಷಯ ತಿಳಿದಿದ್ರೆ ವಿನುತಳಿಗೆ ತಿಳಿಸೇ ತಿಳಿಸ್ತಾನೆ... ವತ್ಸಲಾ ಗಂಡನೊಡನೆ ಮಾತನಾಡುತ್ತಿದ್ದವಳು, ಮುರಳಿಯ ಕಡೆ ತಿರುಗಿ ಕಣ್ಸನ್ನೆ ಮಾಡಿ ಕರೆದಳು. ವಿನಾಕಾರಣ, ಅವನ ಎದೆ ಢವಗುಟ್ಟಿತು. ಅವನು ಅವಳನ್ನು ಸಮೀಪಿಸಿದ. .. ತಲೆಯೊಳಗೆ ಲೆಕ್ಕಾಚಾರ ಸರಿದಾಡುತ್ತಿತ್ತು.

"ನಿಮ್ಮ ಡ್ಯಾಡಿಗೆ ಆಗ್ಲೇ ಬೇಜಾರು ಶುರುವಾಗಿದೆ. ಮನೆಗೆ ಹೋಗೋಣ, ಅಚಿತಿದಾರೆ. ಬೇಗ ರಿಕವರ್ ಆಗಿ, ಡ್ಯೂಟಿಗೆ ಹೋಗ್ಬೇಕು ಅಂತ ಅನ್ನಿಸ್ತಿದೆಯಂತೆ. ನಿನ್ನೆಗಿಂತ ಗೆಲುವಾಗಿದಾರೆ ಅಲ್ವಾ?" ಒಂದು ಗಳಿಗೆ ಸಂಶಯದಿಂದ ತಲೆ ಧೀಂ ಎಂದಿತು. ತಲೆ ಕೊಡಹಿದ.

"ಹೌದು ಯಾರಾದ್ರೂ ಕಲೀಗ್ಸ್ ನೋಡೋಕೆ ಬಂದಿದ್ರಾ ಡ್ಯಾಡ್?"

"ಇಲ್ಲ, ಯಾರೂ ಬಂದಿರ್ಲಿಲ್ಲ... ಅಥವಾ ನಾನು ನಿದ್ದೆ ಮಾಡ್ತಿದ್ದಾಗ ಯಾರಾದ್ರೂ ಬಂದಿದ್ರೆ ತಿಳೀದು." ಇತ್ತ ಕಡೆ ತಿರುಗಲಿಲ್ಲ.

"ಮನೆಗೆ ಯಾರೋ ಒಂದಿಬ್ರು ಫೋನ್ ಮಾಡಿ ವಿಚಾರಿಸಿದ್ರು... ನಿಮಗೆ ಇಷ್ಟ ಆಗುತ್ತೋ ಅಲ್ವೋ ಅಂತ ಅನುಮಾನವನ್ನು ವ್ಯಕ್ತಪಡಿಸಿದ್ರು... ಇವತ್ತು ಸಾಯಂಕಾಲ ಯಾರಾದ್ರೂ ಬರಬಹುದೋ ಏನೋ? ಅರೇ! ಆಗ್ಲೇ ಯಾರೋ ಬಂದು ಹೋಗಿದಾರೆ? ಈ ಹೂವಿನ ಬೊಕೆ ಕೊಟ್ಟಿದ್ದಾರೆ..." ಪುರುಷೋತ್ತಮ ತನಗೆ ಕೇಳಿಸಲಿಲ್ಲ ಎಂಬಂತೆ ಕಣ್ಣುಗಳನ್ನು ಮುಚ್ಚಿಕೊಂಡ. ಹೆಂಡತಿಯ ಕಡೆ ನೋಡಲಾಗಲಿಲ್ಲ.

"ಸಿಸ್ಟರ್‌ನ ಕೇಳಿದ್ರೆ ಗೊತ್ತಾಗುತ್ತೆ..." ವತ್ಸಲಾ ಉತ್ತರಿಸಲಿಲ್ಲ. ಮುರಳಿ ಅವರಿಬ್ಬರನ್ನೂ ಅಲ್ಲಿಯೇ ಬಿಟ್ಟು ಹೊರಗೆ ಬಂದು ನಿಂತ.

* * *

ಮಧುಸೂದನ ಕಾರಿನಿಂದ ಇಳಿದುದನ್ನು ಕಂಡ ಸದಾನಂದ ಹೆಂಡತಿಯ

ಕಡೆ ಸಂಶಯದಿಂದ ನೋಡಿ, "ಮತ್ತೆ ಇವತ್ತು ಯಾಕೆ ಬಂದ್ರು? ಇಬ್ರೂ ಎಲ್ಲಿಗೆ ತಿರುಗಾಡಕ್ಕೆ ಹೋಗ್ತಾರೆ? ಲಗ್ನಪತ್ರಿಕೆ ಶಾಸ್ತ್ರವನ್ನು ಮಾಡಿಲ್ಲವಲ್ಲ....." ಎಂದು ಕೇಳಿದ.

"ಏನೇನೋ ಯಾಕೆ ಊಹಿಸ್ತೀರಿ? ಅವರು ಸಂಭಾವಿತರಂತೆ ಕಾಣ್ತಾರೆ. ನಿಮ್ಮ ಹತ್ರವೇ ಮಾತನಾಡೋದು ಇರಬಹುದು......ತಡೀರಿ ನೋಡೋಣ."

"ಒಬ್ಬರೇ ಯಾಕೆ ಬರ್ತಾರೆ! ತಾಯೀನೂ ಬರಬಹುದಾಗಿತ್ತಲ್ಲ. ಅಲ್ಲದೇ ಅವರ ಕಡೆಯ ಹಿರಿಯರ್ಯಾರಾಗಲೀ, ಹತ್ತಿರದ ನೆಂಟರಾಗಲೀ ಯಾರೂ ಇದುವರೆಗೂ ಬಂದಿಲ್ಲ."

"ಈಗ ಯಾಕೆ ಮಾತು? ವಿನುತಳಿಗೆ ಕೇಳ್ಸಿದ್ರೆ ಏನಂದ್ಕೊಂಡಾಳು?"

"ಏನದ್ರೂ ಅಂದ್ಕೊಳ್ಳಲಿ. ಅವಳಿನ್ನೂ ನಮ್ಮ ಮಗಳೇ... ಆ ಮನೆಗೆ ಹೋಗುವವರೆಗೂ ನನ್ನ ಇಷ್ಟದಂತೆ ಇರಬೇಕು." ಗಡುಸಾಗಿ ನುಡಿದ.

"ಸಾಕು, ಚೆನ್ನಾಗಿದೆ ನಿಮ್ಮ ಮಾತು. ಬಂದ ಬಂದ ಗಂಡೆಲ್ಲಾ ಇವಳನ್ನು ಒಪ್ಪದೇ ಇದ್ದಾಗ, ನನ್ನ ಹೊಟ್ಟೆ ಕಲಕಿ ಹೋಗ್ತಿತ್ತು... ಈಗ ಇವಳಿಗೆ ಕಂಕಣ ಭಾಗ್ಯ ಒದಗಿ ಬಂದಿದೆ. ನೀವ್ಯಾಕೆ ಹೀಗೆ ಮಾತಾಡ್ತೀರೋ! ನೀವು ಇನ್ನೂ ಅದ್ಯಾವ ಕಾಲದಲ್ಲಿದ್ದೀರೋ.....! ಅವರು ಬೆಲ್ ಮಾಡಿದ್ರು, ಹೋಗಿ ಬಾಗಿಲನ್ನು ತೆಗೀರಿ. ನಾನು ವಿನುತಾಗೆ ಹೇಳಿ ಬರ್ತೀನಿ." ಅವಳು ರೂಮಿನ ಕಡೆಗೆ ನಡೆದಳು. ಸದಾನಂದ ಉಬ್ಬಿದ ಮುಖದೊಂದಿಗೆ ಮುಂಬಾಗಿಲಿಗೆ ಬಂದ. ಬಾಗಿಲನ್ನು ತೆರೆದ. ಮಧುಸೂದನ ಕೈ ಮುಗಿದು 'ನಮಸ್ಕಾರ ಸಾರ್' ಎಂದ. ಸದಾನಂದ ಬಲವಂತದ ಮುಗುಳ್ನಗೆಯನ್ನು ಬೀರಿ ಒಳಕ್ಕೆ ಆಹ್ವಾನಿಸಿದ.

"ಒಬ್ಬರೇ ಬಂದ್ರಾ? ನಿಮ್ಮ ತಾಯಿ ಬರ್ಲಿಲ್ವೇ?" ಕೇಳಿದ.

"ಇಲ್ಲ, ಅವರು ಹೊರಗೆಲ್ಲೋ ಹೋಗಿದ್ರು. ನಾನು ನಿಮ್ಮನ್ನೆಲ್ಲಾ ನೋಡಿಕೊಂಡು ಹೋಗೋಣ ಅಂತ ಬಂದೆ. ವಿನುತಾ ಇದಾರಾ?" ಅಳುಕು ಇಲ್ಲದೇ ಕೇಳಿದ.

"ಹೂಂ, ಇದಾಳೆ. ಲಗ್ನಪತ್ರಿಕೆ ಬಗ್ಗೆ ವಿಚಾರ್ಸಿದ್ರಾ?"

"ಅದರ ವಿಷಯಾನಾ ನಮ್ಮ ತಾಯಿ ಮಾತಾಡ್ತಾರೆ... ನಾನು ವಿನುತನ್ನ ಸ್ವಲ್ಪ ಹೊರಗೆ ಕರ್ಕೊಂಡು ಹೋಗ್ತೀನಿ, ನಿಮಗೆ ಏನೂ ಅಭ್ಯಂತರವಿಲ್ಲದಿದ್ರೆ."

"ಅಭ್ಯಂತರ ಏನಿಲ್ಲ... ಆದರೆ ಲಗ್ನಪತ್ರಿಕೆ ಆಗಿದ್ದಿದ್ರೆ ಚೆನ್ನಾಗಿತ್ತು." ಅಷ್ಟರಲ್ಲಿ ವಿನುತಾ ಬಂದಿದ್ದಳು. ಅವಳು ಏನೋ ಗೊಂದಲದಲ್ಲಿರುವಂತೆ ಅನ್ನಿಸಿತು.

"ಬರ್ತೀರಾ ವಿನುತಾ... ನಾನು ನಿಮ್ಹತ್ರ ಸ್ವಲ್ಪ ಮಾತಾಡೋದಿತ್ತು. ಹಾಗೇ ನಿಮ್ಮನ್ನು ಒಬ್ಬರಿಗೆ ಪರಿಚಯ ಮಾಡಿಸಬೇಕಾಗಿತ್ತು."

"ಸರಿ ಬರ್ತೀನಿ. ಅಮ್ಮಾ ಹೋಗ್ಬರ್ತೀನಿ." ಅವಳು ಹೊರಟೇ ಬಿಟ್ಟಳು.

"ತಡಿ ವಿನೂ... ಅವರಿಗೆ ಕಾಫಿ, ತಿಂಡಿ ಕೊಡೋಣ....."

"ಏನೂ ಬೇಡಿ ಅಮ್ಮಾ... ಎಲ್ಲಾ ಆಗಿದೆ. ಬೇಗ ಬಂದು ಬಿಡ್ತೀವಿ."

"ವಿನೂ, ಸ್ವಲ್ಪ ಒಳಗೆ ಬರ್ತೀಯಾ?" ಪಿಸುದನಿಯಲ್ಲಿ ಹೇಳಿ ಸಂಜ್ಞೆ ಮಾಡಿ ಒಳಕ್ಕೆ ಕರೆದಳು. ವಿನುತಾ ಬೇಸರದಿಂದ ಅವಳ ಹಿಂದೆ ನಡೆದಳು.

"ವಿನೂ... ಸ್ವಲ್ಪ ಎಚ್ಚರದಿಂದಿರೇ... ನಿಮ್ಮಪ್ಪಂಗೆ ಈ ಓಡಾಟ ಇಷ್ಟ ಆಗೋಲ್ಲ. ಕಾಲ ಕೆಟ್ಟದ್ದು. ಅಪವಾದ ಬರುವಂತಾಗಬಾರದು." ತಡೆತಡೆದು ಹೇಳಿದಳು.

"ಛೀ... ಏನಮ್ಮಾ ಹೀಗೆಲ್ಲಾ ಮಾತಾಡ್ತೀಯಲ್ಲ. ನಿಂಗೆ ನಮ್ಮ ಮೇಲೆ ನಂಬ್ಕೆ ಇಲ್ವಾ? ಮಧು ಅಂಥೋರಲ್ಲ."

"ನಂಗೊತ್ತು ವಿನೂ.... ಆತ ಸಂಭಾವಿತ. ಆದರೆ ಜನರು? ನಮ್ಮ ಎಚ್ಚರಿಕೆಯಲ್ಲಿ ನಾವು ಇರಬೇಕು ಅಲ್ವಾ? ಲಗ್ನಪತ್ರಿಕೆ ಶಾಸ್ತ್ರವೊಂದು ನೆರವೇರಿಬಿಟ್ಟಿದ್ದರೆ, ಯಾವ ಚಿಂತೆಯೂ ಇರಲಿಲ್ಲ."

"ಸರಿ, ಅವರಿಗೆ 'ನಾನು ಬರೋಲ್ಲ... ಇನ್ಮೇಲೆ ನೀವೂ ಬರ್ಬೇಡಿ' ಅಂತ ಹೇಳಿಬಿಡ್ತೀನಿ." ದಪ್ಪದನಿಯಲ್ಲಿ ನುಡಿದಳು.

"ಹಾಗೆ ಹೇಳೋಕ್ಕೆ ಆಗುತ್ತಾ ವಿನೂ? ಲಗ್ನಪತ್ರಿಕೆ ಬಗ್ಗೆ ಕೇಳು....."

"ಅದೆಲ್ಲ ನಿಮಗೆ ಸೇರಿದ ವಿಷಯ. ನಾನು ಕೇಳೋಲ್ಲ. ಬೇಕಾದ್ರೆ ನನ್ನ ಜೊತೆಗೆ ಸರಿತನ್ನ ಕಳಿಸು... ನಿಮಗೆ ಏನಾದ್ರೂ ಅನುಮಾನವಿದ್ದರೆ?"

"ಅವಳ್ಯಾಕೆ ನಿಮ್ಮಿಬ್ಬರ ಮಧ್ಯೆ? ಅವರು ಏನಂದುಕೊಂಡಾರು?"

"ಸರಿ ಮತ್ತೆ. ನನ್ನನ್ನು ಸುಮ್ಮನೆ ಹೋಗಲು ಬಿಡು. ಹಾಗೇ ಅಪ್ಪಂಗೆ ಹೇಳು, ಮಗಳು ಮನೆಗೆ ಕೆಟ್ಟ ಹೆಸರು ತರೋಲ್ಲ ಅಂತ." ಅಲ್ಲಿ ನಿಲ್ಲದೇ ಹೊರಕ್ಕೆ ಬಂದಳು. ಮಧುವಿಗಿಂತ ಮುಂಚೆ ಬೀದಿಗೆ ಹೋಗಿ ನಿಂತಳು. ಮಧು ಅವರಿಬ್ಬರಿಗೂ "ಬರ್ತೀನಿ" ಎಂದು ಹೇಳಿ ಹೊರಗೆ ಬಂದ. ಇಬ್ಬರೂ ಕಾರಿನ ಬಳಿಗೆ ನಡೆದರು. ಸದಾನಂದ ಗುರ್ರೆಂದ.

"ನೀನು ನಿನ್ನ ಮಗಳನ್ನು ಅಂಕೆ ಶಿಕ್ಷೇಲಿ ಬೆಳೆಸಿಲ್ಲ. ಅವನು ಬಂದ್ಕೂಡ್ಲೇ ಸಡಗರದಿಂದ ಅವನ ಹಿಂದೆ ಓಡಿದ್ಲು... ಇಂಥಾ ಮಕ್ಕಳಿಂದ ಮರ್ಯಾದೆ ಬರುತ್ತಾ?"

"ಹೀಗೆಲ್ಲಾ ಆಡೋ ಬದ್ಲು, ನೀವೇ ಯಾಕೆ ಆಕೆ ಹತ್ರ ಮಾತಾಡ್ಬಾರ್ದು?"

"ಅವರ್ಮನೇಲಿ ಬೇರೆ ಯಾರೂ ಗಂಡಸರಿಲ್ಲ. ಆ ಹೆಂಗಸಿನೊಂದಿಗೆ ಮಾತಾಡುಕ್ಕೆ ಕಷ್ಟ ಆಗುತ್ತೆ... ನೀನೇ ಮಾತಾಡು..."

"ಮನೆ ಯಜಮಾನ ನೀವು ಇದ್ಕೊಂಡು ನಾನ್ಹೇಗೆ ಮಾತಾಡ್ಲೀ? ವಿನುತನ ಕೈಲಿ ಹೇಳಿಸ್ತೀನಿ. ಅವರ ಕಡೆಯಿಂದ ಯಾರಾದರೂ ಗಂಡಸ್ರು ಬರುವಂತೆ

ಹೇಳ್ಲೀ?"

"ಸರಿ ಅದೇನ್ಮಾಡ್ತೀಯೋ ಬೇಗ ಬೇಗ ಮಾಡು." ಅವನು ಸಿಡುಕಿದ.

* * *

"ವಿನುತಾ, ಫೋನ್ ಮಾಡಿದ್ರಲ್ಲ, ಏನೋ ವಿಷಯ ಹೇಳ್ಬೇಕು ಅಂತಂದ್ರೀ... ಮೊದಲು ಎಲ್ಲಿಗೆ ಹೋಗೋಣ ಹೇಳಿ... ಯಾವುದಾದರೂ ರೆಸ್ಟೋರೆಂಟ್? ನಮ್ಮ ಮನೆ? ಎಲ್ಲಿಗೆ ಹೇಳ್ತೀರೋ ಅಲ್ಲಿಗೆ ಹೋಗೋಣ."

"ಮುರಳಿ ಆಫೀಸಿಗೆ ಹೋಗೋಣ."

"ಅವರ ಆಫೀಸಿಗೆ ಯಾಕೆ? ನಿಮ್ಮಿಬ್ಬರ ಮದುವೆ ವಿಷಯ ಮಾತಾಡೋಕ್ಕಾ?"

"ಅಲ್ಲ. ಆದರೆ ಅವನಿಗೂ ಸಂಬಂಧಿಸಿದ ವಿಷಯವನ್ನು ಆಡ್ಬೇಕು."

"ಏನು ಸ್ಕೀಂ? ಅದಕ್ಕೆ ನಾನು ಸಾಕ್ಷಿಯಾಗ್ಬೇಕಾ?" ನಕ್ಕ. ಅವಳು ನಗಲಿಲ್ಲ.

"ಓ... ಕೇ... " ಕಾರು ಅವನ ಆಫೀಸಿನ ಕಡೆ ತಿರುಗಿತು. "ಅವರಿಗೆ ನಾವು ಬರುತ್ತಿರುವ ವಿಷಯ ತಿಳಿಸ್ಬೇಕು ಅಲ್ವಾ?"

"ಹೌದು, ತಿಳಿಸ್ಬಿಡಿ... " ಅವನು ಕಾರನ್ನು ಒಂದು ಕಡೆ ನಿಲ್ಲಿಸಿ, ಮುರಳಿಗೆ ಫೋನ್ ಮಾಡಿ, ತಾನು ಬರುತ್ತಿರುವುದಾಗಿ ತಿಳಿಸಿದ. ಅವಳು ಎತ್ತಲೋ ನೋಡುತ್ತಿದ್ದಳು. "ಏನಿ ಸೀರಿಯಸ್ ವಿಷಯಾ, ವಿನುತಾ? ಅಪ್ಸೆಟ್ ಆಗಿರುವಂತಿದೆ." ವಿಚಾರಿಸಿದ.

"ಹಾಗೇನಿಲ್ಲ." ಎಂದಳು. ಕಾರು ನಿಧಾನವಾಗಿ ಮುರಳಿಯ ಆಫೀಸನ್ನು ಸೇರಿತು. ಇಬ್ಬರೂ ಅವನ ಛೇಂಬರಿನೊಳಕ್ಕೆ ಬಂದರು. ಮುರಳಿ ವಿನುತಳನ್ನು ಕಂಡು ಅಚ್ಚರಿಗೊಂಡ... ಆದರೆ ಅವಳು ಮೌನವಾಗಿದ್ದಳು. ಮುರಳಿ, ಅಸಿಸ್ಟೆಂಟ್‌ಗೆ ಕಾಲ್ ಮಾಡಿ, ಮೂರು ಕಾಫಿಯನ್ನು ಕಳಿಸಿಕೊಡುವಂತೆ ಹೇಳಿ, ಮಧುಸೂದನನ ಕಡೆ ತಿರುಗಿದ.

"ಏನು ವಿಷಯ ಮಧುಸೂದನ್... ವಿನುತಳನ್ನು ಕರ್ಕೊಂಡು ಬಂದಿದೀರಿ!" ಎಂದು ಕೇಳಿದ. ಪ್ರಶ್ನೆಯಲ್ಲಿ ತಮಾಷೆ ತೇಲಿತ್ತು. ವಿನುತ ತಲೆ ಎತ್ತಿದಳು.

"ನಾನೇ ಇವರನ್ನು ಕರ್ಕೊಂಡು ಬಂದೆ ಮುರಳಿ." ವಿನುತ ಉತ್ತರಿಸಿದಳು.

"ಐ ಸೀ... ಯಾಕೇ ಅಂತ ಕೇಳ್ಬಹುದಾ? ಆದರೆ ನಮ್ಮಿಬ್ಬರಿಗೆ ಸಂಬಂಧಿಸಿದ ವಿಷಯವನ್ನು ಮಾತನಾಡುಕ್ಕೆ ಅಲ್ಲ ಅಂತ ಭಾವಿಸ್ತೀನಿ." ಮತ್ತೆ ಹಗುರವಾಗಿ ಹೇಳಿದ.

"ಹೌದು, ನಮ್ಮಿಬ್ಬರ ವಿಷಯ ಅಲ್ಲ. ಆದರೆ ನಿಮ್ಮಿಬ್ಬರ ವಿಷಯ."

"ನೇರವಾಗಿ ಹೇಳು ವಿನುತಾ... ಗೊತ್ತಿರುವ ವಿಷಯವೇ. ನಾನು ನಿನ್ನ

ಹಳೆಯ ಫ್ರೆಂಡ್... ಇವರು ಹೊಸಾ ಫ್ರೆಂಡ್... ಅಷ್ಟೇ... ಪೀಠಿಕೆ ಯಾಕೆ?"

"ಅಲ್ಲ, ನಾನೀಗ ಮಹತ್ವವಾದ ವಿಷಯವೊಂದನ್ನು ತಿಳಿಸ್ತೀನಿ. ನೀವಿಬ್ಬರೂ ಬೆಚ್ಚಿ ಬೀಳಬಹುದು. ಆದರೆ ಅದು ನಿಜವಾದದ್ದು." ದೃಢತೆಯಿಂದ ಹೇಳಿದಳು.

"ಏನದು?" ಇಬ್ಬರೂ ಒಟ್ಟಿಗೇ ಕೇಳಿದರು.

"ನೀವಿಬ್ಬರೂ ಟ್ವಿನ್ಸ್..." ಒತ್ತಿ ನುಡಿದಳು.

"ಏನು?" ಇಬ್ಬರೂ ಮತ್ತೆ ಒಟ್ಟಿಗೇ ಕೇಳಿದರು.

"ಇದು ಸುಳ್ಳು..." ಮುರಳಿ ಅಡ್ಡಡ್ಡ ತಲೆಯಾಡಿಸಿದ.

"ಇದೆಂಥಾ ಜೋಕ್?" ಮಧುಸೂದನ ಪ್ರಶ್ನಿಸಿದ.

"ಇಲ್ಲ... ನೆನ್ನೆಯಷ್ಟೇ ನನಗೆ ಈ ವಿಷಯ ತಿಳಿಯಿತು. ನನ್ನ ಮಾತಿನ ಮೇಲೆ ನಂಬಿಕೆ ಇಲ್ಲದಿದ್ದರೆ ಮಧು, ನೀವು ನಿಮ್ಮ ತಾಯಿಯನ್ನು ಕೇಳಿ, ಮುರಳೀ ನೀನು ನಿನ್ನ ತಂದೆಯನ್ನು ಕೇಳು. ನಿಮ್ಮಬ್ಬರಿಗೂ ನಿಜ ಏನೂಂತ ತಿಳಿಯುತ್ತೆ."

"ನಿನಗೆಲ್ಲೋ ವಿಚಿತ್ರ ಕನಸು ಬಿದ್ದಿರಬೇಕು." ಮುರಳಿ ಎಂದ.

"ನೀವಿಬ್ಬರೂ ಒಂದೇ ಥರ ಇದೀರಿ ಅಂತ ನಾನು ಅಂದುಕೊಂಡದ್ದು ಉಂಟು... ಆದರೆ ನೀವಿಬ್ಬರೂ ಅವಳಗಳು ಅಂತ ತಿಳಿದದ್ದು ಮಾತ್ರ ಕನಸಲ್ಲ... ಮಧು ಬೇಕಾದ್ರೆ ನೀವು ಈಗಲೇ ನಿಮ್ಮ ತಾಯಿಯ ಹತ್ರ ಮಾತಾಡಿ."

ಅವನ ಮುಖ ಗಲಿಬಿಲಿಗೊಂಡಿತ್ತು. ಮುರಳಿಯ ಕಡೆ ನೋಡಿದ. ತನ್ನ ಪ್ರತಿಬಿಂಬ ಎಂಬಂತೆ ಎದುರಿಗೆ ಕುಳಿತಿದ್ದ. ಮುರಳಿಯನ್ನು ಕಂಡು ಮನಸ್ಸು ಅಲ್ಲಾಡಿತು. ತನ್ನ ತಾಯಿ ಈ ವಿಷಯವನ್ನು ಮುಚ್ಚಿಟ್ಟಿರಬಹುದೇ ಎಂಬ ಅನುಮಾನ ಮೊಟ್ಟ ಮೊದಲ ಬಾರಿಗೆ ಕಂಡಿತು. ಇಲ್ಲಿ ಏನೋ ರಹಸ್ಯವಿದೆ. ಈ ಬಗ್ಗೆ ಪುರುಷೋತ್ತಮರಿಗೆ ಗೊತ್ತಿದೆ. ಅದಕ್ಕೇ ಅವರು ನಮ್ಮ ಮನೆಗೆ ಬಂದಿದ್ರು... ತಾನು ಆ ಬಗ್ಗೆ ಕೇಳಲು ಹೋಗಿದ್ದೆ. ಆದರೆ ಅದೇ ದಿನ ಆತ ಆಕ್ಸಿಡೆಂಟ್ ಆಗಿ ಆಸ್ಪತ್ರೆ ಸೇರಿದರು. ಆದರೆ ಈ ರಹಸ್ಯ ವಿನುತಂಗೆ ಹೇಗೆ ಗೊತ್ತಾಯ್ತು? ಆತ ಹೇಳಿರಬಹುದೇ? ಆದರೆ ಹಾಗೆನ್ನಿಸುವುದಿಲ್ಲ. ಆತ ಪೋಲೀಸ್ ಆಫೀಸರ್ ಬೇರೆ... ಈ ಪೋಲೀಸ್ ಆಫೀಸರ್‌ಗೂ ತನಗೂ ಸಂಬಂಧವೇನು? ಮುಂದೆ ಊಹಿಸಲು ಮನಸ್ಸು ಹಿಂಜರಿಯಿತು.

ಮಧುಸೂದನನ ತಾಯಿ ಮಂಜುಳಾ ತನ್ನ ಆಫೀಸಿಗೆ ಬಂದು, ತನ್ನ ತಂದೆಯ ಬಗ್ಗೆ ಕೇಳಿದಾಗಲೇ ತನಗೆ ಈ ಅನುಮಾನ ಬರಬೇಕಾಗಿತ್ತು. ತನ್ನ ತಂದೆ ಮಧುವನ್ನು ಭೇಟಿ ಮಾಡುವುದಾಗಿ ಹೇಳಿದ್ದರು, ಅದೂ ಯಾರಿಗೂ ತಿಳಿಯದಂತೆ... ಅಂದರೆ ಅಲ್ಲಿ ಏನೋ ರಹಸ್ಯವಿರಲೇಬೇಕು... ಹಾಗಾದರೆ ಈ ಮಂಜುಳಾ ಯಾರು? ಈ ವಿಷಯ ತನ್ನ ತಾಯಿಗೆ ಗೊತ್ತೇ? ತಾನು ಅವಳಿಗೆ

ಸ್ವಂತ ಮಗನೇ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ, ಈ ಮಂಜುಳಾಗೂ ತನಗೂ ಏನು ಸಂಬಂಧ? ಆಕೆಗೂ ತನ್ನ ತಂದೆಗೂ ಎಂಥಾ ಸ್ನೇಹ? ಕಲ್ಪನೆಯ ಗಾಡಿ, ಊಹಾಚಕ್ರದ ಮೇಲೆ ಉರುಳಿತು... ಮನದಲ್ಲಿ ಮೂಡುವ ಭಾವನೆಗಳು ಮುಖದ ಮೇಲೆ ವ್ಯಕ್ತಗೊಂಡವು. ತನ್ನ ಎದುರಿಗೆ ತನ್ನ ರೂಪವನ್ನೇ ಹೊತ್ತು ಕುಳಿತಿರುವ ಮಧುಸೂದನನ ಮೇಲೆ ತೀಕ್ಷ್ಣವಾದ ನೋಟ ಹರಿದಾಡಿತು. ನಾನಾ ಆಲೋಚನೆಗಳು ಕಾಡಿದವು.

ವಿನುತಾ, ಆಗೊಮ್ಮೆ ಈಗೊಮ್ಮೆ ಅವರಿಬ್ಬರ ಕಡೆ ನೋಡುತ್ತಿದ್ದಳು. ಇಬ್ಬರ ಮುಖವೂ ಕಳಾಹೀನವಾಗಿತ್ತು. ಗೊಂದಲದ ಗೂಡಾಗಿತ್ತು. ದನಿ ಒಳಗೆಲ್ಲೋ ಸೇರಿತ್ತು. ತಾನು ರಹಸ್ಯವನ್ನು ತಿಳಿಸಿ ತಪ್ಪು ಮಾಡಿದೆನೆ ಎಂದು ಯೋಚಿಸು ವಂತಾಗಿತ್ತು. ಕೆಲವು ನಿಮಿಷಗಳ ನಂತರ ಸಣ್ಣಗೆ ಕೆಮ್ಮಿದಳು.

"ಸಾರಿ... ನಾನು ಈ ವಿಷಯವನ್ನು ತಿಳಿಸಿ, ನಿಮ್ಮಿಬ್ಬರಿಗೂ ಸರ್ಪ್ರೈಸ್ ಮಾಡ್ತೀನಿ ಅಂತ ಅಂದ್ಕೊಂಡಿದ್ದೆ. ಆದರೆ ನೀವಿಬ್ಬರೂ ಚಿಂತೇಲಿ ಮುಳುಗಿ ಹೋಗಿದ್ದೀರಿ..."

"ಇದು ಸರ್ಪ್ರೈಸ್ ಅಲ್ಲ ವಿನೂ... ಶಾಕ್... ಇದರಿಂದ ಎಂತೆಂಥ ಸಮಸ್ಯೆಗಳು ಸೃಷ್ಟಿಯಾಗುತ್ತವೆ ಅಂತ ನಿಂಗೆ ಗೊತ್ತಾ?" ಮುರುಳಿ ಕೆಟ್ಟ ದನಿಯಲ್ಲಿ ಹೇಳಿದ.

"ಸಾರೀ ಮುರಳಿ, ನನಗೆ ತಿಳಿಯಲಿಲ್ಲ... ಆದರೆ ಈ ವಿಷಯ ತಿಳಿದ್ಮೇಲೆ ನನ್ನಲ್ಲೇ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇಬ್ಬರಿಗೂ ಒಟ್ಟಿಗೇ ಹೇಳೋಣ ಅಂತ ಅಂದ್ಕೊಂಡೆ." ಪೆಚ್ಚು ಮುಖ ಮಾಡಿದಳು.

"ನನಗೊಬ್ಬನಿಗೇ ಫೋನಿನಲ್ಲಿ ಹೇಳಬಹುದಾಗಿತ್ತಲ್ಲ!" ಮುರುಳಿ ಆಕ್ಷೇಪಿಸಿದ.

"ಆದರೆ, ಇವರಿಗೂ ವಿಷಯ ತಿಳಿಸಬೇಕಿತ್ತಲ್ಲಾ?" ಮಧುಸೂದನನ ಕಡೆ ತಿರುಗಿದಳು.

"ಆಂ! ಏನಂದ್ರೀ...?" ಅವನು ಬೆದರಿ ಕೇಳಿದ. ಇಬ್ಬರ ಕಡೆಯೂ ಸುಮ್ಮನೆ ನೋಡಿದ.

"ಇದಕ್ಕೆ ನೀವೇನು ಹೇಳ್ತೀರಿ ಮಧು?" ಮುರಳಿ ಪ್ರಶ್ನಿಸಿದ.

"ಮೊದಲು ಇದು ಎಷ್ಟರ ಮಟ್ಟಿಗೆ ನಿಜ ಅಂತ ತಿಳ್ಕೋಬೇಕು." ನಂಬದವನಚಿತೆ ಹೇಳಿದ.

"ಯಾಕೆ? ನನ್ನ ಮಾತಿನ ಮೇಲೆ ನಿಮಗೆ ನಂಬ್ಕೆ ಬರ್ತಿಲ್ವಾ?" ವಿನುತಾ ಸ್ವಲ್ಪ ಗಂಭೀರವಾಗಿಯೇ ಕೇಳಿದಳು.

"ಹಾಗಲ್ಲ... ಆದರೆ ಈ ವಿಷಯ ನಿಮಗೆ ತಿಳಿದದ್ದು ಹೇಗೆ ಅಂತ ಯೋಚಿಸ್ತಿದ್ದೆ."

"ನೆನ್ನೆ ದಿನ ನಾನು ಆಸ್ಪತ್ರೆಯಲ್ಲಿ ನಿಮ್ಮ ತಾಯಿ, ಇವರ ತಂದೆಯೊಡನೆ ಮಾತನಾಡುತ್ತಿದ್ದುದನ್ನು ಕೇಳಿಸಿಕೊಂಡೆ."

"ಏನು? ಅಮ್ಮ ಆಸ್ಪತ್ರೆಗೆ ಬಂದಿದ್ಲಾ? ನಂಗೆ ಈ ವಿಷಯ ಗೊತ್ತಿಲ್ಲವಲ್ಲ." ಮಧು ಅಚ್ಚರಿಯಿಚಿದ ಹೇಳಿದ.

"ಹೌದು ಮಧು, ಮಂಜುಳಾರವರು ಆಸ್ಪತ್ರೆಗೆ ಬಂದಿದ್ದರು. ಆಗ ನಾನೂ ಸಹ ಅಲ್ಲಿಯೇ ಇದ್ದೆ." ಮುರಳಿ ಅವಳ ಮಾತನ್ನು ಅನುಮೋದಿಸಿದ.

"ಹಾಗಾದರೆ ಅಮ್ಮನಿಗೂ ಪುರುಷೋತ್ತಮರವರಿಗೂ ಮೊದಲಿನಿಂದ ಸ್ನೇಹವಿರಬೇಕು. ಆದರೆ ಅಮ್ಮ ಎಂದೂ ಈ ವಿಷಯವನ್ನು ನನಗೆ ಹೇಳಿರಲೇ ಇಲ್ಲ... ನಾನು ಈಗಲೇ ಕೇಳ್ತೀನಿ." ಎನ್ನುತ್ತಾ ಮೊಬೈಲ್‌ನ್ನೆತ್ತಿಕೊಂಡ. ವಿನುತಾ ತಡೆದಳು.

"ಬೇಡ ಮಧು... ದಿಢೀರನೇ ಕೇಳಬೇಡಿ. ಅವರಾಗಿಯೇ ಹೇಳುವಂತೆ ಯಾವುದಾದರೂ ಸಂದರ್ಭ ಒದಗುವಂತೆ ನೋಡಿ... ಇಲ್ಲದಿದ್ದರೆ ನಿಜವನ್ನು ಮುಚ್ಚಿಡಬಹುದು."

"ಆದರೆ ನಿಮ್ಮ ತಂದೆಯಾದರೂ ನಿಜವನ್ನು ಹೇಳಬೇಕು ತಾನೇ... ನೀವು ಆ ಪ್ರಯತ್ನವನ್ನು ಮಾಡ್ತೀರಿ ಅಂತ ಅಂದುಕೊಂಡಿದೀನಿ." ಸಪ್ಪೆಯಾಗಿ ನುಡಿದ. ಮುರುಳಿ ಹೌದು ಎನ್ನುವಂತೆ ತಲೆಚುಾಡಿಸಿದ.

"ಬೇಡ ಮುರಳಿ... ನಿಮ್ಮ ತಂದೆ ಈಗ ಗಾಯಗೊಂಡು ರೆಸ್ಟ್‌ನಲ್ಲಿದ್ದಾರೆ. ಅವರಿಗೆ ಶಾಕ್ ಆಗಬಹುದು. ಅವರು ಇದುವರೆಗೂ ನಿನಗಾಗಲೀ, ಆಂಟಿಗಾಗಲೀ ಈ ವಿಷಯವನ್ನು ತಿಳಿಸಿಲ್ಲ ಅಂತಂದ್ರೆ.. ಏನೋ ಬಲವಾದ ಕಾರಣವಿರಲೇಬೇಕು."

"ಆದರೆ ರಹಸ್ಯ ಏನು ಅಂತ ತಿಳಿದುಕೊಳ್ಳಲೇಬೇಕು. ಇಲ್ಲದಿದ್ದರೆ, ಡಿಟೆಕ್ಟಿವ್ ನಾನಾಗಿ, ನಾನೇ ಈ ತರಹ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದರೇ?"

"ಅಂಥಾ ಅಪರಾಧ ಏನೂ ನಡೆದಿಲ್ಲ ಅಂತ ನನ್ನ ಭಾವನೆ ಮುರಳೀ... ನಿಮ್ಮಿಬ್ಬರ ತಾಯಿ ವತ್ಸಲಾ ಇರಬಹುದು ಅಥವಾ ಮಂಜುಳಾ ಇರಬಹುದು... ಇದನ್ನು ತಿಳಿದುಕೊಳ್ಳಬೇಕು... ಮುರಳೀ, ನೀನು ಮಂಜುಳಾರವರ ಹತ್ತಿರ ಮಾತನಾಡಿ ತಿಳಿದುಕೋ... ಮಧು ನೀವು ವತ್ಸಲಾರವರ ಹತ್ತಿರ ಮಾತನಾಡಿ..."

"ಇಂಥಾ ವಿಷಯಗಳಲ್ಲಿ ನನಗೆ ಸೂಕ್ಷ್ಮತೆ ಕಡಿಮೆ. ಮುರಳಿಯೇ ಇಬ್ಬರ ಹತ್ತಿರ ಮಾತನಾಡಲಿ. ನಾನು ಸುಮ್ಮನಿದ್ದು ಬಿಡ್ತೀನಿ." ಮಧು ನುಡಿದ.

"ತಪ್ಪೆಲ್ಲಾ ನನಗೇ ಇರಲಿ ಅಂತ ನಿಮ್ಮ ಆಲೋಚನೇನಾ?" ಮುರುಳಿ ಕೇಳಿದ.

"ಹಾಗಲ್ಲ, ಕೆದಕ್ತಾ ಹೋದಷ್ಟು ಏನೇನು ವಿಷಯಗಳನ್ನು ಕೇಳಬೇಕಾಗುತ್ತದೋ

ಅಂತ ಆತಂಕವಾಗುತ್ತೆ."

"ಇದೇ ಪರಿಸ್ಥಿತಿ ನನಗೂ ಅಲ್ವಾ ಮಧುಸೂದನ್?"

"ಇಲ್ಲ. ಸ್ವಲ್ಪ ವ್ಯತ್ಯಾಸವಿದೆ... ನೀವು ತಂದೆಯ ನೆರಳಿನಲ್ಲಿದೀರಿ. ನಾನು ಕೇವಲ ತಾಯಿಯ ಅಕ್ಕರೆಯಲ್ಲಿ ಬೆಳೆದವನು. ಅಮ್ಮಂಗೆ ಹೇಳಕ್ಕೆ ಇಷ್ಟವಿದೆಯೋ ಇಲ್ಲವೋ! ಇದೆಲ್ಲಾ ಮನಸ್ಸನ್ನು ಮುದುಡಿಸುತ್ತೆ ಮುರಳೀಧರ್..."

"ನೀವು ತುಂಬಾ ಮೆದು ಸ್ವಭಾವದವರು. ಸ್ವಲ್ಪ ರಫ್ ಆಗಿರಬೇಕು ನನ್ನ ಹಾಗೆ."

"ಈಗ ಹಾಗೆ ಬದಲಾಗಲು ಸಾಧ್ಯವಿಲ್ಲ. ನಿಮ್ಮ ತಂದೆ ಪೋಲೀಸ್ ಅಧಿಕಾರಿ. ನೀವು ಕ್ರೈಂ ಡಿಟೆಕ್ಟಿವ್ ಏಜೆಂಟ್. ನಾನು ಹೇಳಿ ಕೇಳಿ, ಬ್ಯಾಂಕ್ ಮ್ಯಾನೇಜರ್. ನನ್ನ ಕಸ್ಟಮರ್ಸ್ ಜೊತೆ ನಯವಾಗಿ ಮಾತನಾಡಿ ಮಾತ್ರ ಅಭ್ಯಾಸ... ಇದೆಲ್ಲಾ ನಿಮಗೇ ಸರಿ. ಅಲ್ಲದೇ ನನ್ನ ಮನಸ್ಸು ಏನೇನೂ ಸರಿಯಿಲ್ಲ. ನಾನಿನ್ನು ಹೊರಡ್ತೀನಿ." ಎದ್ದು ನಿಂತ.

"ಸಾರೀ ಮಧು... ನಾನು ನಿಮ್ಮ ಮನಸ್ಸಿನ ನೆಮ್ಮದಿಯನ್ನು ಕೆಡಿಸಿಬಿಟ್ಟೆ." ವಿನುತಾ ವ್ಯಥೆಯಿಂದ ಹೇಳಿದಳು.

"ಹೌದು ವಿನುತಾ... ನೀನು ನನಗೆ ತಿಳಿಸಿದ್ದರೆ ಸಾಕಾಗಿತ್ತು. ನನ್ನ ಸ್ವಭಾವ ನಿಂಗೆ ಗೊತ್ತಲ್ಲ. ಕೇವಲ ಕೆಲವು ದಿನಗಳಿಂದ ಮಾತ್ರ ಇವರೊಡನೆ ನಿನ್ನ ಸ್ನೇಹ. ನಿನ್ನ ವರ್ತನೆಯಿಂದ ಇವರ ನೆಮ್ಮದಿ ಕೆಟ್ಟಿದೆ. ಹೀಗೆ ಮಾಡಬಾರದಾಗಿತ್ತು ನೀನು."

"ಹಾಗೇನಿಲ್ಲ. ಇದರಲ್ಲಿ ವಿನುತಳ ತಪ್ಪೇನಿದೆ! ಬಹುಶಃ ನನ್ನ ಅದೃಷ್ಟವೇ ಸರಿಯಿಲ್ಲ ಅಂತ ಕಾಣುತ್ತೆ."

"ಛೇ ಹಾಗ್ಯಾಕೆ ಅಂದ್ಕೊತೀರಿ?"

"ಮತ್ತಿನ್ನೇನು! ತಂದೆ ಇದ್ದರೂ ಅನಾಥನಂತೆ ಬೆಳೆದೆ. ಅಮ್ಮ ನನ್ನ ಸ್ವಂತ ತಾಯಿ ಅಲ್ಲ ಅಂತ ಹೇಗೆ ಊಹಿಸಿಕೊಳ್ಳಲಿ? ಇದೆಲ್ಲಾ ಏನು ಗೋಜಲು?"

"ಸಾರಿ ಮಧುಸೂದನ್, ಈಗ ನಿಮ್ಮ ಮನಃಸ್ಥಿತಿ ಸರಿಯಿಲ್ಲ... ಈಗ ಹೇಗಿದೆಯೋ ಹಾಗೇ ಇದ್ದು ಬಿಡೋಣ. ಯಾವ ರಹಸ್ಯವನ್ನೂ ಬೇಧಿಸುವುದು ಬೇಡ... " ಮುರಳಿ ವಿನುತಳ ಕಡೆ ನೋಡಿ ಸನ್ನೆ ಮಾಡಿದ.

"ಇಲ್ಲ, ಸುಮ್ಮನಿರಲು ಹೇಗೆ ಸಾಧ್ಯ? ಸಂಶಯದ ಹುಳು ಸೇರಿಕೊಂಡ ಮೇಲೆ..."

"ಸರಿ ಹಾಗಿದ್ದ ಮೇಲೆ, ನೀವು ಒಬ್ಬರೇ ಡ್ರೈವ್ ಮಾಡ್ಕೊಂಡು ಹೋಗುವುದು ಸರಿಯಲ್ಲ. ನಮ್ಮ ಡ್ರೈವರ್‌ನ ಕಳಿಸ್ತೀನಿ."

"ಏನೂ ಬೇಡ ಮುರಳೀ, ನಾನು ಡ್ರೈವ್ ಮಾಡ್ತೀನಿ. ಪರವಾಗಿಲ್ಲ."

"ಇಲ್ಲ ಮಧು, ಮುರಳೀ ಹೇಳುವುದು ಸರಿ. ನನಗೆ ಡ್ರೈವಿಂಗ್ ಬಂದಿದ್ರೆ ನಾನೇ ಡ್ರೈವ್ ಮಾಡ್ತಿದ್ದೆ." ವಿನುತಾಳೂ ಮಾತನ್ನು ಸೇರಿಸಿದಳು. "ನಾನೂ ಬರ್ತೀನಿ ಮುರಳೀ..." ವಿನುತಾ ಎದ್ದಳು.

"ನಾನು ನಿನಗೆ ಡ್ರಾಪ್ ಕೊಡ್ತೀನಿ. ನಾನು ನಿನ್ಹತ್ರ ಸ್ವಲ್ಪ ಮಾತಾಡ್ಬೇಕು." ಮುರಳಿ ನುಡಿದಾಗ, ಅವಳು ಪ್ರಶ್ನಾರ್ಥಕವಾಗಿ ನೋಡಿದಳು. ಮುರಳಿ ತನ್ನ ಆಫೀಸಿನ ಡ್ರೈವರನ್ನು ಕರೆದ. ಇವರನ್ನ ಇವರ ಕಾರಿನಲ್ಲಿ ಮನೆಗೆ ತಲುಪಿಸಿ, ನೀವು ರಿಕ್ಷಾದಲ್ಲಿ ವಾಪಸ್ಸು ಬನ್ನಿ." ಎಂದು ಹೇಳಿ ಕೈಗೆ ಒಂದಿಷ್ಟು ಹಣವನ್ನು ಕೊಟ್ಟ.

"ಮುರಳೀ, ನೀವು ಸುಮ್ಮನೇ ನನ್ನನ್ನು ವೀಕ್ ಮಾಡ್ತಿದೀರಿ. ಐ ಆಮ್ ಆಲ್ ರೈಟ್... ಐ ಕೆನ್ ಡ್ರೈವ್.... " ಮಧುಸೂದನ ಮುಜುಗರದಿಂದ ನುಡಿದ.

"ನನ್ನ ಕ್ಲೈಂಟ್‌ಗಳ ಜವಾಬ್ದಾರಿ ನನ್ನದು. ನಿಮ್ಮನ್ನು ನಿಮ್ಮ ಮನೆಗೆ ಸೇಫ್ ಆಗಿ ತಲುಪಿಸೋದು ನನ್ನ ಕರ್ತವ್ಯ... ನನ್ಹತ್ರ ಏನೇ ವಿಷಯ ಹೇಳಬೇಕೆನ್ನಿಸಿದರೂ, ಮುಜುಗರಗೊಳ್ಳದೇ ಹೇಳಿ... ನಾನು ನಿಮ್ಮೊಂದಿಗೆ ಸದಾ ಇರ್ತೀನಿ."

"ಥ್ಯಾಂಕ್ಸ್ ಮುರಳೀ." ಮಧುಸೂದನ ಕೈಕುಲುಕಿ, ವಿನುತಳಿಗೆ ಹೇಳಿ ಅಲ್ಲಿಂದ ಹೊರಬಿದ್ದ. ಅವನು ಅತ್ತ ಹೋದ ಕೂಡಲೇ, ಮುರಳಿ ವಿನುತಳ ಮೇಲೆ ಸಿಡಿದ.

"ನನಗೆ ಮೊದಲು ತಿಳಿಸದೇ, ಎಲ್ಲವನ್ನೂ ಒದರಿಬಿಡುವ ಅಗತ್ಯ ಏನಿತ್ತು ವಿನುತಾ? ಎಲ್ಲಾ ಕೆಡಿಸ್ಬಿಟ್ಟೆ ನೀನು."

"ಕೆಡಿಸೋಕ್ಕೆ ಏನು ಉಳಿದಿತ್ತು? ನಾನೇನು ತಪ್ಪು ಮಾಡಿಲ್ಲ."

"ತಪ್ಪು ಅಂತ ಹೇಳ್ತಿಲ್ಲ. ಆದರೆ ಅವಸರ ಏನಿತ್ತು? ಇದರಲ್ಲಿ ನಿಜ ಎಷ್ಟಿದೆ ಅಂತ ಗೊತ್ತಿಲ್ಲವಲ್ಲ. ಹೇಗೆ ಅಂದ್ರೆ ಹಾಗೆ ಹೇಳಿಬಿಡೋದು ಅಪಾಯ."

"ಹಾಗಾದ್ರೆ ನಾನು ಕೇಳಿದ್ದು, ಹೇಳಿದ್ದು ಎಲ್ಲಾ ಸುಳ್ಳು ಅಂತೀಯ... ಪಕ್ಕಾ ಡಿಟೆಕ್ಟಿವ್ ಥರ ಅನುಮಾನ ಪಡ್ಬೇಡ ನೀನು... ಯಾರಿಗೆ ಅಪಾಯ?"

"ನನ್ನ ಕೆಲಸವೇ ಅದಲ್ವಾ? ನಾನು ಬೇರೆ ರೀತೀಲೂ ಯೋಚಿಸ್ತೀನಿ."

"ಹಾಗಾದ್ರೆ ನಿಂಗೆ ಬೇರೆ ಏನೂ ಅನ್ನಿಸ್ತಾನೇ ಇಲ್ವಾ? ಕೋಪ, ಸಂತೋಷ, ಅಸಹ್ಯ ಏನೂ ಬರ್ತಾನೇ ಇಲ್ವಾ? ನಿನಗೆ ಭಾವನೆಗಳೇ ಇಲ್ವಾ? ಹಾಗಾದ್ರೆ..."

"ಕೋಪ ಯಾರ್ಮೇಲೆ ಬರ್ಬೇಕು? ಅಲ್ಲಿ ತಪ್ಪು ಯಾರದ್ದು ಅನ್ನೋದೇ ತಿಳೀತಿಲ್ವಾಲ್ಲಾ... ಸಂತೋಷ ಯಾಕಾಗ್ಬೇಕು? ಮಧು ನನ್ನ ಟ್ವಿನ್ ಬ್ರದರ್ ಅಂತ್ಲಾ? ಯಾರ ಬಗ್ಗೆ ಅಸಹ್ಯ ಪಡ್ಬೇಕು? ನನ್ನ ಬಗ್ಗೇನಾ?"

"ಹಾಗಾದ್ರೆ ನಿಂಗೆ ಭಾವನೆಗಳೇ ಇಲ್ವಾ? ಮಧು ಎಷ್ಟು ಬೇಗ ಅಪ್ಸೆಟ್ ಆದ ನೋಡು... ನಿಂಗೆ ಹೃದಯವೇ ಇಲ್ಲ ಅಂತ ಕಾಣುತ್ತೆ."

"ಅದೇನದು? ಈಚೀಚೆಗೆ ಮಧು ಬಗ್ಗೆ ಆಸಕ್ತಿ ಹೆಚ್ಚಾಗಿದೆ ನಿಂಗೆ?"

"ಹೊಟ್ಟೆ ಕಿಚ್ಚಾಗ್ತಿದೆಯಾ? ಸದ್ಯ ಆ ಭಾವನೆನಾದ್ರೂ ಇದೆಯಾ?"

"ಸುಮ್ನೆ ರೇಗಿಸ್ಬೆಡ. ನಿಂಗೆ ಸರ್ವ ಸ್ವಾತಂತ್ರ್ಯವಿದೆ. ನೀನು ಮನಸ್ಸು ಬದಲಾಯಿಸಿ, ಅವನನ್ನೇ ಮದುವೆಯಾಗ್ತೀನಿ ಅಂತ ಪಟ್ಟು ಹಿಡಿದ್ರೆ ನಾನೇನ್ಮಾಡೋಕ್ಕೆ ಆಗುತ್ತೆ? ಅಲ್ಲಿಗೆ ನೀನು ನನ್ನನ್ನು ಮರೆತೇ ಅಂತ ಅಂದ್ಕೊತೀನಿ."

"ಸ್ಟಾಪ್ ಇಟ್ ಮುರಳಿ, ಹೀಗೆಲ್ಲಾ ಮಾತಾಡಿದ್ರೆ ಸರಿ ಹೋಗಲ್ಲ ನಂಗೆ... ನಿನ್ನ ಮೇಲಿನ ಪ್ರೀತಿಯಿಂದ್ಲೇ ಇದನ್ನು ನಿಂಗೆ ಹೇಳಿದ್ದು. ಇಲ್ದಿದ್ರೆ, ನಾನು ಇದರ ಬಗ್ಗೆ ತಲೆ ಕೆಡಿಸ್ಕೊಳ್ತಿರ್ಲಿಲ್ಲ."

"ತಲೆ ಕೆಡುವಂಥದ್ದು ಏನಿದೆ ಏನಿಲ್ಲ ಅಂತ ನೋಡೋ ಕೆಲಸ ನನ್ನದು. ನೀನು ಹಾಯಾಗಿರು."

"ನಿನ್ನಂಥೋನನ್ನ ಪ್ರೀತಿಸಿದ್ಮೇಲೆ ಹಾಯಾಗಿರೊಕ್ಕೆ ಆಗುತ್ತಾ? ಮೊದಲು ನೀನು ನಮ್ಮಿಬ್ಬರ ಮದುವೆ ಬಗ್ಗೆ ಯೋಚಿಸು. ಅಪ್ಪ-ಅಮ್ಮ, ಲಗ್ನಪತ್ರಿಕೆಯ ಬಗ್ಗೆ ಇಷ್ಟರಲ್ಲೇ ಮಧುಸೂದನನ ತಾಯಿ ಹತ್ರ ಮಾತನಾಡಬೇಕು ಅಂತಿದಾರೆ..."

"ಲಗ್ನಪತ್ರಿಕೆ ನಡೆದು ಹೋದ ಮಾತ್ರಕ್ಕೆ ಮದುವೆ ಆಗಿ ಹೋಗಲ್ಲ. ನಿನ್ನನ್ನು ಮಂಜುಳ ಒಪ್ಪಿಲ್ಲ ಅಂತ ನಂಗೊತ್ತು. ಮಧು ಮನಸ್ಸಲ್ಲಿ ಏನಿದೆಯೋ ನಂಗೆ ಸರಿಯಾಗಿ ಗೊತ್ತಿಲ್ಲ. ಕಪಟ ಇಲ್ಲ ಅಂತ ಅಂದ್ಕೋತೀನಿ. ಈ ಮಧ್ಯೆ ಈ ಹೊಸ ತಿರುವು ಬೇರೆ. ಮೊದಲು ಇದೇನು ಉಚಿತ ನಿರ್ಣಯವಾಗಲಿ. ಅಷ್ಟರಲ್ಲಿ ಡ್ಯಾಡೀನೂ ರಿಕವರ್ ಆಗಿರ್ತಾರೆ. ನೋಡೋಣ..."

"ನಿನ್ನಿಷ್ಟ ಮುರಳಿ, ನೀನು ಒಂದು ಇತ್ಯರ್ಥಕ್ಕೆ ಬರುವಷ್ಟರಲ್ಲಿ ನಾನು ಮುದುಕಿ ಯಾಗಿರೋದಂತೂ ಗ್ಯಾರಂಟಿ." ಕ್ಷೀಣವಾಗಿ ನಕ್ಕಳು.

"ನೀನು ಮುದುಕಿಯಾದ್ರೂ ನಂಗೆ ನೀನೇ ಇಷ್ಟ. ಯಾಕೆಂದ್ರೆ ಚಿಕ್ಕ ಹುಡುಗಿಯಾಗಿದಾಗ್ನಿಂದ ನಾನು ನಿನ್ನನ್ನು ನೋಡಿದೀನಿ." ಅವಳ ಕೈಗಳನ್ನು ಒತ್ತಿದ.

"ನನ್ನನ್ನು ಕೆರಳಿಸೋದ್ರಿಂದ ನಿಂಗೇನು ಮಜಾ ಸಿಗುತ್ತೆ?"

" ಎಸ್, ವಿಟಮಿನ್ ಸಿಗುತ್ತೆ. ಕೆಲಸ ಮಾಡೋಕ್ಕೆ ಉತ್ಸಾಹ ಬರುತ್ತೆ." ಅವನು ನಗುತ್ತಾ ಹೇಳಿದಾಗ, ಅವಳೂ ತನ್ನ ನಗೆಯನ್ನು ಸೇರಿಸಿದಳು.

* * *

"ಯಾಕೋ ಮಧು ಒಂಥರಾ ಇದೀಯ... ಹುಶಾರಾಗಿದೀಯ ತಾನೇ?" ತಾಯಿ ಕೇಳಿದಾಗ, ಮಧು ಅವಳನ್ನೇ ದಿಟ್ಟಿಸಿದ. ಸ್ವಲ್ಪ ಹೊತ್ತು ಬಿಟ್ಟು ಅವನೇ ಪ್ರಶ್ನಿಸಿದ.

"ಅಮ್ಮಾ... ಲಗ್ನಪತ್ರಿಕೆ ಶಾಸ್ತ್ರಾನ ಯಾವಾಗ ಇಟ್ಟುಕೊಳ್ಳೋಣ ಅಂತ ವಿನುತಳ ತಂದೆ ಕೇಳ್ತಾ ಇದ್ರು... ಏನೂಂತ ಹೇಳೋದು?"

"ಅರ್ಜೆಂಟೇನಂತೆ?" ತಾತ್ಸಾರದ ದನಿಯಲ್ಲಿ ಕೇಳಿದಳು.

"ಅರ್ಜೆಂಟ್ ಇಲ್ಲದೆ ಇರುತ್ತಾ? ಗೊತ್ತು ಮಾಡಿಕೊಂಡು ಎಷ್ಟು ದಿನ ಸುಮ್ನೆ ಇರ್ತಾರೆ ನೀನೇ ಹೇಳು. ನಿಂಗ್ಯಾಕೆ ಉದಾಸೀನ?"

"ಹಾಗಾದರೆ ಅವಳನ್ನೇ ಮದುವೆಯಾಗೋದು ಅಂತ ಡಿಸೈಡ್ ಮಾಡಿಬಿಟ್ಟಿದೀಯ ಅನ್ನು..." ನಿರ್ಧಾರ ಸರಿ ಅಲ್ಲ ಎನ್ನುವಂತೆ ಕೇಳಿದಳು.

"ಯಾಕೆ? ಬೇರೆ ಯಾವುದಾದ್ರೂ ಹೆಣ್ಣನ್ನು ನೋಡಿದೀಯ ನಂಗೆ?"

"ಹೂಂ ನೋಡಿದೀನಿ. ಇವಳಿಗಿಂತ ಎಲ್ಲಾ ರೀತಿಯಲ್ಲೂ ಸರಿಯಾಗಿರೋಳನ್ನ ನೋಡಿದೀನಿ."

"ಅಂದ್ರೆ ವಿನುತಾ ಸರಿಯಿಲ್ಲ ಅಂತ ನಿನ್ನ ಅರ್ಥನಾ?"

"ಅಲ್ದೇ ಇನ್ನೇನು! ರೂಪ, ವಿದ್ಯೆ, ಗುಣ, ನಡತೆ ಯಾವುದೂ ನನಗೆ ಇಷ್ಟವಾಗಲಿಲ್ಲ."

"ಹಾಗೆಲ್ಲಾ ಕಂಡೋರ ಮನೆ ಹುಡುಗೀರ ನಡತೆ ಬಗ್ಗೆ ಸಂಶಯ ಪಡಬಾರದು. ರೂಪ, ವಿದ್ಯೆ ಬಗ್ಗೆ ನನಗೆ ಚಿಂತೆ ಇಲ್ಲ. ಒಳ್ಳೆಯವಳಲ್ಲ ಅಂತ ಹೇಗೆ ಹೇಳ್ತೀಯಾ?" ಸಂಶಯದ ನಗೆ ಸೇರಿಸಿದ.

"ಬೇರೆ ಯಾರ ಜೊತೆಯೂ ಅವಳಿಗೆ ಸ್ನೇಹ, ಓಡಾಟ ಯಾವುದೂ ಇಲ್ಲ ಅಂತ ಖಚಿತವಾಗ್ಬೇಕು..." ಅವಳಿಗೆ ಅನುಮಾನ ಬಂದಿದೆ ಎನ್ನುವುದು ಖಚಿತವಾಗಿತ್ತು.

"ಅದನ್ನು ಹೇಗೆ ತಿಳ್ಕೊಳ್ಳೋದು... ಯಾರು ಹೇಳ್ತಾರೆ?"

"ನಾನು ಒಬ್ಬ ಡಿಟೆಕ್ಟಿವ್‌ನ ಗೊತ್ತು ಮಾಡಿದೀನಿ..." ಹೆಮ್ಮೆ ಇತ್ತು ದನಿಯಲ್ಲಿ.

"ಅಮ್ಮಾ! ಇದು ನ್ಯಾಯ ಅಲ್ಲ. ನನ್ನ ಬಗ್ಗೆ ಯಾರಾದ್ರೂ ಹೀಗೆ ಸಂಶಯ ಪಟ್ಟು ಪತ್ತೇದಾರಿ ನಡೆಸಿದ್ರೆ ನಿಂಗೆ ಏನನ್ಸುತ್ತೆ ಹೇಳು?" ರೇಗಿ ನುಡಿದ.

"ನಿನ್ನ ಬಗ್ಗೆ ಹಾಗೇನಾದ್ರೂ ಯಾರಾದ್ರೂ ಅನುಮಾನ ಪಟ್ಟರೇ... ಅವರ ಹಲ್ಲು ಉದುರಿಸಿ ಬಿಡ್ತೀನಿ." ಬೆರಳು ತೋರಿದಳು.

"ಅಷ್ಟು ಧೈರ್ಯ ಇದೆಯಾ? ಹಾಗೇ ನಿನ್ನ ಬಗ್ಗೆ ಆಡಿಕೊಂಡ್ರೇ?"

ಅವಳು ಬೆಚ್ಚಿದಳು. "ಏನೋ ಹೀಗೆಲ್ಲಾ ಮಾತಾಡ್ತಿದೀಯ... ಎಂದೂ

ಇಲ್ಲದ್ದು ಇವತ್ತು ಏನಾಯ್ತು ನಿಂಗೆ? ವಿಪರೀತ ಏನೇನೋ ಮಾತನ್ನಾಡ್ತಿದೀಯ."

"ಸುಮ್ನೇ ಕೇಳ್ದೆ ಅಷ್ಟೇ. ನಮ್ಮ ಮನೆ ಕಡೆ ಯಾರ್‍ಯಾರಿದ್ದಾರೆ... ಎಷ್ಟೆಷ್ಟು ಜನ ಇದಾರೆ ಅಂತ ಲೆಕ್ಕ ಹಾಕಿ ಹೇಳ್ಬಿಡು. ಎಲ್ರಿಗೂ ಆಹ್ವಾನ ಪತ್ರಿಕೆ ಕಳಿಸ್ಬೇಕು."

"ಏನೂ ಬೇಡ. ನನ್ನ ಕಡೆಯವರು ಯಾರೂ ಇಲ್ಲ."

"ಅದ್ಹೇಗಾಗುತ್ತೆ? ಅಪ್ಪನ ಕಡೆಯವರ್‍ಯಾರಾದ್ರೂ ಇರ್ಲೇ ಬೇಕು ತಾನೇ... ಅಥವಾ ಅಪ್ಪ ಹೋದ್ಮೇಲೆ ಎಲ್ರೂ ದೂರ ಮಾಡಿದ್ರು ಅಂತ ನಿಂಗೆ ಕೋಪಾನೋ?"

"ಮಧು! ಈ ಪ್ರಶ್ನೆಗಳಿಗೆಲ್ಲಾ ನನ್ಹತ್ರ ಉತ್ತರವಿಲ್ಲ. ಈ ಮುಂಚೆ ಎಂದೂ ಕೇಳ್ದೋನಲ್ಲ. ಈಗ್ಯಾಕೆ ಬೇಕು?"

"ಇದುವರೆಗೂ ಅಗತ್ಯವಿರಲಿಲ್ಲ. ಈಗ ವಿನುತಾನ ಮನೆಯವರು ಕೇಳಿದ್ರೆ ಏನು ಹೇಳ್ತೀಯ? ಹಸೆಮಣೆ ಮೇಲೆ ಯಾರು ಕೂತ್ಕೋತಾರೆ?"

"ಆ ಶಾಸ್ತ್ರ ಸಂಪ್ರದಾಯ ಯಾವುದೂ ಬೇಡ... ಅಂಥಾದ್ದಕ್ಕೆಲ್ಲ ಬೆಲೆ ಕೊಡದೇ ಇರುವಂಥ ಸಂಬಂಧಾನ ನೋಡೋಣ..."

"ಯಾಕಮ್ಮಾ...? ನಾನು ಯಾರೂ ಇಲ್ಲದ ಅನಾಥಾನಾ?"

"ಥೂ ಬಿಡ್ತು ಅನ್ನು, ನಾನಿಲ್ವಾ... ತಂದೆ ತಾಯಿ ಎಲ್ಲಾ ನಾನೇ ನಿಂಗೆ..."

"ಎಂದೂ ಅಪ್ಪನ ಬಗ್ಗೆ ಹೇಳೇ ಇಲ್ವಲ್ಲಮ್ಮ... ಕೇಳ್ದೋರಿಗೆ ಏನು ಹೇಳೋದು! ಅವರದ್ದೊಂದು ಫೋಟೋ ಕೂಡಾ ಇಲ್ವಲ್ಲಮ್ಮಾ... ಬದುಕಿದ್ದಾಗ ಅವರು ಹೇಗಿದ್ರು ಅಂತ ತಿಳ್ಕೊಳ್ಳೋಕೆ...?"

ಮಂಜುಳಾ ಉತ್ತರಿಸದೇ ತನ್ನ ರೂಮಿಗೆ ಹೋಗಿಬಿಟ್ಟಳು. ಇವನ ಅನುಮಾನ ಮತ್ತೂ ಬಲವಾಯಿತು. ಏನೋ ಗಹನವಾದ ವಿಷಯ ಇದೆ. ಅದನ್ನು ಇವಳ ಬಾಯಿಂದಲೇ ಹೊರಗೆಡವಬೇಕು. ಒಂದು ವಾರದಿಂದ ತಲೆಯೊಳಗೆ ವಿನುತಾ ಹೇಳಿದ್ದ ಮಾತುಗಳೇ ಗುಂಯ್‌ಗುಟ್ಟುತ್ತಿದ್ದವು. ಟೂರ್ ನೆವ ಹಾಕಿ, ಊರಿಂದ ಹೊರಗೆ ಹೋಗಿದ್ದ. ಮುರಳಿಯಾಗಲೀ ಹಾಗೇ ವಿನುತಾಳಾಗಲೀ ಫೋನ್ ಮಾಡದೇ ಇದ್ದಾಗ ಮನಸ್ಸಿಗೆ ಕಿರಿಕಿರಿ ಎನಿಸಿತ್ತು. ಮುರಳಿಗೆ ಫೋನ್ ಮಾಡಿ ಪುರುಷೋತ್ತಮ ಹೇಗಿದಾರೆ ಎಂದು ತಿಳಿದುಕೊಳ್ಳುವ ಮನಸ್ಸಾದರೂ ತಡೆದು ಕೊಂಡಿದ್ದ. ಆಸ್ಪತ್ರೆಯವರಿಗೆ ಫೋನ್ ಮಾಡಿದಾಗ, ಡಿಸ್ಚಾರ್ಜ್ ಆಗಿ ಮನೆಗೆ ಹೊರಟು ಹೋದರೆಂದು ತಿಳಿಸಿದ್ದರು. ತಾಯಿ ತನ್ನಿಂದ ಏನನ್ನೋ ಮುಚ್ಚಿಡುತ್ತಿರು ವಳೆಂಬ ಅನುಮಾನ ಬಲವಾಗಿತ್ತು. ರೂಮಿನ ಬಾಗಿಲ ಬಳಿ ನಿಂತ.

"ನಾನೇನು ಅಂಥಾ ಕೇಳಬಾರದ್ದನ್ನು ಕೇಳಿದೆ? ಒಬ್ಬ ವ್ಯಕ್ತಿ ಹುಟ್ಟಬೇಕಾದರೆ ಒಬ್ಬ ತಂದೆ, ಒಬ್ಬಳು ತಾಯಿ ಇರಲೇ ಬೇಕು ತಾನೇ? ನನ್ನ ಹುಟ್ಟಿನ ಬಗ್ಗೆ ನಾನು ತಿಳಿದುಕೊಳ್ಳುವುದರಲ್ಲಿ ತಪ್ಪೇನಿದೆ? ನಾನೀಗ ಮೆಜಾರಿಟಿಗೆ ಬಂದಿರುವವನು...

ಪ್ರೌಢನಾಗಿದೀನಿ... ನನ್ನದೇ ಆದ ಅಸ್ತಿತ್ವವಿದೆ. ನೀನು ನನ್ನನ್ನು ಕಷ್ಟಪಟ್ಟು ಬೆಳೆಸಿದೀಯ ಅಂತ ನಂಗೂ ಗೊತ್ತು. ನನಗೆ, ನಿನ್ನ ಮೇಲೆ ಯಾವ ಅನುಮಾನವೂ ಬರಬಾರದು ಅಂತ ಇದ್ದರೆ, ನಿಜ ಹೇಳೋಕ್ಕೆ ಹಿಂದೆ ಮುಂದೆ ಯಾಕೆ ಯೋಚಿಸ್ಬೇಕು? ನಿನ್ನ ಬಗ್ಗೆಯಾಗಲೀ ಅಪ್ಪನ ಬಗ್ಗೆಯಾಗಲೀ ಹೆಮ್ಮೆಯಿಂದ ಹೇಳಿಕೊಳ್ಳುವ ಆಸೆ ನನಗಿಲ್ವಾ?"

ಮಂಜುಳಾ ಅವನ ಕಡೆಗೆ ತಿರುಗಿದಳು. "ನೀನು ಸಂಶಯ ಪಡುವಂಥ ಕೆಲಸ ನಾನೇನೂ ಮಾಡಿಲ್ಲ. ನಿನ್ನ ತಂದೆಯೂ ಗೌರವಾನ್ವಿತ ವ್ಯಕ್ತಿಯೇ, ನಾನಾ ಗೌರವದಿಂದ ಬಾಳುವೆ ಮಾಡ್ತಿದೀನಿ."

"ಮತ್ಯಾಕಮ್ಮಾ ಈ ನಿಗೂಢ? ನಿಜ ಏನೂಂತ ಹೇಳು... ನನ್ನ ಅಪ್ಪ ಯಾರು ಅಂತ ಹೇಳು. ಬದುಕಿದಾರೋ ಇಲ್ವೋ ತಿಳಿಸು... ನೀನು ತಿಳಿಸದೇ ಇದ್ದರೆ ನಾನು ಸನ್ಯಾಸಿಯಾಗಿ ದೇಶಾಂತರ ಹೊರಟು ಹೋಗ್ತೀನಿ ಅಷ್ಟೇ..." ಬೆದರಿಸಿದ.

"ಹೋಗು... ನಿನಗೆ ನನ್ನ ಮೇಲೆ ಪ್ರೀತಿ ವಿಶ್ವಾಸ ಇಲ್ಲದಿದ್ದರೆ ಹಾಗೇ ಮಾಡು... ನಿನ್ನ ತಂದೆ ಬದುಕಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಏನೂ ಕೇಳ್ಬೇಡ." ಮತ್ತೆ ಅವನಿಗೆ ಬೆನ್ನು ಮಾಡಿ ಕುಳಿತಳು.

"ಎ.ಸಿ.ಪಿ. ಪುರುಷೋತ್ತಮ ರಾವ್ ತಾನೇ ನನ್ನ ತಂದೆ...?" ತಾಯಿಯ ಬೆನ್ನನ್ನೇ ನೋಡುತ್ತಾ ಪ್ರಶ್ನಿಸಿದ.

ಅವಳು ಸರ್ರನೆ ಎದ್ದು ನಿಂತು ಅವನ ಕಡೆ ತಿರುಗಿದಳು.

"ಪುರುಷೋತ್ತಮ ನನ್ನ ತಂದೆ ಅಂತ ಗೊತ್ತಾಗಿದೆಯಮ್ಮ. ಇದು ನಿಜ ತಾನೇ?"

"ನಿಂಗೆ... ನಿಂಗೆ... ಹೇಗೆ ಗೊತ್ತಾಯ್ತು?" ತೊದಲಿದಳು.

"ನಿಜ ತಾನೇ?" ಒಳಕ್ಕೆ ಬಂದು ಒತ್ತಿ ಕೇಳಿದ.

"ಇಲ್ಲ. ಇದು ನಿಜ ಅಲ್ಲ..."

"ಹಾಗಾದ್ರೆ ನೀನ್ಯಾಕೆ ಅವರನ್ನು ನೋಡೋಕೆ ಆಸ್ಪತ್ರೆಗೆ ಹೋಗಿದ್ದೆ? ಇನ್ನೂ ಯಾಕೆ ಸುಳ್ಳು ಹೇಳ್ತೀಯಾ?"

"ಮುರಳಿ ನಿಂಗೆ ಈ ವಿಷಯಾನ ಹೇಳಿದ್ನಾ?"

"ಇಲ್ಲ. ಅವನಿಗೆ ಏನೂ ಗೊತ್ತೇ ಇರ್ಲಿಲ್ಲ. ಆದ್ರೇ ನೀನು ಅಲ್ಲಿಗೆ ಹೋದದ್ದು ನಿಜ ತಾನೇ?"

"ಹೌದು. ಅವರು ಪಬ್ಲಿಕ್ ಫಿಗರ್... ಮೊದಲಿಗೆ ನನ್ನ ಸ್ನೇಹಿತರಾಗಿದ್ದವರು. ಅವರಿಗೆ ಆಕ್ಸಿಡೆಂಟ್ ಆಗಿದೆ ಅಂತ ತಿಳೀತು. ಆರೋಗ್ಯಾನಾ ವಿಚಾರಿಸೋಕ್ಕೆ

ಹೋಗಿದ್ದೆ. ಅದು ತಪ್ಪು ಅಂತ ಹೇಳ್ತಾನಾ ಆ ಡಿಟೆಕ್ಟಿವ್ ಏಜೆಂಟ್?"

"ಮುರಳಿ ಡಿಟೆಕ್ಟಿವ್ ಏಜೆಂಟ್ ಆಂತ ನಿಂಗೆ ಹೇಗೆ ಗೊತ್ತಾಯ್ತು?"

"ಯೆಲ್ಲೋ ಪೇಜಸ್‌ನಲ್ಲಿ ನೋಡಿದ್ದೆ."

"ಅವನ ಆಫೀಸ್ಗೂ ಹೋಗಿದ್ದೆ ಅಲ್ವಾ?" ಮಂಜುಳಾ ಉತ್ತರಿಸದೇ ಮಿಕಿ ಮಿಕಿ ಅವನನ್ನೇ ನೋಡಿದಳು.

"ಇದನ್ನೆಲ್ಲಾ ನಾನು ಕಂಡು ಹಿಡಿದೆ." ಮುಖವನ್ನು ಪಕ್ಕಕ್ಕೆ ತಿರುಗಿಸಿದಳು.

"ಸರಿಯಾಗಿದೀರಿ ಇಬ್ರೂ, ಅವನು ಹೇಳ್ದ; ನೀನು ನಂಬ್ದೆ, ಚೆನ್ನಾಗಿದೆ."

"ಎಷ್ಟಾಗಲೀ ನಾವಿಬ್ರೂ ಟ್ವಿನ್ ಬ್ರದರ್ಸ್ ತಾನೇ?" ಮಂಜುಳಾ ತಟ್ಟನೇ ಅವನ ಕಡೆ ನೋಡಿ ತಲೆ ತಗ್ಗಿಸಿದಳು.

"ಈಗೇನು ಹೇಳ್ತೀಯಾ? ಈ ಸುದ್ದಿ ನಿಜ ಅಂತೀಯೋ ಸುಳ್ಳೂ ಅಂತೀಯೋ... ನೀನೇ ಹೇಳ್ಬೇಕು."

"ಇದೆಲ್ಲಾ ಸುಳ್ಳು ಯಾರೋ ನಮಗಾಗದವರು ಹಬ್ಬಿಸಿರೋ ಸುಳ್ಳು ವದಂತಿ. ಇದನ್ನೆಲ್ಲಾ ನಂಬಬೇಡ."

"ಯಾರೋ ಹೇಳೋ ನಿಜಾನಾ ನಂಬಬೇಡ ಅಂತೀಯ. ನೀನು ಹೇಳ್ತಿರೋ ಸುಳ್ಳನ್ನು ಹೇಗೆ ನಂಬಲಿ? ನನಗೆ ನಿನ್ನ ಮೇಲೇ ಏನೋ ಅನುಮಾನ."

"ಯಾಕೋ ಇಷ್ಟು ಕಟುವಾಗಿ ಮಾತಾಡ್ತೀಯ. ಯಾರೋ ಮಾಟ ಮಂತ್ರ ಮಾಡಿಸಿರಬೇಕು ನಿಂಗೆ."

"ಇದುವರೆಗೂ ನಿನ್ನ ಮಾಂತ್ರಿಕ ಶಕ್ತಿಯ ಕವಚದಲ್ಲಿ ನಾನು ಇದ್ದೆ. ಇವತ್ತಿಗೂ ನಿನ್ನ ಬಗ್ಗೆ ಗೌರವ ವಿಶ್ವಾಸ ಇದೆ. ಈಗ್ಲಾದ್ರೂ ನಿಜ ಹೇಳು... ನಿನ್ನ ಮೇಲೆ ನನಗೆ ಯಾವ ಅನುಮಾನವೂ ಇರುವುದಿಲ್ಲ."

"ಬೇಡ ಬಿಡು ಮಧು... ನಿನ್ನ ಕಣ್ಣಿನಲ್ಲಿ ನಾನು ಅಪರಾಧಿ ಅಂತ ಅನ್ನಿಸಿದರೂ ಪರವಾಗಿಲ್ಲ. ಅಪವಾದ ಬಂದರೂ ಪರವಾಗಿಲ್ಲ. ಈಗ ನಿನಗೆ ರೆಕ್ಕೆ ಪುಕ್ಕ ಬಲಿತಿದೆ. ಹಾರಿ ಹೋಗುವ ತವಕ ಕಾಡ್ತಿದೆ. ಇನ್ನು ನನ್ನ ಗೊಡವೆ ನಿಂಗ್ಯಾಕೆ?"

"ಹೀಗೆಲ್ಲಾ ಅಸಂಬದ್ಧವಾಗಿ ಮಾತನ್ನಾಡುವ ಬದಲು, ನಿಜ ಏನು ಅಂತ ನಿನ್ನ ಬಾಯಿಂದ ಹೇಳಿಬಿಡು. ಅದೊಂದನ್ನೇ ನಾನು ಬಯಸುವುದು."

"ಬೇಡ ಮಧು. ಪ್ಲೀಸ್ ಸುಮ್ಮನಿದ್ದು ಬಿಡು... ನೀನು ನನ್ನ ಮಗನಾಗಿಯೇ ಇರಲಿ ಅಂತ ನನಗೆ ಆಸೆ ಆಗೋಲ್ವಾ?"

"ಇಲ್ಲಮ್ಮ ನಾನು ಯಾವುದೇ ಕಾರಣಕ್ಕೂ ನಿನ್ನನ್ನು ಒಬ್ಬಳನ್ನೇ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ. ನಿನ್ನ ಮಗನಾಗಿ ನಿನ್ನೊಂದಿಗೇ ಇರ್ತೀನಿ. ಕಾರಣ ಎಷ್ಟೇ ಕಠೋರವಾಗಿರಲಿ, ಅದನ್ನು ತಿಳಿದುಕೊಳ್ಳಬೇಕೆಂದು ನಾನು ನಿರ್ಧರಿಸಿ

ಬಿಟ್ಟಿದ್ದೀನಿ. ನನ್ನನ್ನು ಸಾಕಿ ಬೆಳೆಸುವಾಗ ನನ್ನ ಎಷ್ಟೋ ಆಸೆಗಳನ್ನು ಪೂರೈಸಿದೀಯ. ಆಗ ಎಂದೂ ನಾನು ಕೇಳಲಿಲ್ಲ. ಅಂಥ ಆಸೆಗಳಲ್ಲಿ ಇದೂ ಒಂದು ಅಂತ ಅಂದ್ಕೋ. ಇವತ್ತಿಗೂ ನಾನು ನಿನ್ನ ಮಗನೇ... ಮುಂದೆಯೂ ನಾನು ನಿನ್ನ ಮಗನೇ....

ಒಂದೇ ಒಂದು ಸಾರಿ, ನನ್ನ ಅಪ್ಪ ಯಾರು, ಅವರೇಕೆ ನಮ್ಮೊಂದಿಗೆ ಇಲ್ಲ ಅಂತ ಹೇಳಿಬಿಡು. ಅಷ್ಟು ಸಾಕು."

ಮಂಜುಳಾ ಉಗುಳು ನುಂಗಿದಳು. "ಎ.ಸಿ.ಪಿ. ಪುರುಷೋತ್ತಮನೇ ನಿನ್ನ ತಂದೆ. ಅದು ನಿಜ. ಅವರಿಗೆ ಮದುವೆಯಾಗಿದೆ. ಹೆಂಡತಿ ಇದಾಳೆ. ಮಗ ಮುರಳೀಧರ ಇದಾನೆ. ನನಗೆ ನೀನೊಬ್ಬನೇ ಕಣೋ......" ಅವಳ ಗಂಟಲು ಕಟ್ಟಿತ್ತು. ಕಣ್ಣುಗಳು ತುಂಬಿ ಬಂದವು.

ಮಧುಸೂದನ ಕಲ್ಲಿನಂತೆ ನಿಂತ. ಈ ವಿಷಯ ಮೊದಲೇ ತಿಳಿದಿತ್ತಾದರೂ, ಸುಳ್ಳು ಆಗಿರಲಿ ಎಂದು ಮನಸ್ಸು ತವಕಿಸುತ್ತಿತ್ತು... ಈಗ ಮತ್ತೊಂದು ಸಲ ಆಘಾತವಾದಂತಾಗಿತ್ತು. ತಾನು ಪುರುಷೋತ್ತಮನ ಮಗ; ಆದರೆ ತನ್ನ ತಾಯಿ, ಆತನಿಗೆ ಹೆಂಡತಿಯಲ್ಲ. ಅಂದರೆ ಏನರ್ಥ? ತನ್ನ ಹುಟ್ಟಿಗೆ ಧರ್ಮ, ಕಾನೂನು ಯಾವುದೂ ಬೆಂಬಲವಾಗಿ ನಿಲ್ಲುವುದಿಲ್ಲ. ಇದೆಂಥಾ ಹೀನ ಪ್ರಸಂಗ! ಆದರೆ ವಿನುತಾ ಹೇಳಿದ ಮಾತು? ಮುರಳೀ ತನ್ನ ಟ್ವಿನ್ ಬ್ರದರ್... ಮತ್ತೆ ಅವನು ಹೇಗೆ ಆ ಮನೆಯಲ್ಲಿ? ಏನೋ ಸುಳ್ಳು ಇರಬಹುದು. ಮಂಜುಳಾ ಮಾತನ್ನು ಮುಂದುವರೆಸಿದಳು.

"ಇನ್ನೂ ಈ ವಿಷಯ ಸಾಕು. ಎಲ್ಲವನ್ನೂ ಇಲ್ಲಿಗೇ ಮರೆತು ಬಿಡು... ಇನ್ಯಾರಿಗೂ ಈ ವಿಷಯ ಗೊತ್ತಾಗಬಾರದು."

"ಯಾಕಮ್ಮಾ ಅಂಥಾ ಹೀನಾಯವಾದ ಪರಿಸ್ಥಿತಿ ಏನು ಒದಗಿತ್ತು?"

"ಏನೂ ಇಲ್ಲ. ಆದರೆ ಜನರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ... ಯಾಕೆ ಎಲ್ಲವನ್ನೂ ಮರೆಯಬೇಕು? ನಿಜ ಬೇಕು ಅಂತಂದೆ; ನಾನು ಹೇಳಿದೆ."

ಇನ್ನು ತಾಯಿಯನ್ನು ಕೆದಕುವುದು ಬೇಡ ಎನಿಸಿತ್ತು. ಆದರೂ ಕೆಲವು ಅಪೂರ್ಣ ಸತ್ಯಗಳು ಉಳಿದುಕೊಂಡವು. ವಿನುತಾ ತನಗೆ ಈ ವಿಷಯವನ್ನು ಹೇಳದೇ ಇದ್ದಿದ್ದರೆ ಚೆನ್ನಾಗಿತ್ತೆನ್ನಿಸಿತ್ತು... ತಾಯಿಯ ಮನಸ್ಸಿಗೆ ನೋವಾಗಿದೆ ಎನ್ನುವುದು ಅರಿತ.

"ಅಮ್ಮಾ... ವೆರಿ ಸಾರಿ... ಯಾವುದೋ ಆವೇಶದಲ್ಲಿ ನಿನ್ನನ್ನು ಬಲವಂತ ಮಾಡಿ, ನಿನ್ನ ಮನಸ್ಸಿಗೆ ನೋವನ್ನುಂಟು ಮಾಡಿದೀನಿ..."

"ಹೌದು ಮಧು... ನನ್ನ ಮನಸ್ಸಿಗೆ ಬೇಸರವಾಗಿರುವುದು ನಿಜ... ಆದರೆ

ನೀನು ಕೇಳ್ದೆ ಅಂತ ಅಲ್ಲ... ಇಷ್ಟು ವರ್ಷಗಳ ಕಾಲ ರಹಸ್ಯವಾಗಿದ್ದ ವಿಷಯ ಬಹಿರಂಗವಾಯಿತಲ್ಲ ಅಂತ. ನಾವು ಈ ಊರಿಗೆ ಬರದೇ ಇದ್ದಿದ್ದರೆ... ಆತ ನಮ್ಮ ಮನೆಗೆ ಬರದೇ ಇದ್ದಿದ್ದರೆ... ಎಲ್ಲವೂ ರಹಸ್ಯವಾಗಿಯೇ ಉಳಿದಿರುತ್ತಿತ್ತು."

"ಈಗಲೂ ನಾವು ಯಾವುದಾದರೂ ಬೇರೆ ಊರಿಗೇ ಹೊರಟು ಹೋಗೋಣ. ಈ ಸಂಬಂಧಗಳಿಂದ ಅಜ್ಞಾತವಾಗಿಯೇ ಇರೋಣ..."

"ನಂಗೊತ್ತಿಲ್ಲ ಮಧು. ನಿನ್ನ ನಿರ್ಧಾರ ಏನೇ ಇರಲಿ, ಅದು ನನ್ನ ಸಮ್ಮತ. ಆದರೆ ನನ್ನನ್ನು ಮಾತ್ರ ಒಂಟಿಯಾಗಿ ಬಿಟ್ಟು ಹೋಗ್ಬೇಡ."

"ಛೇ ಅಂಥ ಕಟುಕ ಮಗ ನಾನಲ್ಲ. ಆ ಪೋಲೀಸನ ರಕ್ತ ನನ್ನ ದೇಹದೊಳಗೆ ಹರಿಯುತ್ತಿರಬಹುದು. ಆದರೆ ಅವರಂತೆ ನಿಷ್ಕರುಣಿ ನಾನಲ್ಲ." ತಾಯಿಯ ಭುಜಗಳ ಮೇಲೆ ಕೈಯನ್ನಿಟ್ಟು ಹಗುರವಾಗಿ ಒತ್ತಿದ.

* * *

ಕರೆಗಂಟೆ ಸದ್ದು ಮಾಡಿತು. ಕೆಲಸದವಳು ಮುಂಬಾಗಿಲನ್ನು ತೆರೆದಳು. ಮಂಜುಳಾ ಒಳಗಿನಿಂದಲೇ ಬಾಗಿ ನೋಡಿದಳು. ಸದಾನಂದ ದಂಪತಿಗಳು! ತಪ್ಪಿತಸ್ಥ ಭಾವನೆ ಎದೆಯನ್ನು ಒತ್ತಿತು. ಮುಂಬಾಗಿಲಿನ ಬಳಿಗೆ ಬಂದು ಸಂಕೋಚ ದಿಂದ ಸ್ವಾಗತಿಸಿದಳು. ಉಪಚರಿಸಿದಳು. ಇಬ್ಬರೂ ಕುಳಿತರು. ಸದಾನಂದ ಮಾತನಾಡಿದ.

"ಮಧುಸೂದನ ಊರಿಂದ ಬಂದ್ರೇನು? ಫೋನಿನಲ್ಲೂ ಸಿಗ್ತಿಲ್ಲ. ಏನು ವಿಷಯ ಅಂತ ಖುದ್ದಾಗಿ ನೋಡಿ ಮಾತನಾಡಿ ಹೋಗೋಣ ಅಂತ ಬಂದೆವು."

"ಹೂಂ. ಟೂರ್ ಹೋಗಿದ್ದ. ನೆನ್ನೆ ತಾನೇ ವಾಪಸ್ಸು ಬಂದ. ಇವತ್ತು ನಾಳೇಲಿ ನಾವೇ ಬರೋಣ ಅಂತ ಅಂದ್ಕೊಳ್ತಿದ್ವಿ." ಅನಾಯಾಸವಾಗಿ ಸುಳ್ಳು ಹೊರಬಿದ್ದಿತ್ತು.

"ಯಾಕೋ ನೀವು ಲಗ್ನಪತ್ರಿಕೆ, ಮಾಡೋಕೂ ಮೀನಾಮೇಷ ಎಣಿಸ್ತಾ ಇದೀರಿ. ಏನು ವಿಷಯ? ಮೊದಲೇ ಎಲ್ಲಾ ಕ್ಲಿಯರ್ ಆಗಿಬಿಡ್ಲಿ. ಎಲ್ಲರೂ ಕುಳಿತು ಸಾವಕಾಶವಾಗಿ ಮಾತನಾಡೋಣ. ಕೊಡೋದು ಬಿಡೋದು ಕೂಡಾ ಇತ್ಯರ್ಥವಾಗಿ ಬಿಡಲಿ." ಬೆಚ್ಚಿಸುವಂತೆ ನುಡಿದ.

"ನಮ್ಮ ಕಡೆಯೋರು ಒಬ್ರು ಆಸ್ಪತ್ರೇಲಿ ಹುಷಾರಿಲ್ಲದೇ ಮಲಗಿದ್ರು. ಹಾಗಾಗಿ ದಿನ ತಳ್ಳಿದೆವು. ತೊಂದ್ರೆಯಾಗಿದ್ರೆ ಕ್ಷಮಿಸಿ."

"ತೊಂದ್ರೆ ಆಗ್ದೇ ಇರುತ್ತಾ? ಹೆಣ್ಣು ಹೆತ್ತೋರು ನಾವು. ನಮಗೆ ಇನ್ನೂ ಒಬ್ಬಳು ಮಗಳಿದ್ದಾಳೆ. ನಿಮ್ಮ ಅಂತರಂಗದಲ್ಲಿ ಏನಿದೆ ಅಂತ ತಿಳಿಯದೇ ತವಕದಿಂದ

ಎದೆ ಢವಗುಟ್ಟುತ್ತೆ." ಸದಾನಂದ ಸ್ವಲ್ಪ ಒರಟಾಗಿಯೇ ಹೇಳಿದ.

"ನಮಗೆ ಇನ್ನೂ ಒಂದು ವಾರ ಸಮಯ ಕೊಡಿ. ಅಷ್ಟರಲ್ಲಿ ಅವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಬರ್ತಾರೆ." ಆಮೇಲೆ ನಾವೇ ಬಂದು ಮಾತಾಡ್ತೀವಿ.

"ಇಷ್ಟು ದಿನಗಳೇ ಕಾದೆವಂತೆ. ಇನ್ನೂ ಒಂದು ವಾರ ಏನು ಕಷ್ಟ? ಸರಿ ನಾವು ಇನ್ನು ಹೊರಡ್ತೀವಿ." ಇಬ್ಬರೂ ಎದ್ದರು.

ಅಷ್ಟರಲ್ಲಿ ಅಡಿಗೆಯವಳು ಕಾಫಿ ತಿಂಡಿಯನ್ನು ತಂದಿತ್ತಳು. ಇಬ್ಬರೂ ಕುಳಿತು ಕಾಫಿಯ ಬಟ್ಟಲುಗಳನ್ನೆತ್ತಿಕೊಂಡರು. ಮಂಜುಳ ಒಳಗೆ ಹೋಗಿ ಮಗನಿಗೆ ಫೋನ್ ಮಾಡಿದಳು.

"ಎಲ್ಲಿದೀಯ ನೀನು? ರಸ್ತೇಲಿ ಇದ್ದರೆ ಈಗ್ಲೇ ಮನೆಗೆ ಬರ್ಬೇಡ... ವಿನುತಳ ತಂದೆ-ತಾಯಿ ಬಂದಿದ್ದಾರೆ... ಅವರು ಹೋದ್ಮೇಲೆ ನಾನು ಮತ್ತೆ ನಿನಗೆ ಫೋನ್ ಮಾಡ್ತೀನಿ." ಎಂದು ತಿಳಿಸಿದಳು.

ತಾಯಿ ಮಾಡುತ್ತಿರುವುದು ಸರಿಯಲ್ಲ ಎನಿಸಿತ್ತು ಮಧುಸೂದನ್‌ಗೆ. ವಿನುತಳಿಗೆ ಫೋನ್ ಮಾಡಿದ. "ಈಗ್ಲಾದ್ರೂ ನೀವು ನಿಮ್ಮ ತಂದೆ-ತಾಯಿಗೆ ನಿಜವನ್ನು ತಿಳಿಸಿ. ಇಲ್ದಿದ್ರೆ ನಾನು ಲಗ್ನಪತ್ರಿಕೆಗೆ ಒಪ್ಪಿಕೊಂಡರೆ, ಆಮೇಲೆ ಯಾರೂ ಏನೂ ಮಾಡುಕ್ಕೆ ಆಗಲ್ಲವಲ್ಲ... ಬೇಗ ತೀರ್ಮಾನ ತಗೊಳ್ಳಿ..." ಎಂದು ಖಾರವಾಗಿ ಹೇಳಿದ.

"ಮುರಳಿ ಹತ್ತಿರ ನಾನು ಮಾತನಾಡಿದೀನಿ... ಈಗ ಅವರ ತಂದೆಗೆ ಆಕ್ಸಿಡೆಂಟ್ ಆಗಿದೆಯಲ್ಲ. ಸ್ವಲ್ಪ ಸಮಯ ಕಳೆಯಲಿ ಅಂತಂದ. ನಾನೇನ್ಮಾಡ಼್್ಲೀ?"

"ನಿಮ್ಮಿಬ್ಬರ ಮಧ್ಯೆ ನಾನ್ಯಾಕೆ ಸಿಕ್ಕಿ ಹಾಕ್ಕೊಳ್ಳಲಿ? ಇದರಿಂದ ನನಗೇನು ಲಾಭ? ನನಗೂ ನಿಮ್ಮ ಮದುವೆಗೂ ಏನು ಸಂಬಂಧ?"

"ಯಾಕೆ ಲಾಭವಿಲ್ಲ ಮಧುಸೂದನ್? ಈ ನೆವದಲ್ಲಿ ನಿಮಗೆ ನಿಮ್ಮ ತಂದೆ ಯಾರೂಂತ ಪತ್ತೆ ಆದ್ರು. ನಮ್ಮಿಬ್ಬರ ಮದುವೆ ನೆರವೇರಿದರೆ, ನನಗೆ ನೀವು ಭಾವನೋ, ಮೈದುನನೋ ಆಗ್ತೀರಿ. ಸಂಬಂಧ ಯಾಕೆ ಇಲ್ಲ?"

"ನಾನ್ಸೆನ್ಸ್! ಯಾವ ಸಂಬಂಧ? ನಾನೇನು ಪತ್ತೆ ಮಾಡಿಕೊಡಿ ಅಂತ ನಿಮ್ಮನ್ನು ಕೇಳಿದ್ನಾ? ನನ್ಹತ್ರ ಇಷ್ಟು ಮಾತಾಡ್ತೀರಿ? ನಿಮ್ಮ ತಂದೆಯ ಹತ್ತಿರ ಯಾಕೆ ಮಾತಾಡ್ಬಾರ್ದು?"

"ನೀವು ನಮ್ಮ ತಂದೆಯ ಹತ್ತಿರ ಮಾತಾಡ್ತೀರ?"

"ನಿಮಗ್ಯಾಕೆ ಅಂತ ಅವರು ಕೇಳ್ಳೋಲ್ವಾ? ಇಷ್ಟು ದಿನ ನಾನು ಮುಂದುವರೆದಿದ್ದೇ ತಪ್ಪು ಅಂತ ಅನ್ನಿಸ್ತಿದೆ. ನಂಗೆ ನನ್ನ ಪಾಡಿಗೆ ನನ್ನನ್ನು

ಬಿಟ್ಟಿಡಿ."

"ಸಮಯದಲ್ಲಿ ಕೈ ಕೊಡುವ ಸ್ವಭಾವ ನಿಮ್ಮದು... ಬಿಡಿ. ನಾನೇ ಮುರಳಿಯ ತಂದೆ ಹತ್ರ ಮಾತಾಡ್ತೀನಿ. ಅವರಿಗೆ ನಾನು ಇಷ್ಟವಾದರೆ, ನಾನು ಅವರ ಸೊಸೆ ಯಾಗ್ತೀನಿ. ಒಂದು ವಿಷಯದಲ್ಲಿ ನೀವು ಮುರಳಿಯ ಬ್ರದರ್ ಎನ್ನುವುದು ನಿಜ. ಮುಖ್ಯವಾದ ವಿಷಯವನ್ನು ಮಾತನಾಡೋಕ್ಕೆ ಹಿಂಜರಿತೀರಿ... ನಿಮ ಗಾಗಲೀ, ನಿಮ್ಮ ತಾಯಿಗಾಗಲೀ ನಾನು ಒಪ್ಪಿಗೆ ಇಲ್ಲ ಅಂತ ಗೊತ್ತು. ಇನ್ಯಾಕೆ ಬಲವಂತದ ಮೇಕಪ್?"

"ನಿಮ್ಮನ್ನು ಯಾರೂ ಬಲವಂತ ಮಾಡ್ತಿಲ್ಲ. ಮುರಳಿ ಬಂದು ಕೇಳಿದ್ದರಿಂದ ನಾನು ಈ ನಾಟಕ ಆಡ್ತಿದೀನಿ. ಇಲ್ದಿದ್ರೆ ನನಗ್ಯಾಕೆ ಈ ಉಸಾಬರಿ! ಇನ್ನೊಂದು ವಾರದೊಳಗೆ ನಿಮ್ಮ ತೀರ್ಮಾನವನ್ನು ತಿಳಿಸ್ಲೇಬೇಕು" ಎಂದು ಹೇಳಿ ಮಾತನ್ನು ನಿಲ್ಲಿಸಿದ. ಸ್ವಲ್ಪ ಸಮಯದಲ್ಲೇ ತಾಯಿಯಿಂದ ಮತ್ತೆ ಫೋನ್ ಬಂದಿತ್ತು. ಬೇಸರದಿಂದ ಮನೆಯ ಕಡೆ ಗಾಡಿಯನ್ನು ಓಡಿಸಿದ.

ತಾಯಿಯೇ ಬಾಗಿಲನ್ನು ತೆರೆದಳು. ಇವನು ನಿರುತ್ಸಾಹದಿಂದ ಒಳಗೆ ಹೋದ. ಇವನ ಸುಖಕ್ಕೆ ತಾನು ಅಡ್ಡಿ ಪಡಿಸುತ್ತಿದ್ದೇನೆಯೇ ಎಂದುಕೊಂಡಳು ಮಂಜುಳಾ. ಸದಾನಂದ ದಂಪತಿಗಳು ಏನು ಮಾತನಾಡಿದರೆಂದು ಇವನೂ ಕೇಳಲಿಲ್ಲ. ಅವಳೂ ಹೇಳಲಿಲ್ಲ. ಅಡಿಗೆಯಾಕೆ ಕಾಫಿ ತಿಂಡಿಯನ್ನು ತಂದಿತ್ತಳು. ಇವನು ನಿಧಾನವಾಗಿ ಟಿ.ವಿಯನ್ನು ವೀಕ್ಷಿಸುತ್ತಾ ಕಾಫಿ ತಿಂಡಿಯನ್ನು ಮುಗಿಸಿದ.

"ನಾನು ಷಾಪಿಂಗ್ ಹೋಗ್ಬೇಕು..." ತಾಯಿ ಅವನ ಎದುರಿಗೆ ನಿಂತು ನುಡಿದಳು.

"ಕನಕಮ್ಮನ ಜೊತೆ ಹೋಗಮ್ಮ. ನನಗೆ ಇವತ್ತು ಮೂಡ್ ಇಲ್ಲ."

"ಮನೇಲಿ ಒಬ್ಬನೇ ಕೂತು ಏನ್ಮಾಡ್ತೀಯ?"

"ಏನೋ ಮಾಡ್ತೀನಿ. ಟಿ.ವಿ ನೋಡ್ತೀನಿ, ಓದ್ತೀನಿ, ಮಲಗ್ತೀನಿ, ಸರೀನಾ?"

"ಯಾಕೋ ಹೀಗೆ ಮಾತಾಡ್ತೀಯ... ನಾನೇನು ತಪ್ಪು ಮಾಡಿದೆ?"

"ನಿನ್ನದು ಯಾವ ತಪ್ಪಿಲ್ಲ. ಆದರೂ ನನ್ನ ನೆಮ್ಮದಿ ಕೆಟ್ಟಿದೆ."

"ಮುಂದಿನ ವಾರ ಲಗ್ನಪತ್ರಿಕೆ ಶಾಸ್ತ್ರವನ್ನು ಇಟ್ಟುಕೊಳ್ಳೋಣಾಂತಿದೀನಿ."

"ನನಗೆ ಈ ಮದುವೆ ಬೇಡ....."

"ಅವಳನ್ನು ಒಪ್ಕೊಂಡಿದೀಯ, ಈಗೇನಿದು ಈ ಹೊಸಾ ಬದಲಾವಣೆ..."

"ನಿಂಗೆ ಅವಳು ಒಪ್ಪಿಗೆಯಾಗಿಲ್ಲ ಅಂತ ನಂಗೊತ್ತು. ನನಗೋಸ್ಕರ ನೀನು ಕಾಂಪ್ರಮೈಸ್ ಮಾಡ್ಕೋ ಬೇಕಾಗಿಲ್ಲ. ನಾನು ಹೀಗೇ ಇದ್ದು ಬಿಡ್ತೀನಿ."

"ಹೀಗೇ ಒಂಟಿಯಾಗಿ? ಸಂಗಾತಿ ಬೇಡ್ವಾ?"

"ಒಂಟಿಯಾಗಿ ನೀನು ಇರ್ಲಿಲ್ವಾ?"

"ಈಗ ಹಳೆಯ ಮಾತುಗಳು ಬೇಡ."

"ನಿನಗೆ ಹಳೆಯ ಮಾತು. ನನಗೆ ಹೊಸಾ ಅಧ್ಯಾಯ..."

"ನೀನು ವಿನುತಳನ್ನೇ ಮದುವೆಯಾಗು... ಇದನ್ನೆಲ್ಲಾ ಮರೆತುಬಿಡು... ನಾನು ಮದುವೆ ಅತಿ ಸರಳವಾಗಿರಲಿ ಅಂತ ಹೇಳಿದೀನಿ."

"ಹೇಗಮ್ಮಾ ಮರೆಯೋಕ್ಕೆ ಆಗುತ್ತೆ? ಮನವನ್ನು ಕೊರೆಯುತ್ತೆ... ತಂದೆಯಿಲ್ಲ ಅಂತಂದುಕೊಂಡಾಗ, ಅದಕ್ಕೇ ಹೊಂದಿಕೊಂಡಿದ್ದೆ. ಈಗ ನನ್ನ ತಂದೆ, ನನ್ನ ಸೋದರ ಯಾರು ಅಂತ ಗೊತ್ತಾಗಿರುವಾಗ ಮರೆಯುವುದು ಸುಲಭವಲ್ಲ; ಬೆಚ್ಚಿಸುತ್ತೆ."

"ಮರೆಯೋಕ್ಕೆ ಪ್ರಯತ್ನಪಡು. ಕ್ರಮೇಣ ಅಭ್ಯಾಸವಾಗುತ್ತೆ. ಈಗ ನಾನು ಇಲ್ವಾ ಹಾಗೇ..."

"ಇಲ್ಲ. ನೀನು ಮರೆತಿಲ್ಲ. ಇಲ್ದಿದ್ರೆ ನೀನು ಅವರನ್ನು ನೋಡಲು ಹೋಗ್ತಿರಲಿಲ್ಲ."

ಅವಳ ಮುಖದ ಬಣ್ಣ ಬದಲಾಯಿತು. ಕೆಲವೇ ನಿಮಿಷಗಳಲ್ಲಿ ಸರಿಪಡಿಸಿ ಕೊಂಡಳು.

"ನೀನು ತಪ್ಪು ತಿಳಿದುಕೊಂಡಿದೀಯ. ನಾನು ಮರೆತಿದ್ದೆ... ಅವರೇ ಒಂದು ದಿನ ಇದ್ದಕ್ಕಿದ್ದಂತೆ ನಮ್ಮ ಮನೆಗೆ ಬಂದರು. ನೆನಪುಗಳು ಮರುಕಳಿಸಿದವು... ಅಷ್ಟೇ. ಇನ್ನು ಮುಂದೆ ಹಾಗಾಗೋಲ್ಲ. ನಾವು ಬೇರೆ ಊರಿಗೆ ಹೊರಟು ಹೋಗೋಣ. ಹೊಸ ಜೀವನ ಪ್ರಾರಂಭಿಸೋಣ."

"ಇದನ್ನೆಲ್ಲ ವಿನುತಳ ಮನೆಯವರಿಗೆ ಹೇಳುಕ್ಕಾಗುತ್ತೇನಮ್ಮಾ... ಅವರು ಏನಂದುಕೊಳ್ತಾರೆ?" ಆಕೆ ಮತ್ತೆ ಪೆಚ್ಚಾದಳು.

"ಕನಕಮ್ಮ ಕಾಯ್ತಾ ಇದಾರೆ. ಮಾರ್ಕೆಟ್ಟಿಗೆ ಹೋಗಿ ಬಾ... ನನ್ನ ಪಾಡಿಗೆ ನನ್ನನ್ನು ಬಿಡು..." ಎಂದು ಹೇಳಿ, ಟಿ.ವಿ. ಯನ್ನು ಆರಿಸಿ ರೂಮಿಗೆ ಹೊರಟು ಹೋದ. ತಾಯಿ ಕನಕಮ್ಮನೊಂದಿಗೆ ಹೊರಟು ಹೋಗಿದ್ದಳು. ಇವನು ಕೈಗೆ ಸಿಕ್ಕಿದ ಒಂದು ಪುಸ್ತಕವನ್ನೆತ್ತಿಕೊಂಡು, ಮಂಚದ ಮೇಲೆ ದಿಂಬಿಗೆ ಒರಗಿ ಕುಳಿತ. ಕಣ್ಣುಗಳು ಅಕ್ಷರಗಳ ಮೇಲೆ ಹರಿದಾಡಿದರೂ, ಅರ್ಥವಾಗುತ್ತಿರಲಿಲ್ಲ. ಪುಸ್ತಕವನ್ನು ಮುಚ್ಚಿ, ಪಕ್ಕಕ್ಕೆ ಎಸೆದು, ಕಣ್ಣುಗಳನ್ನು ಮುಚ್ಚಿಕೊಂಡು ಮಲಗಿದ... ಆಯಾಸಗೊಂಡ ಮನಸ್ಸು ವಿಶ್ರಾಂತಿಯನ್ನು ಬಯಸಿತ್ತು.

* * *

ಕನಕಮ್ಮನನ್ನು ಹೊರಗೆ ಕೂರಿಸಿ, ಮಂಜುಳಾ ಮುರಳಿಯ ಛೇಂಬರ್‌ಗೆ ಬಂದಳು. ಮುರಳಿ ಕತ್ತೆತ್ತಿ ನೋಡಿ, ಚಕಿತಗೊಂಡು, "ಹಲೋ ಆಂಟಿ... ಬನ್ನಿ ಕೂತ್ಕೊಳ್ಳಿ" ಎಂದು ಉಪಚರಿಸಿದ.

"ಪುರುಷೋತ್ತಮ್ ನಿಮ್ಮ ತಂದೆ ಎಂದು ಆವತ್ತೇ ನೀವ್ಯಾಕೆ ಹೇಳಲಿಲ್ಲ?" ನೇರವಾಗಿ ಪ್ರಶ್ನಿಸಿದಳು.

"ಇದು ನನ್ನ ಬಿಸಿನೆಸ್, ನನ್ನ ತಂದೆಗೆ ಸಂಬಂಧಿಸಿದುದಲ್ಲ."

"ನಿಮ್ಮನ್ನು ನೀವು ಸ್ಮಾರ್ಟ್ ಅಂತ ಅಂದ್ಕೋಬೇಡಿ... ವಿನುತಳ ಕೇಸ್ ಕೊಟ್ಟಿದ್ನಲ್ಲ, ಅದು ಏನಾಯ್ತು?"

"ಸ್ವಲ್ಪ ಪರ್ಸನಲ್ ಪ್ರಾಬ್ಲಂ ಇತ್ತು... ಡಿಲೇ ಆಯ್ತು... ಸಾರಿ ಮೇಡಂ..."

"ವಿನುತ ನಿಮಗೆ ಮೊದಲ್ನಿಂದ ಪರಿಚಯ. ಅದನ್ನೂ ಹೇಳಲಿಲ್ಲ ನೀವು."

"ಅದು ನನ್ನ ವೈಯಕ್ತಿಕ ವಿಷಯ... ಪ್ರೊಫೆಷನ್‌ಗೂ ಅದಕ್ಕೂ ಸಂಬಂಧ ತರೋಕ್ಕೆ ನನಗೆ ಆಗೋಲ್ಲ."

"ಅವಳ ನಡತೆ, ಗುಣ, ಸ್ವಭಾವ, ಹಿನ್ನೆಲೆ ಎಲ್ಲಾ ನಿಮಗೆ ತಿಳಿದಿದೆ; ಹೇಳಬಹುದಾಗಿತ್ತಲ್ಲ. ಅವಳಿಗೂ ನಿಮಗೂ ಸ್ನೇಹವಿದೆ. ಅದು ಎಂಥಾ ಸ್ನೇಹ ಅಂತ ನಾನು ಹೇಳಬೇಕಾಗಿಲ್ಲ. "

"ಇದೇ ತರಹ ಅವರ ಮನೆಯವರು ಕೇಳಿದರೆ ಮಧುಸೂದನನ ಬಗ್ಗೆ ನಾನು ಏನು ಹೇಳಲಿ?" ಬೆರಳಿನಿಂದ ಮೇಜನ್ನು ಕುಟ್ಟಿ ಕೇಳಿದ.

"ಪ್ರಶ್ನೆಗೆ ಪ್ರಶ್ನೆ ಬೇಡ... ಈ ಕೇಸ್‌ನ ಕ್ಯಾನ್ಸಲ್ ಮಾಡ್ತಿದೀನಿ. ಮಧುಗೆ ಇದೆಲ್ಲಾ ಇಷ್ಟವಾಗೋಲ್ಲ. ಭಾವೀ ಪತ್ನಿಯ ಬಗ್ಗೆ ಅವನಿಗೆ ನಂಬಿಕೆ ಇದೆ. ಗೌರವ ಇದೆ. ಅವನು ವಿನುತನ್ನ ಇಷ್ಟ ಪಟ್ಟಿದ್ದಾನೆ."

"ಏನು? ಕೇಸ್‌ನ ವಾಪಸ್ಸು ತಗೋತೀರಾ? ಆದರೆ ವಿನುತ ನಿಮಗೆ ಇಷ್ಟ ಇಲ್ಲ ಅಲ್ವಾ? ಈಗೇನು ಇದ್ದಕ್ಕಿದ್ದಂತೆ ಈ ಬದಲಾವಣೆ? ಈ ಮದುವೆ ನಡೆಯೋಲ್ಲ."

"ಅದೆಲ್ಲ ನಿಮಗೆ ಬೇಡ ಮುರಳೀಧರ್. ನಾನು ನಿಮಗೆ ಕೊಟ್ಟಿದ್ದ ವಿವರಗಳನ್ನು, ಫೋಟೋಗಳನ್ನು ವಾಪಸ್ಸು ಕೊಡಿ. ಈ ಕೇಸ್ ಕ್ಲೋಸ್ ಮಾಡಿ."

"ಅದು ನನ್ನ ಬ್ರೀಫ್‌ಕೇಸ್‌ನಲ್ಲಿದೆ. ಮನೇಲೇ ಇದೆ. ನಾನೇ ನಿಮಗೆ ಖುದ್ದಾಗಿ ತಲುಪಿಸ್ತೀನಿ... ನೀವು ನಿಶ್ಚಿಂತೆಯಾಗಿರಿ." ನಿಮಗೆ ಕೇಸ್ ಬೇಡವಾದರೆ ಒಳ್ಳೆಯದೇ.

"ಇದು ಕೆಲಸವಂತರ ಲಕ್ಷಣಾನಾ? ಹೀಗಾದ್ರೆ ಯಾವ ಕ್ಲೈಂಟ್ಸ್ ನಿಮ್ಮ ಹತ್ರಕ್ಕೆ ಬರ್ತಾರೆ? ಹೋಗ್ಲೀ ಫೀಸ್ ಎಷ್ಟು ಅಂತ ಹೇಳಿ... ಚೆಕ್ ಬರೆದು

ಕೊಡ್ತೀನಿ."

"ಫೀಸು ಏನೂ ಬೇಡ. ನಾನು ಕೆಲಸವನ್ನೇ ಮಾಡಿಲ್ಲವಲ್ಲ."

"ಹೀಗೇ ಆದರೆ, ಪಾಪರ್ ಆಗಿ ಹೋಗ್ತೀರಿ. ನನಗೆ ನಿಮ್ಮ ಯಾವ ಮುಲಾಜೂ ಬೇಡ. ಚೆಕ್ ರೆಡಿಯಾಗಿದೆ. ಅಮೌಂಟ್ ಎಷ್ಟೂಂತ ಹೇಳಿ... ನನ್ನ ಕವರನ್ನು ನನಗೆ ಕೊಡಿ... " ಮುರಳೀ ಅವಮಾನಗೊಂಡಿದ್ದ. ಮುಖ ಕೆಂಪಾಗಿತ್ತು.

"ಆಯ್ತು. ನಾನು, ಎಷ್ಟಾಗಿದೆ ಅಂತ ನೋಡಿ ಹೇಳ್ತೀನಿ ಥ್ಯಾಂಕ್ಸ್." ಗಂಭೀರವಾಗಿ ಹೇಳಿದ.

"ಓ.ಕೇ...." ಎಂದು ಹೇಳಿ ಆಕೆ ಎದ್ದು ಹೋಗಿದ್ದಳು. ಇವನು ತನ್ನ ಅಸಿಸ್ಟೆಂಟ್ಸ್‌ಗಳು ತಂದಿಟ್ಟ ವಿಷಯಗಳನ್ನು ಕುರಿತು ಚರ್ಚೆ ಮಾಡುತ್ತಿರುವಾಗ ಆ ದಿನ ಬಂದಿದ್ದ ಹೆಂಗಸು ಬಂದಿದ್ದಳು. ತನ್ನ ಮಕ್ಕಳ ಹೆಸರಿಗೆ ಬಂದಿದ್ದ ಇನ್ನೆರಡು ಪತ್ರಗಳನ್ನು ತೋರಿಸಿದಳು.

"ಇದುವರೆಗೂ ನೀವು ಕೇಸ್ ಕುರಿತು ಯಾವ ಪತ್ತೇದಾರಿಕೆಯನ್ನೂ ಶುರು ಮಾಡಿಲ್ಲವಲ್ಲ. ಯಾಕೆ ನಾನು ಕೊಡುವ ಹಣ ಸಾಕಾಗುವುದಿಲ್ಲ ಅಂತ ಅನ್ಸುತ್ತಾ?" ಆಕೆ ಸ್ವಲ್ಪ ಖಾರವಾಗಿಯೇ ಕೇಳಿದ್ದಳು.

"ನೋಡಿ ಹೀಗೆಲ್ಲಾ ಮಾತಾಡ್ಬೇಡಿ. ಸ್ವಲ್ಪ ಪರ್ಸನಲ್ ಕೆಲಸವಿತ್ತು."

"ಪರ್ಸನಲ್ ಕೆಲಸವಿದ್ದರೆ, ನೋಟೀಸ್ ಬೋರ್ಡಿನಲ್ಲಿ ಹಾಕ್ಬೇಕು. ಇಲ್ದಿದ್ರೆ ನಿಮ್ಮ ಏಜೆನ್ಸೀನ ಕ್ಲೋಸ್ ಮಾಡ್ಬೇಕು. ನಮ್ಮಂಥೋರಿಗೆ ಸಹಾಯ ಮಾಡ್ತೀವಿ ಅಂತ ಬೋರ್ಡ್ ಹಾಕ್ಕೊಂಡು, ನಿಮ್ಮ ಪರ್ಸನಲ್ ಕೆಲಸ ಅಂತ ಈಗ ಹೇಳ್ತೀರಿ ನಮ್ಮ ತೊಂದರೆಗಳ ಬಗ್ಗೆ ನಿಮಗೆ ಏನೂ ಅನ್ನಿಸೋದೇ ಇಲ್ವಾ?"

"ಅನ್ಸುತ್ತೆ ಮೇಡಂ. ಸಾರೀ ಅಂತ ಹೇಳಿದ್ನಲ್ಲ. ನಮ್ಮ ತಂದೆಗೆ ಆಕ್ಸಿಡೆಂಟ್ ಆಗಿತ್ತು... ನಾನು ಆ ಓಡಾಟದಲ್ಲಿದ್ದೆ... ನಮಗೂ ಪರ್ಸನಲ್ ಪ್ರಾಬ್ಲಂಗಳಿರುತ್ವೆ, ಅರ್ಥಮಾಡ್ಕೊಳ್ಳಿ."

"ಅರ್ಥ ಆಗುತ್ತೆ ಸಾರ್, ಆದರೆ ಹೆಣ್ಣು ಮಕ್ಕಳನ್ನು ಹೆತ್ತೋರು... ಒಂದು ಸಾರಿ ಹೆಣ್ಣು ಮಕ್ಕಳ ಹೆಸರಿಗೆ ಕಳಂಕ ಬಂತು ಅಂತಂದ್ರೆ, ಮುಂದೆ ಅವರನ್ನು ಯಾರು ಮದುವೆ ಆಗ್ತಾರೆ? ಭವಿಷ್ಯದ ಗತಿ ಏನು?" ಆಕೆ ಗದ್ಗದಗೊಂಡಳು.

"ಬೇಸರ ಮಾಡ್ಕೋಬೇಡಿ ಮೇಡಂ. ಇನ್ನು ಇಪ್ಪತ್ನಾಲ್ಕು ಗಂಟೆಗಳಲ್ಲಿ ಪತ್ತೆ ಹಚ್ಚಿಬಿಡ್ತೀನಿ. ನೀವು ಧೈರ್ಯವಾಗಿ ಮನೆಗೆ ಹೋಗಿ" ಎಂದು ಹೇಳಿ ಕಳಿಸಿದ. ಅವನಿಗೆ ವಿನುತಳ ನೆನಪಾಗಿತ್ತು. ಆದರೆ ಅವಳು ಈಗ ಸಿಗುತ್ತಾಳೋ ಇಲ್ಲವೋ, ಫೋನನ್ನು ಮಾಡುವಂತಿಲ್ಲ ಅಂತಂದುಕೊಂಡು, ಮನೆಗೆ ಹೊರಡಲು ಸಿದ್ಧನಾದ. ಅದೇ ಸಮಯಕ್ಕೆ ವಿನುತ ಅವನ ಆಫೀಸಿಗೆ ಬಂದಳು. ಅವನ ಮುಖ ಅರಳಿತ್ತು.

"ಅರೇ ನೀನಾ? ನಿಂಗೆ ನೂರು ವರ್ಷ ಆಯಸ್ಸು. ನಿನ್ನನ್ನೇ ನೆನೆಸ್ಕೊಳ್ತಾ ಇದ್ದೆ. ನೀನೇ ಹಾಜರ್ರು... ಕೂತ್ಕೋ, ಏನು ವಿಷಯ?"

"ಇನ್ನೇನಿರುತ್ತೆ. ನೀನೆಲ್ಲಿ ನನ್ನನ್ನು ಮರೆತು ಬಿಡ್ತೀಯೋ ಅಂತ ಆಗಾಗ್ಗೆ ಬಂದು ನಿಂಗೆ ದರ್ಶನ ಕೊಡ್ತೀನಿ. ಆದರೆ ನನ್ನ ನೆನಪು ನಿನಗೆ ಇದೆ ಅಂತ ತಿಳಿದು ಬಹಳಾನೇ ಆಶ್ಚರ್ಯವಾಯ್ತು."

"ಅಲ್ವಾ... ನಂಗೂ ನಿನ್ನಷ್ಟೇ ಆಶ್ಚರ್ಯ ಆಗ್ತಿದೆ. ನಂಗೆ ನಿನ್ನಿಂದ ಒಂದು ಹೆಲ್ಪ್ ಆಗ್ಬೇಕಲ್ಲ... ನನ್ನ ಅಸಿಸ್ಟೆಂಟ್ ಆಗಿ ಯಾಕೆ ಕೆಲಸ ಮಾಡಬಾರದು..." ಆಗ ಸದಾ ನಿನ್ನ ದರ್ಶನ ನಂಗೆ ಆಗ್ತಾನೇ ಇರುತ್ತೆ. ನಾನು ನಿನ್ನನ್ನು ಮರೆಯುವ ಛಾನ್ಸೇ ಇಲ್ಲ."

"ಆಗ ನನ್ನ ನಿನ್ನ ಸಂಬಂಧ ಬೇರೇನೇ ಆಗುತ್ತೆ. ಆಗ ನೀನು ನನ್ನ ಬಾಸ್ ಆಗ್ತೀಯ. ಅದು ನನಗೆ ಇಷ್ಟವಿಲ್ಲ."

"ಇಲ್ಲ ವಿನೂ... ಆಗ಼್ೂ ನೀನೇ ನನ್ನ ಬಾಸ್... ನಾನು ಗುಲಾಮ."

"ಜೋಕ್ ಸಾಕು. ಎಲ್ಲಿಗೋ ಹೊರಟ ಹಾಗಿದೆ."

"ಮನೆಗೆ ಹೊರಟಿದ್ದೆ. ಬರ್ತೀಯಾ ನನ್ನ ಜೊತೆ?"

"ಬರಬಹುದಾಗಿತ್ತು. ಆದರೆ ನಿನ್ನ ಆ ಪೋಲೀಸ್ ಪಾಪಾ ಮನೇಲೇ ಇದಾರಲ್ಲ. ಏನಂತಾರೋ...." ಅನುಮಾನವನ್ನು ವ್ಯಕ್ತಪಡಿಸಿದಳು.

"ಒಳಗೆಲ್ಲೋ ಮಲಗಿರ್ತಾರೆ. ಭುಜದ ಮೂಳೆಗೆ ಹೇರ್ ಲೈನ್ ಫ್ರಾಕ್ಚರ್ ಆಗಿದೆ. ಎದ್ದು ಓಡಾಡೋಲ್ಲ. ಅಮ್ಮನ್ನ ನೋಡಿ ಮಾತಾಡಿಸೋಲ್ವಾ? ಪಾಪ ಅವಳೂ ಒಂಟಿ."

"ಅದಕ್ಕೇ ಹೇಳೋದು ಮುರಳೀ, ಬೇಗ ಮದುವೆಯಾಗು. ನಿಮ್ಮ ಮನೆಗೆ ನಾನು ಸೊಸೆಯಾಗಿ ಬಂದರೆ ಎಲ್ಲಾ ಸರಿಹೋಗುತ್ತೆ. ನಿಮ್ಮಮ್ಮನ ಒಂಟಿತನ ನೀಗುತ್ತೆ."

"ಡ್ಯಾಡಿ, ರಿಕವರ್ ಆಗ್ತಿದ್ದ ಹಾಗೇ ಮೊದಲ ಕೆಲಸ ಅದು."

"ಅದಪ್ಪಾ ಸ್ಪಿರಿಟ್..." ನಗೆಯಾಡಿದಳು. ಅವನು ಅವಳನ್ನೇ ನೋಡಿದ. ಮಂಜುಳಾ–ಮಧು ನೆನಪಾದರು.

"ವಿನೂ, ಕಾರ್ನಲ್ಲಿ ಹೋಗ್ತಾ ಮಾತನಾಡೋಣ, ನಡೀ..." ಅವಳನ್ನು ಎಬ್ಬಿಸಿ ತಾನೂ ಹೊರಟ. ಇಬ್ಬರೂ ಕಾರನ್ನೇರಿದರು. ಕಾರು ಹೊರಟಿತು.

"ಮುರಳೀ, ನನಗೆ ನಿನ್ಮೇಲೆ ತುಂಬಾ ಕೋಪ, ಯಾಕೆ ಗೊತ್ತಾ? ನಾನು ಮಧೂ ಜತೇಲಿ ತಿರುಗಾಡ್ತಿದ್ರೂ, ನಿಂಗೆ ಏನೂ ಅನ್ನಿಸೋಲ್ವಾ?" ಕೇಳಿದಳು.

"ನನಗೆ ನಿನ್ಮೇಲೆ ನಂಬಿಕೆ ಇದೆ ವಿನೂ.....ಹಾಗೇ, ಮಧೂ ಮೇಲೆ ಕೂಡಾ."

"ಹೃದಯ ಹೃದಯದ ಸಂಬಂಧ, ಜತೇಲಿ ರಕ್ತ ಸಂಬಂಧ ಕೂಡಾ." ನಕ್ಕಳು.

"ರಕ್ತ ಸಂಬಂಧದ ಕುರಿತು ಇನ್ನೂ ಪ್ರೂವ್ ಆಗಿಲ್ವಲ್ಲಾ?"

"ನಾನು ಕಿವಿಯಾರೆ ಕೇಳಿದ್ದು ಸುಳ್ಳು ಅಂತೀಯಾ? ಇಂಪಾಸಿಬಲ್."

"ಸುಳ್ಳಲ್ಲ. ಆದರೆ ಒಂಥರಾ ಒಳಗೊಳಗೇ ಭೀತಿ. ನಾನು ನನ್ನ ಅಮ್ಮನ ಮಗನಾಗಿಯೇ ಉಳಿಯಲು ಬಯಸ್ತೀನಿ ವಿನೂ..."

"ಅಂದ್ರೇ.....?"

"ಹೋಗಲಿ ಬಿಡು. ನಿಜ ಗೊತ್ತಾಗುವವರೆಗೂ ಈ ವಿಷಯವನ್ನು ಮಾತಾಡುವುದೇ ಬೇಡ."

"ನಿಜ ಗೊತ್ತಾಗಬೇಕಾದ್ರೆ ವಿಚಾರಿಸ್ಬೇಕು ಅಲ್ವಾ ಮುರಳೀ......ನಿನ್ನ ಡ್ಯಾಡಿಯ ಹತ್ರ ಮಾತಾಡೋಕ್ಕೆ ನಿಂಗೆ ಇಷ್ಟವಿಲ್ವಾ?"

"ನಿಜ ಕಹಿಯಾಗಿದ್ರೆ ಅದೊಂದು ಥರ ಆತಂಕ ಆಗುತ್ತೆ."

"ಹಾಗಂತ ಸುಮ್ಮನಿರೋಕ್ಕೆ ಆಗುತ್ತಾ? ನೀನೊಂಥರಾ ಪಲಾಯನವಾದಿ... ಈ ಪ್ರೊಫೆಷನ್‌ಗೆ ನೀನು ಸೂಟಬಲ್ ಅಲ್ಲ."

"ಅದು ನಿಜ ಅಂತ ಅನ್ಸುತ್ತೆ. ಈಗಾಗ್ಲೇ ನನ್ನ ಕ್ಲೈಂಟ್‌ಗಳಿಂದ ಈ ಒಪಿನಿಯನ್ ಕೂಡಾ ಸಿಕ್ಕಿದೆ...." ಎನ್ನುತ್ತಾ ತನ್ನ ಕ್ಲೈಂಟ್ ಒಬ್ಬಳ ಬಗ್ಗೆ ತಿಳಿಸಿದ. ಆಕೆಯ ಹೆಣ್ಣು ಮಕ್ಕಳಿಗೆ ಬರುವ ಅಶ್ಲೀಲ ಪತ್ರಗಳ ಪತ್ತೇದಾರಿ ಕೆಲಸವನ್ನು ಮಾಡಿಯೇ ಇಲ್ಲ. ನನ್ನ ಲೇಡಿ ಅಸಿಸ್ಟೆಂಟ್ ಗೀತಾ ರಜದ ಮೇಲೆ ಇದಾಳೆ. ಇಂಥ ಸಂದರ್ಭದಲ್ಲಿ ಹೆಂಗಸರು ಹೋಗಿ ಮಾತನಾಡಬೇಕು.....ನೀನು ಹೋಗಿ ಮತಾಡಕ್ಕಾಗುತ್ತಾ?" ಅವಳ ಕಡೆ ತಿರುಗಿ ಕೇಳಿದ.

"ನಾನಾ? ನನಗೆ ಇಂಥಾ ಕೆಲಸಗಳನ್ನು ಹಚ್ಬೇಡ. ನನ್ನ ಅಪ್ಪ ಅಮ್ಮಂಗೆ ಗೊತ್ತಾದ್ರೆ ಮನೆಯಿಂದ ಆಚೆಗೆ ಓಡಿಸ್ತಾರೆ. ನಾನೆಲ್ಲಿಗೆ ಹೋಗ್ಲಿ?"

"ನಮ್ಮ ಮನೆಗೇ ಬಂದ್ಬಿಡು... ಅಮ್ಮಂಗೆ ಹೇಳ್ತೀನಿ."

"ಹೀಗೆ ಮನೆಯಿಂದ ತಳ್ಳಿಸ್ಕೊಂಡು ದಿಕ್ಕಿಲ್ಲದೋರ ಥರ ನಿನ್ನ ಮನೆಗೆ ಬಂದು ಸೇರೋಕೆ ನಂಗಿಷ್ಟವಿಲ್ಲ. ಮರ್ಯಾದೆಯಾಗಿ, ಶಾಸ್ತ್ರೋಕ್ತವಾಗಿ ಕೈ ಹಿಡಿದು ಕೊಂಡು ಕರ್ಕೊಂಡು ಹೋಗು. ಆಮೇಲೆ ನೀನು ಹೇಳಿದ ಹಾಗೆ ಕೇಳ್ತೀನಿ."

ಇಬ್ಬರೂ ಮನೆಯನ್ನು ತಲುಪಿದರು. ವತ್ಸಲಾ ಗಂಡನಿಗೆ ಊಟವನ್ನು ಕೊಟ್ಟು ಅದೇ ತಾನೇ ತನ್ನ ಊಟವನ್ನು ಮುಗಿಸಿದ್ದಳು. ಮಗನೊಡನೆ ಬಂದ ವಿನುತಳನ್ನು ಕಂಡು ಅವಳಿಗೆ ಖುಷಿಯಾಗಿತ್ತು.

"ವಿನುತಾ, ನಿನ್ನ ಆಂಟಿಯ ನೆನಪು ಈಗ ಬಂತಾ? ಯಾಕೆ ಈ ನಡುವೆ

ಬರೋದನ್ನೇ ಕಡಿಮೆ ಮಾಡಿಬಿಟ್ಟಿದ್ದೀಯ..." ಆಕ್ಷೇಪಣೆ ಮಾಡಿದಳು.

"ಅಮ್ಮಾ... ನಿಂಗೆ ಒಂದು ಹೊಸಾ ಸುದ್ದಿ ಗೊತ್ತಾ? ಇವಳ ಮದುವೆ ಸೆಟ್ಲ್ ಆಗಿದೆ. ಅದಕ್ಕೇ ಅವಳು ಎಲ್ಲಿಗೂ ಬರುತ್ತಿಲ್ಲ."

ವಿನುತಾ ಅವನ ಮೊಣಕೈ ತಿವಿದಳು. ವತ್ಸಲಾಳ ಮುಖ ಪೆಚ್ಚಾಗಿತ್ತು. ಮಗನ ಕಡೆ ಆಕ್ಷೇಪದ ನೋಟವನ್ನು ಬೀರಿದಳು.

"ತಮಾಷೆ ಮಾಡ್ತಿದಾನೆ ಆಂಟಿ, ಹಾಗೇನಿಲ್ಲ." ವಿನುತಾ ಸಂಕೋಚವನ್ನು ಪ್ರಕಟಿಸಿದಳು. ವತ್ಸಲಾಗೆ ಸಮಾಧಾನವೆನಿಸಿದರೂ, ನಿರಾಳವೆನಿಸಲಿಲ್ಲ.

"ಇಬ್ಬರೂ ಊಟಕ್ಕೆ ಏಳಿ, ಬಡಿಸ್ತೀನಿ." ಎನ್ನುತ್ತಾ ತಟ್ಟೆಗಳನ್ನು ಇಟ್ಟಳು. ಮುರಳೀ, ತಾಯಿಗೆ ಕಾಣದಂತೆ ವಿನುತಳ ಕೈ ಹಿಡಿದೆಳೆದು ಊಟದ ಮನೆಗೆ ಕರೆ ತಂದ. ಆಕೆ, ಅಡಿಗೆ ಪದಾರ್ಥಗಳನ್ನು ತಂದಿತ್ತಳು.

"ಅಮ್ಮಾ, ಅಡಿಗೆಯವರು ಕಾಣ್ತಿಲ್ಲ, ಬರ್ಲಿಲ್ವಾ?"

"ಇಲ್ಲ ಮುರಳೀ, ಆಕೆ ಯಾವುದೋ ಮದುವೆಗೆ ಹೋಗಿದಾರೆ. ಸಾಯಂಕಾಲಕ್ಕೆ ಬರ್ತಾರೆ. ಇವತ್ತು ನನ್ನದೇ ಅಡಿಗೆ." ಆಕೆ ಇಬ್ಬರಿಗೂ ಬಡಿಸಿದಳು.

"ವ್ಹಾ... ಅದಕ್ಕೇ ಇಷ್ಟು ಘಂ ಅಂತಿದೆ, ಹಸಿವು ಹೆಚ್ಚಾಗ್ತಿದೆ."

"ನಾನು ಬರ್ತಿದೀನಿ ಅಂತ ಆಂಟಿಗೆ ಗೊತ್ತಾಗಿದೆ. ಅದಕ್ಕೇ ಅವರೇ ಈ ಅಡಿಗೆಗಳನ್ನು ಮಾಡಿದಾರೆ." ವಿನುತಾ ಮುಗುಳ್ನಕ್ಕು ತಟ್ಟೆಗೆ ಕೈ ಹಾಕಿದಳು.

"ನೀನೂ ಈ ಅಡಿಗೆಗಳನ್ನು ಮಾಡೋದನ್ನು ಕಲಿತ್ಕೋ... ನಿನ್ನ ಗಂಡಂಗೆ ಬಹಳ ಖುಷಿಯಾಗುತ್ತೆ." ಮುರಳಿ ಅವಳ ಕಾಲಿಗೆ ತನ್ನ ಕಾಲನ್ನು ತಗುಲಿಸಿದ. ವಿನುತಾ ಕಣ್ಣು ಬಿಟ್ಟು ಹೆದರಿಸಿದಳು.

"ನಾನು ಕಲಿಸ್ಕೊಡ್ತೀನಿ ವಿನುತಾ....." ವತ್ಸಲಾ ನುಡಿದಳು.

"ವತ್ಸಲಾ..." ಗಂಡ ಕರೆದದ್ದು ಅವಳಿಗೆ ಕೇಳಿಸಿತ್ತು. " ನಿನ್ನ ಡ್ಯಾಡಿ ಕರೀತಿದಾರೆ. ನೀವಿಬ್ರೂ ಊಟ ಮಾಡಿ." ಅವಳು ರೂಮಿಗೆ ಹೊರಟು ಹೋದಳು. ಇವರಿಬ್ಬರೂ ಒಬ್ಬರಿಗೊಬ್ಬರು ಉಪಚಾರ ಮಾಡುತ್ತಾ ಊಟ ಮಾಡಿದರು. ವತ್ಸಲಾ ಮತ್ತೆ ಹಿಂದಿರುಗುವಷ್ಟರಲ್ಲಿ ಅವರಿಬ್ಬರ ಊಟ ಮುಗಿದಿತ್ತು.

"ಮುರಳೀ, ನಾನು ಒಂದು ಕಡೆಗೆ ಹೋಗ್ಬೇಕಾಗಿತ್ತು. ಅಡಿಗೆಯವರೂ ಇಲ್ಲ. ನೀನು ಆಫೀಸಿಗೆ ಹೋಗುವಾಗ, ನಾನು ಇವತ್ತು ಬರೋಕ್ಕಾಗಲ್ಲ ಅಂತ ಅವರಿಗೆ ಹೇಳಿಬಿಡ್ತೀಯಾ? ಅವರ ಮನೆಯಲ್ಲಿ ಫೋನು ಇಲ್ಲ."

"ನಾನು ಕರ್ಕೊಂಡು ಹೋಗಿ ಬಿಡ್ತೀನಮ್ಮ....."

"ಹಾಗಲ್ಲಪ್ಪ, ನರ್ಸು ಒಬ್ಬಳೇ ಇದಾಳೆ. ಅವಳೊಬ್ಬಳ ಮೇಲೇ ಇಡೀ ಮನೇನ ಹೇಗೆ ಬಿಟ್ಟು ಹೋಗೋದು?"

"ವಿನುತಾ ಇರ್ತಾಳೆ. ಇರ್ತೀಯಾ ಅಲ್ವಾ?" ಅವಳ ಕಡೆ ತಿರುಗಿ ಕೇಳಿದ.

"ಹೂಂ, ಇರ್ತೀನಿ ಆಂಟಿ... ಅದಕ್ಕೇನಂತೆ?"

"ಸುಮ್ನೇ ನಿಂಗ್ಯಾಕೆ ತೊಂದ್ರೆ ನಾನು ಇನ್ನೊಂದು ದಿನ ಹೋಗ್ತೀನಿ." ಅರ್ಜೆಂಟೇನೂ ಇಲ್ಲ.

"ನೀನು ಸುಮ್ನಿರಮ್ಮ. ಇವಳಿಗೆ ಬೇರೆ ಏನೂ ಕೆಲಸವಿಲ್ಲ. ಇರ್ತಾಳೆ. ಅಪ್ಪನ ಜೊತೆ ಮಾತಾಡ್ಬೇಡ ಅಷ್ಟೇ.....ಮನೇಲೇ ಇದ್ದೂ ಇದ್ದೂ ಅವರಿಗೆ ಕೋಪ ಜಾಸ್ತಿ ಆಗಿದೆ." ನಕ್ಕ.

"ನಾನ್ಯಾಕೆ ಮಾತಾಡ್ಲೀ?" ವ್ಯಯ್ಯಾರದಿಂದ ಕೇಳಿದಳು.

"ಹಾಲೋ, ನೀರೋ, ಕಾಫೀನೋ ಕೇಳಿದ್ರೆ ಕೊಡಬೇಕಾಗುತ್ತೆ... ಹೋಗ್ಲಿ ಬಿಡು." ನಾನು ಬೇಗ ಬಂದ್ಬಿಡ್ತೀನಿ.

"ಪರವಾಗಿಲ್ಲ ಆಂಟಿ. ನೀವು ಹೋಗ್ಬನ್ನಿ."

"ನನ್ನನ್ನು ಬಿಟ್ಬಿಟ್ಟು ಬಂದ್ಬಿಡು ಮುರಳಿ. ನಾನು ವಾಪಸ್ಸು ಬರುವಾಗ ಆಟೋದಲ್ಲಿ ಬರ್ತೀನಿ." ಎಂದು ಹೇಳಿ, ಹೊರಡಲು ಸಿದ್ಧಳಾದಳು.

"ಬೇಗ ಬಂದ್ಬಿಡ್ತೀನಿ. ಹೆದರ್ಬೇಡ." ಮುರಳಿ ನಕ್ಕು ನುಡಿದ. ಇಬ್ಬರೂ ಮನೆಯಿಂದ ಆಚೆ ಹೊರಟರು. ವಿನುತಾ ಒಂದು ಮ್ಯಾಗ್ಸೈನ್ ಹಿಡಿದು ಕುಳಿತಳು. ತೂಕಡಿಕೆ ಬಂದಂತಾಗಿತ್ತು. ಫೋನ್ ರಿಂಗಾಗಿತ್ತು. ಎಚ್ಚೆತ್ತಳು. ಫೋನ್ ಕಾಲ್‌ಗೆ ಉತ್ತರಿಸಿ ಪುರುಷೋತ್ತಮ್ ಮಲಗಿದ್ದ ರೂಮಿಗೆ ಬಂದಳು. ನರ್ಸ್ ಎದ್ದು ನಿಂತಳು.

"ಸಾರ್... ಯಾರೋ ಬಂದಿದಾರೆ... "

"ಯಾರು..." ಆತ ಕತ್ತು ತಿರುಗಿಸಿ ನೋಡಿ ಕೇಳಿದರು.

"ನಾನು... ವಿನುತಾ..."

"ವಿನುತಾ... ಯಾವ ವಿನುತಾ...?" ತನಗೇ ಕೇಳಿಕೊಂಡರು.

"ನಾನು ಅಂಕಲ್... ಸದಾನಂದನ ಮಗಳು... ಹೇಗಿದೀರಿ ಅಂಕಲ್?"

"ನೀನ್ಯಾವಾಗ ಬಂದೆ?" ದನಿ ಗಡುಸಾಗಿತ್ತು.

"ನಾನು ಆಗ್ಲೇ ಬಂದೆ. ಏನಾದ್ರೂ ಬೇಕಾ ಅಂತ ಕೇಳೋಕೆ ಬಂದೆ..."

"ಯಾಕೆ? ಮನೆಯವರೆಲ್ಲ ಎಲ್ಲಿ ಹೋಗಿದಾರೆ?" ದನಿ ಗಡುಸಾಗಿತ್ತು.

"ಅಡಿಗೆಯವರು ಬಂದಿಲ್ವಂತೆ. ಅರ್ಜೆಂಟಾಗಿ ಏನೋ ಬೇಕು ಅಂತ ಆಂಟಿ ಹೊರಗೆ ಹೋಗಿದಾರೆ. ಇನ್ನೇನು ಬರಬಹುದು."

"ಸರಿ. ನಂಗೆ ಸ್ವಲ್ಪ ಕಾಫಿ ಬೇಕಾಗಿತ್ತು. ಫ್ಲಾಸ್ಕಿನಲ್ಲಿರಬಹುದು. ಕಪ್‌ಗೆ ಹಾಕಿ ತಂದ್ಕೊಡು... ನರ್ಸ್ ಕುಡಿಸ್ತಾರೆ... " ವಿನುತಾ ಊಟದ ಮನೆಗೆ ಬಂದಳು.

ಕಪ್‌ಗೆ ಕಾಫಿಯನ್ನು ಬಗ್ಗಿಸಿಕೊಂಡು ಒಂದು ಟ್ರೇಯಲ್ಲಿಟ್ಟುಕೊಂಡು ಬಂದಳು. ನರ್ಸ್ ಕಾಫಿಯನ್ನು ಕುಡಿಸುವವರೆಗೂ ನಿಂತಿದ್ದು ಕಾಫಿಯ ಕಪ್‌ನ್ನೆತ್ತಿ ತೆಗೆದಿಟ್ಟಳು.

"ನಾನು ನಿಮ್ಹತ್ರ ಸ್ವಲ್ಪ ಮಾತಾಡ್ಬೇಕಾಗಿತ್ತು ಅಂಲ್...... ಪರ್ಸನಲ್ ವಿಷಯ."

"ಸರಿ ಹೇಳು. ಸಿಸ್ಟರ್ ನೀವು ಸ್ವಲ್ಪ ಹೊರಗೆ ಇರ್ತೀರಾ?" ಎಂದ. ನರ್ಸ್ ಹೋಗುವವರೆಗೂ ಕಾದಿದ್ದು, ಅವಳಿಗೆ ಕುಳಿತುಕೊಳ್ಳುವಂತೆ ಹೇಳಿದ. ಅವಳು ಕುಳಿತಳು.

"ಅಂಕಲ್, ನನ್ನ ಮದುವೆ ಗೊತ್ತಾಗಲಿದೆ. ಆದರೆ ಒಂದು ಸಣ್ಣ ಪ್ರಾಬ್ಲಂ."

"ಏನದು? ನಿಂಗೆ ಆ ಮದುವೆ ಇಷ್ಟವಿಲ್ವಾ? ನಿನ್ನ ವಯಸ್ಸೆಷ್ಟು?"

"ಹಿರಿಯರ ವಿರುದ್ಧ ನಾನು ಮದುವೆಯಾಗೋಕ್ಕೆ ಆಗುತ್ತಾ ಅಂಕಲ್? ಅದಲ್ಲ, ನನಗೆ ನೋಡಿರುವ ವರನಿಗೆ ತಾಯಿ ಮಾತ್ರ ಇದಾಳೆ. ತಂದೆ ಅವರಿಂದ ದೂರ ಇದಾರೆ. ಆದರೆ, ಅವರು ಎಲ್ಲಿದಾರೆ ಅಂತ ಎಲ್ಲರಿಗೂ ಗೊತ್ತು. ಅವರೂ ಬರುವ ಹಾಗೆ ಮಾಡ್ಬೇಕು."

"ಅದ್ಹೇಗಾಗುತ್ತೇ? ಡೈವೋರ್ಸ್ ಆಗಿದ್ದರೆ?"

"ಸರಿಯಾಗಿ ಗೊತ್ತಿಲ್ಲ. ವರನ ತಾಯಿ ಆ ಬಗ್ಗೆ ಮಾತನಾಡುವುದೇ ಇಲ್ಲ. ಅವರಿಗೆ ಬೇರೆ ಯಾವ ಬಂಧು-ಬಳಗವೂ ಇಲ್ಲ. ಮಗನ ಮದುವೆಯ ಸಮಯ ದಲ್ಲಾದರೂ, ತಂದೆ ಬರಲಿ ಅಂತ ಮಗ ಹಾಗೂ ಅವನ ಹೆಂಡತಿಯಾಗುವವಳು ಬಯಸಿದರೆ ಅದು ತಪ್ಪಾಗುತ್ತಾ?"

"ಆಸೆ ಪಡೋದ್ರಲ್ಲಿ ತಪ್ಪೇನಿಲ್ಲ... ನಿಮ್ಮ ತಂದೆ-ತಾಯಿ ಹೋಗಿ ಮಾತನಾಡಲಿ. ರಿಕ್ವೆಸ್ಟ್ ಮಾಡಿಕೊಳ್ಳಲಿ. ಬಂದರೂ ಬರಬಹುದು."

"ಈ ವಿಷಯದಲ್ಲಿ ಪೋಲೀಸರು ಸಹಾಯ ಮಾಡ್ತಾರಾ ಅಂಕಲ್?"

"ಇದು ಅವರ ಸ್ವಂತ ವಿಷಯ ಆಗುತ್ತೆ... ಪೋಲೀಸರು ಏನು ಮಾಡೋಕ್ಕಾಗುತ್ತೆ? ಯಾರವರು ಅಂತ ತಿಳ್ಕೊಂಡು ಹೇಳು. ನಿನಗೋಸ್ಕರ ನಾನು ಮಾತಾಡ್ತೀನಿ...."

"ಥ್ಯಾಂಕ್ಯೂ ಅಂಕಲ್..."

"ಅಂದ್ಹಾಗೇ ವರ ಯಾರು? ಇದೇ ಊರ್ನಲ್ಲಿದಾನಾ? ಏನು ಮಾಡ್ತಿದಾನೆ?"

"ಮಧುಸೂದನ ಅಂತ... ಬ್ಯಾಂಕ್ ಮ್ಯಾನೇಜರ್ ಆಗಿದಾನೆ..." ಕೇಳುತ್ತಾ ಕೇಳುತ್ತಾ ಅವನ ಮುಖ ವಿವರ್ಣವಾಯಿತು. ಆದರೂ ಮಾತನಾಡಿದ.

"ನಿಂಗೆ ಅವನು ಒಪ್ಗೆ ಇಲ್ದಿದ್ರೆ ಬಿಟ್ಟಿಡು. ಯಾರನ್ನೂ ಬಲವಂತವಾಗಿ ಕರೆಸೋಕ್ಕೆ ಆಗೋಲ್ಲ."

"ಈಗ್ತಾನೇ ಹೇಳಿದ್ರಿ... ಅವನ ತಂದೆ ಹತ್ರ ಮಾತಾಡ್ತೀನಿ ಅಂತ..."

"ನೋಡೋಣ... ಮೊದಲು ಮಧುಸೂದನನ ಹತ್ರ ಮಾತಾಡ್ತೀನಿ. ಒಂದ್ಸಾರಿ ಅವನನ್ನು ನಮ್ಮ ಮನೆಗೆ ಕರ್ಕೊಂಡು ಬಾ."

"ಥ್ಯಾಂಕ್ ಯೂ ಅಂಕಲ್.... ನನಗೆ ಈ ವಿಷಯದಲ್ಲಿ ಸಲಹೆಯನ್ನು ಕೊಟ್ಟಿದ್ದಕ್ಕೆ."

"ಪರವಾಗಿಲ್ಲ ಬಿಡಮ್ಮ. ಮದುವೆ ಯಾವಾಗ?"

"ಇನ್ನೂ ದಿನ ಗೊತ್ತಾಗಿಲ್ಲ. ಮಧುಸೂದನನ ತಾಯಿ ನಿಧಾನ ಮಾಡ್ತಿದಾರೆ... ಯಾಕೋ ಗೊತ್ತಿಲ್ಲ... ಬಹುಶಃ ಇದೇ ಕಾರಣ ಇರಬಹುದು."

"ಇರಬಹುದು. ಅವರು ಇರಲೇ ಬೇಕು ಅಂತ ಹಠ ಯಾಕೆ? ರಿಜಿಸ್ಟರ್ ಮದುವೆ ಆದರೆ ಆಗೋಲ್ವಾ?"

"ನಮ್ಮ ತಂದೆ ಸಂಪ್ರದಾಯಸ್ಥರು. ನಮ್ಮ ಕಡೆ ನೆಂಟರೆಲ್ಲಾ ಆಡ್ಕೋತಾರೆ ಅಂತ ನಮ್ಮ ತಂದೆಗೆ ಹಿಂಜರಿಕೆ."

"ಮಧುಸೂದನನೇ ಆಗ್ಬೇಕು ಅಂತೇನಿಲ್ವಲ್ಲ. ಬೇರೆ ಯಾರನ್ನಾದ್ರೂ ನೋಡಲಿ."

"ಇಲ್ಲ ಸಾರ್. ನಮ್ಮ ತಂದೆ ಈಗಾಗ್ಲೇ ಬೇಕಾದಷ್ಟು ವರಗಳನ್ನು ನೋಡಿ ಬೇಸತ್ತಿದ್ದಾರೆ. ಮಧುಸೂದನ ಒಪ್ಪಿದಾರೆ... ಆದರೆ ಈ ಪ್ರಾಬ್ಲಂ... ನಾನೊಂಥರಾ ಇಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದು ಬಿಟ್ಟಿದೀನಿ."

"ಎಲ್ಲಾದಕ್ಕೂ ಒಂದು ಉಪಾಯ ಇದ್ದೇ ಇರುತ್ತೆ. ನೀನು ಧೈರ್ಯವಾಗಿರು. ನಿನ್ನನ್ನು ನೋಡಿದ್ರೆ ಧೈರ್ಯಶಾಲಿಯ ಹಾಗೆ ಕಾಣ್ತೀಯ." ಆತ ಹೊಗಳಿದಾಗ ಇವಳು ಮುದಗೊಂಡಳು.

ಮಾತು ಮುಗಿಯುವಷ್ಟರಲ್ಲಿ ಮುರಳಿ ಹಾಗೂ ವತ್ಸಲಾ ಹಿಂತಿರುಗಿದ್ದರು. ವಿನುತಾ ಉತ್ಸಾಹದಲ್ಲಿರುವುದನ್ನು ಮುರಳಿ ಗಮನಿಸಿದ. ಏನು ಅನ್ನುವಂತೆ ಸಂಜ್ಞೆ ಮಾಡಿ ಪ್ರಶ್ನಿಸಿದ. ಅವಳು ಬರಿದೇ ನಕ್ಕಳು. ಫ್ಲಾಸ್ಕಿನಲ್ಲಿದ್ದ ಕಾಫಿಯನ್ನು ಮುರಳಿ ವಿನುತಳಿಗೂ ಬಗ್ಗಿಸಿಕೊಟ್ಟ, ತಾನೂ ಕುಡಿದ.

"ಅಮ್ಮ, ವಿನುತನ್ನ ಮನೆಗೆ ಬಿಟ್ಟು ಹಾಗೇ ಆಫೀಸಿಗೆ ಹೋಗ್ತೀನಿ." ಎಂದು ಹೇಳಿ ಅವಳೊಡನೆ ಹೊರಟ.

* * *

"ಹೇಳ್ದೇ ಕೇಳ್ದೇ ಎಲ್ಲಿಗೆ ಹೊರಟು ಹೋಗಿದ್ದೆ ವತ್ಸಲಾ?" ಗಂಡನ ಆಕ್ಷೇಪಣೆಗೆ ಅವಳು ಮುಖ ಸಿಂಡರಿಸಲಿಲ್ಲ.

"ಅರ್ಚಕರ ಮನೆಗೆ ಹೋಗಿದ್ದೆ... ನಿಮ್ಮ ಹೆಸರಿನಲ್ಲಿ ಮನೇಲಿ ಒಂದು ನವಗ್ರಹ ಶಾಂತಿಯನ್ನು ಮಾಡಿಸೋಕ್ಕೆ ದಿನವನ್ನು ಗೊತ್ತು ಮಾಡಿಕೊಂಡು

ಬಂದೆ."

"ನನಗೆ ಈ ಪೂಜೆ ಪುನಸ್ಕಾರಗಳಲ್ಲಿ ನಂಬಿಕೆ ಇಲ್ಲ ಅಂತ ನಿಂಗೆ ಗೊತ್ತಲ್ವಾ? ಅದೆಲ್ಲಾ ಯಾಕೆ?"

"ನನಗೆ ನಂಬಿಕೆ ಇದೆ. ಆಕ್ಸಿಡೆಂಟ್‌ನಿಂದ ಪಾರಾಗಿದೀರ. ಒಂದು ಗ್ರಹಶಾಂತಿ ಮಾಡಿಸ್ಲೇಬೇಕು. ನೀವು ಬೇಡ ಎನ್ಬೇಡಿ."

"ಸರಿ ನಿನ್ನಿಷ್ಟ. ಹಾಗೇ ಮುರಳಿಗೆ ಗುರುಬಲ ಯಾವಾಗ ಬರುತ್ತೆ, ಮದುವೆ ಯಾವಾಗ ಮಾಡೋಣ ಅಂತ ಕೇಳ್ಬೇಕಾಗಿತ್ತು." ನಕ್ಕ.

"ನೀವು ಗೇಲಿ ಮಾಡ್ಬೇಡಿ. ಅವನಿಗೆ ಹೆಣ್ಣುಗಳನ್ನೇ ನೋಡಿಲ್ಲವಲ್ಲ."

"ನಾನು ಒಂದು ಹುಡ್ಗೀನ ನೋಡಿದೀನಿ... ನಿನಗೆ ಆ ಹುಡ್ಗಿ ಇಷ್ಟ ಆಗ್ತಾಳೆ. ಆದರೆ ಮುರಳಿಗೆ ಹೇಗೋ ನಂಗೆ ತಿಳೀದು."

"ಹುಡ್ಗಿ ಯಾರು?" ಕುತೂಹಲವನ್ನು ತಡೆಯಲಾಗದೇ ಕೇಳಿದಳು.

"ವಿನುತಾ... ಸದಾನಂದ ರಾಯರ ಮಗಳು."

"ಯಾರು? ನಮ್ಮ ವಿನುತಾನಾ?"

"ಓ... ಆಗ್ಲೇ ಅವಳು ನಿಮ್ಮ ವಿನುತಾ ಆಗಿಬಿಟ್ಲಾ... ನಿಂಗೆ ಒಪ್ಪಿಗೆ ತಾನೇ?"

"ನನ್ನ ಮನಸ್ಸಿನ ಮಾತನ್ನೇ ನೀವು ಹೇಳಿದ್ರಿ... ಚಿಕ್ಕ ವಯಸ್ಸಿನಲ್ಲಿ ಅವಳು ಮನೆಗೆ ಬರುತ್ತಿರುವಾಗ ನಿಮಗೆ ಅವಳನ್ನು ಕಂಡರೇ ಆಗ್ತಿರ್ಲಿಲ್ಲ... ಈಗ?"

"ಈಗ ನಾನು ಬದಲಾಗಿದೀನಿ... ಅವರ ಮನೆಗೆ ವಿಷಯವನ್ನು ತಿಳಿಸ್ಬೇಕಲ್ಲ."

"ಮೊದಲು ಮುರಳಿಯ ಹತ್ತಿರ ಮಾತಾಡ್ತೀನಿ. ಅವನ ಮನಸ್ನಲ್ಲಿ ಏನಿದೆಯೋ?"

"ಮುರಳೀ ಹತ್ತಿರ ನಾನೇ ಮಾತಾಡ್ತೀನಿ. ಕರೀ ಅವನನ್ನ."

"ಅವನು ಆಫೀಸ್ಗೆ ವಾಪಸ್ಸು ಹೊರಟು ಹೋದ. ವಿನುತನೂ ಅವನ ಜತೇಲಿ ಹೋದ್ಲು."

"ಹಾಗಿದ್ರೆ ಅವನಿಗೂ ಅವಳು ಇಷ್ಟ ಆಗ್ತಾಳೆ... ಆದಷ್ಟು ಬೇಗ ಲಗ್ನಪತ್ರಿಕೆಯನ್ನು ಮುಗಿಸಿಬಿಡೋಣ."

"ಅವಾಂತರ ಯಾಕೆ? ಮೊದಲು ನೀವು ಓಡಾಡುವಂತಾಗಲಿ."

"ನನಗೇನಾಗಿದೆ? ಮನೆಗೆ ಬೇಗ ಬಾ ಅಂತ ಮುರಳಿಗೆ ಫೋನ್ ಮಾಡು."

"ಆಯ್ತು. ಹಾಗೇ ಮಾಡ್ತೀನಿ... ಆದರೆ ವಿನುತನ್ನ ನೀವು ನಿಜವಾಗಿಯೂ ಮೆಚ್ಚಿಕೊಂಡಿದೀರಾ? ತಮಾಷೆ ಮಾಡ್ತಿಲ್ಲ ತಾನೆ? ಅದ್ಹೇಗೆ ಯಾಕೆ ಅಂತ ಅಂತ ಯೋಚಿಸ್ತಿದ್ದೆ."

"ಹೆಚ್ಚು ಯೋಚಿಸ್ಬೇಡ. ಬಿ.ಪಿ. ಏರುತ್ತೆ. ನೀನು ಒಂಟಿಯಾಗಿ ಸದಾ

ಇರ್ತೀಯಲ್ಲ. ನಿಂಗೋಸ್ಕರ ಸೊಸೇನ ಗೊತ್ತು ಮಾಡಿದೀನಿ. ವಿನುತ ನಿನ್ನ ಅಚ್ಚುಮೆಚ್ಚು ಅಂತ ನಂಗೆ ಗೊತ್ತು."

"ಅವರು ಸಂಪ್ರದಾಯಸ್ಥರು. ನಾವು ಬೇರೆ ಪಂಗಡದವರು. ಅವರಿಗೆ ಇಷ್ಟ ಆಗುತ್ತೋ ಇಲ್ವೋ?"

"ಆಗುತ್ತೆ, ಅಗ್ದೇ ಏನು? ನಾನು ಪೋಲೀಸ್ ಆಧಿಕಾರಿ. ನನ್ನ ಯೂನಿಫಾರಂಗೆ ಅವರು ಹೆದರಿ, ಗೌರವವನ್ನು ಕೊಡಲೇಬೇಕು. ಅಲ್ಲದೇ ನಾವು ಮೊದಲ್ನಿಂದ ಪರಿಚಯ ಇರೊರು... ಆದಷ್ಟು ಬೇಗ ಅವರ ಹತ್ರ ಮಾತಾಡ್ಬೇಕು... ಬೇರೆ ಕಡೆ ಎಲ್ಲಾದ್ರೂ ಗೊತ್ತು ಮಾಡ್ಕೊಂಡಾರು."

"ನಾನು ಈಗ್ಲೇ ಮುರಳಿ ಹತ್ರ ಮಾತಾಡ್ತೀನಿ."

"ಬೇಡ, ಸದ್ಯಕ್ಕೆ ಸಸ್ಪೆನ್ಸ್ ಇರಲಿ. ಮನೆಗೆ ಬೇಗ ಬಾ ಅಂತ ಹೇಳು. ನಾನೇ ಮಾತಾಡ್ತೀನಿ."

ವತ್ಸಲಾ ಮಂದಹಾಸವನ್ನು ಬೀರಿ ರೂಮಿನಿಂದ ಹೊರಬಂದಳು.

* * *

"ಡ್ಯಾಡ್ ನನ್ಹತ್ರ ಮಾತಾಡ್ಬೇಕು ಅಂತಂದ್ರಂತೆ, ಏನು ವಿಷಯ?"

"ಕೂತ್ಕೋ... ನೀನು ನಿನ್ನ ಆ ಆಫೀಸನ್ನು ಮುಚ್ಚಿ, ನಮ್ಮ ಡಿಪಾರ್ಟ್‌ಮೆಂಟ್‌ಗೆ ಸೇರ್ಕೋ... ನಾನು ಶಿಫಾರಸ್ಸು ಮಾಡ್ತೀನಿ."

"ಯಾಕೇ ಡ್ಯಾಡ್... ನಾನು ಖುಷಿಯಾಗಿದೀನಲ್ಲ...?"

"ಏನೋ ತಮಾಷೆಯಾಗಿರುತ್ತೆ ಅಂತ, ಇದುವರೆಗೂ ಸುಮ್ಮನಿದ್ದೆ... ಇನ್ನು ನೀನು ಸೆಟ್ಲ್ ಆಗ್ಬೇಕು.....ಗೌರ್ನಮೆಂಟ್ ಕೆಲಸ ಇದು... ಎಲ್ಲಾ ಅನುಕೂಲತೆಗಳೂ ಸಿಗುತ್ತೆ... ಈಗ ಹಾಗಿಲ್ಲ .... ಡಿಟೆಕ್ಟಿವ್ ಏಜೆಂಟ್ ಅಂತಂದ್ರೆ ನಿಂಗೆ ಯಾರೂ ಹೆಣ್ಣು ಕೊಡಲ್ಲ."

"ಮದುವೇನೇ ಬೇಡ. ಹೀಗೇ ಇದ್ದು ಬಿಡ್ತೀನಿ."

"ನಿಮ್ಮಮ್ಮನ ಬಗ್ಗೆ ಯೋಚಿಸು. ನಿನಗೂ ಸಂಗಾತಿ ಬೇಕು ಅಂತ ಅನ್ನೋಲ್ವಾ?"

"ಸಂಗಾತಿ ಬೇಕು ಅಂತ ದಿಢೀರನೇ ಮದುವೆ ಆಗೋಕ್ಕೆ ಸಾಧ್ಯನಾ ಡ್ಯಾಡ್... ಕೆಲವು ಕಮಿಟ್‌ಮೆಂಟ್ಸ್‌ಗಳಿವೆ.... ಕೆಲವು ಕೇಸ್‌ಗಳು ಪೆಂಡಿಂಗ್ ಇವೆ."

"ಎಷ್ಟು ಕೇಸ್‌ಗಳು, ಯಾವ ಕೇಸ್‌ಗಳು ಅನ್ನೋ ವಿವರಗಳನ್ನು ಕೊಡು. ನಾನೂ ನಿಂಗೆ ಹೆಲ್ಪ್ ಮಾಡ್ತೀನಿ. ಮನೇಲೇ ಇದ್ದೂ ಇದ್ದೂ ಬೋರ್ ಅನ್ನಿಸ್ತಿದೆ."

"ನೀವು? ನೀವು ಹೆಲ್ಪ್ ಮಾಡ್ತೀರಾ?" ನಕ್ಕ.

"ಯಾಕೆ...? ನಮ್ಮ ಇಲಾಖೇಲಿ ನನಗೆ ಸರ್ವೀಸ್ ಆಗಿಲ್ವಾ? ಕೇಸ್ ವಿಷಯ

ತಿಳೀತಿದ್ದ ಹಾಗೇ ಹೇಗೆ ಸಾಲ್ವ್ ಮಾಡ್ಬೇಕು ಅಂತ ಸ್ಕೆಚ್ ಹಾಕ್ತೀನಿ."

"ಓ... ಕೇ... ಹೇಳ್ತೀನಿ. ಇದನ್ನು ಹೇಳೋಕ್ಕೆ ಬೇಗ ಬಾ ಅಂತ ಅಂದ್ರಾ?"

"ಹಾಗೇ ನಿನ್ನ ಮದುವೆ ವಿಷಯಾನ ಮಾತಾಡ್ಬೇಕು ಅಂತ. ನಾನು ನಿನಗೆ ಅಂತ ಒಬ್ಬ ಹುಡುಗೀನ ಸೆಲೆಕ್ಟ್ ಮಾಡಿದೀನಿ..." ಉತ್ಸಾಹದಿಂದ ಹೇಳಿದ.

"ನಿಮ್ಮ ಎಕ್ಸೈಟ್‌ಮೆಂಟ್ ನೋಡಿದ್ರೆ ನಂಗಿಂತ ನೀವೇ ಹೆಚ್ಚು ಖುಷಿ ಯಾಗಿದೀರಿ..."

"ಹೌದು, ಹುಡ್ಗಿ ಯಾರು ಅಂತ ಕೇಳೋಲ್ವಾ? ನಿನಗೆ ಇಷ್ಟವಾಗದಿದ್ರೆ?"

"ಪರವಾಗಿಲ್ಲ ಹೇಳಿ......ನೋಡೋಣ?"

"ವಿನುತಾ... ಸದಾನಂದರಾಯರ ಮಗಳು!"

"ಯಾರು... ? ವಿನುತಾನಾ...?" ಎದ್ದು ನಿಂತು ಕೇಳಿದ. ಒಳಗೊಳಗೇ ಖುಷಿಯಾಗ್ತಿತ್ತು. ಆದರೆ ತೋರ್ಪಡಿಸಿಕೊಳ್ಳಲಿಲ್ಲ. ತಂದೆ ತನ್ನು ಪರೀಕ್ಷೆ ಮಾಡುತ್ತಿರಬಹುದೇ ಎಂಬ ಅನುಮಾನ ಸಹ ಕಾಡಿತ್ತು.

"ಹೂಂ, ಆ ವಿನುತಾನೇ... ಯಾಕೆ? ಅವಳು ನಿಂಗೆ ಇಷ್ಟವಿಲ್ವಾ?"

"ಅವಳ ಇಷ್ಟ ಏನೂಂತ ಗೊತ್ತಿಲ್ವಲ್ಲಾ ಡ್ಯಾಡ್... ಅವಳಿಗೆ ಮದುವೆ ಗೊತ್ತಾಗುವ ಹಾಗಿದೆ... ಅದನ್ನು ತಪ್ಪಿಸೋಕ್ಕೆ ನೋಡ್ತಿದೀರಾ?" ಬೇಕಂತ ಬಿರುಸಾಗಿ ಕೇಳಿದ.

"ಲಗ್ನಪತ್ರಿಕೆ ಶಾಸ್ತ್ರ ಆಗಿದ್ದರೆ ತಪ್ಪಿಸೋದು ಬೇಡ... ಇಲ್ಲದಿದ್ರೆ ನೋಡಬಹುದು."

"ಮದುವೆಗೆ ನಂಗೆ ಅವಸರವಿಲ್ಲ ಡ್ಯಾಡ್... ಆದರೆ ವಿನುತಳ ತಂದೆ-ತಾಯಿ ಅವಸರದಲ್ಲಿದ್ದಾರೆ. ಹುಡುಗ ಮಧುಸೂದನ ಅಂತ... ಬ್ಯಾಂಕ್ ಮ್ಯಾನೇಜರ್..."

"ಯಾರು, ಅವತ್ತು ನನಗೆ ಆಕ್ಸಿಡೆಂಟ್ ಆದ ದಿನ ನನ್ನನ್ನು ಭೇಟಿಯಾಗ್ಬೇಕು ಅಂತ ಇದ್ನಲ್ಲ. ಅವನೇ ತಾನೇ?"

"ಹೌದು. ಅವನು ಮತ್ತೆ ನಿಮ್ಮನ್ನು ಭೇಟಿಯಾಗ್ಬೇಕು ಅಂತ ಅಂದ್ಕೊಂಡಿದಾನೆ."

"ಯಾಕಂತೆ? ನಿನಗೆ ಅವನ ಪರಿಚಯ ಹೇಗಾಯ್ತು?"

"ಅವನು, ಕಳೆದು ಹೋಗಿರುವ ಅವನ ತಂದೆಯನ್ನು ಪತ್ತೆ ಹಚ್ಬೇಕು ಅಂತ ಕೇಳ್ಕೊಂಡು ಬಂದಿದ್ದ... ನಾನು ನಿಮ್ಮ ಬಳಿ ಹೇಳಿದೆ... ನಿಮಗೂ ಗೊತ್ತಲ್ಲ... ಹಾಗೇ ಇನ್ನು ಒಂದು ವಿಷಯ ಇದೆ. ಅವನ ತಾಯಿ ಮಂಜುಳಾ ಅನ್ನೋರು, ನನ್ನ ಆಫೀಸಿಗೆ ಎರಡು ಸಾರಿ ಬಂದಿದ್ರು... ಸ್ವಲ್ಪ ಜಂಭದ ಹೆಂಗಸು."

"ಯಾಕೆ ಬಂದಿದ್ಲು?" ತಟ್ಟನೆ ಕೇಳಿದ.

"ಅವಳಿಗೆ ವಿನುತಾ ಇಷ್ಟವಿಲ್ಲ. ಅವಳ ಬಗ್ಗೆ ಏನಾದ್ರೂ ಮುಕಾರು ಇದೆಯಾ

ಅಂತ ವಿಚಾರಿಸುವ ನೆವದಲ್ಲಿ ಮದುವೇನ ನಿಧಾನ ಮಾಡ್ಬೇಕು ಅಂತ ಅವಳ ಆಸೆ. ಮಧುಸೂದನ ಅವಳನ್ನು ಮದುವೆಯಾಗೋದು ಇಷ್ಟವಿಲ್ಲ. ಅದಕ್ಕೇ ಬಂದಿದ್ಲು."

"ಅವಳು ಇವಳು ಅಂತ ಅನ್ಬೇಡ ಮುರಳಿ. ಗೌರವ ಕೊಡು... ನಿನ್ನ ತಾಯಿಗೆ ಆದಷ್ಟೇ ವಯಸ್ಸಾಗಿದೆ ಅವಳಿಗೆ...." ಮುರಳಿ ಪೆಚ್ಚಾದ. ಕೆಲವು ಕ್ಷಣ ಬಿಟ್ಟು ನುಡಿದ.

"ಎಸ್.... ನಿಮಗೆ ಅವರ ಪರಿಚಯವಿದೆ. ಅವರು ಆಸ್ಪತ್ರೆಗೆ ನಿಮ್ಮನ್ನು ನೋಡಲು ಬಂದಿದ್ದರು. ಅದಕ್ಕೆ ಮೊದಲು, ಮೊದಲ ಬಾರಿ ನನ್ನ ಆಫೀಸಿಗೆ ಬಂದಾಗ, 'ನಿನ್ನ ತಂದೆಯ ಹೆಸರೇನು' ಅಂತ ಎರಡೆರಡು ಬಾರಿ ವಿಚಾರಿಸಿದ್ದರು" ಎಂದು ಹೇಳಿ ತಂದೆಯ ಮುಖವನ್ನೇ ಅವಲೋಕಿಸಿದ. ಅವನ ಮುಖ ವಿವರ್ಣವಾಗಿತ್ತು.

"ನೀನೇನ್ಹೇಳ್ದೆ.... " ನಿಧಾನಿಸಿ ಕೇಳಿದ.

"ನಾನು ಹೇಳ್ಲಿಲ್ಲ. ನನ್ನ ಪ್ರೊಫೆಷನ್‌ಗೂ, ನನ್ನ ತಂದೆಯ ಹೆಸರಿಗೂ ಏನೂ ಸಂಬಂಧವಿಲ್ಲ ಅಂತ ನೇರವಾಗಿ ಹೇಳಿಬಿಟ್ಟೆ."

"ಒಳ್ಳೆಯ ಕೆಲಸವನ್ನೇ ಮಾಡಿದೆ ಬಿಡು..."

"ಆದರೆ, ಆಮೇಲೆ ಮತ್ತೊಮ್ಮೆ ಬಂದಿದ್ದಾಗ, 'ಪುರುಷೋತ್ತಮನೇ ನಿನ್ನ ತಂದೆ ಅಂತ ನನಗೆ ಯಾಕೆ ಹೇಳಲಿಲ್ಲ?' ಅಂತ ಜೋರು ಮಾಡಿದರು."

"ಅವಳ ಸ್ವಭಾವವೇ ಹಾಗೇ..."

"ಅಂದರೇ... ನಿಮಗೆ ಅವರ ಪರಿಚಯ ಮೊದಲ್ನಿಂದ್ಲೂ ಇದೆ ಅಂತಾಯ್ತು." ಆತ ಕಣ್ಣುಗಳನ್ನು ಮುಚ್ಚಿಕೊಂಡರು.

"ಹೌದು. ನನ್ನ ಅವಳ ಪರಿಚಯ ತುಂಬಾ ಹಳೆಯದು. ಅವಳು ನನ್ನ ಸ್ನೇಹಿತ ನಿರಂಜನನ ಹೆಂಡತಿ. ನಾವು ಮೂವರೂ ಒಟ್ಟಿಗೇ ಕಾಲೇಜಿನಲ್ಲಿ ಓದುತ್ತಿದ್ದೆವು. ನಾವಿಬ್ಬರೂ ಅವಳನ್ನು ಪ್ರೀತಿಸಿದೆವು. ಆದರೆ ಅವಳನ್ನು ಅವನು ಮದುವೆಯಾದ. ಅವರಿಬ್ಬರ ಮದುವೆ ತಂದೆ-ತಾಯಿಗೆ ಇಷ್ಟವಿರಲಿಲ್ಲ. ಅವರು ಭಾರೀ ಶ್ರೀಮಂತರು. ಬಡವರ ಮನೆಯ ಹುಡುಗಿಯನ್ನು ಸ್ವೀಕರಿಸಲಿಲ್ಲ... ನಾವಿಬ್ಬರೂ ಈ ಇಲಾಖೆಗೆ ಸೇರಿಕೊಂಡೆವು.

ಕೆಲವು ವರ್ಷಗಳು ಕಳೆದವು... ನಂತರ ನಾನು ವತ್ಸಲಾಳನ್ನು ಮದುವೆಯಾದೆ. ಅದೇ ವರ್ಷ, ನಿರಂಜನ ಪೋಲೀಸ್ ಫೈರಿಂಗ್‌ಗೆ ಬಲಿಯಾದ. ಮಂಜುಳಾ ವಿಧವೆಯಾದಳು. ಅವಳ ಜವಾಬ್ದಾರಿಯನ್ನು ನಾನು ವಹಿಸಿಕೊಂಡೆ. ವತ್ಸಲಾ ಜೊಡನೆ ನನ್ನ ಮದುವೆ ಆಗಿಲ್ಲದೇ ಇದ್ದಿದ್ದರೆ, ನಾನು ಅವಳನ್ನು ಮರು

ಮದುವೆಯಾಗಿರುತ್ತಿದ್ದೆ. ಆದರೆ ಅದು ಈಗ ಸಾಧ್ಯವಿರಲಿಲ್ಲ. ಆದರೆ ಅವಳು ಆಗಾಗ್ಗೆ ಮದುವೆಯಾಗು ಅಂತ ಪೀಡಿಸುತ್ತಿದ್ದಳು.

ಈ ಸಮಯದಲ್ಲಿ ವತ್ಸಲಾ ತಾಯಿಯಾಗುವವಳಿದ್ದಳು. ಈ ವಿಷಯ ಮಂಜುಳಳಿಗೆ ತಿಳಿದು ತಾನೂ ತಾಯಿಯಾಗಬೇಕೆಂದು ಬಯಸಿದಳು. ಆದರೆ ಅದು ನನಗೆ ಸಮ್ಮತವಿರಲಿಲ್ಲ. ಆದರೆ ಮಂಜುಳಾ ಬೆದರಿಕೆ ಹಾಕಲು ಪ್ರಾರಂಭಿಸಿದ್ದಳು. ಅವಳನ್ನು ಮದುವೆಯಾಗಿ, ಅವಳಿಗೆ ಒಂದು ಮಗುವಾಗುವಂತೆ ಆಗದಿದ್ದರೆ, ನನ್ನ ಕೆರಿಯರ್‌ಗೆ ತೊಂದರೆ ತರುವುದಾಗಿಯೂ ತನ್ನ ಬಗ್ಗೆ ಅಪಪ್ರಚಾರ ಮಾಡುವುದಾಗಿಯೂ ಹೆದರಿಸಲಾರಂಭಿಸಿದಳು.

ನನ್ನ ಕೆರಿಯರ್‌ನ್ನು ಹಾಳು ಮಾಡಿಕೊಳ್ಳಲು ನಾನು ಸಿದ್ಧನಿರಲಿಲ್ಲ. ಆದರೆ ಅವಳ ಬೇಡಿಕೆಗೆ ಒಪ್ಪುವುದೂ ಸಾಧ್ಯವಿರಲಿಲ್ಲ. ಆ ಸಮಯದಲ್ಲಿ ನನಗೆ ಹೊಳೆದ ಉಪಾಯ ಒಂದೇ. ವತ್ಸಲಾಳಿಗೆ ಹುಟ್ಟುವ ಮಗುವನ್ನು ಅವಳಿಗೆ ಕೊಟ್ಟು ಬಿಡುವುದು. ಇದಕ್ಕೆ ವತ್ಸಲಾಳನ್ನು ಒಪ್ಪಿಸಬೇಕೆಂದುಕೊಂಡೆ.

ಸ್ಕ್ರೀನ್ ಟೆಸ್ಟ್ ನಂತರ ವತ್ಸಲಾಳ ಗರ್ಭದಲ್ಲಿ ಅವಳಿ ಮಕ್ಕಳು ಬೆಳೆಯುತ್ತಿರುವುದು ತಿಳಿಯಿತು. ಈ ವಿಷಯವನ್ನು ಮಂಜುಳಳಿಗೆ ತಿಳಿಸಿ, ಅವಳಿಗೆ ಒಂದು ಮಗುವನ್ನು ಕೊಡುವುದಾಗಿ ಹೇಳಿ ಅವಳನ್ನು ಒಪ್ಪಿಸಿದೆ..."

"ಇದು ಅಮ್ಮಂಗೆ ನೀವು ಮಾಡಿದ ದ್ರೋಹ ಅಲ್ವಾ ಡ್ಯಾಡ್..."

"ಹೌದು, ಆದರೆ ಆ ಸಮಯದಲ್ಲಿ ನನಗೆ ನನ್ನ ಕೆರಿಯರ್ ಬಗ್ಗೆ ಹೆಚ್ಚು ಚಿಂತೆ ಇತ್ತು. ನನ್ನ ಜೀವನವನ್ನು ಹಾಳು ಮಾಡಿಕೊಳ್ಳುವುದು ನನಗೆ ಬೇಕಿರಲಿಲ್ಲ."

"ಹಾಗಾದ್ರೆ ಅಮ್ಮನಿಗೆ ಈ ವಿಷಯ ತಿಳೀಯಲೇ ಇಲ್ವಾ?"

"ಅವಳಿ ಮಕ್ಕಳು ಬೆಳೆಯುತ್ತಿವೆ ಅಂತ ತಿಳಿದಿತ್ತು. ಆದರೆ ಆ ರಿಪೋರ್ಟ್‌ನ್ನು ಸುಳ್ಳು ಮಾಡಿಸಿದೆ. ಅವಳನ್ನು ಬಾಣಂತನಕ್ಕೆ ಊರಿಗೆ ಕಳಿಸದೆ, ನನಗೆ ಪರಿಚಿತ ಡಾಕ್ಟರ್‌ರ ನರ್ಸಿಂಗ್ ಹೋಂನಲ್ಲೇ ಡೆಲಿವರಿಯಾಗುವಂತೆ ಸಿದ್ಧತೆಗಳನ್ನು ಮಾಡಿಸಿದೆ. ನನ್ನ ಕೆರಿಯರ್‌ಗಾಗಿ ಸುಳ್ಳು ಹೇಳಿದೆ... ಒಂದು ಮಗುವನ್ನು ನಿನ್ನ ಅಮ್ಮನಿಂದ ದೂರ ಮಾಡಿದೆ."

"ಇದು ದ್ರೋಹ ಅಲ್ವಾ ಡ್ಯಾಡೀ?"

"ಹೌದು ಆದರೆ ಹೀಗೆ ಮಾಡದೇ ಇದ್ದಿದ್ದರೆ, ನಾನು ಈ ಮಟ್ಟಕ್ಕೆ ಬರುತ್ತಿರಲಿಲ್ಲ. ನನ್ನ ಜೀವನವನ್ನು ಮಂಜುಳಾ ಹಾಳು ಮಾಡಿರುತ್ತಿದ್ದಳು."

"ಪೋಲೀಸ್ ಅಧಿಕಾರಿಯಾಗಿ, ನೀವು ಆಕೆಗೆ ಹೆದರಬಾರದಾಗಿತ್ತು."

"ಹೆದರಬೇಕಾದ ಅನಿವಾರ್ಯತೆ ಬಂದು ಒದಗಿತ್ತು ಮುರಳೀ..." ಆತ ತಲೆತಗ್ಗಿಸಿದಾಗ, ಅವನಿಗೆ ಕೆಲವು ವಿಷಯಗಳು ಅರ್ಥವಾಗಿತ್ತು. ತಂದೆಯ ಬಗ್ಗೆ

ಅಸಹನೆಯೂ ಮೂಡಿತು. ಆದರೆ ಕಾಲ ಮಿಂಚಿ ಹೋಗಿತ್ತು. ತನ್ನ ಪತ್ತೇದಾರಿಕೆಯ ವೃತ್ತಿಯಲ್ಲಿ ಇಂಥ ಪರಿಸ್ಥಿತಿಗಳ ಬಗ್ಗೆ ಅರಿವಾಗುತ್ತಿತ್ತು; ಸುಮ್ಮನಾದ.

"ಈ ವಿಷಯಗಳು ಇದುವರೆಗೂ ಗೌಪ್ಯವಾಗಿ ಉಳಿದಿತ್ತು ಮುರಳೀ. ಮಂಜುಳಾ ನನ್ನ ಕೋರಿಕೆಯ ಮೇರೆಗೆ, ಮಗುವನ್ನು ಕರೆದುಕೊಂಡು, ಬೇರೆ ಊರಿಗೆ ಹೊರಟು ಹೋಗಿದ್ದಳು. ನಾನು ಮತ್ತೆಂದೂ ಅವಳ ಬಗ್ಗೆ ಯೋಚಿಸಿರಲಿಲ್ಲ, ವಿಚಾರಿಸಲಿಲ್ಲ. ಅವಳು ಇದೇ ಊರಿನಲ್ಲಿ ಮಗನೊಂದಿಗೆ ಇದ್ದಾಳೆ ಎಂದು ತಿಳಿದದ್ದೇ ಇತ್ತೀಚೆಗೆ."

"ನಿಮಗೆ ಯಾವ ರಿಗ್ರೆಟ್ಸ್ ಇಲ್ವಾ ಡ್ಯಾಡೀ..."

"ಇಲ್ಲ ಅಂತ ಹೇಳಲಾರೆ. ಆದರೆ ಅದನ್ನೇ ಕುರಿತು ಯೋಚಿಸಲು ಸಮಯ ವಿರಲಿಲ್ಲ. ನಿನ್ನ ತಾಯಿ ಇನ್ನೊಂದು ಮಗುವಿಗಾಗಿ ಹಂಬಲಿಸಿದಾಗ, ನನಗೆ ಸ್ವಲ್ಪ ಮಟ್ಟಿಗೆ ಇವೆಲ್ಲವೂ ನೆನಪಾಗುತ್ತಿತ್ತು. ಆದರೆ ನಾನು ನನ್ನ ಹೃದಯವನ್ನು ಕಠಿಣ ಮಾಡಿಕೊಂಡಿದ್ದೆ."

"ಹಿಂದೆಂದೂ ಮಂಜುಳಾಳಿಂದ ನಿಮಗೆ ಯಾವ ತೊಂದರೆಯೂ ಬಂದಿರಲಿಲ್ಲ. ಮತ್ಯಾಕೆ ಈಗ ಆತಂಕ? ಬಹುಶಃ ನಿಮಗೆ ಆಕ್ಸಿಡೆಂಟ್ ಆಗಲು ಇದೇ ಕಾರಣ..."

"ಇರಲೂಬಹುದು. ಈಗ ನಿನ್ನ ತನಿಖೆಯಿಂದ, ನಿನಗೆ ವಿಷಯ ತಿಳಿದಿದೆ. ಏನು ಮಾಡ್ಬೇಕು ಅಂತ ನೀನೇ ಹೇಳು?"

"ನಾನೇನು ಹೇಳ್ಲೀ? ಈ ವಿಷಯಗಳು ಅಮ್ಮನಿಗೆ ತಿಳಿದರೆ ಅವಳ ನೆಮ್ಮದಿ ಕೆಡುವುದಂತೂ ನಿಜ..."

"ನನ್ನ ಮೇಲಿನ ಗೌರವವೂ ಹೊರಟು ಹೋಗುತ್ತೆ. ಅದನ್ನು ನಾನು ಕಳೆದುಕೊಳ್ಳಲು ಸಿದ್ಧನಿಲ್ಲ."

"ಹಾಗಾದ್ರೆ ನಾನೇನು ಮಾಡ್ಬೇಕು ಅಂತ ನೀವೇ ಹೇಳಿ..."

"ಮಧುಗೆ ಈ ವಿಷಯವನ್ನು ತಿಳಿಸಿ, ಅವನು ತನ್ನ ತಾಯಿಯೊಂದಿಗೆ ಬೇರೆ ಎಲ್ಲಿಗಾದರೂ ಹೊರಟು ಹೋಗುವಂತೆ ತಿಳಿಸು."

"ನಾನ್ಹೇಗೆ ತಿಳಿಸಲಿ? ಇದು ಅಧಿಕ ಪ್ರಸಂಗವಾಗುತ್ತೆ..."

"ಹೇಗೂ ಮಂಜುಳಾ ವಿನುತಳ ಬಗ್ಗೆ, ಮಧು ನನ್ನ ಬಗ್ಗೆ ತಿಳಿದುಕೊಳ್ಳಲು ನಿನ್ನ ಆಫೀಸಿಗೆ ಬಂದಿದ್ರು ಅಲ್ಲವೇ?"

"ಇದು ಸರಿ ಹೋಗುತ್ತೆ ಅಂತ ಹೇಗೆ ಹೇಳೋದು... ಮಂಜುಳಾ ಮತ್ತೆ ಏನಾದ್ರೂ ಬೆದರಿಕೆ ಹಾಕಿದ್ರೆ?"

"ಅವಳಿಗೂ ಭಯ ಇರುತ್ತೆ. ಮಧುವಿನಿಂದ ದೂರ ಉಳಿಯಲು ಅವಳಿಂದ

ಹೇಗೆ ಸಾಧ್ಯ ಆಗುತ್ತೆ?"

"ಹಾಗಾದ್ರೆ ಈ ವಿಷಯ ಕುರಿತು ನೀವೇ ಅವರೊಡನೆ ಮಾತನಾಡಿ. ನಾನೇ ನಿಮ್ಮನ್ನು ಅವರ ಮನೆಗೆ ಕರ್ಕೊಂಡು ಹೋಗ್ತೀನಿ." ಎಂದು ಹೇಳಿ ಹೊರಬಂದ. ತಾಯಿಯ ಮೇಲಿನ ಅನುಕಂಪ ಹೆಚ್ಚಾಗಿತ್ತು... ಆದರೆ ತಂದೆಗೆ ಏನು ಶಿಕ್ಷೆ ಕೊಡಿಸಬಲ್ಲ?"

"ಮಧುಸೂದನ್, ನಾನು ನಿಮ್ಮ ಹತ್ರ ಮುಖ್ಯವಾದ ವಿಷಯವೊಂದನ್ನು ಮಾತಾಡ್ಬೇಕು, ಬರೋಕೆ ಆಗುತ್ತಾ?" ಎಂದು ಕೇಳಿದ್ದ. ಅವನು ಒಪ್ಪಿಕೊಂಡಿದ್ದ. ಮುರಳಿ ಅವನಿಗಾಗಿ ಕಾಯುತ್ತಾ ಕುಳಿತಿದ್ದ.

ಮಧು ಅವನ ಛೇಂಬರ್‌ನೊಳಕ್ಕೆ ಬರುತ್ತಿದ್ದಂತೆ ಅವನನ್ನೇ ಆಳವಾಗಿ ದಿಟ್ಟಿಸಿದ. ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನೇ ನೋಡಿಕೊಂಡಂತೆ ಅನ್ನಿಸಿತು. ಹೆಮ್ಮೆಯೂ ಮೂಡಿತು. ವಿಷಾದವೂ ತೋರಿತು. 'ಅಪ್ಪ ಯಾಕೆ ಹೀಗೆ ಮಾಡ ಬೇಕಾಗಿತ್ತು?' ಮಂಜುಳ ಕೆಟ್ಟ ಹೆಂಗಸು ಎಂಬ ನಿರ್ಣಯಕ್ಕೆ ಬಂದ.

"ಹಲೋ... ಬನ್ನಿ ಕೂತ್ಕೊಳ್ಳಿ" ಆತ್ಮೀಯವಾಗಿ ಕರೆದು, ಕೂರಲು ಹೇಳಿದ. ಮಧುಸೂದನ ಅವನನ್ನೇ ಸಂಶಯದಿಂದ ನೋಡಿದ. "ಸಾರೀ ನಿಮಗೆ ತೊಂದರೆ ಆಯ್ತೇನೋ... ಆದರೆ ಮಾತನಾಡಲೇಬೇಕಾಗಿತ್ತು."

"ಪರವಾಗಿಲ್ಲ ಮಾತಾಡಿ ಮುರಳಿ.... ನಿಮ್ಮ ವೃತ್ತಿ ಇದೇ ಅಲ್ವೇ?"

"ನಾನು ಈ ಏಜೆನ್ಸೀನ ಕ್ಲೋಸ್ ಮಾಡಿಬಿಡೋಣ ಅಂತಂದ್ಕೊಂಡಿದೀನಿ."

"ಅದು ನಿಮ್ಮಿಷ್ಟ. ನಾನೇನು ಹೇಳ್ಲಿ?"

"ನನ್ನ ಬಗ್ಗೆ, ನನ್ನ ತಂದೆಯ ಬಗ್ಗೆ, ನಿಮ್ಮ ತಾಯಿಯ ಬಗ್ಗೆ ನಿಮಗೆ ಏನನ್ನಿಸುತ್ತೆ?"

"ಏನನ್ನಿಸ್ಬೇಕು?"

"ಮುಗ್ಧರಾಗ್ಬೇಡಿ ಮಧು... ನಿಮಗೆ ಎಲ್ಲಾ ತಿಳಿದಿದೆ ಅಂತ ನಿಮ್ಮ ಮುಖನೇ ಹೇಳ್ತಿದೆ. ಪುರುಷೋತ್ತಮ ಮಾಡಿದ್ದು ಸರಿ ಎನಿಸುತ್ತಾ ನಿಮಗೆ?"

"ನಿಮಗೇನನ್ನಿಸುತ್ತೆ?"

"ಅವರು ಮಾಡಿದ್ದು ಖಂಡಿತಾ ಸರಿಯಲ್ಲ. ಇದಕ್ಕೆ ಕಾರಣವೂ ಇದೆ. ಆದರೆ ಈ ವಿಷಯ ನನ್ನ ತಾಯಿಗೆ ತಿಳಿದರೆ ಅವರ ಎದೆ ಒಡೆದು ಹೋಗುತ್ತೆ..."

" ಮಂಜುಳಾ ನನ್ನ ಸಾಕುತಾಯೀನಾ?" ಮಧು ಪ್ರಶ್ನಿಸಿದ.

"ಹೂಂ ಹೌದು. ಇದು ನಿಜ. ಇದನ್ನು ನಾನು ಪತ್ತೆ ಹಚ್ಚಿದೆ... ಈಗ ಇದು ರಹಸ್ಯವಾಗಿ ಉಳಿಯಬೇಕಾ, ಬೇಡವಾ ನಾವುಗಳು ಯೋಚಿಸ್ಬೇಕು..."

"ಅಮ್ಮ ನಂಗೆ ಈ ವಿಷಯವನ್ನು ತಿಳಿಸಲಿಲ್ವಲ್ಲಾ?"

"ಅವರಿಗೆ ನೀವೆಲ್ಲಿ ದೂರವಾಗ್ತೀರೋ ಅಂತ ಭಯ..."

"ಭಯ ಸಹಜ, ಮುರಳಿ ಈಗ ನಾನೇನು ಮಾಡ್ಲೀ?"

"ನಿಮಗೆ ನಿಮ್ಮ ತಾಯಿ ಮಂಜುಳನ್ನ ಬಿಟ್ಟು ನಮ್ಮ ಮನೆಗೆ ಬಂದು ಇರಲು ಸಾಧ್ಯ ಆಗುತ್ತಾ ಯೋಚಿಸಿ?"

"ಅದು ನೈತಿಕತೆ ಅಲ್ಲ. ಅವರು ನನ್ನ ಸಾಕು ತಾಯಿ. ಅಲ್ಲದೇ......"

"ಹಾಗಾದರೆ ನಿಮ್ಮನ್ನು ಹೆತ್ತ ತಾಯಿಯ ಬಗ್ಗೆ ನಿಮಗೆ ಏನೂ ಅನ್ನಿಸೋದಿಲ್ವಾ?"

"ಈಗ ಏನು ಅನ್ನಿಸಿದರೆ, ಏನು ಪ್ರಯೋಜನ...? ನನಗೆ ತಿಳುವಳಿಕೆ ಬಂದಾಗ್ನಿಂದ ನಾನು ಮಂಜುಳಾರನ್ನೇ ಅಮ್ಮ ಅಂತ ಭಾವಿಸಿ ಬೆಳೆದೋನು, ಈಗ ಬದಲಾಗಲು ಸಾಧ್ಯನಾ? ಇವೆಲ್ಲಾ ನಿಮ್ಮ ತಂದೆಯ ತಪ್ಪು."

"ಈ ತಪ್ಪಿನಲ್ಲಿ ನಿಮ್ಮ ತಾಯಿಯದೂ ಸಮಪಾಲಿದೆ... ನನ್ನ ತಂದೆ, ನಿಮ್ಮ ತಾಯಿಯೊಡನೆ ಮಾತಾಡಬೇಕೆಂದು ಕೂಂಡಿದಾರೆ. ನಾನು ಕರೆದ್ಕೊಂಡು ಬರ್ತಿದೀನಿ. ಈ ವಿಷಯ ನಿಮಗೆ ತಿಳಿದಿರಲಿ ಅಂತ ನಿಮಗೆ ಹೇಳಿದೀನಿ....."

"ಈಗ ಏನು ಉಳಿದಿದೆ? ಈಗ ಏನು ಸ್ಕೀಂ ಅಂತೆ? ನೀವೆಲ್ಲಾ ಒಂದೇ ಜಾತಿಗೆ ಸೇರಿದವರು...."

"ನೀವೂ ಇದೇ ಜಾತಿಗೆ ಸೇರಿದವರು ಅನ್ನೋದು ನೆನಪಿರಲಿ ಮಧುಸೂದನ್."

"ಹಾಗಿಲ್ಲದೇ ಇದ್ದಿದ್ದರೆ ಚೆನ್ನಾಗಿತ್ತು... ಅಥವಾ ಈ ರಹಸ್ಯ ರಹಸ್ಯವಾಗಿಯೇ ಉಳಿದಿದ್ದರೆ ಚೆನ್ನಾಗಿತ್ತು."

"ಈಗಲೂ ಈ ರಹಸ್ಯವನ್ನು ಹಾಗೇ ಕಾಪಾಡಿಕೊಂಡು ಬಂದರಾಯ್ತು. ಅದೇ ವಿಷಯವನ್ನು ಮಾತನಾಡಲು ನಮ್ಮ ತಂದೆ ನಿಮ್ಮ ಮನೆಗೆ ಬರಬೇಕು ಅಂತಂದುಕೊಂಡಿದ್ದಾರೆ."

"ಅಗತ್ಯವಿಲ್ಲ. ಸದ್ಯದಲ್ಲೇ ನಾನು ಟ್ರಾನ್ಸ್‌ಫರ್ ತೆಗೆದುಕೊಂಡು ಈ ಊರ್ನಿಂದ ಹೊರಟು ಹೋಗ್ತಿದೀನಿ. ಹಾಗಂತ ಆ ಮಹಾಶಯರಿಗೆ ಹೇಳಿ, ಸಾಕು."

"ಹಾಗೆ ಮಾಡ್ಬೇಡಿ ಮಧು. ಹೇಡಿಗಳಂತೆ ಹೆದರಿ ಹೋಗುವುದೇಕೆ... ಏನು ಬರುತ್ತೋ ಹೇಗೆ ಬರುತ್ತೋ ಹಾಗೇ ಎದುರಿಸೋಣ."

"ನಿಮಗೆ, ನಿಮ್ಮ ತಂದೆಗೆ ಸಾಧ್ಯವಿರಬಹುದು... ಇದೆಲ್ಲಾ ನನ್ನ ಕೈಲಿ ಸಾಧ್ಯವಿಲ್ಲ." ಮಧು ಎದ್ದ.

"ಕೂತ್ಕೊಳ್ಳಿ ಮಧು. ಇದುವರೆಗೂ ನಿಮ್ಮನ್ನು ಬೇರೆ ರೀತಿಯಲ್ಲಿ ನೋಡಿದ್ದೆ. ಈಗ ಸೋದರನ ಭಾವನೆ ನನಗೆ ಬಂದು ಬಿಟ್ಟಿದೆ. ಸದ್ಯದಲ್ಲೇ ನನ್ನ ಮದುವೆ ನಿಶ್ಚಯವಾಗಲಿದೆ. ನೀವುಗಳು ಮನೆಯವರಂತೆ ಓಡಾಡಬೇಕು. ಇದು ನನ್ನ

ಆಸೆ."

"ಸಾರೀ ಮುರಳೀ, ಈ ಭಾವನೆ ನನಗೆ ಬರಲು ಸಾಧ್ಯವಿಲ್ಲ......ನಮ್ಮ ಪಾಡಿಗೆ ನಮ್ಮನ್ನು ಬಿಡಿ.... ದೂರವಾಗಿಯೇ ಇರ್ತೀವಿ. ಹತ್ತಿರವಾಗಲು ಸಾಧ್ಯವಿಲ್ಲ."

"ಅಂದರೇ.... ನಿಮಗೆ ನಿಮ್ಮ ತಂದೆಯ ಮೇಲೆ ಅಷ್ಟು ಕೋಪ. ನನಗೂ ನಿಮ್ಮ ತಾಯಿಯ ಮೇಲೆ ಕೋಪ ಇದೆ... ಆದರೆ ಅವರು ನನ್ನ ಆಫೀಸಿಗೆ ವಿನುತಳ ಬಗ್ಗೆ ಮಾಹಿತಿಯನ್ನು ಕಲೆಕ್ಟ್ ಮಾಡಲು ಬರದೇ ಇದ್ದಿದ್ದರೆ... ಈ ರಹಸ್ಯ ಬಹುಶಃ ರಹಸ್ಯವಾಗಿಯೇ ಉಳಿದಿರುತ್ತಿತ್ತೇನೋ..."

"ಏನು ಅಮ್ಮಾ.... ವಿನುತಳ ಬಗ್ಗೆ ಪತ್ತೇದಾರಿ ಮಾಡಿಸಿದಳಾ?"

"ಹೂಂ... ಬಹುಶಃ ಅವರಿಗೆ ನನ್ನ–ವಿನುತಳ ಬಗ್ಗೆ ಅನುಮಾನ ಮೂಡಿರಲೂ ಬಹುದು."

"ಈಗ ಅಮ್ಮ ನಮ್ಮಿಬ್ಬರ ಮದುವೆಗೆ ಒಪ್ಪಿಗೆ ಕೊಟ್ಟಿದಾಳಲ್ಲ..."

"ಏನು? ಅವರಿಗೆ ವಿನುತ ಒಪ್ಪಿಗೆ ಆದ್ಲಾ? ನಿಜವಾಗಿಯೂ? ಈಗ ಯಾಕೆ ಈ ನಿರ್ಧಾರ?"

"ಹೌದು. ಆದರೆ ನನಗೇ ಇಷ್ಟವಿಲ್ಲ... ವಿನುತ ನನ್ನನ್ನು ಒಪ್ಪಿಲ್ಲವಲ್ಲ."

"ಹಾಗಾದ್ರೆ ನಾನು ವಿನುತಾನ್ನ ಮದುವೆಯಾದ್ರೆ ನಿಮಗೆ ಏನೂ ಅನ್ನಿಸೋಲ್ಲ ತಾನೇ?"

"ನನಗೇನನ್ನಿಸುತ್ತೆ? ವಿನುತಾ ಪ್ರೀತಿಸೋದು ನಿಮ್ಮನ್ನೇ... ಆದರೆ ಈ ವಿಷಯವನ್ನು ನಿಮ್ಮ ತಂದೆಯೊಡನೆ ಮಾತನಾಡುವ ಧೈರ್ಯ ಬಂತಾ?"

"ನೀವು ಮಾತಾಡ್ತೀರಾ ಮಧು......ಪ್ಲೀಸ್."

"ಇಲ್ಲ, ನನಗೂ ಇದಕ್ಕೂ ಯಾವ ಸಂಬಂಧವಿಲ್ಲ."

"ಹಾಗಾದ್ರೆ, ನನ್ನನ್ನು ನಿಮ್ಮ ಸ್ನೇಹಿತ ಅಂತ ಕೂಡಾ ಭಾವಿಸೋಲ್ವಾ?" ಮಧುಸೂದನ ಉತ್ತರಿಸಲಿಲ್ಲ. ಮುರಳಿ ಒಳಗೊಳಗೇ ನಕ್ಕೊಂಡ...

"ನಾನಿನ್ನು ಬರ್ತೀನಿ." ಮಧುಸೂದನ ಎದ್ದಾಗ ಮುರಳಿ ತಡೆಯಲಿಲ್ಲ. ಹೊರಡುವ ಮೊದಲು ಮತ್ತೆ ಹೇಳಿದ. "ನಿಮ್ಮ ತಂದೆ ನನ್ನ ಮನೆಗೆ ಬರುವ ಅಗತ್ಯವಿಲ್ಲ. ಹಾಗಂತ ಹೇಳಿಬಿಡಿ... ನಮ್ಮ ಪಾಡಿಗೆ ನಮ್ಮನ್ನು ಇರಲು ಬಿಡುವಂತೆ ಹೇಳಿಬಿಡಿ." ಒರಟಾಗಿ ಹೇಳಿದ.

ಮುರಳಿ ನಕ್ಕ. "ಮ್ಯಾನೇಜರ್ ಸಾಹೇಬ್ರೇ... ನಿಮ್ಮ ಕಸ್ಟಮರ್ಸ್ ಹತ್ರ ನಯವಾಗಿ ಬೆಣ್ಣೇಲಿ ಕೂದಲು ಹಿರಿಯುವಂತೆ ಮಾತಾಡುವ ಅಭ್ಯಾಸ ಉಳ್ಳವರು ನೀವು... ನನ್ನಂತೆ ಒರಟಾಗಿ ಮಾತಾಡ್ತೀರಲ್ಲ."

"ಬಹುಶಃ ಸಹವಾಸ ದೋಷ..."

"ಅಲ್ಲ, ರಕ್ತ ಸಂಬಂಧ... ಅದೆಲ್ಲಿ ಹೋಗುತ್ತೆ! ಪುರುಷೋತ್ತಮನ ನೆರಳಲ್ಲಿ ಬೆಳೆದಿದ್ದರೆ ಬಹುಶಃ ನೀವೂ ಹೀಗೆ ಒರಟಾಗಿರ್ತಿದ್ರೋ ಏನೋ?" ಮತ್ತೆ ನಕ್ಕ. ಮಧುಸೂದನ ಒಣ ನೋಟವನ್ನು ಬೀರಿ ಹೊರ ನಡೆದ.

* * *

"ಅಮ್ಮಾ... ಆಂಟಿ ಬಂದಿದಾರೆ." ವಿನುತಾ ಹೇಳಿದಾಗ ಸುಜಾತ, ಅಡಿಗೆ ಮನೆಯಿಂದ ಹೊರಬಂದಳು. ಮನೆಯೊಳಕ್ಕೆ ಆಗಲೇ ಬಂದಿದ್ದ ವತ್ಸಲಾ ಮುಗುಳ್ನ ಕ್ಕಳು.

"ಹೇಗಿದೀರಿ ಸುಜಾತಾ.... ತುಂಬಾ ದಿನಗಳಾದವು ನಿಮ್ಮನ್ನು ನೋಡಿ, ಬನ್ನಿ ಕೂತ್ಕೊಳ್ಳಿ." ಸ್ಮಜಾತಾ ಆಕೆಯನ್ನು ಒಳಕ್ಕೆ ಕರೆದಳು. ಅಷ್ಟರಲ್ಲಿ ಮುರಳಿಯೂ ಒಳಗೆ ಬಂದಿದ್ದ. ಅವನ ಕೈಯಲ್ಲಿ ಹೂವು ಹಣ್ಣಿನ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳಿದ್ದವು.

"ಅಂಕಲ್ ಇಲ್ವಾ?" ಮುರಳಿ ಕೇಳಿದ.

"ಇಲ್ಲೇ ಎಲ್ಲೋ ಹೋಗಿದಾರೆ, ಬರ್ತಾರೆ... ನಿಮ್ಮ ಯಜಮಾನ್ರು ಈಗ ಹೇಗಿದಾರೆ? ಆಕ್ಸಿಡೆಂಟ್ ಆಗಿತ್ತಂತಲ್ಲ..." ವಿಚಾರಿಸಿದಳು.

"ಹೂಂ, ರಿಕವರ್ ಆಗ್ತಾ ಇದಾರೆ. ಬೆನ್ನು ನೋವು ಸ್ವಲ್ಪ ಇದೆ. ಟ್ರೀಟ್‌ಮೆಂಟ್ ನಡೀತಿದೆ... ನಾವು ಒಂದು ವಿಷಯವನ್ನು ಪ್ರಸ್ತಾಪ ಮಾಡೋಕ್ಕೆ ಬಂದಿದೀವಿ." ಅಲ್ಲಿಯೇ ಇದ್ದ ವಿನುತಳ ಎದೆ ಢವಗುಟ್ಟಿತು. ಮುರಳಿಯ ಕಡೆ ನೋಡಿದಳು. ಅವನು ನಸುನಕ್ಕ. "ವಿನುತ ನಮಗೆಲ್ಲರಿಗೂ ಹಿಡಿಸಿದ್ದಾಳೆ... ಅವಳನ್ನು ನಮ್ಮ ಮನೆಯ ಸೊಸೆಯನ್ನಾಗಿ ಮಾಡ್ಕೋಳ್ಬೇಕು ಅಂತ. ಮುರಳಿನ ನೀವು ಮೊದಲ್ನಿಂದ ನೋಡಿಯೇ ಇದ್ದೀರಿ. ನಿಮ್ಮ ಅಭಿಪ್ರಾಯವನ್ನು ತಿಳಿಸಿ."

ಸುಜಾತ ಕಕ್ಕಾಬಿಕ್ಕಿಯಾದಳು. ಆದರೂ ನುಡಿದಳು, "ಈಚೆಗೆ ಮುರಳೀನ ನೋಡಿರ್ಲೇ ಇಲ್ಲ. ಆಗ್ಲಿ ವಿಚಾರ ಮಾಡ್ತೀನಿ."

"ನಿಧಾನ ಮಾಡ್ಬೇಡಿ... ಆದಷ್ಟು ಬೇಗ ಮದುವೆ ಮಾಡ್ಬೇಕು ಅಂತ ನಮ್ಮಾಸೆ."

"ಆಗ್ಲೀ... ನಮ್ಮವರು, ವಿನುತಾ... ಎಲ್ಲರೂ ಯೋಚನೆ ಮಾಡಿ ತಿಳಿಸ್ತೀವಿ."

"ವಿನುತನ್ನ ನಾನೇ ವಿಚಾರಿಸ್ತೀನಿ. ಏನಮ್ಮಾ ವಿನುತಾ, ನಿನಗೆ ನಮ್ಮ ಮುರಳೀ ಒಪ್ಗೇನಾ?" ಅಲ್ಲಿಯೇ ಇದ್ದವಳನ್ನು ಕೇಳಿದಳು. ವಿನುತಾ ಮಂದಹಾಸ ಬೀರಿದಳು.

"ಹೀಗೆ ಹೇಳ್ತೀನಿ ಅಂತ ತಪ್ಪು ತಿಳ್ಕೋಬೇಡಿ. ಈಗಾಗ್ಲೇ ಒಬ್ಬ ವರನನ್ನು ಗೊತ್ತು ಮಾಡಿದೀವಿ. ಸದ್ಯದಲ್ಲೇ ಲಗ್ನಪತ್ರಿಕೆ ಶಾಸ್ತ್ರ ಕೂಡಾ ಆಗಲಿದೆ."

"ಹೌದಾ? ವಿನುತಾ ಹೇಳಲೇ ಇಲ್ಲವಲ್ಲ..." ವತ್ಸಲಾ ಪೆಚ್ಚಾಗಿದ್ದಳು. ಮಗನ ಕಡೆ ನೋಡಿದಳು. ಅವನು ಸುಮ್ಮನಿರು ಎನ್ನುವಂತೆ ಸಂಜ್ಞೆ ಮಾಡಿದ. ಅಷ್ಟರಲ್ಲಿ

ಸದಾನಂದರೂ ಬಂದರು. ಮತ್ತೆ ನಮಸ್ಕಾರ ಪ್ರತಿ ನಮಸ್ಕಾರಗಳಾದವು.

"ಏನು? ಬಹಳ ಅಪರೂಪ ದರ್ಶನ? ಈ ರಸ್ತೆಯಿಂದ ಬೇರೆ ಕಡೆಗೆ ಹೋದ್ಮೇಲೆ ಮರೆತೇ ಹೋದಂತಾಗಿತ್ತು. ಟಿ.ವೀಲಿ ಪುರುಷೋತ್ತಮರಿಗೆ ಆಕ್ಸಿಡೆಂಟ್ ಆದ ವಿಷಯ ಬಂದಿತ್ತು. ಈಗ ಹೇಗಿದಾರೆ?"

"ಈಗ ಹುಷಾರಾಗಿದಾರೆ... ಮುರಳಿಗೆ ಮದುವೆ ಮಾಡುವ ಆಲೋಚನೆಯಲ್ಲಿ ಇದೀವಿ... ನಿಮ್ಮ ವಿನುತನ್ನ ನಮ್ಮ ಮನೆಗೆ ಕೇಳೋಣ ಅಂತ ಬಂದಿದೀನಿ."

ಸದಾನಂದ ತಟ್ಟನೆ ಹೆಂಡತಿಯ ಕಡೆ ನೋಡಿದ. "ನೀವು ಮುರಳೀನ ನೋಡಿದೀರಿ... ನಮ್ಮ ಮನೆಯ ವಿಷಯ ಎಲ್ಲಾ ಗೊತ್ತೇ ಇದೆ. ಆದಷ್ಟು ಬೇಗ ಮದುವೆ ನೆರವೇರಿದರೆ ಒಳ್ಳೇದು ಅನ್ನುವ ಆಸೆಯಿಂದ ಬಂದಿದೀನಿ."

ಸದಾನಂದ ಅಚ್ಚರಿಯಿಂದ ಮೂಕನಂತೆ ನೋಡಿದ.

"ನಿಮಗೆ ಈ ಆಲೋಚನೆ ಇದೆ ಅಂತ ನಮಗೆ ಗೊತ್ತಿರಲೇ ಇಲ್ಲ. ಇಲ್ದಿದ್ರೆ ನಾನೇ ವಿಚಾರಿಸ್ತಿದ್ದೆ. ನಿಮ್ಮ ಅಂತಸ್ತೇನು... ನಮ್ಮ ಅಂತಸ್ತೇನು?"

"ಅಂತಸ್ತು, ಅಂತರ ಯಾವುದೂ ಇಲ್ಲ. ಆದರೆ ಈಗಾಗ್ಲೇ ವರ ಗೊತ್ತಾಗಿದೆ ಅಂತ ಸುಜಾತಾ ಹೇಳ್ತಿದ್ರು..."

"ಹೂಂ... ಒಂಥರಾ ಅರ್ಥದಲ್ಲಿ ಗೊತ್ತಾಗಿದೆ. ಆದರೆ ಹುಡುಗನ ತಾಯಿ ಏಕೋ ಮೀನಾಮೇಷ ಎಣಿಸ್ತಿದಾರೆ... ಹುಡುಗ ಸ್ವಲ್ಪ ನಾಜೂಕು. ತಾಯಿಯ ವಿರುದ್ಧ ಮಾತಾಡಲಿಲ್ಲ... ಇಲ್ದಿದ್ರೆ ಇಷ್ಟು ಹೊತ್ತಿಗೆ ಲಗ್ನ ಪತ್ರಿಕೆ ಆಗಿ ಹೋಗ್ತಿರ್ತಿತ್ತು."

"ಗೊತ್ತಾಗಿರುವ ಮದುವೆಯನ್ನು ತಪ್ಪಿಸುವ ಆಸೆ ನಮಗಿಲ್ಲ. ಋಣಾನುಬಂಧ ಇಲ್ಲ ಅಂತ ಅಂದ್ಕೋತೀನಿ... ನಾವಿನ್ನು ಬರ್ತೀವಿ."

"ಅಯ್ಯೋ ಅಪರೂಪಕ್ಕೆ ಬಂದಿದೀರಿ. ಕಾಫಿ ತಿಂಡಿ ತಗೊಳ್ದೇ ಹೇಗೆ ಹೋಗ್ತೀರಿ?" ಸದಾನಂದ ಹೆಂಡತಿಯ ಕಡೆ ನೋಡಿದ. ಸುಜಾತಾ ಅಡಿಗೆಮನೆಯ ಕಡೆಗೆ ನಡೆದಳು. ಅವಳ ಹಿಂದೆಯೇ ಸದಾನಂದ ಒಳಗೆ ಹೋದ. ಮುರಳಿ ವಿನುತಳ ಕಡೆ ಅರ್ಥಗರ್ಭಿತವಾಗಿ ನೋಡಿ ನಸುನಕ್ಕ.

ಕೆಲವೇ ನಿಮಿಷಗಳಲ್ಲಿ ಕಾಫಿಯನ್ನು ಬಿಸ್ಕತ್ತನ್ನು ತಂದಿತ್ತರು. ಮೌನವಾಗಿ ಕಾಫಿಯನ್ನು ಕುಡಿದು, ಅರಿಶಿನ ಕುಂಕುಮವನ್ನಿಟ್ಟುಕೊಂಡು ವತ್ಸಲಾ ಎದ್ದಳು. ಮುರಳಿ ಅವಳನ್ನು ಅನುಸರಿಸಿದ. ಹೂವು ಹಣ್ಣಿನ ಚೀಲಗಳು, ಟೀಪಾಯ್ ಮೇಲೆ ವಿರಾಜಿಸುತ್ತಿದ್ದವು. ವಿನುತ ಅವುಗಳನ್ನೇ ನೋಡುತ್ತಾ ಹಾಗೇ ಕುಳಿತಳು.

ಅವರಿಬ್ಬರನ್ನೂ ಕಾರಿನ ತನಕ ಬೀಳ್ಕೊಟ್ಟು, ಸದಾನಂದ, ಸುಜಾತ ಮಗಳ ಕಡೆ ನೋಡಿದರು. "ಏನೇ ಏನೂ... ಈಗ ಏನ್ಮಾಡೋದೇ... ಈಗ ಇದು ತಾನಾಗಿಯೇ ಕೂಡಿ ಬರುತ್ತಿರುವ ಸಂಬಂಧ... ಅವರೋ ಇದುವರೆಗೂ ಸರಿಯಾಗಿ

ಉತ್ತರವನ್ನೇ ಹೇಳಿಲ್ಲ."

"ನನ್ನನ್ನೇನಮ್ಮ ಕೇಳ್ತೀಯ. ಬೇಡ ಅಂದ್ರೂ ಆ ಸಂಬಂಧವನ್ನು ನೋಡಿದವರು ನೀವೇ... ನೀವೇ ಉತ್ತರ ಹೇಳ್ಕೊಳ್ಳಿ."

"ನಿನಗೆ ಮುರಳಿ ಒಪ್ಗೇನೋ? ಮಧು ಒಪ್ಗೇನೋ?"

"ನನಗೆ ಮುರಳಿ ತಾಯಿ ಇಷ್ಟ... ಮಂಜುಳಾ ಏನೇನೂ ಇಷ್ಟವಿಲ್ಲ."

"ಅದಲ್ಲ. ಮುರಳಿ ಮಧು ನೋಡೋಕೆ ಹೆಚ್ಚು ಕಡಿಮೆ ಒಂದೇ ತರಹ ಇದಾರೆ. ಆದರೆ ಅವನಿಗೆ ಬ್ಯಾಂಕಿನಲ್ಲಿ ಕೆಲಸ. ಕೈ ತುಂಬಾ ಸಂಬಳ. ಮುರಳಿಯ ಆದಾಯ ಏನೂಂತ ಹೇಗೆ ಹೇಳೋದು....."

"ಮುರಳಿ ಕೂಡ ತಂದೆ-ತಾಯಿಗೆ ಒಬ್ಬನೇ ಮಗ. ತಂದೆ ಶಿಸ್ತಿನಲ್ಲಿ ಬೆಳೆಸಿದಾರೆ. ಮಧು ಹೆಂಗಸಿನ ಪ್ರೀತಿಯಲ್ಲಿ ಬೆಳೆದವನು. ಸ್ವಲ್ಪ ತಾಯಿ ಹೇಳಿದ ಹಾಗೇ ಕೇಳ್ತಾನೆ... ಅಂತ ಅನ್ಸುತ್ತೆ."

"ಅನ್ನೋದೇನು? ಅಲ್ಲಿ ಆಕೆಯದೇ ದರ್ಬಾರು." ವಿನುತಾ ನುಡಿದಳು.

"ಇಲ್ಲಿ ಈತನದೇ ದರ್ಬಾರು. ಆದರೆ, ವತ್ಸಲಾ ಒಳ್ಳೆಯವರು... ವಿನುತಾಳ ಮೇಲೆ ಪ್ರೀತಿ ಜಾಸ್ತಿ."

"ಅದೆಲ್ಲಾ ಇರಲಿ. ಈಗ ಏನು ಮಾಡೋದು ಅಂತ. ವಿನೂ ನಿನ್ನ ಇಷ್ಟ ಏನೂಂತ ಹೇಳು..."

"ನನಗೆ ಮುರಳಿಯೇ ಇಷ್ಟ... ಅವನು ಒಳ್ಳೆಯ ಸ್ನೇಹಿತ." ಕಡೆಗೂ ವಿನುತಾ ಬಾಯಿ ಬಿಟ್ಟಳು.

"ಸರಿ, ನಾನು ಇವತ್ತೇ ಮಂಜುಳಾರವರ ಹತ್ತಿರ ಮಾತಾಡ್ತೀನಿ... ನಾವು ಬೇರೆ ಕಡೆ ನೋಡ್ಕೊಂಡಿದೀವಿ ಅಂತ ಹೇಳಿ ಬಿಡ್ತೀನಿ."

"ಏನಂದ್ಕೋಳ್ತಾರೋ ಏನೋ, ಎಷ್ಟಾಗಲೀ ಗಂಡಿನವರು... ಸೂಕ್ಷ್ಮವಾಗಿ ಮಾತನಾಡಿ... ಜೊತೆಗೆ ನಾನೂ ಬರ್ತೀನಿ..." ವಿನುತಾ ಒಳಗೊಳಗೇ ನಕ್ಕೊಂಡಳು.

* * *

ಇಬ್ಬರೂ ಸಿದ್ಧರಾಗಿ ಮನೆಯಿಂದ ಹೊರಡಬೇಕು ಎನ್ನುವ ಸಮಯಕ್ಕೆ ಮನೆಯ ಮುಂದೆ ಕಾರು ಬಂದು ನಿಂತಿತು. ಮಧುಸೂದನ ಹಾಗೂ ಮಂಜುಳಾ ಕೆಳಗಿಳಿದರು. ಕೈಯಲ್ಲಿ ಹಣ್ಣು ಹೂಗಳ ಬುಟ್ಟಿ, ಇವರಿಬ್ಬರೂ ಮುಖ ಮುಖ ನೋಡಿಕೊಂಡರು. ಕೈ ಮುಗಿದು ಇಬ್ಬರನ್ನೂ ಸ್ವಾಗತಿಸಿದರು. ಮಂಜುಳಾ ನಗು ಮೊಗದಿಂದ ಮಾತನಾಡಿದಳು.

"ನಮ್ಮಿಂದ ನಿಮಗೆ ತೊಂದರೆ ಆಯಿತು... ಹೆಣ್ಣು ಮಕ್ಕಳ ತಂದೆ ನೀವು.

ನಿಮ್ಮ ಆತಂಕ ನಮಗೆ ಅರ್ಥವಾದರೂ ನಾವು ತಡಮಾಡಿದೆವು. ಲಗ್ನಪತ್ರಿಕೆ ಶಾಸ್ತ್ರವನ್ನು ಯಾವಾಗ ಇಟ್ಟುಕೊಳ್ಳೋಣ?" ಆಕೆ ಕೇಳಿದಾಗ ವಿನುತ ಅವನನ್ನೇ ಮಿಕಿ ಮಿಕಿ ನೋಡಿದಳು...' ಇದೇನಿದು ತಮಾಷೆ... ಈತನ ಮನಸ್ನಲ್ಲಿ ಏನಿದೆ?' ಎಂದುಕೊಂಡಳು.

ಸದಾನಂದ ಸುಜಾತ ಕಕ್ಕಾಬಿಕ್ಕಿಯಾಗಿದ್ದರು. ವಿನುತ ಮಧುಸೂದನನಿಗೆ ಕಣ್ಣ ಸಂಜ್ಞೆ ಮಾಡಿದಳು. "ಸಾರ್... ನಿಮ್ಮ ಅಭ್ಯಂತರವಿಲ್ಲದಿದ್ದರೆ, ನಾನು ವಿನುತಳ ಹತ್ರ ಸ್ವಲ್ಪ ಮಾತಾಡ್ಬೇಕು." ಎಂದ.

"ಈಗ ಇನ್ನೂ ಮಾತು ಉಳಿದಿದೆಯಾ ಮಧು?" ಮಂಜುಳ ಕೇಳಿದಳು.

"ಆಡಲಿ ಬಿಡಿ, ವಿನುತಾ... ಇವರನ್ನು ನಿನ್ನ ರೂಮಿಗೆ ಕರೆದ್ಕೊಂಡು ಹೋಗು." ಸದಾನಂದನೇ ಹೇಳಿದ. ವಿನುತಾ ತಲೆಯಾಡಿಸಿದಳು. ಇಬ್ಬರೂ ರೂಮಿಗೆ ಹೋದರು. ಆ ರೂಮಿನಲ್ಲಿ ಓದುತ್ತಾ ಕುಳಿತಿದ್ದ ಸರಿತಾ ಮಧುಸೂದನನ ಕಡೆ ನೋಡಿ ಮುಗುಳ್ನಕ್ಕಳು. ಅವನು ಅವಳನ್ನೇ ದಿಟ್ಟಿಸಿದ. ರೂಪದಲ್ಲಿ ಅವಳು ಚೆಲುವೆ ಎನಿಸಿತ್ತು. ಚಿಕ್ಕವಳು ಆದರೆ ಅವಳಿಗೆ ಒಪ್ಪಿಗೆ ಇದ್ದರೆ ತಾನೇಕೆ ಇವಳನ್ನೇ ಮದುವೆಯಾಗಬಾರದು ಎನಿಸಿತು. ಆಚೆ ಹೊರಟವಳನ್ನು ಕರೆದು ನಿಲ್ಲಿಸಿದ. ವಿನುತ ಹುಬ್ಬೇರಿಸಿದಳು.

"ಸರಿತಾ... ನಾನೊಂದು ಮಾತು ಕೇಳ್ಲಾ?"

"ಕೇಳಿ..." ನಸುನಾಚಿ, ಮೋಹಕ ನಗೆಯನ್ನು ಬೀರಿದಳು.

"ನಾನು ನಿಮ್ಮನ್ನು ಲೈಕ್ ಮಾಡ್ತೀನಿ. ನನ್ನನ್ನು ಮದುವೆಯಾಗ್ತೀರಾ?" ಕೇಳಿದ. ಇದ್ದಕ್ಕಿದ್ದಂತೆ ಬಂದ ಪ್ರಶ್ನೆಗೆ ಅವಳಿಗೆ ಉತ್ತರ ಹೊಳೆಯಲಿಲ್ಲ.

"ನೀವು ನನ್ನ ಭಾವ ಆಗೋರು... ಅಕ್ಕನ ಎದುರಿಗೇ ಇದೆಂಥಾ ಪ್ರಶ್ನೆ?" ತಾನೂ ಪ್ರಶ್ನಿಸಿದಳು.

"ವಿನುತಳ ಕಡೆ ನೋಡಿ, ಕಣ್ಣಿನಲ್ಲೇ ಪ್ರಶ್ನಿಸಿದಳು.

"ನಿಮ್ಮ ಭಾವ ಆಗೋರು ಮುರಳೀ... ನಾನಲ್ಲ..."

"ಮತ್ತೆ? ನಿಮ್ಮ ತಾಯಿ..." ಪ್ರಶ್ನಿಸಿದಳು. ವಿನುತ ಅವನನ್ನೇ ವಿಚಿತ್ರವಾಗಿ ನೋಡಿದಳು.

"ಅದೆಷ್ಟು ನಾಟಕ ಆಡ್ತೀರಿ ಮಧುಸೂದನ್... ಈಗ ಬಂದಿರುವ ಉದ್ದೇಶ?"

"ನಮ್ಮ ಉದ್ದೇಶ ನಿಮಗೆ ಹಿಡಿಸಿಲ್ಲ ಅಂತ ನಿಮ್ಮ ಮುಖವೇ ಹೇಳಿತು. ನಾನು ಕಾರಿನಲ್ಲಿ ಬರುತ್ತಿರುವಾಗ ಮುರಳಿ ಫೋನ್ ಮಾಡಿದ್ದರು. ಅವರ ತಾಯಿ ಯೊಡನೆ ನಿಮ್ಮ ಮನೆಗೆ ಬಂದಿದ್ದ ವಿಷಯವನ್ನು ತಿಳಿಸಿದರು. ಅಂತೂ ಕಡೆಗೂ ಮುರಳಿ ಧೈರ್ಯ ಮಾಡಿ, ನಿಮ್ಮನ್ನು ಮದುವೆಯಾಗುವುದಕ್ಕೆ ತಂದೆಯನ್ನು ಒಪ್ಪಿಸಿದಾರೆ

ಅಂತ ಅರ್ಥ ಆಯ್ತು."

"ಈ ಮಾತೆಲ್ಲಾ ಇವಳ ಎದುರಿಗೆ ಬೇಡ..." ಎಂದು ಹೇಳಿ ತಂಗಿಯನ್ನು ಕಳಿಸಿದಳು.

"ಯಾಕೆ? ನೀವು ನಿಮ್ಮ ತಂಗಿಗೆ ಏನನ್ನೂ ಹೇಳಿಲ್ವಾ?"

"ಇಲ್ಲ, ಇದುವರೆಗೂ ನಾನು ಯಾರಿಗೂ ನನ್ನ ಮನಸ್ನಲ್ಲಿ ಏನಿದೆ ಅಂತ ತಿಳಿಸಿರಲಿಲ್ಲ. ನಿಮಗೇ ಮೊದಲು ತಿಳಿಸಿದ್ದು."

"ಒಂದು ವೇಳೆ ನಮ್ಮಿಬ್ಬರ ಮದುವೆ ನಡೆದೇ ಹೋಗಿದ್ದರೇ...?"

"ಡೈವೋರ್ಸ್ ತಗೋತಿದ್ದೆ..." ತಟ್ಟನೆ ಹೇಳಿದಳು.

"ನಾನು ಅಷ್ಟು ಕೆಟ್ಟೋನಲ್ಲ ವಿನುತಾ..." ನಗೆಯನ್ನು ಸೇರಿಸಿದ..., "ಈಗೇನು ಮಾಡೋದು ನೀವೇ ಹೇಳಿ... ನಿಮ್ಮ ತಂದೆ ಏನಂತಾರೆ?"

"ಅವರಾಗಿಯೇ ಹೇಳುವಂತೆ ಅನ್ನಿಸುವುದಿಲ್ಲ."

"ಸರಿ ಹೊರಗೆ ಬನ್ನಿ. ನಾನೇ ನಿಮ್ಮ ಪೇರೆಂಟ್ಸ್ ಹತ್ರ ಮಾತಾಡ್ತೀನಿ. ಹಾಗೇ ನಿಮ್ಮ ತಂಗಿಯನ್ನು ಹೊರಕ್ಕೆ ಕರೆದುಕೊಂಡು ಬನ್ನಿ." ಎಂದು ಹೇಳಿ ಹೊರಗೆ ಬಂದ. ಮಂಜುಳಾ ಮಗನನ್ನು ವಿಚಿತ್ರವಾಗಿ ನೋಡಿದಳು. ವಿನುತಾ, ತಂಗಿಯನ್ನು ಅವರೆದುರಿಗೆ ಕೂರಿಸಿ, ತಾನು ಒಳಗೆ ಹೋಗಿದ್ದಳು. ಸುಜಾತ ಅಡಿಗೆ ಮನೆಯಲ್ಲಿದ್ದಳು. ಸದಾನಂದ ವಿನುತಳೊಡನೆ ಮಾತನಾಡಲೆಂದು ರೂಮಿಗೆ ಬಂದ.

"ಈಗೇನೇ ಮಾಡೋದು... ಎಂಥಾ ಇಕ್ಕಟ್ಟಿಗೆ ಸಿಕ್ಕಿ ಬಿದ್ದೆವಲ್ಲೇ?" ಪೇಚಾಡಿದ.

"ಹಾಗೇನೂ ಪೇಚಾಡ್ಬೇಡಿ ಅಪ್ಪಾ... ಮಧುಸೂದನ ನನ್ನನ್ನು ಒಪ್ಪಿಯೇ ಇಲ್ಲ. ಅವರಿಗೆ ಸರಿತಾ ಇಷ್ಟವಾಗಿದಾಳೆ... ತಾಯಿಯನ್ನು ಒಪ್ಪಿಸಿ ಕರೆತಂದಿದಾರೆ."

"ಒಂದೊಂದ್ಸಾರಿ ಒಂದೊಂದು ಮಾತಾಡ್ತಾರೆ ಈ ಜನ... ಸರಿತಾ ಚಿಕ್ಕವಳು. ಅವಳ ಮದುವೆಗೇನು ಅವಸರ?"

"ಅವಳಿಗೂ ತಾನಾಗಿಯೇ ಸಂಬಂಧ ಕೂಡಿ ಬಂದಿದೆ ಅಪ್ಪಾ... ಹೂಂ ಅನ್ನಿ."

"ಸರಿತಾ ಏನಂತಾಳೆ?"

"ಅವಳೊಡನೆ ಮಾತನಾಡೋಣ. ಅವಳಿಗೆ ಇಷ್ಟವಿಲ್ಲದಿದ್ರೆ ಬಲವಂತ ಮಾಡೋದು ಬೇಡ ಅಷ್ಟೇ..."

"ಅವರು ಬಂದಿರೋದು ನಿಮ್ಮಿಬ್ಬರ ಮದುವೆ ಮಾತನಾಡುಕ್ಕೆ. ಈಗ ನಾವು ಸರಿತಾಳ ಪ್ರಸ್ತಾಪ ಮಾಡಿದ್ರೆ ಏನು ಚೆನ್ನ?"

"ಅವರು ಸರಿತನ್ನ ಒಪ್ಪಿದಾರೆ. ಅವರೂ ಅವಳ ಹತ್ರ ಮಾತಾಡ್ತಾರೆ.

ತಾಯೀನ ಒಪ್ಪಿಸ್ತಾರೆ. ನಿಜ ಹೇಳ್ಲಾ ಅಪ್ಪ... ಆಕೆಗೆ ನಾನು ಒಪ್ಪಿಗೆ ಆಗಿರಲೇ ಇಲ್ಲ, ಗೊತ್ತಾ?"

"ಈಗ ಹೇಳಿದ್ರೆ? ಯಾಕೆ ಈ ನಾಟಕ?"

"ನಿಮ್ಮ ಮನಸ್ಸಿಗೆ ಬೇಸರ ಆಗುತ್ತೆ ಅಂತ ಮಧೂನೂ ಹೇಳಿರ್ಲಿಲ್ಲ. ನಾನೂ ಹೇಳಿರ್ಲಿಲ್ಲ. ಸರಿತನ್ನ ಕಂಡಾಗ್ನಿಂದ ಅವರ ಮನಸ್ಸು ಅವಳ ಕಡೆ ವಾಲಿದೆ. ಆದರೆ ಹೇಗೆ ಹೇಳೋದು ಅಂತ ಸುಮ್ಮನಿದ್ದರಂತೆ. ಅಲ್ಲದೇ ಅಕ್ಕನಿಗೇ ಮದುವೆಯಾಗದೇ ತಂಗಿಗೆ ಹೇಗೆ ಮಾಡ್ತಾರೆ ಅಂತ ಯೋಚಿಸಿದ್ರಂತೆ, ಅದನ್ನೇ ಅವರು ಹೇಳಿದ್ರು. ನಾನು, ಬೆಳಿಗ್ಗೆ ಮುರಳಿ ಅವರ ತಾಯಿ ಬಂದು ಹೋದ್ಮೇಲೆ ಮಧುಗೆ ಫೋನ್ ಮಾಡಿದ್ದೆ."

"ಇಂಥಾ ಅಧಿಕ ಪ್ರಸಂಗಿತನವೆಲ್ಲಾ ನಿನಗ್ಯಾಕೆ? ಹೆಣ್ಣು ಮಕ್ಕಳನ್ನು ಸರಿಯಾಗಿ ಬೆಳೆಸಿಲ್ಲ ಅಂತ ಆಡ್ಕೊಳೋಲ್ವಾ?"

"ಏನಾದ್ರೂ ಆಡ್ಕೊಳ್ಳೀ ಬಿಡೀಪ್ಪಾ.... ಮಧು ಕೆಟ್ಟವರಲ್ಲ, ಒಳ್ಳೆಯವರು. ಅವರು ಇದುವರೆಗೂ ಎಂದೂ ನನ್ನೊಡನೆ ಅನುಚಿತವಾಗಿ ನಡೆದುಕೊಂಡಿಲ್ಲ. ಒಂದೇ ಒಂದು ಮನನೋಯಿಸುವಂಥ ಮಾತನ್ನಾಡಿಲ್ಲ... ಸರಿತನ್ನ ಚೆನ್ನಾಗಿ ನೋಡ್ಕೋತಾರೆ ಅಂತ ನಂಬಿಕೆ ನನಗಿದೆ."

"ಆದರೂ ಇಷ್ಟು ದಿನ ಕಾಯಿಸಿ ಹೀಗೆ ಮಾಡಬಾರದಾಗಿತ್ತು. ನಾವೇನು ಅವರು ಆಟ ಆಡಿಸಿದ ಹಾಗೆ ಆಡುವ ಬೊಂಬೆಗಳಾ? ನಿಮ್ಮಮ್ಮಂಗೆ ಹಿಂದೆ ಗೊತ್ತಿಲ್ಲ ಮುಂದೆ ಗೊತ್ತಿಲ್ಲ ಏನೇನು ಆಡಿಬಿಡ್ತಾಳೋ... ನಾನು ಹೋಗಿ ಮಾತನಾಡ್ತೀನಿ. ಈಗ ಆ ಭಗವಂತನೇ ದಾರಿ ತೋರಿಸ್ಬೇಕು." ಎನ್ನುತ್ತಾ ಹೊರಬಂದ.

"ಏನು ಎಲ್ರೂ ಒಳಗೆ ಸೇರಿ ಬಿಟ್ರೀ... ನಾವು ಬಂದದ್ದು ನಿಮಗೆ ಸರಿ ಹೋಗ್ತಿಲ್ಲ ಅಂತ ಅನ್ನಿಸ್ತಿದೆ."

"ಹಾಗಲ್ಲ ನಾವು ಜ್ಯೋತಿಷಿಗಳನ್ನು ನೋಡೋಕೆ ಹೊರಟದ್ದು, ನೀವು ಬರೋದು ಗೊತ್ತಿರ್ಲಿಲ್ವಲ್ಲಾ... ಮಗಳ ಮದುವೆ ಯಾಕೆ ವಿಳಂಬ ಆಗ್ತಿದೆ ಅಂತ ಪ್ರಶ್ನೆ ಕೇಳೋದಿತ್ತು."

"ಇನ್ನೇನೂ ವಿಳಂಬ ಇಲ್ಲ ಬಿಡಿ... ನಾವು ಬಂದೇ ಬಿಟ್ವಲ್ಲಾ... ಮಧುಗೆ ಹೇಳಿದ್ದೆ ಫೋನ್ ಮಾಡು ಅಂತ. ಮಾಡ್ಲಿಲ್ವಾ ಮಧು?"

"ಇಲ್ಲಮ್ಮ... ಲೈನ್ ಸಿಗ್ಲಿಲ್ಲ. ನಾನು ನಿನ್ನತ್ರ ಸ್ವಲ್ಪ ಮಾತಾಡ್ಬೇಕು... ಹೊರಗೆ ಬರ್ತೀಯಾ?" ಕೇಳಿದ.

"ಈಗ ನಿನ್ನ ಮಾತು ಏನೋ... ನಮ್ಮ ಮಾತೆಲ್ಲಾ ಮುಗಿದಿದೆ" ಎಂದು

ಹೇಳಿದರೂ, ಮಗನನ್ನು ಹಿಂಬಾಲಿಸಿದಳು. ಇಬ್ಬರೂ ವರಾಂಡದಲ್ಲಿ ಕುಳಿತರು.

"ಅಮ್ಮಾ, ವಿನುತಳಿಗಿಂತ ಅವಳ ತಂಗಿ ಸರಿತಾ ಚೆನ್ನಾಗಿದಾಳೆ, ಅಲ್ವೇನಮ್ಮ?"

"ಹೌದು, ಏನೀಗ?"

"ಅವಳನ್ನೇ ಮದುವೆ ಆಗ್ತೀನಿ. ವಿನುತಾ ಬೇಡ. ಹೇಗೂ ನಿನಗೆ ಅವಳು ಒಪ್ಪಿಗೆ ಆಗಿರಲಿಲ್ಲ."

"ಈ ಘಳಿಗೇಲಿ ಇದೇನು ಮಾತು? ಕೇಳಿದ್ರೆ ಯಾರಾದ್ರೂ ನಗ್ತಾರೆ... ನಾವು ಬಂದದ್ದು ಅಕ್ಕಂಗೋಸ್ಕರ.....ತಂಗಿಗಾಗಲ್ಲ."

"ನನಗೆ ಸರಿತಾ ಇಷ್ಟವಾಗಿದಾಳೆ... ಅದನ್ನೇ ಹೇಳಿ ನೋಡೋಣ."

"ಇದು ತಮಾಷೆ ಅಲ್ಲ... ಅಥವಾ ಮಾರ್ಕೆಟ್ಟೂ ಅಲ್ಲ... ನಾನು ಕೇಳೋಲ್ಲ..."

"ಸರಿ, ನಾನೇ ಕೇಳ್ತೀನಿ. ನೀನು ಸುಮ್ಮನಿದ್ದು ಬಿಡು."

"ನನ್ನ ಮರ್ಯಾದೆ ಹೋಗುತ್ತೆ ಅಷ್ಟೇ..."

"ತಪ್ಪೆಲ್ಲಾ ನನ್ನದೇ ಇರಲಿ. ನೀನು ಚಿಂತಿಸ್ಬೇಡ."

"ಮುಖ ಮುರಿಯುವ ಹಾಗೆ ಅವರೇನಾದ್ರೂ ಅಂದ್ರೆ, ನಾನು ನಿನ್ನನ್ನು ಕ್ಷಮಿಸೋಲ್ಲ."

"ನಿನ್ನ ತಪ್ಪನ್ನೆಲ್ಲ ನಾನು ಕ್ಷಮಿಸಿಲ್ವಾ?" ಅವಳ ಮುಖ ಕಪ್ಪಾಯಿತು.

"ಈಗ ಏನೇನೋ ಆಡ್ಬೇಡ. ಅದೇನು ಮಾತಾಡ್ತೀಯೋ ಬಿಡ್ತೀಯೋ ನಿನ್ನಿಷ್ಟ.. ವಿನುತನ್ನ ಒಪ್ಪೋದೇನೂ ನೀನೇ... ಈಗ ಸರಿತ ಬೇಕು ಅಂತ ಇರೋನೂ ನೀನೇ, ನಂಗೊತ್ತಿಲ್ಲ."

"ಸರಿ ಬಿಡಮ್ಮ. ಹಾಗಾದ್ರೆ ನಂಗೆ ಮದುವೇನೇ ಬೇಡ. ಸುಮ್ಮನೆ ಎದ್ದು ಹೊರಟು ಹೋಗೋಣ."

"ಅದರಿಂದ ಮರ್ಯಾದೆ ಇನ್ನೂ ಕೆಡುತ್ತೆ... ನಡೀ." ಎಂದಳು. ಇಬ್ಬರೂ ಮತ್ತೆ ಒಳಗೆ ಬಂದರು. ಸರಿತಾ ಎದ್ದು ಒಳಗೆ ಹೊರಟು ಹೋಗಿದ್ದಳು. ಸುಜಾತ ತಿಂಡಿಯನ್ನು ತಂದಿತ್ತಳು. ಸದಾನಂದ ಅವರ ಮಾತನ್ನು ನಿರೀಕ್ಷಿಸುತ್ತಾ ಕುಳಿತ.

"ನೀವು ಏನಂದ್ಕೊಳ್ತೀರೋ... ಏನೋ... ನಿಮ್ಮದೇನೂ ಆಕ್ಷೇಪವಿಲ್ಲದಿದ್ದರೆ..."

"ಆಕ್ಷೇಪ ಇಲ್ಲದೇ ಇರುತ್ತಾ ಮಂಜುಳಾರವರೇ... ಇಷ್ಟು ದಿನಗಳು ತಡ ಮಾಡಿ ಕಾಯಿಸಿದ್ದೂ ಅಲ್ಲದೇ ಈಗ ಮತ್ತೇನು ಸಮಸ್ಯೆ... ಮದುವೆಯ ಬಗ್ಗೆ ಈ ಮುಂಚೆಯೇ ಮಾತುಕತೆಗಳು ನಡೆದಿದ್ದವಲ್ಲ."

"ಹೌದು ಸಾರ್, ತಪ್ಪು ಜರುಗಿದೆ. ನಾವು ಸಾಕಷ್ಟು ದಿನಗಳನ್ನು ತೆಗೆದು ಕೊಂಡರೂ ಒಂದು ನಿರ್ಣಯಕ್ಕೆ ಬರಲಾಗಲಿಲ್ಲ. ಕ್ಷಮಿಸಿ...."

"ಕ್ಷಮಿಸ್ತೀವಪ್ಪಾ. ನಾವು ಹೆಣ್ಣೋರು... ನಮಗೆ ಸಹನೆ, ತಾಳ್ಮೆ ಎಲ್ಲಾ

ಇರಲೇಬೇಕು..."

"ನಾನು ಈಗ್ತಾನೇ ವಿನುತಳ ಹತ್ರ ಮಾತಾಡಿದೆ. ಅವರು ಒಂದು ಹೊಸ ಸುದ್ದಿಯನ್ನು ತಿಳಿಸಿದರು... ನಿಮ್ಮ ಮಗಳಿಗೆ ಮತ್ತೊಬ್ಬ ವರ ಬಂದಿದ್ದರಂತೆ. ಅವರಿಗೆ ನಿಮ್ಮ ಮಗಳು ಒಪ್ಪಿಗೆಯಾದಳಂತೆ. ಇವರೂ ಒಪ್ಪಿದಾರಂತೆ."

"ಇನ್ನೂ ಯಾವ ತೀರ್ಮಾನವೂ ಆಗಿಲ್ಲ. ಅವರಾಗಿಯೇ ಬಂದಿದ್ರು... ಅಷ್ಟೇ..."

"ಬಹುಶಃ ಅವರೇ ಸೂಕ್ತವಾದ ವರ ನಿಮ್ಮ ಮಗಳಿಗೆ."

"ಹೌದು, ನಾವು ಶಾಸ್ತ್ರ ಕೇಳಿಸಿದೆವು... ಉತ್ತರ ಸಮರ್ಪಕವಾಗಿರಲಿಲ್ಲ." ಮಂಜುಳ ಮಧ್ಯೆ ಬಾಯಿ ಹಾಕಿದಳು.

"ಈಗ ಒಂದೊಂದೇ ನೆಪ ಹೇಳ್ತಿದೀರಲ್ಲ... ನಮಗೂ ಬೆಲೆ ಬೇಡವೇ?"

"ನಿಮಗೂ ಬೆಲೆ ಇದೆ ಸಾರ್. ದಯವಿಟ್ಟು ತಪ್ಪು ತಿಳ್ಕೋಬೇಡಿ... ಈಗ ನನ್ನದೊಂದು ಮಾತು... ನಿಮಗೆಲ್ಲಾ ಒಪ್ಪಿಗೆ ಆದರೆ, ನಾನು ನಿಮ್ಮ ಇನ್ನೊಬ್ಬ ಮಗಳು ಅಂದರೆ ಸರಿತಾಳನ್ನು ಮದುವೆಯಾಗಲು ತಯಾರಿದ್ದೇನೆ."

"ಏನು? ಅದ್ಹೇಗೆ ಸಾಧ್ಯ? ಅವಳಿನ್ನೂ ಚಿಕ್ಕವಳು. ಅವಳಿಗೆ ಈಗಲೇ ಮದುವೆ ಮಾಡುವುದಿಲ್ಲ. ಅವಳ ಓದು ಮುಗಿಯಬೇಕು."

"ಸರಿ. ಇನ್ನೊಂದು ವರ್ಷವೇ ಕಳೆಯಲಿ, ನಾನು ಕಾಯ್ತೀನಿ...."

"ಯಾಕಪ್ಪಾ... ಇದುವರೆಗೂ ವಿನುತಾ ಕಾದಳು. ಈಗ ಸರಿತಾ ಕಾಯ ಬೇಕಾ?" ಮಧುಸೂದನ ಕೋಪಗೊಳ್ಳದೇ ಮುಗುಳ್ನಕ್ಕ.

"ಇಲ್ಲ, ಈ ಸಾರಿ ಹಾಗಾಗುವುದಿಲ್ಲ. ಲಗ್ನಪತ್ರಿಕೆಯ ಶಾಸ್ತ್ರವನ್ನು ನೆರವೇರಿಸಿ ಬಿಡೋಣ. ನೀವೇ ದಿನವನ್ನೂ ಗೊತ್ತು ಮಾಡಿ."

"ಸರಿ, ನೋಡೋಣ. ಮೊದಲು, ನಾನು ನನ್ನ ಹೆಂಡತಿ, ಮಕ್ಕಳೊಡನೆ ಮಾತನಾಡಿ, ನಮ್ಮ ನಿರ್ಣಯವನ್ನು ತಿಳಿಸ್ತೀನಿ."

"ಹಾಗೇ ಮಾಡಿ, ನಂಗೆ ಬೇಸರವಿಲ್ಲ. ಆದರೆ ಸ್ವಲ್ಪ ಬೇಗ ತಿಳಿಸಿದರೆ ಒಳ್ಳೆಯದು. ಸದ್ಯದಲ್ಲೇ ನನಗೆ ಬೇರೆ ಊರಿಗೆ ವರ್ಗವಾಗುವ ಸಾಧ್ಯತೆ ಇದೆ. ಅಷ್ಟರೊಳಗೆ ನಿಶ್ಚಿತಾರ್ಥವಾದರೂ ಆಗಿರಬೇಕು."

ಸುಜಾತ ತಂದಿಟ್ಟ ತಿಂಡಿಯನ್ನು ಮಧುಸೂದನ ತಿನ್ನಲು ಎತ್ತಿಕೊಂಡ. ಮಂಜುಳಾ ಸ್ವಲ್ಪ ಮಟ್ಟಿಗೆ ಕಕ್ಕಾಬಿಕ್ಕಿಯಾಗಿದ್ದರೂ ಮಗನ ನಿರ್ಣಯಕ್ಕೆ ಒತ್ತು ಕೊಟ್ಟಿದ್ದನ್ನು ಸದಾನಂದ ಗಮನಿಸಿದ್ದ. ಒಳಗುಟ್ಟು ಬೇರೆ ಏನೋ ಇರಬಹುದು ಎಂಬ ಅನುಮಾನವೂ ಇಣುಕಿತ್ತು. ಒಂದೇ ದಿನದಲ್ಲಿ ಇಬ್ಬರು ಹೆಣ್ಣು ಮಕ್ಕಳಿಗೆ ಅವರಾಗಿಯೇ ಬಂದರೆಂದರೇ... ಮಾಯೆಯೋ... ಲೀಲೆಯೋ... ಪವಾಡವೋ...

ಅಥವಾ ಭ್ರಮೆಯೋ ಎಂಬ ಗೊಂದಲವೂ ಇಣುಕಿತ್ತು. ಸ್ವಲ್ಪ ಹೊತ್ತಿನ ನಂತರ ಅವರುಗಳು ಹೊರಟಿದ್ದರು. ಅಲ್ಲಿಗೆ ಒಂದು ಹಂತದ ಮಾತುಕತೆ ಮುಗಿದಿತ್ತು.

ಅವರುಗಳು ಅತ್ತ ಹೋದ ಕೂಡಲೇ ಸದಾನಂದ ಗುಡುಗಿದ್ದ. "ನಾವುಗಳೇನು ಬಿಟ್ಟಿ ಬಿದ್ದಿದ್ದೇವಾ? ಇವರುಗಳು ಮನಸ್ಸಿಗೆ ತೋಚಿದ ಹಾಗೆ ಆಡ್ತಾರೆ. ನಾನ್ಯಾಕೆ ಸುಮ್ನಿರ್ಬೇಕು?"

"ಹೋಗ್ಲಿ ಸುಮ್ನಿರಿ... ಈ ನೆವದಿಂದ ನಮ್ಮ ಸರಿತಾಗೂ ಒಳ್ಳೆಯ ಗಂಡು ಸಿಕ್ಕಿದಂತಾಯ್ತು. ಸುಲಭವಾಗಿ ಮನೆ ಬಾಗಿಲಿಗೆ ಗಂಡುಗಳು ಬಂದು ಕೇಳಿದಾಗ ಇಲ್ಲ ಅನ್ನೋದು ಏನು ಚೆನ್ನ? ನಮ್ಮ ಹೆಣ್ಣು ಮಕ್ಕಳು ಅದೃಷ್ಟ ಮಾಡಿದ್ದರು. ಸುಜಾತ, ಗಂಡನಿಗೆ ಸಮಜಾಯಿಷಿ ಹೇಳಿದಳು.

"ಇಷ್ಟೆಲ್ಲಾ ಆದದ್ದು ಈ ವಿನುತಾಳಿಂದ. ಇವಳಿಗೆ ಒಪ್ಪಿಗೆ ಇಲ್ಲದಿದ್ದರೆ, ಮೊದಲೇ ಹೇಳಬಹುದಾಗಿತ್ತಲ್ಲ?"

"ನಿಮಗೆ ಹೆದರಿದ್ಲು ಅಂತ ಕಾಣುತ್ತೆ... ಲಗ್ನಪತ್ರಿಕೆ ಮಾಡಿ, ಒಂದು ವರ್ಷ ತಳ್ಳೋದೇನೂ ಬೇಡ, ಮದುವೆಯ ಕಾರ್ಯವೂ ನಡೆದು ಹೋಗಲಿ. ಅವರ ಮನೇಲೇ ಇದ್ಕೊಂಡು ಕಾಲೇಜಿಗೆ ಹೋಗಲಿ."

"ಸರಿತಾ ಏನಂತಾಳೋ?"

"ನನ್ನ ಹೆಣ್ಣು ಮಕ್ಕಳು ಅವಿವೇಕಿಗಳಾ...? ನಮ್ಮ ಕಷ್ಟ ಅರ್ಥವಾಗದಂಥವರಲ್ಲ. ಒಂದೇ ಸಲ ಒಟ್ಟಿಗೇ ಮದುವೆ ನಡೆದರೆ ಖರ್ಚು ಶ್ರಮ ಎಲ್ಲಾ ಉಳಿಯುತ್ತೆ ಅಂತ ಅವ್ರಿಗೇನು ಗೊತ್ತಾಗೋಲ್ವಾ?"

"ನೋಡೋಣ. ಈಗ ಅವರಿಗೆ ಏನು ಉತ್ತರ ಹೇಳೋಣ?"

"ಶುಭಸ್ಯ ಶೀಘ್ರಂ ಅಂತ. ಅನುಮಾನಿಸೋದು ಬೇಡ. ದೇವರ ಮೇಲೆ ಭಾರ ಹಾಕಿ... ನಾಳೇನೇ ಹೋಗಿ ಮಾತನಾಡೋಣ. ಹಾಗೇ ಪುರುಷೋತ್ತಮರನ್ನೂ ನೋಡಿ ಮಾತಾಡಿಸಿಕೊಂಡು ಬರೋಣ. ಆಕೆ ನಮ್ಮ ಮನೆಗೆ ಕಾಲಿಟ್ಟ ಘಳಿಗೆ ತುಂಬಾ ಒಳ್ಳೆಯದು... ಸುನಾಯಾಸವಾಗಿ ಸರಿತಾ ಮದುವೆ ನಿಶ್ಚಯವಾಯಿತು."

"ಸರಿ... ನಿನ್ನ ಹೆಣ್ಣು ಮಕ್ಕಳ ಹತ್ರ ಮಾತಾಡು. ಮುಂದೆ, ಅವರಿಗೆ ನಾವು ಬಲವಂತ ಮಾಡಿದೆವು ಅಂತ ಅನ್ನಿಸ್ಬಾರ್ದು."

"ನಾನು ಮಾತಾಡ್ತೀನಿ. ನೀವು ಚಿಂತಿಸ್ಬೇಡಿ." ಧೈರ್ಯ ತುಂಬಿದಳು ಸುಜಾತ.

* * *

ವಿನುತಳಿಂದ ವಿಷಯ ತಿಳಿದ ಮುರಳಿ ಮಧುಗೆ ಫೋನ್ ಮಾಡಿದ.

'ಕಂಗ್ರಾಟ್ಸ್' ಎಂದು ಹೇಳಿ "ಥ್ಯಾಂಕ್ಸ್ ಮಧು, ನಿಮ್ಮ ಸಹಕಾರದಿಂದ ನನ್ನ ವಿನುತಾ ನನಗೆ ಸಿಕ್ಕಿದಳು." ಎಂದ

"ಯಾಕೆ? ನಿಮ್ಮ ಲವ್ ಮೇಲೆ ನಿಮಗೆ ಕಾನ್ಫಿಡೆನ್ಸ್ ಇರಲಿಲ್ವಾ?" ಚುಡಾಯಿಸಿದ.

"ಹಾಗಲ್ಲ, ಪತ್ತೇದಾರನ ತಂದೆ ಪೋಲೀಸ್ ಪುರುಷೋತ್ತಮನ ಬಗ್ಗೆ ಭಯವಿತ್ತು. ನಿಮ್ಮ ಪರಿಚಯವಾದ್ದರಿಂದ ಇದು ಸಲೀಸಾಯಿತು."

"ಇಲ್ಲೊಂದು ಜಾಣತನ ಇದೆ ಅಂತ ನಿಮಗೆ ಅನ್ನಿಸ್ಲಿಲ್ವಾ ಮುರಳೀ?"

"ಏನು ಜಾಣತನ? ಯಾರದ್ದು?"

"ವಿನುತಂದು. ವಿನುತಾನೇ ನಿಮ್ಮ ತಂದೆಯ ಹತ್ತಿರ ಮಾತನಾಡಿದಾರೆ. ನಿಮ್ಮ ತಂದೆ ಯಾವುದೋ ಇಕ್ಕಟ್ಟಿಗೆ ಸಿಕ್ಕಿ ಬಿದ್ದು ನಿಮ್ಮಿಬ್ಬರ ಮದುವೆಗೆ ಒಪ್ಪಿಕೊಂಡಿದ್ದಾರೆ."

"ಇರಬಹುದು. ಇದರಿಂದ ನಿಮಗೂ ಅನುಕೂಲವೇ ಆಯ್ತು ಅಲ್ವಾ? ನಿಮ್ಮ ತಾಯಿಗೆ ವಿನುತ ಒಪ್ಪಿಗೆ ಇರಲಿಲ್ಲ... ತಪ್ಪಿದಂತಾಯ್ತು. ಆದರೆ ಅವಳ ತಂಗಿಯನ್ನು ನಿಮ್ಮ ತಾಯಿ ಒಪ್ಪಿದ್ದು ಆಶ್ಚರ್ಯವೂ ಎನಿಸ್ತಿದೆ."

"ನನ್ನ ಇಷ್ಟಕ್ಕೆ ಬೆಲೆ ಕೊಟ್ರು... ನಾನು ವಿನುತನ್ನೇ ಮದುವೆಯಾಗ್ತೀನಿ ಅಂತ ಹಠ ಮಾಡಿದ್ರೆ ಅದಕ್ಕೂ ಒಪ್ಪಿಗೆ ಕೊಡ್ತಿದ್ರು. ನಾನೂ ವಿನುತಾ ಇಬ್ಬರೂ ನಾಟಕ ಆಡಿ ಅದನ್ನು ತಪ್ಪಿಸಿದೀವಿ."

"ಥ್ಯಾಂಕ್ಸ್ ಮಧು. ಇಲ್ಲಿ ಎಲ್ಲರೂ ಆಡಿದ್ದು, ಆಡ್ತಾ ಇರೋದು ನಾಟಕವೇ ತಾನೇ... ಇದರಿಂದ ಎಲ್ಲರಿಗೂ ಒಳ್ಳೇದೇ ಆಗ್ತಿದೆ... ನಂಗೆ ಒಂದು ಸಣ್ಣ ಆಸೆ ಇದೆ. ಹೇಳ್ಲಾ?"

"ಹೇಳ್ಬೇಕು ಅಂತ ಮನಸ್ಸು ಮಾಡಿದೀರಿ; ಹೇಳಿ ಪರವಾಗಿಲ್ಲ."

"ನನ್ನ ವಿನುತಳ ಮದುವೆಗೆ ನೀವು ಖಂಡಿತಾ ಬರ್ಬೇಕು. ನೆವ ಹೇಳಿ ತಪ್ಪಿಸ್ಕೋಳ್ಬಾರ್ದು... ಹಾಗೇ ನಿಮ್ಮ ಮದುವೆಗೆ ನಮ್ಮನ್ನೆಲ್ಲ ಕರೆಯಬೇಕು... ನಮ್ಮ ತಾಯಿಯ ಆಶೀರ್ವಾದವನ್ನು ನೀವು ಪಡೆಯಬೇಕು. ಅಮ್ಮನಿಗಾಗಿರುವ ದ್ರೋಹ ವನ್ನು ನೆನೆಸಿಕೊಂಡರೆ ವಿಚಿತ್ರವಾದ ಸಂಕಟ ಆಗುತ್ತೆ... ನಿಮ್ಮನ್ನು ಕೈಯಾರೆ ಬೆಳೆಸುವ ಅದೃಷ್ಟ ಅವಳಿಗಿರಲಿಲ್ಲ...." ಹೇಳುತ್ತಾ ಹೇಳುತ್ತಾ ಅವನ ದನಿ ದಪ್ಪಗಾಗಿತ್ತು.

"ಅಷ್ಟು ಭಾವುಕರಾಗ್ಬೇಡೀ ಮುರಳೀ... ರಿಲ್ಯಾಕ್ಸ್... ಇಷ್ಟೇ ತಾನೇ... ನಾನು ನಿಮ್ಮಿಬ್ಬರ ಮದುವೆಗೆ ಖಂಡಿತಾ ಬರ್ತೀನಿ... ಡೋಂಟ್ ವರೀ..."

"ಥ್ಯಾಂಕ್ಯೂ ಬ್ರದರ್..." ಮುರಳಿ ಭಾವುಕನಾಗಿದ್ದ.

"ನಾನು ಫ್ರೆಂಡ್ ಆಗಿಯೇ ಇರಲು ಬಯಸುತ್ತೀನಿ..." ಮಧುಸೂದನ

ಎಂದ.

"ಯಾರ ಹತ್ರ ಮಾತಾಡ್ತಿದೀಯೋ?" ವತ್ಸಲಾ ಕೇಳಿದಾಗ, ಮುರಳೀ ಲೈನ್ ಕಟ್ ಮಾಡಿ, ತಾಯಿಯನ್ನು ತಬ್ಬಿಕೊಂಡು ಅತ್ತುಬಿಟ್ಟ.

"ಅರೇ... ಏನಾಯ್ತೋ ಮದುಮಗನೇ... ನೀನು ಮದುವೆಯಾಗಿ, ನಿನ್ನ ಹೆಂಡತಿಯ ಮನೆಗೆ ಹೋಗ್ತಿಲ್ಲ. ವಿನುತಾ ನಿನ್ನ ಹೆಂಡ್ತಿಯಾಗಿ ಈ ಮನೆಗೆ ಬರ್ತಿದಾಳೆ. ನನಗೆ ಎಷ್ಟು ಖುಷಿಯಾಗ್ತಿದೆ ಗೊತ್ತಾ?"

"ವಿನುತಾಳ ತಂಗಿಗೂ ಮದುವೆ ಗೊತ್ತಾಗಿದೆ. ಹುಡುಗ ಯಾರು ಗೊತ್ತಾ? ಮಧುಸೂದನ ಅಂತ... ನನ್ನ ಹಾಗೇ ಇದಾನೆ ಅಂತ ಹೇಳಿದ್ಯಲ್ಲ... ಅವನೇ"

"ಹೌದಾ? ಅವನ ತಂದೆ-ತಾಯಿ ಯಾರು?"

"ತಂದೆ ನಿರಂಜನ್ ಅಂತ ಅವರೀಗ ಇಲ್ಲ. ತಾಯಿ ಮಂಜುಳಾ ಅಂತ... ನಿನಗೆ ಪರಿಚಯ ಇಲ್ಲ ಬಿಡು."

"ಸರಿತಾ ಇನ್ನೂ ಚಿಕ್ಕವಳು ಅಲ್ವೇನೋ... ಮದುವೆಗೆ ಏನವಸರವಿತ್ತೋ?"

"ಏನೋ ಅದು ಅವರವರ ಲೈಕಿಂಗ್, ನಮಗ್ಯಾಕೆ?"

"ಹೌದು... ಎಲ್ಲಾ ಅವರವರ ಇಷ್ಟ" ಎಂದಳು. ಮುರಳಿ ಸುಮ್ಮನೇ ನೋಡಿದ.

ಮುರಳಿಯ ಇಚ್ಛೆಯಂತೆ ಮದುವೆ ಅತಿ ಸರಳವಾಗಿ ನೆರವೇರುವುದೆಂದು ತೀರ್ಮಾನವಾಗಿತ್ತು. ಅವನು ತನ್ನೆಲ್ಲಾ ಕ್ಲೈಂಟ್ಸ್‌ಗಳಿಗೆ ಆಹ್ವಾನ ಪತ್ರಿಕೆಯನ್ನು ಕಳಿಸಿದ. ಈ ಹಿಂದೆ ತನ್ನ ಹೆಣ್ಣು ಮಕ್ಕಳ ಸಲುವಾಗಿ ಬಂದಿದ್ದ ಹೆಂಗಸು, ಆಹ್ವಾನ ಪತ್ರಿಕೆಯನ್ನು ಹಿಡಿದುಕೊಂಡು ಬಂದಳು.

"ಅಂತೂ ನಿಮ್ಮ ಪರ್ಸನಲ್ ವಿಷಯಗಳೇ ನಿಮಗೆ ಹೆಚ್ಚಾಯ್ತು ಅಲ್ವಾ? ಈಗ ಮದುವೆ... ಆಮೇಲೆ ಹನಿಮೂನ್... ಈ ಸಂಭ್ರಮದಲ್ಲೇ ಮುಳುಗಿ ಬಿಡ್ತೀರಿ... ನಮ್ಮ ಪ್ರಾಬ್ಲಂನೇನು ಸಾಲ್ವ್ ಮಾಡ್ತೀರಾ?" ದಬಾಯಿಸಿದಳು.

"ಹಾಗಾದ್ರೆ ನಮ್ಮ ಪರ್ಸನಲ್ ಅಫೇರ್‌ಗಳಿಗೆ ಸಮಯವೇ ಬೇಡ್ವಾ? ಹಾಗೆಲ್ಲಾ ಅಂದ್ಕೋಬೇಡಿ. ನನಗೂ ಜವಾಬ್ದಾರಿ ಇದೆ ಮೇಡಂ... ನನ್ನ ಲೇಡಿ ಅಸಿಸ್ಟೆಂಟ್ ಬಂದಿರಬೇಕಲ್ಲ."

"ಹೂಂ ಬಂದಿದ್ರು... ಹೆಣ್ಣು ಮಕ್ಕಳನ್ನು ನಾನಾ ವಿಧವಾಗಿ ಪ್ರಶ್ನಿಸಿದರು. ನಿಮ್ಮ ಹತ್ತಿರದವರೇ ಯಾರೋ ಈ ಕೆಲಸ ಮಾಡ್ತಿದಾರೆ... ಯಾರೂಂತ ನೀವೇ ಪತ್ತೆ ಹಚ್ಚಬೇಕು ಅಂತ ನಂಗೇ ಕೆಲಸ ಹಚ್ಚಿದರು.

"ಅವರು ಹೇಳಿದ್ದು ಸರಿಯಾಗಿಯೇ ಇದೆ... ನಿಮ್ಮ ಮನೆಗೆ ಬರೋರು ಹೋಗೋರು ಯಾರು! ಯಾರ ಬಗ್ಗೆಯಾದರೂ ಅನುಮಾನ ಬಂದರೆ, ಆ ವ್ಯಕ್ತಿಯ ವರ್ತನೆಗಳಿಂದ ಪತ್ತೆ ಮಾಡಬಹುದು ಮೇಡಂ... ಅಂಥ ವ್ಯಕ್ತಿ ನಾರ್ಮಲ್

ಆಗಿರಲು ಸಾಧ್ಯವಿರುವುದಿಲ್ಲ. ಸ್ವಲ್ಪ ಮೆಂಟಲ್ ಪ್ರಾಬ್ಲಂ ಇರುತ್ತೆ... ನಿಮ್ಮ ಕಡೆ ಅಂಥೋರು ಯಾರಾದ್ರೂ ಇರಬಹುದಾ ನೋಡಿ?"

"ನೋಡಿದ್ದೂ ಆಯ್ತು... ಪತ್ತೆ ಹಚ್ಚಿದ್ದೂ ಆಯ್ತು... ನಾನು ಕೊಟ್ಟ ಅಡ್ವಾನ್ಸ್ ಹಣವನ್ನು ನನಗೆ ವಾಪಸ್ಸು ಕೊಡಿ." ಆಗ್ರಹ ಪಡಿಸಿದಳು.

"ಓ ಧಾರಾಳವಾಗಿ ಕೊಡ್ತೀನಿ. ಒಟ್ನಲ್ಲಿ ನಿಮ್ಮ ಕೆಲಸ ಆಯ್ತಲ್ಲ. ಅದು ಮುಖ್ಯ. ಎಲ್ಲರೂ ನಿಮ್ಮ ಹಾಗೇ ಎಚ್ಚರ ವಹಿಸಿ, ತಾಳ್ಮೆಯಿಂದ, ವಿವೇಕದಿಂದ ಕೆಲಸ ಮಾಡಿಕೊಂಡರೆ ಇಂಥಾ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು." ಸಮಾದಾನದಿಂದ ಹೇಳಿದ.

"ಹಾಗಾದ್ರೆ ನಿಮ್ಮಂಥ ಏಜೆಂಟುಗಳ್ಯಾಕೆ?"

"ಎಲ್ರೂ ನಿಮ್ಮ ಹಾಗೇ ಜವಾಬ್ದಾರಿ ತಗೊಳ್ಳೋಕೆ ಸಾಧ್ಯವಿಲ್ಲವಲ್ಲ."

"ಅಂತೂ ಮಾತು ಮಾತ್ರ ಚೆನ್ನಾಗಿ ಆಡ್ತೀರಿ."

"ಅದೇ ನನ್ನ ಬಂಡವಾಳ. ನಮ್ಮ ಮದುವೆಗೆ ನೀವು ತಪ್ಪದೇ ಬನ್ನಿ." ಮತ್ತೊಮ್ಮೆ ಆಹ್ವಾನಿಸಿದ. "ಅಲ್ಲಿ ಆಫೀಸ್ನಲ್ಲಿ ನಿಮ್ಮ ಹಣದ ಚೆಕ್ ರೆಡಿಯಾಗಿರುತ್ತೆ. ಇನ್ನೆರಡು ದಿನಗಳನ್ನು ಬಿಟ್ಟು ಬಂದು ಕಲೆಕ್ಟ್ ಮಾಡಿಕೊಳ್ಳಿ... ಹಾಗೇ ನಿಮಗೆ ಏನೇ ಸಹಾಯ ಬೇಕಾದ್ರೂ ಫೋನ್ ಮಾಡಿ... ಆಫೀಸಿಗೆ ಬನ್ನಿ... ಆಲ್ವೇಸ್ ಯೂ ಆರ್ ವೆಲ್ ಕಂ..." ಎಂದು ಹೇಳಿ ಕೈ ಮುಗಿದು ಆಕೆಯನ್ನು ಕಳಿಸಿಕೊಟ್ಟ.

*　　*　　*

ವಿನುತಾ–ಮುರಳಿಯ ಮದುವೆಯ ದಿನದಂದೇ, ಮಧುಸೂದನ–ಸರಿತಾರ ಲಗ್ನಪತ್ರಿಕೆಯ ಶಾಸ್ತ್ರವನ್ನು ಮಾಡಿದರು. ಸದಾನಂದನ ಮನೆಯ ಸಮೀಪದಲ್ಲಿದ್ದ ಒಂದು ಪಾರ್ಟಿ ಹಾಲ್‌ನಲ್ಲಿ ಸಮಾರಂಭಕ್ಕೆ ಎಲ್ಲಾ ಸಿದ್ಧತೆ ಆಗಿತ್ತು. ಸಮಯಕ್ಕೆ ಸರಿಯಾಗಿ ಮದುವೆ ಮಂಟಪಕ್ಕೆ ಆಗಮಿಸಿದ್ದ ಮಧುಸೂದನ. ಮಂಜುಳಾ ಬಂದಿರಲಿಲ್ಲ. ಅದಕ್ಕೆ ತನ್ನದೇ ಆದ ಕಾರಣವನ್ನು ಊಹಿಸಿದ.

ಮುರಳಿ, ಮಧುಸೂದನ ಆಗಾಗ್ಗೆ ತಾಯಿಯ ಕಡೆ ನೋಡುತ್ತಿರುವುದನ್ನು ಗಮನಿಸಿದ್ದ. ಹೃದಯ ಕಲಕಿದ ಕೊಳವಾಗಿತ್ತು. ಬೆನ್ನು ನೋವು ಹೆಚ್ಚಾಗಿದ್ದ ಕಾರಣ ಪುರುಷೋತ್ತಮ ಬಂದಿರಲಿಲ್ಲ. ಅವರನ್ನು ಮುಹೂರ್ತದ ವೇಳೆಗೆ ಕರೆತರಬೇಕೆಂದು ಕೊಂಡಿದ್ದರು. ಮಧುಸೂದನ ಪುರುಷೋತ್ತಮನನ್ನು ಎಲ್ಲಿಯೂ ಕಾಣಲಿಲ್ಲವಾದುದರಿಂದ ನಿರಾಳಗೊಂಡಿದ್ದ.

ಹಸೆಮಣೆಯ ಮೇಲೆ ಕುಳಿತಿದ್ದ ಮುರಳಿ, ತಾಯಿಯ ಚಡಪಡಿಕೆಯನ್ನು ಗಮನಿಸಿ ಆಕೆಯ ಕಿವಿಯಲ್ಲಿ ಏನನ್ನೋ ಉಸುರಿದ. ವತ್ಸಲಾ ಮಧುಸೂದನ

ಕುಳಿತಿದ್ದೆಡೆಗೆ ಬಂದಳು.

"ಮಧು, ನನಗೊಂದು ಹೆಲ್ಪ್ ಮಾಡ್ತೀಯಾಪ್ಪಾ?" ಹತ್ತಿರ ನಿಂತು ಕೇಳಿದವಳನ್ನೇ ಮಧುಸೂದನ ತದೇಕವಾಗಿ ನೋಡಿದ. ಇವಳು ನನ್ನನ್ನು ಹೆತ್ತ ತಾಯಿ ಎಂಬ ಮಮತೆ ಉಕ್ಕಿತು. ಕಣ್ಣುಗಳಲ್ಲಿ ಗೌರವ ಉಕ್ಕಿತು.

"ಏನಾಗ್ಬೇಕಮ್ಮ ಹೇಳಿ..." ಹೃತ್ಪೂರ್ವಕವಾಗಿ ಕೇಳಿದ.

"ಮುರಳಿಯ ತಂದೆಗೆ ಬೆನ್ನು ನೋವು ಹೆಚ್ಚಾಗಿದ್ದರಿಂದ ಇಲ್ಲಿಗೆ ಬರೋಕ್ಕೆ ಆಗಿಲ್ಲ... ಸ್ವಲ್ಪ ಹೊತ್ತಿಗೆ ಮುಹೂರ್ತ... ಅವರು ಬಂದು ನವದಂಪತಿಗಳಿಗೆ ಆಶೀರ್ವಾದ ಮಾಡಲಿ ಅಂತ ನನ್ನಾಸೆ. ಮುರಳಿ ಎದ್ದು ಹೋಗುವಂತಿಲ್ಲ. ಅವರನ್ನು ಕರ್‍ಕೊಂಡು ಬರೋಕ್ಕೆ ಆಗುತ್ತಾ?"

ಮಧುಗೆ ಉಸಿರು ಸಿಕ್ಕಿಕೊಂಡಂತಾಗಿತ್ತು... ಇದೆಂಥಾ ಪರಿಸ್ಥಿತಿ? ಇಲ್ಲವೆನ್ನ ಲಾರ... ಆದರೆ ಮನಃಪೂರ್ವಕವಾಗಿ ಮಾಡಲು ಸಿದ್ಧನಿಲ್ಲ.

"ಯಾಕಪ್ಪಾ ಅನುಮಾನಿಸ್ತಾ ಇದೀಯ.....ನೀನೂ ನನಗೆ ಮಗನಿದ್ದ ಹಾಗೆ, ಆ ಸಲುಗೆಯಿಂದ ಹೇಳ್ತಿದೀನಿ."

"ಹಾಗಲ್ಲ ಅವರು ನನ್ನ ಜೊತೆ ಬರೋಕೆ ಒಪ್ತಾರೋ ಇಲ್ವೋ... ಅವರ ಪರಿಚಯನೇ ಇಲ್ಲವಲ್ಲ."

"ನಾನೇ ಬರಬಹುದಾಗಿತ್ತು. ಇಲ್ಲಿ ಮುರಳೀ ಒಬ್ಬನೇ ಆಗಿಬಿಡ್ತಾನೆ... ಡ್ರೈವರ್‍ರು ಇದಾನೆ. ನಮ್ಮ ಕಾರ್‍ನಲ್ಲೇ ಹೋಗಬಹುದು."

"ಸರಿ ಅಮ್ಮಾ..." ಇಷ್ಟವಿಲ್ಲದಿದ್ದರೂ ಹೊರಟ. ಮುರಳಿಯ ಕಡೆ ನೋಡಿದ. ಅವನ ಕಣ್ಣುಗಳು ಮಿಂಚಿದ್ದವು. ಇದು ಅವನದೇ ಕಿತಾಪತಿ ಅಂತ ಅನ್ನಿಸದೇ ಇರಲಿಲ್ಲ. ಆದರೂ ಹೊರಟ... ಮನೆಯ ಮುಂದೆ ಕಾರನ್ನು ನಿಲ್ಲಿಸಿ ಇಳಿದು ಒಂದು ಘಳಿಗೆ ಸುಮ್ಮನೇ ನಿಂತ. ಯುದ್ಧದಲ್ಲಿ ತನ್ನವರನ್ನು ಎದುರಿಸಲಾಗದೇ ಗೊಂದಲದೊಳಗೆ ಸಿಕ್ಕಿಬಿದ್ದ ಅರ್ಜುನನ ಸ್ಥಿತಿಯಂತಾಗಿತ್ತು ಇವನ ಸ್ಥಿತಿ... ನಿಧಾನವಾಗಿ ನಡೆದು ಬಂದು, ಮುಂಬಾಗಿಲ ಕರೆಗಂಟೆಯನ್ನು ಒತ್ತಿದ. ಬಾಗಿಲನ್ನು ತೆರೆದವಳು ಅಡಿಗೆಯವಳು. ಅವಳು ಅವನನ್ನು ಮುರುಳಿಯೆಂದೇ ಭಾವಿಸಿ, ನಸುನಕ್ಕು ದಾರಿಯನ್ನು ಬಿಟ್ಟಳು. ಅಲ್ಲಿಯೇ ನಿಂತು, ಎಲ್ಲಾ ದಿಕ್ಕುಗಳನ್ನು ನೋಡಿದ. ಅವಳು ಬೆದರಿದಳು.

"ನಾನು ಮಧುಸೂದನ ಅಂತ. ಮುರಳೀಧರ್‌ನ ಫ್ರೆಂಡ್... ಪುರುಷೋತ್ತಮ ಅವರನ್ನು ಕರೆದುಕೊಂಡು ಹೋಗಲು ಬಂದಿದೀನಿ. ಅವರ ರೂಮು ಎಲ್ಲಿ?"

"ನಾನು ನೀವು ಮುರಳೀ ಅಂತಲೇ ಅಂದ್ಕೊಂಡೆ. ಅವರ ಹಾಗೇ ಇದೀರಿ. ಅವರ ರೂಮು ಅದು. ಮಲಗಿದಾರೋ ಏನೋ ಎಬ್ಬಿಸ್ಲಾ?" ಕೇಳಿದಳು.

"ಪರವಾಗಿಲ್ಲ ಬಿಡಿ. ನಾನು ನೋಡ್ತೀನಿ." ಎನ್ನುತ್ತಾ ರೂಮಿನ ಬಾಗಿಲಿಗೆ ಬಂದು ನಿಂತ. ಎದುರಿಗೆ ಹಾಕಿದ್ದ ಮಂಚದ ಮೇಲೆ ಮಲಗಿದ್ದ ಪುರುಷೋತ್ತಮ ಕಣ್ಣುಗಳನ್ನು ಮುಚ್ಚಿಕೊಂಡಿದ್ದ. ಅಲ್ಲಿ ಕುಳಿತಿದ್ದ ನರ್ಸ್ ಇವನನ್ನು ಕಂಡು ಎದ್ದು ನಿಂತಳು. ಇವನು ಮೆಲ್ಲನೆ ಒಳಗೆ ಬಂದು ಅವರ ಎದುರಿಗೆ ನಿಂತು, ಅವರನ್ನೇ ದಿಟ್ಟಿಸಿದ. ಯಾವ್ಯಾವುದೋ ಭಾವನೆಗಳು ಉದಿಸಿದವು. ಆದರೆ ಅದರಲ್ಲಿ 'ಈತ ನನ್ನ ಜನ್ಮದಾತ' ಎಂಬ ಹೆಮ್ಮೆಯ ಭಾವನೆ ಉಕ್ಕಲಿಲ್ಲ. ತನ್ನನ್ನು ಈ ಪರಿವಾರದಿಂದ ದೂರವಿರಿಸಿದ ಕಟುಕ ಎನಿಸಿತು. ಯಾವ ಸ್ವಾರ್ಥಕ್ಕಾಗಿ ಈ ವ್ಯಕ್ತಿ ಹೀಗೆ ಮಾಡಿದ? ಈ ಸ್ವಾರ್ಥದಿಂದ ನಮಗೆಲ್ಲಾ ಆಗಿದ್ದು ದ್ರೋಹ ...

"ಮಲಗಿದಾರೆ... ಎಬ್ಬಿಸ್ಲಾ?" ಅವಳು ಕೇಳಿದ ದನಿಗೆ, ಪುರುಷೋತ್ತಮನಿಗೆ ಎಚ್ಚರವಾಯಿತು. ಕಣ್ಣು ಬಿಟ್ಟು ಎದುರು ನಿಂತವನನ್ನೇ ನೋಡಿದ. ಮುರಳೀ ಎಂದೇ ಭಾವಿಸಿದ. ಮುಗುಳ್ನಕ್ಕು ನರ್ಸನ್ನು ಹೊರಕ್ಕೆ ಹೋಗುವಂತೆ ಹೇಳಿದ.

"ಫಂಕ್ಷನ್ ಮುಗಿದೇ ಹೋಯ್ತಾ?" ನಿನ್ನ ಹೆಂಡ್ತಿ ಎಲ್ಲಿ?" ಅವಸರಿಸಿ ಕೇಳಿದ.

"ನಾನು ಮುರಳಿಯಲ್ಲ... ಮಧು..." ಪುರುಷೋತ್ತಮ ಎದ್ದು ಕೂರಲು ಪ್ರಯತ್ನಿಸಿದ. ಅವನ ಮುಖದಲ್ಲಿ ಭಾವನೆಗಳು ಕುಣಿದಾಡಿದವು. ತುಟಿಗಳು ಕಂಪಿಸಿದವು.

"ಮಧೂನಾ... ನಾನು ಮುರಳಿ ಅಂತ್ಲೇ ಅಂದ್ಕೊಂಡೆ... ಅಂತೂ ನನ್ನನ್ನು ನೋಡೋಕೆ ಅಂತ ಬಂದ್ಯಲ್ಲಾ... ಮಂಜುಳಾನ್ನೂ ಬಂದಿದಾಳಾ?" ಅವನ ಬೆನ್ನ ಹಿಂದಕ್ಕೆ ದೃಷ್ಟಿಯನ್ನು ಹಾಯಿಸಿದ. ಅವಳಿಲ್ಲದುದನ್ನು ಕಂಡು ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟ.

"ಇಲ್ಲ ನಾನೊಬ್ನೇ ಬಂದಿದೀನಿ. ನಿಮ್ಮನ್ನು ಕರ್ಕೊಂಡು ಹೋಗೋಕ್ಕೆ."

"ಎಲ್ಲಿಗೆ?" ಗಾಬರಿಯಿಂದ ಕೇಳಿ, ಕಣ್ಣರಳಿಸಿದ.

"ಮದುವೆ ಮಂಟಪಕ್ಕೆ... ಅಮ್ಮ ಹೇಳಿದ್ರು... ಕಾರನ್ನು ತಂದಿದೀನಿ... ಬರ್ತೀರಾ?" ದನಿ ಒಣಗಿತ್ತು.

"ಬರ್ತೀನಿ. ಆದರೆ ನಂಗೆ ನಡೆಯೋಕೇ ಆಗಲ್ವಲ್ಲಪ್ಪಾ... ಎತ್ಕೊಂಡು ಹೋಗ್ಬೇಕಾಗುತ್ತೆ." ಶುಷ್ಕವಾದ ನಗೆಯನ್ನು ನಕ್ಕು ಕೇಳಿದ.

"ಸರಿ, ಹಾಗೇ ಮಾಡಿದ್ರಾಯ್ತು. ರೆಡಿಯಾಗಿ, ನಾನು ಹೊರಗಿರ್ತೀನಿ." ಅವನು ಹೊರಟ. ಪುರುಷೋತ್ತಮ ಅವನನ್ನು ಕರೆದು ನಿಲ್ಲಿಸಿದ.

"ಮಧೂ... ಒಂದ್ಗಳ್ಗೆ ನಿಂತ್ಕೋ... ನಾನು ನಿನ್ಹತ್ರ ಮಾತಾಡ್ಬೇಕು. ಕಣ್ತುಂಬಾ... ನಿನ್ನನ್ನು ನೋಡ್ಬೇಕು..." ದನಿಯಲ್ಲಿ ರಿಕ್ವೆಸ್ಟ್ ಇದ್ದುದನ್ನು ಗಮನಿಸಿದರೂ ತಿರುಗಲಿಲ್ಲ.

"ಏನೂ ಬೇಕಾಗಿಲ್ಲ. ಅದರ ಅಗತ್ಯ ಇಬ್ಬರಿಗೂ ಇಲ್ಲ." ಹಾಗೇ ಹೇಳಿದ.

"ನಿನಗೆ ನನ್ಮೇಲೆ ಕೋಪ ಅಲ್ವಾ ಮಧು... ಈ ರಹಸ್ಯ ರಹಸ್ಯವಾಗಿಯೇ ಇರಲಿ ಅಂತ ಬಯಸಿದ್ದೆ ನಾನು... ಆದರೆ ಮಂಜುಳ ನನಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲ... ತಪ್ಪಾಗಿ ಹೋಯ್ತು."

"ತಪ್ಪು ಯಾರದ್ದೇ ಇರಲಿ. ದ್ರೋಹವಾದದ್ದು ನಂಗೆ. ಆದರೆ ಅದನ್ನೆಲ್ಲ ಚಿಂತಿಸುವ ವ್ಯವಧಾನ ನನಗಿಲ್ಲ. ನಾನು ಸಿಸ್ಟರ್‌ನ ಕಳಿಸ್ತೀನಿ. ಬೇಗ ರೆಡಿಯಾಗಿ......" ಎಂದು ಹೇಳಿ ಹೊರಬಂದ. ಪಿಸುದನಿಯಲ್ಲಿ ಮಾತನಾಡುತ್ತಿದ್ದ ನರ್ಸ್ ಹಾಗೂ ಅಡಿಗೆಯವರು, ಇವನನ್ನು ಕಂಡು ಮಾತನ್ನು ನಿಲ್ಲಿಸಿದರು. ಇವನು ನರ್ಸ್‌ಗೆ ಹೇಳಿ, ಹೊರಗೆ ವರಾಂಡದಲ್ಲಿ ಬಂದು ನಿಂತ. ಸ್ವಲ್ಪ ಹೊತ್ತಿನಲ್ಲೇ ನರ್ಸ್ ಬಂದು ಕರೆದಳು. ಮುಖ ತೊಳೆದು ಒರೆಸಿ ಹೊಸ ಬಟ್ಟೆಗಳನ್ನು ಹಾಕಿ ರೆಡಿ ಮಾಡಿದ್ದಳು. ನರ್ಸ್ ಎಬ್ಬಿಸಿ ಕೂರಿಸಿದಳು. ಇಬ್ಬರೂ ಸೇರಿ ನಿಲ್ಲಿಸಿದರು. ಸರಿಯಾಗಿ ನಿಲ್ಲಲಾಗದೇ ಒದ್ದಾಡುತ್ತಿದ್ದವನನ್ನು ಮಧುಸೂದನ ಅನಾಮತ್ತು ಎತ್ತಿಕೊಂಡು ಹೊರನಡೆದ. ಹಿಂದೆ ಹಿಂದೆಯೇ ಬಂದ ನರ್ಸ್ ಅವನಿಗೆ ಸಹಾಯಕಳಾದಳು. ಇಬ್ಬರೂ ಪ್ರಯಾಸದಿಂದ ಪುರುಷೋತ್ತಮನನ್ನು ಕಾರಿನ ಹಿಂದಿನ ಸೀಟಿನಲ್ಲಿ ಕೂರಿಸಿದರು. ನರ್ಸ್ ಅವನ ಬಳಿಯಲ್ಲಿ ಕುಳಿತಳು.

"ನೀವೂ ಬರ್ತೀರಾ?" ಅಡಿಗೆಯಾಕೆಯನ್ನು ಕೇಳಿದ.

"ಒಬ್ಬಳೇ ಕೂತು ಏನ್ಮಾಡಲಿ?" ಎಂದು ಹೇಳಿ, ಮುಂಬಾಗಿಲಿಗೆ ಬೀಗ ಹಾಕಿ ಬಂದು ಕಾರನ್ನೇರಿದಳು. ಕಾರು ಹೊರಟಿತು. ಮುಂದಿನ ಕನ್ನಡಿಯಲ್ಲಿ, ಹಿಂದಿನ ಸೀಟಿನಲ್ಲಿ ಒರಗಿದ್ದ ತಂದೆಯ ಕಡೆ ನೋಡುತ್ತಾ ಮಧುಸೂದನ ಕಾರನ್ನು ಓಡಿಸಿದ. ಮದುವೆ ನಡೆಯುತ್ತಿದ್ದ ಸ್ಥಳಕ್ಕೆ ಕಾರನ್ನು ತಂದು ನಿಲ್ಲಿಸಿದ. ಆಗಿನಂತೆಯೇ ಅವರನ್ನು ಎತ್ತಿಕೊಂಡು ಮದುವೆ ಮಂಟಪಕ್ಕೆ ಕರೆತಂದ. ಅಲ್ಲಿ ನೆರೆದಿದ್ದವರೆಲ್ಲ ಅವನ ಕಡೆ ನೋಡಿದರು. ಮುರಳಿ ತನ್ನ ಮಗ್ಗುಲಲ್ಲಿ ಕುಳಿತಿದ್ದ ವಿನುತಳ ಮೊಣಕೈ ತಿವಿದು ತೋರಿಸಿದ. ಅಚ್ಚರಿಯನ್ನು ವ್ಯಕ್ತಪಡಿಸಿದ. ವತ್ಸಲಾ ಬೆರಗಾಗಿ ಅವನನ್ನೇ ನೋಡುತ್ತಾ ಬಳಿ ಸಾರಿದಳು.

ಪುರುಷೋತ್ತಮನಿಗೆ ಕೂರಲು ಒಂದು ವ್ಯವಸ್ಥೆ ಆಗುವವರೆಗೂ ಮಧುಸೂದನ ಅವರನ್ನು ಹಾಗೇ ಎತ್ತಿಕೊಂಡು ನಿಂತಿದ್ದ. ಪುರುಷೋತ್ತಮ ಹಾಗೇ ಮಧು ಮಕ್ಕಳಿಗೆ ಕೈ ಎತ್ತಿ ಆಶೀರ್ವಾದ ಮಾಡಿದ. ಮುರಳಿಯ ಕಣ್ಣು ಹನಿ ಗೂಡಿದ್ದವು. ಮುಹೂರ್ತದ ವೇಳೆ ಕಳೆಯುವವರೆಗೂ ಕುಳಿತಿದ್ದ. ಪುರುಷೋತ್ತಮ ನೋವಿನಿಂದ ಚಡಪಡಿಸುತ್ತಿರುವುದನ್ನು ಮಧುಸೂದನ ಗಮನಿಸಿ, ನರ್ಸ್‌ಗೆ ಹೇಳಿ, ಆಗಿನಂತೆಯೇ ಪುರುಷೋತ್ತಮನನ್ನು ಎತ್ತಿಕೊಂಡು ಬಂದು

ಕಾರಿನಲ್ಲಿ ಕೂರಿಸಿದ.

ಅಡಿಗೆಯವರನ್ನು ನರ್ಸ್‌ನ್ನು ಹೊರಡಿಸಿದ. ಕಾರಿನ ತನಕ ಬಂದ ವತ್ಸಲಾ ಮಧುಸೂದನನಿಗೆ ಥ್ಯಾಂಕ್ಸ್ ಹೇಳಿದಳು. ಸದಾನಂದ ಹಾಗೂ ಸುಜಾತ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಮಧುಸೂದನನ್ನು ಹೊಗಳಿದರು. ಫಲ ತಾಂಬೂಲ ಗಳನ್ನು ಕಾರಿನಲ್ಲಿ ತಂದಿರಿಸಿದರು.....ಸಿಹಿ ತಿಂಡಿಗಳನ್ನು ಡಬ್ಬಿಗಳಿಗೆ ಹಾಕಿ ತಂದಿತ್ತರು.

ಮಧುಸೂದನ ತನ್ನ ಕರ್ತವ್ಯ ಎಂಬಂತೆ ಅವರನ್ನು ಮನೆಗೆ ತಲುಪಿಸಿ, ಎಚ್ಚರಿಕೆಯಿಂದ ಮಲಗಿಸಿದ. "ನೋವಿಗೆ ಅದೇನು ಮಾಡ್ಬೇಕೋ ಅದನ್ನು ಮಾಡಿ, ನಾನಿನ್ನು ಬರ್ತೀನಿ" ಎಂದು ನರ್ಸ್‌ಗೆ ಹೇಳಿ ಹೊರಟ.

"ಮಧು... ಥ್ಯಾಂಕ್ಸ್ ಕಣಪ್ಪಾ... ಆಗಾಗ್ಗೆ ಬರ್ತಾ ಇರು... ನಿನ್ನ ಮದುವೆಯ ಹೊತ್ತಿಗೆ ನಾನು ಪೂರ್ಣ ಗುಣಮುಖನಾಗಿ ಇರ್ತೀನಿ. ನಾನೇ ನಡೆದುಕೊಂಡು ಬಂದು ಆಶೀರ್ವಾದ ಮಾಡ್ತೀನಿ ನೋಡ್ತಿರು" ಎಂದು ನೋವಿನಿಂದ ಹಿಂಸೆ ಆಗುತ್ತಿದ್ದರೂ ಮಂದಹಾಸ ಬೀರಿ ಹೇಳಿದ.

ಮಧುಸೂದನ ಸುಮ್ಮನೇ ದೀರ್ಘವಾಗಿ ಅವನನ್ನೇ ನೋಡಿ, ತನ್ನ ಪಾಡಿಗೆ ತಾನು ವಾಪಸ್ಸು ಮದುವೆ ಮನೆಗೆ ಬಂದ. ಅವನಿಗಾಗಿಯೇ ಕಾಯುತ್ತಿದ್ದ ಮುರಳೀ ಥ್ಯಾಂಕ್ಸ್ ಎಂದು ಹೇಳಿದ. ಮಧುಸೂದನ ನವದಂಪತಿಗಳ ಕೈ ಕುಲುಕಿ ಶುಭಾಶಯ ವನ್ನು ಕೋರಿದ. ವತ್ಸಲಾ ಅವನನ್ನೇ ಮೆಚ್ಚುಗೆಯಿಂದ ನೋಡಿದಳು. ಸರಿತಾ ನಾಚಿಕೆಯಿಂದ ಅವನ ಬಳಿಗೆ ಬಂದಿದ್ದಳು. "ಊಟಕ್ಕೆ ಬನ್ನಿ, ಎಲ್ರೂ ನಿಮ ಗಾಗಿಯೇ ಕಾಯ್ತಾ ಇದಾರೆ." ಎಂದಳು. ಎಲ್ಲರೂ ಊಟದ ಹಾಲಿಗೆ ಬಂದರು.

ವಿನುತಾ ಸಮಯ ನೋಡಿ ಮಧುಸೂದನನ್ನು ಮಾತನಾಡಿಸಿದಳು. "ಒಳ್ಳೇ ಹೀರೋ ಥರ ಕಾಣ್ತಿದೀರಿ... ಎಲ್ರೂ ನಿಮ್ಮನ್ನು ಹೊಗಳೋರೇ... ಸರಿತಾ ಪುಣ್ಯ ಮಾಡಿದ್ದಳು. ನಿಮ್ಮಂಥ ವರನ್ನ ಮದುವೆಯಾಗಲು" ಮನಃಪೂರ್ವಕವಾಗಿ ಹೊಗಳಿದಳು. ಸರಿತಾ ನಾಚಿದಳು.

"ಮುರಳಿಯಂತೂ ನಿಮ್ಮನ್ನು ಹೊಗಳಿದ್ದೇ ಹೊಗಳಿದ್ದು. ನಿಮ್ಮ ಧೈರ್ಯ ಅವನಿಗಿಲ್ಲ. ನೀವು ನಿಜವಾಗಿಯೂ ಪೋಲೀಸ್ ಅಧಿಕಾರಿಯ ಮಗ..." ಮತ್ತೆ ಹೊಗಳಿದ್ದಳು.

"ನೀವು ಧೈರ್ಯವಂತೆ... ಆ ಪೋಲೀಸ್ ಅಧಿಕಾರಿಯ ಹತ್ತಿರ ಮಾತನಾಡುವ ಧೈರ್ಯ ಮಾಡಿದ್ದು ನೀವೇ ತಾನೇ... " ಅವಳು ನಿಮಗ್ಹೇಗೆ ತಿಳೀತು ಅನ್ನುವಂತೆ ನೋಡಿದಳು.

"ಏನೂ ಇಲ್ಲ, ನಾನು ಊಹಿಸಿದೆ ಅಷ್ಟೇ... ನಿಮ್ಮ ಆಸೆ ನೆರವೇರಿತು... ಪ್ರೀತಿ ಫಲಿಸಿತು. ನೀವಿಬ್ಬರೂ ಸದಾಕಾಲ ಸುಖವಾಗಿರಿ." ಹಾರೈಸಿದ.

"ಈಗ ಹೇಳಿ. ನೀವು ನನಗೆ ಭಾವನೋ, ಮೈದುನನೋ?"

"ಅದಕ್ಕಿಂತ ಮಿಗಿಲಾದ ಒಬ್ಬ ಸ್ನೇಹಿತ ಅಂತ ಅಂದ್ಕೊಳ್ಳಿ. ನಾನು ನಿಮ್ಮ ಪ್ರೀತಿಯ ತಂಗಿಯ ಪ್ರೀತಿಯ ಗಂಡ ಮಾತ್ರ."

"ನಿಮ್ಮ ತಾಯಿ ಯಾಕೆ ಬರ್ಲಿಲ್ಲ?" ಅನುಮಾನದಿಂದ ಪ್ರಶ್ನಿಸಿದಳು.

"ನಾನು ಕಾರಣವನ್ನು ಕೇಳಲಿಲ್ಲ... ಬಲವಂತವನ್ನೂ ಮಾಡಲಿಲ್ಲ. ಈಗ ಆ ಮಾತೇಕೆ? ನಾನಿನ್ನು ಬರ್ತೀನಿ" ಎಂದು ಹೇಳಿ ಮುರಳಿ ಇದ್ದಲ್ಲಿಗೆ ಬಂದ.

"ಹ್ಯಾಪೀ ಮ್ಯಾರೀಡ್ ಲೈಫ್... ವಿನುತನ್ನ ನಿಮಗೋಸ್ಕರ ಬಿಟ್ಟು ಕೊಟ್ಟಿದೀನಿ. ಚೆನ್ನಾಗಿ ನೋಡ್ಕೊಳ್ಳಿ... " ಮುಗುಳ್ನಕ್ಕು ಹೇಳಿದ.

"ಥ್ಯಾಂಕ್ಸ್ ಬ್ರದರ್... ನಿಮ್ಮನ್ನು ಅರ್ಥ ಮಾಡ್ಕೊಳ್ಳೋದೇ ಕಷ್ಟ ಆಗ್ತಿದೆ. ಹೀರೋ... ಹೀರೋ ಥರ ಕಾಣಿಸ್ತೀರಿ. ನಿಜಕ್ಕೂ ನೀವು ಪೋಲೀಸ್ ಅಧಿಕಾರಿಯ ಮಗ."

"ಹೀರೋ ಆಗೋಕೆ, ಜನ್ಮದಾತ ಪೋಲೀಸ್ ಅಧಿಕಾರಿಯಾಗ್ಬಿರಬೇಕು ಎಂಬ ಪಟ್ಟ ನನಗೆ ಬೇಡ. ನಾನು ಹೀಗೇ ಇರಲು ಬಯಸ್ತೀನಿ... ನಾನು ಹೊರಡ್ತೀನಿ."

"ಅಮ್ಮಂಗೆ ಹೇಳ್ಬಿಟ್ಟು ಹೋಗಿ. ಅವಳಿಗೆ ಖುಷಿಯಾಗುತ್ತೆ."

"ಖಂಡಿತಾ... ನೀವು ಹೇಳಲೇ ಬೇಕಾಗಿಲ್ಲ." ಎಂದು ಹೇಳಿ ವತ್ಸಲಾ ಇದ್ದಲ್ಲಿಗೆ ಬಂದ. "ಅಮ್ಮಾ ನಾನಿನ್ನು ಬರ್ತೀನಿ. ನನ್ನ ಮದುವೆಗೆ ನೀವು ಬಂದು ಆಶೀರ್ವಾದ ಮಾಡಬೇಕು." ಅಂತ ಹೇಳಿ ಅವಳ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ.

"ನನಗೆ ನೀನು ನನ್ನ ಮುರಳಿಯ ಹಾಗೇ.... ನಾನು ಬಂದೇ ಬರ್ತೀನಿ... ನಿನ್ನ ತಾಯಿ ಯಾಕೆ ಬರಲಿಲ್ಲಾ?"

ಅವನ ಮುಖ ಕಳೆಗುಂದಿತು.

"ಅವರಿಗೆ ಸ್ವಲ್ಪ ಹುಷಾರಿಲ್ಲ" ಎಂದಷ್ಟೇ ಹೇಳಿ ಹೊರಟೇ ಬಿಟ್ಟ. ಸರಿತಾ ಅವನೊಡನೆ ಹೊರಟಿದ್ದಳು. ಸದಾನಂದ, ಸುಜಾತ, ಅವನನ್ನು ಬೀಳ್ಕೊಡಲು ಹೊರಟರು. ವತ್ಸಲಾ ಅಭಿಮಾನದಿಂದ ಅವನನ್ನೇ ನೋಡುತ್ತಿದ್ದಳು.

ಮುರಳಿ ಯಾರಿಗೂ ಕಾಣದಂತೆ ಮೆಲ್ಲನೆ ಅವಳ ಕೈ ಹಿಡಿದ. "ಅಬ್ಬಾ... ಅಂತೂ ನಾನು ನಿನ್ನ ಕೈ ಹಿಡಿದೆ." ಎಂದ

"ಇದಕ್ಕೆ ಎಷ್ಟು ರೀತಿಯ ನಾಟಕಗಳು! ವಿಧ ವಿಧವಾದ ಪಾತ್ರಗಳು, ಇದೆಲ್ಲಾ ಬೇಕಾಗಿತ್ತಾ?" ನಯವಾಗಿ ಹಂಗಿಸಿದಳು.

"ಈ ನೆವದಿಂದ ನನಗೆ ನನ್ನ ಬ್ರದರ್ ಸಿಕ್ಕಿದ. ಆ ಕ್ರೆಡಿಟ್ ಎಲ್ಲಾ ನಿನಗೇ" ಎಂದು ಹೇಳಿ ವಿಶ್ವಾಸದಿಂದ ಅವಳ ಕೈಗಳನ್ನು ಒತ್ತಿದ.

" ಹೆಸರಿಗೆ ಪತ್ತೆದಾರ ನೀನು, ನಿನ್ನ ಬ್ರದರ್ ನ ಪತ್ತೆಹಚ್ಚಿದವಳು ನಾನು..." ಹೆಮ್ಮೆಯಿಂದ ನುಡಿದಳು.

" ಅದಕ್ಕೇ ಹೇಳಿದ್ದು, ನನ್ನ ಟೀಂಗೆ ಸೇರಿಕೋ.." ನಗುತ್ತಾ ಹೇಳಿದ.

" ಬೇಡಪ್ಪಾ ಬೇಡ. ಇದೆಲ್ಲಾ ನಿನಗೇ ಇರಲಿ. ನಾನು ಕೇವಲ ನಿನ್ನ ಪತ್ನಿಯಾಗಿ ಮಾತ್ರ ಇರ್ತೀನಿ..." ಎಂದು ಹೇಳಿ ಅವನ ಭುಜಕ್ಕೆ ಒರಗಿದಳು. ಅವನು ತನ್ನ ಎಡಗೈಯನ್ನು ಅವಳ ಭುಜದ ಮೇಲಿರಿಸಿದ. ಅಲ್ಲಿಯೇ ಸಮೀಪದಲ್ಲಿದ್ದ ಫೋಟೋಗ್ರಾಫರ್, ಫ್ಲಾಷ್ ಲೈಟನ್ನು ಇಬ್ಬರ ಮೇಲೆ ಹರಿಸಿ, ಕ್ಯಾಮರಾವನ್ನು ಕ್ಲಿಕ್ ಎನಿಸಿದ.

ಮುಗಿಯಿತು.....

o o o o o

* * * * *

* * * * *

* * *

o



ಕೌಟುಂಬಿಕ ಪಾತ್ರಗಳನ್ನೊಳಗೊಂಡ ಈ ಸಾಮಾಜಿಕ ಕಾದಂಬರಿಯು 'ರಾಗಸಂಗಮ'ದಲ್ಲಿ ಕಂತುಗಳಲ್ಲಿ ಪ್ರಕಟವಾಯಿತು. ಇದೀಗ ಪುಸ್ತಕ ರೂಪದಲ್ಲಿ ಓದುಗರಿಗಾಗಿ ಮತ್ತೆ ಬರುತ್ತಿದೆ.

್ರೀತಿಗಾಗಿ ಏನೇನು ನಾಟಕಗಳನ್ನಾಡಬೇಕಾಗುತ್ತದೆ– ಸ್ವಾರ್ಥ, ತ್ಯಾಗ, ಕೃತಕತೆ, ಅನನ್ಯ ್ರೀತಿ ಎಲ್ಲವೂ ಬೇಕಾಗುತ್ತದೆ, ಎನ್ನುವ ಕಥಾವಸ್ತುವನ್ನು ಈ ಕಥೆಯಲ್ಲಿ ಬಳಸಿಕೊಂಡಿದ್ದೇನೆ. ಎಷ್ಟು ಬಗೆಯಲ್ಲಿ ್ರೀತಿಯನ್ನು ವಿಶ್ವಾಸವನ್ನು ವ್ಯಕ್ತಪಡಿಸ ಬಹುದು ಎನ್ನುವುದನ್ನು ತಿಳಿಸುವ ಪ್ರಯತ್ನ ನನ್ನದು.

ಈಗಾಗಲೇ 'ರಾಗಸಂಗಮ'ದ ಓದುಗರು ಈ